ಸಂವಾದ

ಮಾರ್ಚ್ 2008 ರೂ. 20



ದಕ್ಕಿದ ಅರಣ್ಯ ಹಕ್ಕು

ನ್ಯಾನೋ ಕಾರು ಟಾಟಾ ತೇರು!

ಮೆಕಾಲೆ ತಿರಸ್ಕಾರ ಯೋಗ್ಯರೇ?

ಸಂವಾದ

ಮಾಸ ಪತ್ರಿಕೆ

ಸಂಪುಟ ೬ ಸಂಚಿಕೆ ೫

ಮಾರ್ಚ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧
✆ ೨೩೪೮೦೨೭೮/೯೪೪೮೦ ೪೮೩೦೬
ಇ–ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23480278, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ ೦೬
- ❑ ದಕ್ಕಿದ ಅರಣ್ಯ ಹಕ್ಕು ೦೮
  - ○ ನಾ. ದಿವಕರ
- ❑ ಸಿನಿಮಾ: ಒಂದು ಜನಪದ ಕಲೆ ೧೨
  - ○ ಪ್ರೊ॥ ಬರಗೂರು ರಾಮಚಂದ್ರಪ್ಪ
- ❑ ಲಾರ್ಡ್ ಮೆಕಾಲೆ ತಿರಸ್ಕಾರ ಯೋಗ್ಯರೆ? ೧೬
  - ○ ಚಂದ್ರಭಾನ್ ಪ್ರಸಾದ್/
- ❑ 'ನ್ಯಾನೋ' ಕಾರು: ಜನತೆಯ ಹೆಸರಲ್ಲಿ... ೧೮
  - ○ ಶಿವಸುಂದರ್

- ❑ ಮೋದಿತ್ವ ಮತ್ತು ಕರಾಳ ಪ್ರಜಾಪ್ರಭುತ್ವ ೨೦
  - ○ ಬಿ.ಎಂ. ಮುಸ್ತಾಫಾ ಆತೂರು
- ❑ ಬಡವರ ತಲೆ ಒಡೆಯುವ ನೀರಿನ ಖಾಸಗೀಕರಣ ೨೨
- ❑ ಹಬಶ್ ಆದರ್ಶ; ಅಮರ ೨೫
  - ○ ಜೀವನ್
- ❑ ರಾಜಕಾರಣ ಚರ್ಚೆ ೨೬
  - ○ ಎನ್.ಕೆ. ಹನುಮಂತಯ್ಯ
  - ○ ನ್ಯಾ॥ ಎ.ಜೆ. ಸದಾಶಿವ
  - ○ ಶಿವಮೊಗ್ಗ ಸುಬ್ಬಣ್ಣ
  - ○ ಅಲ್ಲಮಪ್ರಭು ಬೆಟ್ಟದೂರು
  - ○ ಡಾ॥ ಹೆಚ್.ಟಿ. ಪೋತೆ
  - ○ ಡಿ.ಎಸ್. ನಾಗಭೂಷಣ್
  - ○ ಚಂದ್ರಶೇಖರ್ ತಾಳ್ಯ
- ❑ ಕ್ರೈಸ್ತರ ಮೇಲಿನ ಹಲ್ಲೆಗಳು... ೩೨
  - ○ ಬಿ.ಯು ಸುಮಾ
- ❑ ದುಪ್ಪಳ್ಳಿ ಸೆಕ್ಸಿ ದುರುಗ ೩೪
  - ○ ಬಿ.ಟಿ. ಜಾಹ್ನವಿ
- ❑ ಮಾತಿನ ಹಂಗು ೩೮
  - ○ ರಹಮತ್ ತರೀಕೆರೆ
- ❑ ಪುಸ್ತಕ ಅವಲೋಕನ ೪೨
  - ○ ಮೇಟಿ ಮಲ್ಲಿಕಾರ್ಜುನ
- ❑ ದಲಿತ್ ಡೈರಿ ೪೬
  - ○ ಚಂದ್ರಭಾನ್ ಪ್ರಸಾದ್/ ಡೊಮಿನಿಕ್
- ❑ ಬುದ್ಧಾಯಣ ೫೦
  - ○ ಸಿ.ಎಚ್ ರಾಜಶೇಖರ್

ಕವನಗಳು : ❑ ನೋವು ೪೧

ಮುಖಪುಟ ಶಿಲ್ಪ: ಗೋಪಾಲ ಕಮ್ಮಾರ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಕಾಮಾಲೆ ಕಣ್ಣಿಗೆ ಲೋಕವೆಲ್ಲಾ...

ಪ್ರಿಯ ಸಂಪಾದಕರೆ,

ಕಾಮಾಲೆ ಕಣ್ಣಿನವರಿಗೆ ಲೋಕವೆಲ್ಲಾ ಹಳದಿಯಾಗಿಯೇ ಕಾಣುತ್ತದೆಯಂತೆ. ಹಾಗೇ ನಮ್ಮ ಹಿರಿಯ ಸಂಶೋಧಕರಾದ ಡಾ॥ ಎಂ. ಚಿದಾನಂದ ಮೂರ್ತಿಯವರಿಗೆ ಭಾರತೀಯ ಮುಸಲ್ಮಾನರೆಲ್ಲಾ ದುಷ್ಟರೂ, ಆಕ್ರಮಣಕಾರರೂ. ಜೆಹಾದಿಗಳೂ ಆಗಿಯೇ ಕಾಣುತ್ತಾರೆ. ಅವರಿರುವ ನೆಲೆಯೆಲ್ಲಾ ಮೆಕ್ಕಾ-ಮದೀನಗಳಾಗಿಯೇ ಕಾಣುತ್ತವೆ. ಅವರು ಮಾಡುವುದೆಲ್ಲ ಮುಸ್ಲಿಮ್ ಮತಾಂತರವೇ. ಹಾಗೆ ಕ್ರೈಸ್ತ ಧರ್ಮೀಯರೂ ಕೂಡ. ಆದರೆ ಇವರೂ ಸಹ ಹಿಂದೂಗಳಂತೆಯೇ ಈ ನೆಲಕ್ಕೆ ಸೇರಿದವರು, ಇಲ್ಲೇ ಹುಟ್ಟಿ ಇಲ್ಲೇ ಬೆಳೆದು, ಒಂದು ದಿನ ಇಲ್ಲೇ ಮಣ್ಣಾಗುವವರು ಎಂಬುದನ್ನು ಮರೆತು ಬಿಡುತ್ತಾರೆ. ಪೂರ್ವಗ್ರಹಪೀಡಿತ ಈ ಸಂಶೋಧಕರಿಗೆ ಹಿಂದೂ-ಮುಸ್ಲಿಮ್-ಕ್ರಿಶ್ಚಿಯನ್ನರ ನಡುವೆ ಅವಿಚ್ಛಿನ್ನವಾಗಿ ಮೂಡಿಬಂದಿರುವ ಸರ್ವಜನಾಂಗದ ಶಾಂತಿಯ ತೋಟ ಕಣ್ಣಿಗೆ ಬೀಳುವುದೇ ಇಲ್ಲ. ಡಾ॥ ಚಿಮೂ ಅವರು ಈ ವಯಸ್ಸಿನಲ್ಲಿ ಹೀಗೆ ಆರಿದ ಗಾಯವನ್ನು ಕೆದಕಿ ಯಾವ ಪುರಷಾರ್ಥ ಸಾಧನೆಗೆ ಸಂಶೋಧನೆ ಮಾಡುತ್ತಾರೋ ತಿಳಿಯದು.

ನಿಜ, ಚರಿತ್ರೆಯಲ್ಲಿ ಎಷ್ಟೇಷ್ಟೋ ತಪ್ಪುಗಳು ನಡೆದು ಹೋಗಿವೆ. ಆದರೆ ಅವುಗಳನ್ನು ನಾವೀಗ ಬೆರಗು ಸೌಹಾರ್ದ ರಾಷ್ಟ್ರವನ್ನು ಕಟ್ಟ ಬೇಕೊ ಅಥವಾ ಕೆದಕಿ ರಣರಂಗವನ್ನು ಮಾಡಬೇಕೊ? ಹಿಂದೂ ಮುಸ್ಲಿಮ್-ಕ್ರಿಶ್ಚಿಯನ್ ಸಂಕರ ಸಂಸ್ಕೃತಿಯ ಫಲಗಳಾದ ಸಾಹಿತ್ಯ, ಸಂಗೀತ, ಶಿಲ್ಪ, ವಾಸ್ತು ಮುಂತಾದ ಕಲೆಗಳು ಇವರ ಅಭಿರುಚಿಗೆ ಒಪ್ಪುವುದೇ ಇಲ್ಲ. ಬಿಜಾಪುರದ, ಬೀದರಿನ, ಶ್ರೀರಂಗಪಟ್ಟಣದ ಅಪೂರ್ವ ಅಭಿಜಾತ ವಾಸ್ತುಗಳು ಇವರಿಗೆ ಕಾಣುವುದೇ ಇಲ್ಲ. ಆ ಬಗ್ಗೆ ಎಂದಾದರೂ ಒಂದು ಒಳ್ಳೆ ಮಾತಾಡಿದ್ದುಂಟೆ? No! ಅದು ಅವರ ಪೂರ್ವಗ್ರಹ ಮನಸ್ಸಿಗೆ ಎಂದಿಗೂ ಸಾಧ್ಯವಾಗದು. ಈ ಬಗ್ಗೆ ನಾವಿನ್ನು ಮಾತಾಡದೆ ಉಪೇಕ್ಷೆ ಮಾಡುವುದೇ ಲೇಸು ಅನಿಸುತ್ತದೆ.

ಆದರೂ ಡಾ॥ ರಹಮತ್ ತರೀಕೆರೆಯವರು ಸಂವಾದ (ಫೆಬ್ರವರಿ-೨೦೦೮)ದ ಮಾತಿನ ಹಂಗಿನಲ್ಲಿ ಡಾ॥ ಚಿ.ಮೂ. ಅವರ ಜೀವನ ಗಾಥೆಯ ಬಗ್ಗೆ ಸವಿರ ಮಾಹಿತಿ ಕೊಟ್ಟು ಅವರ ವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ. ಸರಿ. ಆದರೆ ಇದು ಅವರಿಗೆ ಮುಟ್ಟ ಬಹುದೇ? ಮುಟ್ಟಿದರೂ ಸದಾರ್ಥದಲ್ಲಿ ಅವರುಗ್ರಹಿಸಿರಬಹುದೇ ಎಂಬಶಂಕೆ ನನಗೆ ಅವರ ನಾಲ್ಕು ದಶಕಗಳ ಸುದೀರ್ಘ ಸಂಶೋಧನಾ ತರಂಗಗಳಲ್ಲಿ ಈಜುತ್ತಾ ಬಂದರೆ ಅಲ್ಲಿ ಕಾಣುವುದು ಕೇವಲ ಹಿಂದುತ್ವದ ವೈಭವೀಕರಣವಲ್ಲದೆ ಬೇರೆ ಅಲ್ಲ. ಪೇಜಾವರ ಶ್ರೀಯವರಿಗಿಂತ ಮಿಗಿಲಾಗಿ ಈ ಶರಣರು ಹಿಂದು ಧರ್ಮ ಸಾಮ್ರಾಜ್ಯ ಪುನಾರಚನೆಗೆ ಹೆಣಗಾಡುತ್ತಿರುವ ಚಿತ್ರ ಅಲ್ಲಿ ಎದ್ದು ಕಾಣುತ್ತದೆ. ರಹಮತ್ ಅದನ್ನೆಲ್ಲ ಚೆನ್ನಾಗಿಯೇ ತೋರಿಸಿಕೊಟ್ಟಿದ್ದಾರೆ. ಆದರೆ ಕೊನೆಯಲ್ಲಿ ಮಾತ್ರ ಇಂಥ ಹಿರಿಯರ ಬಗ್ಗೆ ಹೀಗೆಲ್ಲಾ ಬರೆಯಲು 'ನನಗೆ ವೇದನೆಯಾಗುತ್ತದೆ' ಎಂದಿರುವುದು ಮಾತ್ರ ಯಾಕೊ ನಾಟಕೀಯವಾಗಿ ಕಾಣುತ್ತದೆ. ಯಾಕೆಂದರೆ, ಖಂಡಿತವಾದಿ ಅವರೇ ಹೇಳುವಂತೆ ಲೋಕ ವಿರೋಧಿ ತಾನೆ?

ಪ್ರೊ॥ ಶಿವರಾಮಯ್ಯ
ನಾಗರಬಾವಿ, ಬೆಂಗಳೂರು



ಪತ್ರಾಗಾರ

ಪ್ರಜ್ಞಾವಂತರ ಕಣ್ಣ ಬೆಳಕು

ಪ್ರಿಯರಾದ ಇಂದೂಧರ ಹೊನ್ನಾಪುರ ಅವರಿಗೆ, ನಮಸ್ಕಾರ.

ಸಂವಾದ ನಮ್ಮ ನಾಡಿನ ಪ್ರಜ್ಞಾವಂತರ ಕಣ್ಣ ಬೆಳಕು. ಅದು ಪ್ರಗತಿಶೀಲರ ನಡೆಯಾಗಬೇಕು. ಆ ದಿಕ್ಕಿನಲ್ಲಿ ಎಲ್ಲ ಲೇಖನಗಳು ಬರುತ್ತಿವೆ. ನಾಡಿನ ಎಚ್ಚರಕ್ಕೆ 'ಸಂವಾದ' ಜೋಡಿಸುತ್ತಿರುವ ತಾತ್ವಿಕ ಎಳೆಗಳು ನನ್ನನ್ನು ಮೂಕವಿಸ್ಮಿತನನ್ನಾಗಿಸಿದೆ. ಹೊಸ ಚಿಂತಕರ ಲೇಖನಗಳು ಸುಟಿಯಾಗಿವೆ, ಒನಪಾಗಿವೆ. ಇದು ಬೆಳೆಯುತ್ತ, ಬೆಳೆಸುತ್ತ ಹೋಗಲೆಂಬ ಆಶಯ ನನ್ನದು. ಪತ್ರಿಕೆಗೆ ಮೂರು ವರ್ಷದ ಚಂದಾ ೫೦೦/- ಇರಿಸಿದ್ದೇನೆ. ದಯವಿಟ್ಟು ಸ್ವೀಕರಿಸಿ.

ಆದರಗಳೊಡನೆ,
ನಿಮ್ಮವ,
ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್,
ಹಂಪಿ

ಮುಕ್ತ ವೈಚಾರಿಕ ವೇದಿಕೆ

ಪ್ರಿಯ ಇಂದೂಧರ,

ಕನ್ನಡ ಪು.ಪ್ರಾ. ಕಚೇರಿಯಲ್ಲಿ ಈಗ ಒಂದೆರಡು ತಿಂಗಳ ಹಿಂದೆ ನಿಮ್ಮನ್ನು ಕಂಡ ಬಳಿಕ 'ಸಂವಾದ' ಪತ್ರಿಕೆ ನಿಯಮಿತವಾಗಿ ಬರುತ್ತಿದೆ. ಈ ಪತ್ರದ ಜೊತೆ ನೌಕರಿ ಮಾಡುತ್ತಿರುವ ನಾನು ನೌಕರ ವರ್ಗಕ್ಕೆ ಸೇರಿದವನಾದ್ದರಿಂದ ಮೂರು ವರುಷಗಳಿಗೆ ರೂ. ೫೦೦/- ಚೆಕ್ ಇರಿಸಿದ್ದೇನೆ. ಇದನ್ನು ಮುಂದಿನ ಮೂರು ವರುಷಗಳ ಚಂದಾಹಣವೆಂದು ಸ್ವೀಕರಿಸಬೇಕಾಗಿ ಕೇಳಿಕೊಳ್ಳುವೆ.

ಬಹಳ ದಿನಗಳ ಬಳಿಕ ನಿಮ್ಮನ್ನು ಕಂಡಾಗ ಮೈಸೂರಿನ ಮಹಾರಾಜ ಕಾಲೇಜಿನ ದಿನಗಳು ನೆನಪಾದವು. ಆಗ ನೀವು ಹೊರ ತರುತ್ತಿದ್ದ 'ಶೋಷಿತ', ಆಮೇಲಿನ 'ಪಂಚಮ' ಬಳಿಕದ ನಿಮ್ಮ ಸಾಹಸ 'ಮುಂಗಾರು' ಎಲ್ಲಾ ನೆನಪಾಯಿತು. 'ಸಂವಾದ' ಕೂಡಾ ಸಣ್ಣ ಸಾಹಸ ಇರಲಾರದು. ಹೊಸ ಚಿಂತಕರಲ್ಲಿ ಬಹಳ ಮುಖ್ಯರಾದ ಸುಮಾ ಮೊದಲಾದವರೂ ನಿಮ್ಮ ಜೊತೆಗಿದ್ದಾರೆ. ಇಂದು ಕನ್ನಡ ಸಾಹಿತ್ಯದಲ್ಲಿ ಅನೇಕ ಹೊಸಬರು Anti Intellietual Position ತೆಗೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ನೀವು ಬಯಸಿ ಬೆಳೆಸಲು ಪ್ರಯತ್ನ ಪಡುವ ಪ್ರಗತಿಪರ ವಿಚಾರಗಳು ಮುಖ್ಯ.

ಇಂದು ಹೊರಗಿನ ಬಲಾತ್ಕಾರ ಎಲ್ಲಾ ಕಡೆ ಹಬ್ಬುತ್ತಿದೆ. ದ್ವಾರಕನಾಥ್ ಅವರಿಗೆ ತಲಕಾವೇರಿ ತೀರ್ಥ ಎಂದು ಬಲಾತ್ಕಾರದಲ್ಲಿ ಬಾಟಲಿಯಲ್ಲಿ ತೀರ್ಥ ಎಂದು ನೀರು ತಂದು ಗಂಟಲಿಗೆ ತುರುಕುವುದು ಫ್ಯಾಸಿಸಂನ ಬೀಜರೂಪ. ದಲಿತರಿಗೆ ತೀರ್ಥದ ಬಗ್ಗೆ ತಿರಸ್ಕಾರ ಹುಟ್ಟುವಂತಹ ದೂರ ಇಟ್ಟ ಸಂಸ್ಕೃತಿ ನಮ್ಮದಾಗಿತ್ತು. ಎಂಬುದನ್ನು ಚರಿತ್ರೆಯ ಬಗ್ಗೆ ಬೊಬ್ಬೆ ಹೊಡೆಯುವವರು ಮರೆಯಬಾರದು.

ಒಂದು ಕಡೆ ಹಿಂದೂ ಅಬ್ಬರದಲ್ಲಿ ಚರಿತ್ರೆ ಇಂದೂ ಪರ್ತಮಾನದ ಚಾರಿತ್ರ್ಯದ ಪ್ರಶ್ನೆ. ಒಂದು ಜನಾಂಗದ ಹಿರಿಯರು ೩೦೦ ವರುಷ ಮೊದಲು ಮಾಡಿದ ಅನ್ಯಾಯಕ್ಕೂ ವರ್ತಮಾನದಲ್ಲಿರುವವರಿಗೆ ಶಿಕ್ಷೆ ಆಗಬೇಕು ಎಂಬ ಬೊಬ್ಬೆ. ಶತಮಾನಗಳ ಕಾಲ ಅಸ್ಪೃಶ್ಯತೆಯನ್ನು ಸಾಧಿಸಿದ ಜನಾಂಗದ ಚರಿತ್ರೆಗೆ ಯಾವುದೇ ಶಿಕ್ಷೆ ಬೇಕಾಗಿಲ್ಲ ಎಂಬ ನಿಲುವು ಬದಲಾಗಿ ಆ ಚರಿತ್ರೆಯನ್ನು ಇಂದಿನ ದಲಿತರು ಮರೆಯಬೇಕು. ತೀರ್ಥ ಕುಡಿಯಬೇಕು. ತಲೆಬಾಗಬೇಕು.

ಇನ್ನೊಂದು ಕಡೆ ಅದೇ ಚರಿತ್ರೆಯಲ್ಲಿ ಒಂದು ಧರ್ಮಕ್ಕೆ ಆದ ಅನ್ಯಾಯಕ್ಕೆ ಶಿಕ್ಷೆ ಇಂದು ಆಗಬೇಕು. ಒಬ್ಬರಿಗೆ ಚರಿತ್ರೆಯಲ್ಲಿ ಆದ ಅನ್ಯಾಯ ಇಂದೂ ಏನೂಬೇಡ. ಇನ್ನೊಬ್ಬರಿಗೆ ಆದ ಅನ್ಯಾಯಕ್ಕೆ ಇಂದು ಶಿಕ್ಷೆ ಬೇಕು. ಈ ಎರಡು ಬಗೆಯ ನೀತಿ, ಒಬ್ಬೊಬ್ಬರಿಗೆ ಒಂದೊಂದು ನೀತಿ, ಪ್ರಜಾಸ್ವಾತಂತ್ರ್ಯದ ನಂಬುಗೆಗೆ ವಿರೋಧವಾದ್ದು, ನಾವು ಒಪ್ಪುವಂತಹದ್ದಲ್ಲ.

ಇಂತಹ ಎಲ್ಲಾ ವಿಚಾರಗಳಿಗೂ ನಿಮ್ಮ ಪತ್ರಿಕೆ ಒಂದು ಮುಕ್ತ ವೇದಿಕೆಯಾಗುತ್ತಿರುವುದು ಸಂತೋಷ,

ಎಸ್.ಆರ್. ವಿಜಯಶಂಕರ,
ಬೆಂಗಳೂರು

ಚಂದಾ ವಿವರ
ಬಿಡಿ ಪ್ರತಿ ರೂ.೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಬುದ್ಧಿ ಜೀವಿ ವರ್ಸಸ್ ಬೌದ್ಧಿಕ ಸ್ವಾತಂತ್ರ್ಯ
ಲೇ: ಅಜಕ್ಕಳ್ ಗಿರೀಶ್ ಭಟ್
ಬೆಲೆ: ರೂ. ೧೦೦/-

ಕನ್ನಡದ ಜನಪ್ರಿಯ ಕಾದಂಬರಿಕಾರ ಎಸ್.ಎಲ್. ಭೈರಪ್ಪನವರ 'ಆವರಣ' ಕಾದಂಬರಿಯಿಂದಾಗಿ ಹುಟ್ಟಿಕೊಂಡ ವಾದ ವಿವಾದ ಜಿಜ್ಞಾಸೆಗಳ ಪ್ರೇರಣೆಯಿಂದ ರಚಿತವಾದ ಕೃತಿ ಇದು. ಆದರೆ ಈ ಕೃತಿಯಲ್ಲಿ ಆವರಣದ ವಿವಾದ ಒಂದು ನೆಪ ಮಾತ್ರ ಕೆಲವು ನಿದಿಷ್ಟ ವಿಚಾರಗಳಿಗೆ ಸಂಬಂಧಿಸಿದಂತೆ ವಿದ್ವತ್ ವಲಯದಲ್ಲಿನ ಸಂಕಥನಗಳನ್ನು ಜಿಜ್ಞಾಸೆಯಿಂದ ನೋಡುವ ಪ್ರಯತ್ನ ಇಲ್ಲಿದೆ. ವಸ್ತು ನಿಷ್ಠ ಚಿಂತನೆ ಈ ಕೃತಿಯ ಹೆಗ್ಗಳಿಕೆ.

ಪ್ರಕಾಶಕರು: ಚಿಂತನ ಬಯಲು ಮೊಡಂಕಾಪು, ದಕ್ಷಿಣ ಕನ್ನಡ-೫೭೪೨೧೯



ಗಗನ ಸಖಿ
ಲೇ: ಸಾರಾ ಅಬೂಬಕ್ಕರ್
ಬೆಲೆ: ರೂ. ೭೦/-

ನಾಡಿನ ಹೆಸರಾಂತ ಲೇಖಿಕಿ ಸಾರಾ ಅಬೂಬಕ್ಕರ್ ಅವರ ಈಚಿನ ಕಥಾ ಸಂಕಲನ ಇದು. ಎಂಭತ್ತರ ದಶಕದಲ್ಲಿ ಬರೆಯಲು ಆರಂಭಿಸಿದ ಸಾರಾ ಮಹಿಳಾ ಲೋಕದ ಎಲ್ಲ ತರತಮಗಳನ್ನು ತೆರೆದಿಟ್ಟ ಅಪರೂಪದ ಲೇಖಕಿ. ಇಲ್ಲಿನ ಬಹುತೇಕ ಕಥೆಗಳು ನಿಜ ಜೀವನದಲ್ಲಿ ನಡೆದ ಘಟನೆಗಳನ್ನು ಆಧರಿಸಿದವು. ಹಾಗಾಗಿ ಕಥೆಗಳು ಅತ್ಯಂತ ಸಮರ್ಥವಾಗಿ ಮೂಡಿ ಬಂದಿವೆ. ಕುಪ್ಪಸ ತೊಟ್ಟವಳು, ತಂಗಿಯ ಪತ್ರಗಳು, ಓ...ರಾಮ... ಮುಂತಾದ ಕಥೆಗಳಲ್ಲಿನ ಜೀವಂತಿಕೆ ಓದುಗರನ್ನು ಹಿಡಿದಿಡುತ್ತದೆ.

ಪ್ರಕಾಶಕರು: ಚದ್ರಗಿರಿ ಪ್ರಕಾಶನ, ಮಂಗಳೂರು-೫೭೫೦೦೬

ಹೊಸ ಪುಸ್ತಕ



ಹುಡುಕಾಟ
ಲೇ: ಬಿ.ಟಿ. ಜಾಹ್ನವಿ
ಬೆಲೆ: ರೂ. ೭೦/-

'ಕಳೆದುಕೊಂಡವಳು ಮತ್ತು ಇತರ ಕಥೆಗಳು' ಮೂಲಕ ಕನ್ನಡ ಸಂಸ್ಕೃತ ಲೋಕಕ್ಕೆ ಕಾಲಿಟ್ಟ ಜಾಹ್ನವಿ ಅವರ ಎರಡನೇ ಕಥಾ ಸಂಕಲನ ಇದು. ಅತ್ಯಂತ ಸೂಕ್ಷ್ಮ ಮನಸ್ಸಿನ ಕಥೆಗಳನ್ನು ಬರೆದಿರುವ ಜಾಹ್ನವಿ 'ವ್ಯಭಿಚಾರ' ಮತ್ತು 'ವಿಮುಖ' ದಂತಹ ಕಥೆಗಳ ಮೂಲಕ ಓದುಗರನ್ನು ತಬ್ಬಿಬ್ಬುಗೊಳಿಸಿದ್ದಾರೆ. ಜಾಹ್ನವಿಯವರ ಕಥೆಗಳಲ್ಲಿನ ಕಲೆಗಾರಿಕೆ ಹಾಗೂ ವಿಷಯ ಆಯ್ಕೆಯಲ್ಲಿ ಅವರು ತೋರುವ ದಿಟ್ಟತನ ಅದ್ಭುತವಾದದ್ದು. ಹತ್ತು ವರ್ಷಗಳ ನಂತರ ಪ್ರಕಟವಾದ ಈ ಕೃತಿಯ ಮೂಲಕ ಜಾಹ್ನವಿ ತಾನೊಬ್ಬ ಅತ್ಯುತ್ತಮ ಕಥೆಗಾರ್ತಿ ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಪ್ರಕಾಶಕರು: ಮಾತಂಗ ಪ್ರಕಾಶನ ಉದಯಗಿರಿ ಬಡಾವಣೆ, ಮೈಸೂರು-೧೯

ಮೇಲಾಗಲೊಲ್ಲೆನು...
ಲೇ: ಡಾ॥ ಲತಾ ಮೈಸೂರು
ಬೆಲೆ: ರೂ. ೨೦/-

ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆಗಳು ಸಾಹಿತ್ಯ ವಲಯದಲ್ಲಿ ಹೊಸತೇನಲ್ಲ. ಡಾ॥ ಲತಾ ಅವರ ಈ ಕಿರು ಹೊತ್ತಿಗೆ ಬಸವಣ್ಣನ ಜಾತಿ ಮತ್ತು ಶರಣ ಕುಲ ಸಂಬಂಧ ಕುರಿತ ವಸ್ತು ನಿಷ್ಠ ದಾಖಲೆಯಾಗಿಸುವ ಪ್ರಯತ್ನದಲ್ಲಿ ಸಫಲವಾಗಿದೆ. ಬಸವಣ್ಣನ ವಚನಗಳನ್ನ ಒಟ್ಟಾಗಿ ಅಖಂಡವಾಗಿ ಗ್ರಹಿಸಬೇಕೆಂದು ಲೇಖಕಿಯ ವಾದ ಸಮರ್ಥನೀಯವಾಗಿದೆ.

ಪ್ರಕಾಶಕರು: ಅಭಿರುಚಿ ಪ್ರಕಾಶನ ಸರಸ್ವತಿಪುರಂ ಮೈಸೂರು



ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ
ಲೇ: ಷ. ಶೆಟ್ಟರ್
ಬೆಲೆ: ರೂ. ೧೫೦/-

ನಾಡಿನ ಚರಿತ್ರಕಾರರಲ್ಲಿ ಅಗ್ರಗಣ್ಯರಾದ ಪ್ರೊ॥ ಷ. ಶೆಟ್ಟರ್ ಅವರ ವಿಶಿಷ್ಟ ಕೃತಿ ಇದು. ಆರಂಭಕಾಲದ ದ್ರಾವಿಡ ಸಂಬಂಧದ ಚಿಂತನೆ ಕುರಿತ ಈ ಕೃತಿ, ಹಲವು ದಶಕಗಳ ಶಿಸ್ತು ಬದ್ಧ ಸಂಶೋಧನೆ ಮತ್ತು ಚಿಂತನೆಗಳ ವಿದ್ವತ್‌ಪೂರ್ಣ ಅಧ್ಯಯನದ ಫಲ. ಭರತೀಯತೆಯ ಬಗ್ಗೆ, ತಮಿಳು-ಕನ್ನಡ ಬಾಂಧವ್ಯದ ಬಗ್ಗೆ, ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಹೊಸರೀತಿಯ ಚಿಂತನೆ ಮತ್ತು ವಿಶೇಷಣೆಗಳನ್ನು ಪ್ರೇರೇಪಿಸುವ ಅಪೂರ್ಣ ಕೃತಿ' ಇದು.

ಪ್ರಕಾಶಕರು: ಅಭಿನವ, ವಿಜಯನಗರ, ಬೆಂಗಳೂರು-೫೬೦೦೪೦



ಭಾರತೀಯ ಉದ್ದಿಮೆದಾರರು
ಲೇ: ಡಾ॥ ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ
ಬೆಲೆ: ರೂ. ೭೫/-

ನಾಡಿನ ಕೆಲವು ಅಪರೂಪದ ಉದ್ದಿಮೆದಾರರ ಜೀವನ ಸಾಧನೆಗಳನ್ನು ಪರಿಚಯಿಸುವ ಕೃತಿ ಇದು. ಭೂಮರೆಡ್ಡಿ, ರಘೋಜಿ, ಗಳಂಗಳಪ್ಪ ಪಾಟೀಲ, ಎಸ್.ಎನ್. ಪಾಟೀಲ ಹಾಗೂ ಪುಸ್ತಕ ಉದ್ಯಮಿ ಬಸವರಾಜ ಕೊನೇಕ್ ಅವರನ್ನು ಈ ಕೃತಿಯಲ್ಲಿ ಪರಿಚಯಿಸ ಲಾಗಿದೆ.

ಪ್ರಕಾಶಕರು: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಗುಲ್ಬರ್ಗಾ-೫೮೫೧೦೧

ವೈದ್ಯ ಸದಾಶಿವ ಸ.ಜ. ನಾಗಲೋಟಿ ಮಠ
ಲೇ: ಜಯವಂತ ಕಾಡದೇವರ
ಬೆಲೆ: ರೂ. ೨೦/-

ಡಾ॥ ನಾಗಲೋಟಿಮಠ ನಮ್ಮ ನಡುವಿನಲ್ಲೇ ಇದ್ದ ಅಪರೂಪದ ವೈದ್ಯ ಸಾಧಕರು. ಕಾಯಕದಲ್ಲಿ ಕೈಲಾಸ ಕಂಡ ವೈದ್ಯ ವೃತ್ತಿಗೆ ಅಪಾರ ಗೌರವ ತಂದು ಕೊಟ್ಟ ಸಾತ್ವಿಕರು. ಅಂಥ ಮಹಾನುಭಾವರ ಜೀವನ ಸಾಧನೆ ಕುರಿತ ಅಪೂರ್ವ ಕೃತಿ ಇದು.

ನೇಗಿಲಯೋಗಿ ವೀರಪ್ಪ ಕೌತಾಳ
ಲೇ: ಸುರೇಂದ್ರ ದಾನಿ
ಬೆಲೆ: ರೂ. ೧೦/-

ಐವತ್ತರ ದಶಕದ ಸಾರ್ವಜನಿಕ ಕ್ಷೇತ್ರದಲ್ಲಿ ವಿಶಿಷ್ಟ ಹೆಸರು ಪಡೆದಿದ್ದ ಕೌತಾಳ ಗುರುಗಳ ಜೀವನ ಸಾಧನೆ ಕುರಿತ ಕೃತಿ ಇದು.

ಮೇಲಿನ ಎರಡೂ ಕೃತಿಗಳ ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ

ಸಂಪಾದಕೀಯ



ಮಾಧ್ಯಮ ಮಿತ್ರರೇ ದಯವಿಟ್ಟು ಉತ್ತರಿಸಿ

- ರಾಜ್ಯದಲ್ಲೀಗ ಉಗ್ರರದ್ದೇ ಕಾರುಬಾರು
- ಉಗ್ರರ ಸುರಕ್ಷಿತ ತಾಣ ಬೆಂಗಳೂರು
- ಧಾರವಾಡ ಉಗ್ರರ ಬೀಡು
- ಈಗ ಟೆರರ್ ಪಾಲಿಟಿಕ್ಸ್
- ಮನೆರೂಪದ ಮಸೀದಿಗಳು, ಒಳಗೆ ಅತ್ಯುಗ್ರ ಶಸ್ತ್ರಗಳು

ಮೇಲಿನ ಸಾಲುಗಳನ್ನು ಓದಿ ನೀವ್ಯಾರೂ ಆಶ್ಚರ್ಯಪಡುವುದಿಲ್ಲ ಎನ್ನುವುದು ನನಗೆ ಗೊತ್ತು. ಈ ಎಲ್ಲಾ ಸಾಲುಗಳು ನಾಡಿನ ಪ್ರಮುಖ ಕನ್ನಡ ದಿನ ಪತ್ರಿಕೆಗಳಲ್ಲಿ, ದೃಷ್ಯ ಮಾಧ್ಯಮಗಳಲ್ಲಿ ಕಳೆದು ಒಂದು ತಿಂಗಳಿಂದೀಚೆಗೆ ನಿತ್ಯ ರಾರಾಜಿಸುತ್ತಿವೆ.

ಪತ್ರಿಕೆಗಳನ್ನು ಹೇಗೊ ಸಹಿಸಬಹುದು. ದೃಶ್ಯ ಮಾಧ್ಯಮಗಳತ್ತ ತಿರುಗಿದರೆ ನಮ್ಮ ಮನೆಯ ಮೇಲೆ ಬಾಂಬ್ ಬಿದ್ದಿದೆ ಎನ್ನುವಷ್ಟು ಭಯವಾಗುತ್ತದೆ. ಸುದ್ದಿ ನಿರೂಪಕರು, ವಿಶ್ಲೇಷಣೆಕಾರರು ಬಳಸುವ ಪದಪುಂಜಗಳನ್ನು ಕೇಳಿದರೆ ಇವತ್ತೇ ಸರ್ವಸ್ವವೂ ನಾಶವಾಗಿಬಿಡಬಹುದು ಎನಿಸುತ್ತದೆ. ಆದರೆ ನಾಳೆ ಮತ್ತದೇ ಟಿ.ವಿ. ನಿರೂಪಕ ಅದೇ ಭಯೋತ್ಪಾದನೆಯನ್ನು ವರ್ಣರಂಜಿವಾಗಿ ವಿವರಿಸುತ್ತಾನೆ. ಹಾಗಾಗಿ ಮತ್ತೆ ಬದುಕುವ ಆಸೆ ಉಳಿಯುತ್ತದೆ. ಇದು ಕಳೆದ ಒಂದು ತಿಂಗಳಿನಿಂದ ನಿರಂತರವಾಗಿ ನಡೆಯುತ್ತಿದೆ.

ವಿಚಿತ್ರ ಎಂದರೆ ನಾಡಿನ ಯಾವೊಬ್ಬ ಪತ್ರಕರ್ತನೂ ಇದರ ಹಿಂದಿರಬಹುದಾದ ಸತ್ಯವನ್ನು ಹುಡುಕುವ ಗೋಜಿಗೆ ಹೋಗಿಲ್ಲ. ಪತ್ರಿಕೆಗಳಾಗಲಿ ಟಿ.ವಿ ಮಾಧ್ಯಮದ ಮಿತ್ರರಾಗಲಿ ಇಂಥ ಪ್ರಮುಖ ಸುದ್ದಿಯೊಂದರ ಬೆನ್ನುಹತ್ತಿ ಅಲ್ಲಿರುವ ಸತ್ಯಾಸತ್ಯತೆಗಳನ್ನು ಬಯಲಿಗೆಳೆಯುವ ಪ್ರಯತ್ನವನ್ನು ಮಾಡುತ್ತಿಲ್ಲ. ಸಮಾಜದ ನೆಮ್ಮದಿ ಹಾಳುಮಾಡುತ್ತಿರುವ ಇಂಥ ಘಟನೆ ಕುರಿತು ಪೊಲೀಸರೂ ಸಮರ್ಪಕವಾದ ಮಾಹಿತಿ ನೀಡುತ್ತಿಲ್ಲ. ಭಯೋತ್ಪಾದನೆ ನಿಜವಾಗಿಯೂ ನಡೆಯುತ್ತಿದೆಯೋ ಅಥವಾ ಅದು ಕೇವಲ ಮಾಧ್ಯಮದವರ ಸೃಷ್ಟಿಯೋ ತಿಳಿಯಲಾರದಷ್ಟು ಗೊಂದಲದಲ್ಲಿ ಜನತೆ ಸಿಕ್ಕಿ ಬಿದ್ದಿದ್ದಾರೆ.

ಇದು ಕೇವಲ ಗೊಂದಲ ಮಾತ್ರವಾಗಿದ್ದರೆ ಉಪೇಕ್ಷಿಸಬಹುದಿತ್ತು. ಬದಲಾಗಿ ಇದು ಜನಾಂಗ ಜನಾಂಗದ ನಡುವೆ ದ್ವೇಷವನ್ನು ಖಾಯಂಗೊಳಿಸುವ ಸಂಚಿನ ಭಾಗವಾಗಿರುವುದೇ ನಮ್ಮೆಲ್ಲರ ಆತಂಕಕ್ಕೆ ಕಾರಣ. ಮೊನ್ನೆ ಒಂದು ಪತ್ರಿಕೆಯಲ್ಲಿ 'ಮಸೀದಿಗಳೆಲ್ಲ ಉಗ್ರರ ಶಸ್ತ್ರಾಗಾರಗಳಾಗಿವೆ' ಎಂದು ಬರೆಯಲಾಗಿತ್ತು. ಮುಸ್ಲಿಮರೆಲ್ಲ ಉಗ್ರವಾದಿಗಳೆಂದು ನಾಳೆ ಈ ಪತ್ರಿಕೆ ಬರೆಯೋದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು ಎಂಬ ಆತಂಕ ನನ್ನನ್ನು ಕಾಡಿತು.

ಸಂಘ ಪರಿವಾರದ ಪುಂಡು ನಾಯಕನೊಬ್ಬನನ್ನು ಟಿವಿ ಚಾನಲ್ ಒಂದರ ನಿರೂಪಕ, 'ಮುಸ್ಲಿಮರೆಲ್ಲ ಭಯೋತ್ಪಾದಕರಲ್ಲ ಅಲ್ಲವೆ?' ಎಂದು ಪ್ರಶ್ನಿಸಿದ. ಉತ್ತರಿಸಿದ ಭೂಪ ಹೇಳಿದ್ದೇನೆಂದರೆ, 'ಪ್ಲೇಗ್ ರೋಗ ಬಂದಾಗ ಅದಕ್ಕೆ ಕಾರಣವಾದ ಇಲಿಯೊಂದನ್ನು ಮಾತ್ರ ಹುಡುಕಿ ಕೊಲ್ಲುವುದಿಲ್ಲ– ಇಡೀ ಇಲಿಗಳ ಸಂತತಿಯನ್ನೇ ನಾಶಮಾಡುತ್ತೇವೆ'. ನೋಡುತ್ತಿದ್ದ ನನಗೆ ಹಿಟ್ಲರ್ ಮತ್ತೆ ಹುಟ್ಟಿ ಬಂದಂತಾಗಿ ಭಯವಾಗತೊಡಗಿತು.

ಮೇಲಿನ ವಿವರಗಳನ್ನೆಲ್ಲ ನೀಡುತ್ತಿರುವ ಕಾರಣಗಳು ನಿಮಗೆ ಗೊತ್ತಿರಬಹುದು. ನಿರಂತರ ಭಯ ಆತಂಕಗಳನ್ನು ಸೃಷ್ಟಿಸಿ ಸಮಾಜವನ್ನು ಒಡೆದು ಆಳುವ ಕುತಂತ್ರ ಭಾರತಕ್ಕೇನೂ ಹೊಸದಲ್ಲ. ಭಯೋತ್ಪಾದನೆ ಮೂಲಕ ರಾಜ್ಯವಾಳುವುದು ಹಾಗೂ ಶತೃನಾಶ ಮಾಡುವ ಕಲೆಯನ್ನು ಚಾಣಕ್ಯ ತನ್ನ ವಂಶಸ್ಥರಿಗೆ ಚೆನ್ನಾಗಿಯೇ ಕಲ್ಪಿಸಿಕೊಟ್ಟಿದ್ದಾನೆ. ವೈದಿಕ ಸಂಸ್ಕೃತಿಯ ತಾಯಿ ಬೇರಾದ ಈ ವಿಧ್ವಂಸಕ ಕಲೆ ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ಕಾಲದಲ್ಲಿ ಹೇಗೆ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಮೇಲಿನದಕ್ಕಿಂತ ಉತ್ತಮ ಉದಾಹರಣೆಗಳು ಸಿಗುವುದಿಲ್ಲ!

ಹಾಗಾದರೆ ಭಯೋತ್ಪಾದನೆ ನಡೆಯುತ್ತಿಲ್ಲವೆ? ಭಯೋತ್ಪಾದನೆ ನಡೆಯುತ್ತಿದೆ. ಇಲ್ಲದಿದ್ದರೆ ನಿತ್ಯ ನೂರಾರು ಸ್ಫೋಟಗಳು ಹೇಗೆ ಸಂಭವಿಸುತ್ತವೆ. ಮಂದಿರ–ಮಸೀದಿಗಳು ಹೇಗೆ ನಾಶವಾಗುತ್ತವೆ. ಸಾವಿರಾರು ಜನರ ಮಾರಣ ಹೋಮ ಹೇಗೆ ನಡೆಯುತ್ತದೆ. ಭಯೋತ್ಪಾದನೆ ನಮ್ಮ ಕಣ್ಣ ಮುಂದಿನ ಸತ್ಯ. ಅದರಲ್ಲಿ ಎಲ್ಲ ಜನವರ್ಗದವರೂ ಬಾಗಿಯಾಗಿದ್ದಾರೆ. ಹಿಂದುಗಳು, ಕ್ರೈಸ್ತರು, ಮುಸಲ್ಮಾನರು, ಎಲ್ಲರೂ. ಆದರೆ ಈಗಿನ ಅಸಲೀ ಪ್ರಶ್ನೆ ಎಂದರೆ ಮುಸ್ಲಿಮರನ್ನು ಮಾತ್ರ ಯಾಕೆ ಭಯೋತ್ಪಾದನೆಯೊಂದಿಗೆ ಸಮೀಕರಿಸಲಾಗುತ್ತಿದೆ?

ಕಳೆದ ತಿಂಗಳು ಜ್ಞಾನಭಾರತೀಯ ಇಬ್ಬರು ವಿದ್ಯಾರ್ಥಿಯರು 'ಸಂವಾದ'ಕ್ಕೊಂದು ಪತ್ರ ಬರೆದಿದ್ದರು. ಎಲ್ಲ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಬರೀ ಮುಸ್ಲಿಮರು ಮಾತ್ರ ಇರುತ್ತಾರೆ ಯಾಕೆ? ಎಂದು ಆ ಹುಡುಗಿಯರು ಕೇಳಿದ್ದರು. ಅವರೆಷ್ಟು ಮುಗ್ಧರು ಅನ್ನಿಸಿತು ನನಗೆ. ಅದಕ್ಕಿಂತ ಮುಖ್ಯವಾಗಿ ಎಲ್ಲ ಮುಗ್ಧರೂ ಹೀಗೆ ಯೋಚಿಸುವಂತೆ ಮಾಡುತ್ತಿರುವ ನಮ್ಮ ಮಾಧ್ಯಮಗಳ ಹೊಣೆಗೇಡಿತನ ನನಗೆ ಘಾಸಿ ಮಾಡಿತು. ಆಹುಡುಗಿಯರನ್ನು ಪತ್ರಬರೆದು ಕರೆಸಿಕೊಂಡು ಮಾತಾಡಿದೆ. ಶ್ರೀಲಂಕಾದಲ್ಲಿ ಎಲ್‌ಟಿಟಿಇ ಹೆಸರನಲ್ಲಿ ಭಯೋತ್ಪಾದನೆ ನಡೆಸುತ್ತಿರುವವರು ಯಾರು? ಲ್ಯಾಟಿನ್ ಅಮೇರಿಕನ್ ದೇಶಗಳೂ ಸೇರಿದಂತೆ ವಿಯಟ್ನಾಂ, ಕಾಂಬೋಡಿಯಾ ಮೊದಲಾದ ನೂರಾರು ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ, ತೀರಾ ಈಚೆಗೆ ಇರಾಕ್ ಮೇಲೆ ಭಯೋತ್ಪಾದನೆ ಕೃತ್ಯ ನಡೆಸಿದವರಾರು? ಗುಜರಾತಿನಲ್ಲಿ ಸಾವಿರಾರು ಮುಸ್ಲಿಮರನ್ನು ಕೊಂದು ಹಾಕಿದವರಾರು? ಇವರಾರೂ ಭಯೋತ್ಪಾದಕರಲ್ಲವೆ? ಎಂದು ಪ್ರಶ್ನಿಸಿದೆ. ಹಲವಾರು ಪ್ರಗತಿಪರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಆ ಹುಡುಗಿಯರು ಮೌನವಾದರು. ವೈದಿಕ ತಂತ್ರಗಾರಿಕೆಯ ಸಂಚಿನ ಭಾಗವಾಗಿದ್ದ ಮಾಧ್ಯಮಗಳ ವರದಿಗಳನ್ನು ಮಾತ್ರ ನಂಬಿದ್ದ ಆ ಹುಡುಗಿಯರಿಗೆ ತಮ್ಮ ತಪ್ಪಿನ ಅರಿವಾಗಿತ್ತು.

ದುರಂತವೆಂದರೆ ಆ ಇಬ್ಬರು ಮುಗ್ಧ ಹುಡುಗಿಯರಿಗಿಂತ ಮುಗ್ಧರಾಗಿರುವ ಜನ ನಮ್ಮೊಡನಿದ್ದಾರೆ. ಮುಸ್ಲಿಮರೆಂದರೆ ಭಯೋತ್ಪಾದಕರೆಂದು ಬಣ್ಣಿಸುವ ಮಾಧ್ಯಮಗಳಿಗೆ ಅವರು ಈಗಾಗಲೇ ಬಲಿಯಾಗಿದ್ದಾರೆ. ಈ ಬಲಿಯಿಂದಾಗಿ ಅಮಾಯಕ ಶಾಂತಿ ಪ್ರಿಯ ಮುಸ್ಲಿಮರು ದಿಕ್ಕು ತಪ್ಪಿದಂತಾಗಿದ್ದಾರೆ. ನೋವು, ಆತಂಕ ಅವರನ್ನು ಆವರಿಸಿದೆ. ಸಜ್ಜನರಾದ ಈ ಮುಸ್ಲಿಂ ಬಾಂಧವರಿಗೆ ಸಾಂತ್ವನ ಹೇಳುವವರಾರು? ಆರದ ಗಾಯವಾಗಿ ಬೆಳೆಯುತ್ತಿರುವ ಈ ಅನುಮಾನದ ಗ್ಯಾಂಗ್ರಿನ್‌ಗೆ ಚಿಕಿತ್ಸೆ ನೀಡುವುದು ಹೇಗೆ? ಭಾರತದಲ್ಲಿರುವ ೧೫ ಕೋಟಿ ಮುಸ್ಲಿಮರಲ್ಲಿ ಯಾರೋ ಕೆಲವರು ಭಯೋತ್ಪಾದಕರಾದರೆ ಉಳಿದವರನ್ನೆಲ್ಲ ಯಾಕೆ ದೂಷಿಸುತ್ತೀರಿ? ಗುಜರಾತಿನ ಹತ್ಯಾಕಾಂಡದಲ್ಲಿ ಸಾವಿರಾರು ಹಿಂದುಗಳು ಭಾಗವಹಿಸಿಲ್ಲವೆ? ಅದಕ್ಕೆಲ್ಲ ದೇಶದ ಹಿಂದೂಗಳನ್ನೆಲ್ಲ ಗುರಿಯಾಗಿಸಲಾಗುತ್ತದೆಯೇ?

ನನ್ನ ಮಾಧ್ಯಮ ಮಿತ್ರರು ದಯವಿಟ್ಟು ಉತ್ತರಿಸಬೇಕು.

○ ಇಂದೂಧರ ಹೊನ್ನಾಪುರ

ಅಂತರಂಗ

ಕನ್ನಡ-ಮನಸ್ಸು ಮತ್ತು ಅನಂತಮೂರ್ತಿಯವರ ಹಿಂಪಯಣ...

ಸಂಪಾದಕರೊಡನೆ ಸಂವಾದ

ಪ್ರಿಯ ಸಂಪಾದಕರೇ,

ಒಂದು ಗ್ರಾವುದ ಸುತ್ತಿ ಬರುವಷ್ಟರಲ್ಲಿಯೆ ಬಾರಿ
ಸುಸ್ತು ಶರೀರಕ್ಕೆ! ನೂರಾರು ಕಲ್ಪನಾ ಲೋಕ
ಸುತ್ತಿ ಬರುವ ಮನಸ್ಸಿಗೂ ಬರುವುದಿಲ್ಲವೆ ಹೇಳಿ
ಭಾರಿ ಬೇಜಾರು —**ಎಂ. ಗೋಪಾಲಕೃಷ್ಣ ಅಡಿಗ**

ನಿಮ್ಮ ಈ ಸಲದ ಸಂಚಿಕೆಯಲ್ಲಿ ಪ್ರಕಟವಾದ "ಕನ್ನಡ-ಮನಸ್ಸು ಮತ್ತು ಯು.ಆರ್. ಅನಂತಮೂರ್ತಿ-ಡಾ.ಬಿ.ಸಿ ನಾಗೇಂದ್ರಕುಮಾರ್ ಅವರ ಲೇಖನ ಓದಿದಾಗ ಹಾಗೂ ಡಿಸೆಂಬರ್.೨೦೦೭ 'ಮಯೂರ' ಮಾಸಿಕದಲ್ಲಿ-ಡಿ.ಎಸ್. ನಾಗಭೂಷಣ ಅವರ, ಹಾಗೂ ಇನ್ನಿತರ ಕೆಲವು ಲೇಖನಗಳನ್ನು ನೋಡಿದಾಗ, ಸಾಹಿತ್ಯದ ವಿದ್ಯಾರ್ಥಿಯಾದ ನನಗೆ ಕೆಲವು ಅನುಮಾನಗಳು ಮೂಡಿವೆ. ಯಾರ ಭಜನಾ ಮಂಡಳಿಯ ಸದಸ್ಯರಲ್ಲದ, ನಮ್ಮಂತಹವರಿಗೆ-ಈ ಲೇಖನಗಳನ್ನು ಗಮನಿಸಿದಾಗ, ಉಂಟಾಗುವ ಗೊಂದಲಗಳನ್ನು ಕುರಿತು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ-ಅನಂತ ಮೂರ್ತಿಯವರ ವ್ಯಕ್ತಿತ್ವದ 'ಗಜಭೇಟೆ'ಗೆ ತೊಡಗಿರುವ ಬಿ.ಸಿಎನ್‌ರವರ ಪ್ರಯತ್ನ ಸುತ್ತ್ಯಾರ್ಹವಾದರೂ, ಕೆಲವು ಅನುಮಾನಗಳನ್ನು ಗಮನಿಸಿದಾಗ ಮುಖ್ಯವಾಗಿ ಕೃತಿ-ಕೃತಿಕಾರನ ವ್ಯಕ್ತಿತ್ವ ರಿಲೀಜಿಸ್, ಹಾಗೂ ಸಾಹಿತಿಗಿರಬೇಕಾದ ಸಾಮಾಜಿಕ ಹೊಣೆಗಾರಿಕೆ, ಬದ್ಧತೆ-ಇವೆಲ್ಲವನ್ನು ಕುರಿತ ಚಿಂತನೆಗಳು ನವೋದಯ ಕಾಲದಿಂದಲೂ ನಡೆಯುತ್ತಾ ಬಂದಿದ್ದರೂ, ಈಗ ಅದನ್ನು ಪುನರ್ ಚರ್ಚಿಸಬೇಕಾದ ಅಗತ್ಯವಿದೆಯೆಂದು ಭಾವಿಸುತ್ತೇನೆ. ನಾಗೇಂದ್ರಕುಮಾರ್‌ರವರ ಯು.ಆರ್. ಅನಂತಮೂರ್ತಿಯವರು ಹೇಳಿರುವ 'ಕಮ್ಯೂನಿಸಮ್ಮನ್ನು ಕೋಮುವಾದವನ್ನು ನಾನು ವಿಪರೀತವಾಗಿ ದ್ವೇಷ ಮಾಡ್ತೀನಿ, ಯಾಕೆಂದ್ರೆ ನನಗೆ ರಿಲಿಜನ್ ಬಗ್ಗೆ ಬಹಳ ಗೌರವವಿದೆ' ಎಂಬ ಮಾತಿಗೆ ಇಂಥ ಕಡೆಗಳಲ್ಲಿ ಅವರ ಚಿಂತನೆ ಎಡವಿದಂತೆ ಕಾಣುತ್ತದೆ ಎನ್ನುತ್ತಾರೆ, ಯಾವುದೋ ಒಂದು ಸಂದರ್ಶನದ ಮಾತನ್ನು ಕೇಳಿ, ಅಥವಾ ಕೃತಿಯಲ್ಲಿ ಕೃತಿಕಾರ ಯಾವುದೋ ಒಂದು ಪಾತ್ರದ ಬಗ್ಗೆ ಒಲವು ತೋರುವ, ಸಂದರ್ಭದಲ್ಲಿ-ಸಾರಾಸಗಟಾಗಿ ಈ ಬಗೆಯ ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ? ಹಾಗೆ ನೋಡಿದರೆ ಕನ್ನಡ ಸಾಹಿತ್ಯ ಪರಂಪರೆಯೆ ದೊಡ್ಡ ರಿಲೀಜಿಯಸ್‌ದಂತಹ ಕ್ಯಾನ್‌ವಾಸ್‌ವುಳ್ಳದ್ದು ಅಲ್ಲದೆ ಪಂಪ-ಅಲ್ಲಮರಿಂದ ಮೊದಲ್ಗೊಂಡು, ಬೇಂದ್ರೆಯವರವರೆಗೂ ರಿಲೀಜಿಯಸ್ ಆದ ಬರಹಗಾರರೇ ಬಹುಸಂಖ್ಯಾತರು. ಆದರೆ ಅವರೆಲ್ಲರೂ ಅದನ್ನು ಮೀರಿ ಬೆಳೆದಿದ್ದಾರೆ, ಎಂಬುದು ವಿಧಿತವಾದುದು, ಸಾಮಾನ್ಯವಾಗಿ ಎಲ್ಲಾ ದೊಡ್ಡ ಬರಹಗಾರನ ಬರಹ ಮತ್ತು ಕೃತಿಯಲ್ಲಿ, ಈ ವೈರುಧ್ಯದ, ವಿದ್ರೋಹದ, ಗುಣಗಳಿರಬಹುದು! ಕನ್ನಡ ಸಂದರ್ಭದಲ್ಲಿ ಹಿರಿಯ ಕವಿ ಅಡಿಗರು ವ್ಯವಸ್ಥೆ ಮತ್ತು ಕ್ರಮದ ಬಗ್ಗೆ ತೀವ್ರವಾದ



ಎಸ್. ತ್ಯಾಗರಾಜ್
ಬೆಂಗಳೂರು

ಸಿಟ್ಟನ್ನು ವ್ಯಕ್ತಪಡಿಸುತ್ತಾ ಬಂದ ಅವರು ಕೊನೆ ಕೊನೆಯಲ್ಲಿ ಜನಸಂಘಕ್ಕೆ ಸೇರಿದ್ದನ್ನು ನೆನಪಿಸಿಕೊಳ್ಳಬಹುದು. ಅನಂತಮೂರ್ತಿಯವರ ಚಿಂತನಾ ಬರಹಗಳಲ್ಲಿ ಭವ, ದಿವ್ಯದಂತಹ ಕಾದಂಬರಿಗಳಲ್ಲಿ ಒಂದು ಆಧ್ಯಾತ್ಮಿಕ ವಾತಾವರಣ ಸೃಷ್ಟಿಯಾಗುತ್ತದೆ. ಕುವೆಂಪುರವರ ಕಾದಂಬರಿ ಪ್ರಕೃತಿ ಈ ಪಾತ್ರ ನಿರ್ವಹಿಸುತ್ತದೆ. ಅನಂತ ಮೂರ್ತಿಯವರೇ, 'ಬಹುಮುಖ'ದಲ್ಲಿ ಪ್ರಕಟವಾದ ಸಂದರ್ಶನದಲ್ಲಿ ಹೇಳುವ ಮಾತುಗಳನ್ನು ಗಮನಿಸಿ "ನೀವು ನನ್ನ ಕಾರ್ತಿಕ ಕಥೆಯನ್ನು ಓದಿದರೆ, ಅಲ್ಲಿ ಒಂದು ಮಗು, ಮನೆಯ ಎಲ್ಲಾ ಗಡಿಬಿಡಿ ಗದ್ದಲದ ನಡುವೆಯೇ, ಆಕಾಶದಲ್ಲಿ ಹಾರಾಡುತ್ತಿರುವ ದೇವತೆಯೊಂದರ ಮುಖ ನೋಡುವ ದೃಶ್ಯ ನಮಗೆ ಸಿಗುತ್ತದೆ. ನಿಜವಾಗಿಯೂ ಇಂಥ ಒಂದು ಅನುಭವ ನನಗಾಗಿತ್ತು. ಆ ಅನುಭವ ನನ್ನನ್ನು ಪರವಶಗೊಳಿಸಲ್ಲಿಲ್ಲವಾದರೂ, ನಾನು ಅದನ್ನು ಪ್ರಶ್ನಿಸಲೇಬೇಕಾದ ತುರ್ತನ್ನು ತಂದಿತ್ತು. ಏಕೆಂದರೆ ಅದೊಂದು ಭ್ರಮೆಯೂ ಆಗಿದ್ದಿರಬಹುದು, ನೀವು ಯಾವುದನ್ನು ಆಧ್ಯಾತ್ಮಿಕ ವಾತಾವರಣ ಅನ್ನುತ್ತೀರೊ ಅದು ಇದರಿಂದಲೆ, ಬರುತ್ತದೆ, ನಾನು ನನ್ನ ಕೃತಿಗಳಲ್ಲಿ - ಅ-ತಾರ್ಕಿಕ ಸಂಗತಿಗಳನ್ನು ಚಿತ್ರಿಸಿರುವಾಗ ವ್ಯಂಗ್ಯವನ್ನು ಬಳ ಸಿರಬಹುದು. ಆದರೆ ಅಂಥದೊಂದು ಅದ್ಭುತ, ಆಧ್ಯಾತ್ಮಿಕ, ಪಾರಭೌತಿಕ ಸಂಗತಿಯ ಅಸ್ತಿತ್ವದ ಸಾಧ್ಯತೆಯನ್ನೆಂದೂ ನಾನು ತಳ್ಳಿ ಹಾಕಿಲ್ಲ. ಅದನ್ನು ಕೇವಲ ಸಂಪ್ರದಾಯ ವಿರೋಧಿ, ಬ್ರಾಹ್ಮಣ ವಿರೋಧಿ ಎಂದು, ನನ್ನ ಕಲಾನಿರ್ಮಿತಿಯಲ್ಲಿನ ಸೃಜನಶೀಲ ಪ್ರಕ್ರಿಯೆಯನ್ನು ಸರಳೀಕರಿಸಿದಂತೆ ಎಂದು ನನ್ನ ಭಾವನೆ, ನನ್ನನ್ನು ಮೂಢ ಸಂಪ್ರದಾಯವಾದಿ ಎಂದು ಮೂಲೆಗೆ ತಳ್ಳುವುದು ಎಷ್ಟು ತಪ್ಪೋ, ಇದೂ ಅಷ್ಟೇ ತಪ್ಪು" ರಿಲಿಜನ್ ಎಂದರೇನು, ಶುದ್ಧ, ಧಾರ್ಮಿಕತೆಯ ಹುಡುಕಾಟವೆಂದರೇನು ಎಂಬುದು ಮತೀಯ ಮಠೀಯ ಆಧ್ಯಾತ್ಮಕ ಶೋಧವೇ...? ಬೇಂದ್ರೆ ಯವರ ಕಾವ್ಯದ ಬಗ್ಗೆಯೂ ಮಾತನಾಡುವಾಗ 'ಆಸ್ತಿಕ ಕವಿ' ಎನ್ನುವಾಗ-ಅವರ ಕೆಲವು ಬಿಡಿಪದ್ಯಗಳನ್ನು ಆಧರಿಸಿ ಇಲ್ಲದ ಗುಣಗಳನ್ನು ಆರೋಪಿಸುವ- ಇರಬೇಕಾದ್ದು-ಇದು ಎಂದು ಫರ್ಮಾನು ಹೊರಡಿಸುವುದನ್ನು ಕಂಡಿದ್ದೇನೆ. ಈ ತೆರನಾದ ಪ್ರಕ್ರಿಯೆಗಳು ದೊಡ್ಡ ಬರಹಗಾರರನೇಕರನ್ನು ಕುರಿತಂತೆ ನಡೆದಿರುವುದನ್ನು ಗಮನಿಸುತ್ತಾ ಬಂದರೆ, ನಾವು ಅವರ ಕೃತಿ-ಹಾಗೂ ವ್ಯಕ್ತಿತ್ವವನ್ನು ಸಮಗ್ರವಾಗಿ ಗ್ರಹಿಸದೇ ಒಂದು ಮುಖವನ್ನು ಬಿಡಿಯಾಗಿ ನೋಡುವಾಗ-ಈ ಪಯಣ-ಹಿಂಪಯಣವೆನ್ನಿಸುವುದೇ? ಉತ್ತರ ಪ್ರಾಜ್ಞರು ವಿವರಿಸಬೇಕು?....

ಇನ್ನು ಬಿ.ಸಿ.ಎನ್. ಪ್ರಸ್ತಾಪಿಸುವ, ಜ್ಞಾನಪೀಠ ಪ್ರಶಸ್ತಿ ಬಂದಾಗ, ಉಂಟಾದ ಸಂಚಲನ, ಪರ, ವಿರೋಧ ವಾಗ್ವಾದ ಚರ್ಚೆ, ಓವರ್ ಟೇಕ್‌ನ್ನು ಕುರಿತು ನೋಡಿದರೆ, ಬಹುಶಃ ಅನಂತಮೂರ್ತಿಯವರಿಗೆ ನೊಬೆಲ್ ಬಂದರೂ ಇವೆಲ್ಲವೂ ಸಂಭವಿಸುತ್ತಿತ್ತೇನೋ, "ಆದರೆ ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳೆಂದು ಕೊಂಡಿರುವ ನಮ್ಮಂಥ ಕೆಲವರಿಗೆ-ವಿದ್ಯಾರ್ಥಿ ದೆಸೆಯಲ್ಲಿಯೇ, ಸಾಹಿತ್ಯ ಪ್ರವೇಶಕ್ಕೆ ಬಾಗಿಲು ತೆರೆದುಕೊಂಡದ್ದು, ಅನಂತಮೂರ್ತಿ, ಚಿತ್ತಾಲ, ತೇಜಸ್ವಿ-ಅಡಿಗರಂತಹವರ-ಬರಹಗಳ ಮೂಲಕವೇ ಹೊರತು, ಪಂಪ, ಕುಮಾರವ್ಯಾಸರಿಂದಲ್ಲ, ಅನಂತರವೇ ನಾವು ಹಳಗನ್ನಡ ಹಾಗೂ ಪರಂಪರೆಯ ಸಾಹಿತ್ಯದ ಅಧ್ಯಯನಕ್ಕೆ 'ಹಿಂಪಯಣ' ಬೆಳೆಸಿದ್ದು, ಈ ನಿಟ್ಟಿನಲ್ಲಿ ಜ್ಞಾನಪೀಠವನ್ನೂ-ಗಮನಿಸಿದಾಗ-ಅದನ್ನು ಪಡೆಯದೇ ಸಾಹಿತ್ಯಾಸಕ್ತರ ಹೃದಯದಲ್ಲಿ ಸ್ಥಾನ ಗಳಿಸಿರುವ ಅನೇಕ ಲೇಖ

ಕನ್ನಡಿಗರ ಮಧ್ಯೆ ಇರುವುದೇ ನಮ್ಮ ಭಾಗ್ಯ

ಮಾನ್ಯ ಸಂಪಾದಕರಿಗೆ, ನಮಸ್ಕಾರಗಳು.

ಆತ್ಮೀಯರೆ, ಫೆ–೦೮ ರ 'ಸಂವಾದ'ದಲ್ಲಿ ಪ್ರಕಟವಾದ "ಕನ್ನಡ ಮನಸ್ಸು ಮತ್ತು ಯು.ಆರ್. ಅನಂತಮೂರ್ತಿ" ಶೀರ್ಷಿಕೆಯ ಡಾ॥ ಬಿ.ಸಿ. ನಾಗೇಂದ್ರ ಕುಮಾರ್ ಅವರ ಲೇಖನ ಓದಿದೆ. ತುಂಬ ಪ್ರಾಮಾಣಿಕವಾದ ವಿಚಾರಗಳನ್ನು ಅನಂತಮೂರ್ತಿ ಅವರ ಬಗ್ಗೆ ಬರೆದಿದ್ದಾರೆ. ಡಾ॥ ಅನಂತಮೂರ್ತಿಯವರು ಕನ್ನಡಿಗರ ಮಧ್ಯ ಇರುವುದೇ ನಮ್ಮ ಭಾಗ್ಯ. ಗಾತ್ರ ನೋಡಿ ಪುಸ್ತಕ ಅಳೆಯಬಾರದು! ಪಾತ್ರ ನೋಡಿ ಅಭಿನಯ ಅಳೆಯಬಾರದು. ಕೇವಲ ನೂರಾಹದಿನಾರು ಪುಟಗಳ 'ಸಂಸ್ಕಾರ' ಕಾದಂಬರಿ ೧೯೭೫ರಲ್ಲಿ ಪ್ರಕಟವಾದರೂ ಇಂದಿನ ಓದಿಗೂ ಹೊಸತನವನ್ನು ಕೊಡುತ್ತಿದೆ. ಇಷ್ಟು ಪುಟ್ಟ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಪಡೆದುಕೊಂಡಿದ್ದರೂ ಸಮಗ್ರ ಸಾಹಿತ್ಯಕ್ಕೆ ಜ್ಞಾನಪೀಠ ಬಂದಿಯೆನ್ನುವುದರಲ್ಲಿ ಸಮಗ್ರ ಕೃತಿಗಳು ಈ ಸತ್ತ್ವ ಶಕ್ತಿ ಮತ್ತು ಸಂತಾನ ಶಕ್ತಿಯನ್ನು ಪಡೆದುಕೊಂಡಿವೆ. ಅವರ ಪ್ರಜ್ಞೆ ಹಾಗೂ ಪರಿಸರ ಮತ್ತು ಬೆತ್ತಲೆ ಪೂಜೆಯಾಕೆಕೂಡದು ಓದಿದವರಿಗೆ ಗೊತ್ತೇ ಆಗುತ್ತದೆ. ಡಾ॥ ಬಿ.ಸಿ. ನಾಗೇಂದ್ರ ಅವರು ಉಲ್ಲೇಖಿಸಿದಂತೆ 'ಬರ' ಸಣ್ಣ ಕತೆಯಲ್ಲಿ ಮಾತ್ರ ಅನಂತಮೂರ್ತಿ ಅಡಗಿಲ್ಲ; ಅವರ 'ಕವಿಯ ಪೂರ್ಣಿಮೆ'ಯಲ್ಲಿ ಸಿಕ್ಕುತ್ತಾರೆ. ಹೀಗೆ ಅವರ 'ಸೂರ್ಯನ ಕುದುರೆ' ಅದರಂತೆ ಯಾವುದನ್ನೇ ಓದಿ ಇನ್ವಾಲ್ಮೆಂಟ್ಅವರ ಅನುಭೂತಿಗೆ ಸಾಕ್ಷಿಯಾಗಿದೆ. ಅನಂತಮೂರ್ತಿಯವರ ಮನದೇಚ್ಛೆ ಅಂದರೆ ಕನ್ನಡಕ್ಕೊಂದು ನೊಬೆಲ್ ತರುವತನಕ. ಅವರು ನಮ್ಮಿಂದ ಅಗಲುವುದಿಲ್ಲ. ಭೀಷ್ಮ ಉತ್ತರಾಯಣಕ್ಕಾಗಿ ಕಾಯುತ್ತಿದ್ದಂತೆ ತನ್ನ ಮೈಗೆನೆಟ್ಟ ಬಾಣಗಳೆಲ್ಲವೂ ಉದುರಿಗಾಯ ಮಾಯವಾದಗ ಸಾವು ಬಂತು. ಹಾಗೆ ಅನಂತಮೂರ್ತಿಯವರ ಮೈಗೆ ಸಿಕ್ಕಿಕೊಂಡ ಇಚ್ಛೆಗಳ ಬಾಣಗಳು ಕಳಚಿ–ಮನದೇಚ್ಛೆ ಈಡೇರಿದಾಗಲೇ ಅನಂತಮೂರ್ತಿಯವರಿಗೆ ಉತ್ತರಾಯಣ ಬರುವುದು. ಕ್ವಿಂಟಲ್‌ಗಟ್ಟಲೆ ಬರೆದು ಜ್ಞಾನಪೀಠಕ್ಕಾಗಿ ಹಪಹಪಿಸುವ ವ್ಯಕ್ತಿತ್ವ ಇವರದಾಗಿರಲಿಲ್ಲ. ನೂರು ಪುಟಗಳ 'ನಾಕು ತಂತಿ' ನೂರಾರು ಪುಟಗಳ ಚೋಮನ 'ದುಡಿ–ಮುಕ್ಕಜ್ಜಿಯ ಕನಸುಗಳನ್ನು ಕನ್ನಡಿಗರು ಎಂದೂ ಮರೆಯಲಾರರು. ವಿದೇಶದಲ್ಲಿ ಕೂತು ದಕ್ಷಿಣಕನ್ನಡದ ಮಣ್ಣಿನ ಕತೆಯಲ್ಲಿ ಸಂಸ್ಕಾರ ಹುಟ್ಟಿತು. ಹಿಂದಿ ಸಾಹಿತ್ಯದ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಅಜ್ಞೆಯರು ಜೇಲಿನಲ್ಲಿ ಅದುವೂ ದೆಹಲಿಯ ಜೇಲಿನಲ್ಲಿ ಕೂತು ರಷ್ಯಾದ ನೆಲ–ಜನಜೀವನದ ಕುರಿತು 'ವಿಪಥಗಾ' ಸಣ್ಣಕತೆ ಬರೆದರು–ಅಂಥವರು ಜಗತ್ತನ್ನು ಗೆಲ್ಲುತ್ತಾರೆ. ಅಂಥ ಜಗತ್ತಿನ ಶ್ರೇಷ್ಠ ಚಿಂತಕರ ಸಾಲಿನಲ್ಲಿ ಅನಂತಮೂರ್ತಿ ಅನುಕ್ರಮದಲ್ಲಿ ಪ್ರಥಮಾದ್ಯರಾಗುತ್ತಾರೆ. ನಾನು ಅನಂತಮೂರ್ತಿ ಎಂಬ ವ್ಯಕ್ತಿಯ ಅಭಿಮಾನಿಯಲ್ಲ. ಅವರ ಸಾಹಿತ್ಯಾಭಿಮಾನಿ. ನಮಗೆ ಮಾನವೀಯತೆ ದೊಡ್ಡದಾಗಿ ಕಾಣಬೇಕು. ಪಾಕ್ಷಿಕ ದೃಷ್ಟಿಯಲ್ಲ ಜೇನು ನೊಣಗಳಿಗೆ ಧಕ್ಕೆ ಹಚ್ಚಿದರೆ ಅವು ಕುಪಿತವಾಗುವುಮ ಸಹಜ. ಯಾಕೆಂದರೆ ಅವುಗಳಿಗೆ ಯಾರನ್ನೂ ತಡೆಯುವುದು ಕೆಲಸವಲ್ಲ. ಜೇನಿನಂಥ ಸಿಹಿ ತಯಾರಿಸುತ್ತಿರುವುದೇ ಅವುಗಳಿಗೆ ತಪಸ್ಸು. ಭಂಗ ಮಾಡಿದವರನ್ನು ಯಾಕೆ ಸುಮ್ಮನೆ ಬಿಡಬೇಕು? ಅನ್ನುವ ವ್ಯಕ್ತಿತ್ವ ಅನಂತಮೂರ್ತಿ ಅವರದು.

– ಅರ್ಜುನ ತಾ. ಕೋರಟಕರ,
ಜಮಖಂಡಿ

ಕರಿದ್ದಾರೆ. "ಯಾವುದೇ ಬಗೆಯ ತಾತ್ವಿಕ ವಿರೋಧವು ವೈಯುಕ್ತಿಕವಾಗಿರಬಾರದು ಎಂಬ ಎಚ್ಚರಿಕೆ ನಮಗೆ ಅನಂತಮೂರ್ತಿಯವರ ಬದುಕು ಬರಹಗಳು ಪರೋಕ್ಷವಾಗಿ ಕಲಿಸಿಕೊಟ್ಟವು" ಎಂಬ ಡಾ.ಬಿ.ಸಿ.ಎಲ್‌ರ ಮಾತು ನಿಜ. ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬರು ಚರ್ಚ್‌ನಲ್ಲಿ ಸಂಸ್ಕಾರ ಕಾದಂಬರಿಯನ್ನು ಓದುತ್ತಿದುದ್ದನ್ನು ಕೇಳಿದಾಗ, ಕಜಕ್‌ಸ್ತಾನ್ ಕಾದಂಬರಿಕಾರನೊಬ್ಬನು ಇವರಿಂದ ಪ್ರೇರಿತನಾಗಿ ಕೃತಿ ರಚಿಸಿದಾಗ, "ತೃತೀಯ ಜಗತ್ತಿನ ಸಾಂಸ್ಕೃತಿಕ ಹರಿಕಾರರು ಎಂದಾಗ ಕನ್ನಡದ ಬರಹಗಾರನೊಬ್ಬನು ತಲುಪಿದ ಎತ್ತವನ್ನು ಕಂಡು ಸಂಭ್ರಮಿಸಿದವರಲ್ಲವೇ, ಆದ್ದರಿಂದ ಯಾವ ಬರಹಗಾರನಾಗಲೀ ಓದುಗರ– ಹೃದಯ ಸಂವಾದಕ್ಕೆ ತೊಡಗಿ, ಅರಿವನ್ನು ವಿಸ್ತರಿಸಿ, ಕಣ್ತೆರೆಸುವ ಕ್ರಿಯೆಯಲ್ಲಿ ತೊಡಗಿದಾಗ, ಪಡೆಯುವ ಧನ್ಯತೆಗೆ–ಯಾವ ಪ್ರಶಸ್ತಿ ಸಾಟಿ. ಕೆಲವರು ಎಲ್ಲಾ ಪ್ರಶಸ್ತಿ, ಪುರಸ್ಕಾರಗಳನ್ನು ಮೀರಿ ನಿಲ್ಲುತ್ತಾರಲ್ಲವೇ?

ಇನ್ನು ಸಾಹಿತಿಯ ಸಾಮಾಜಿಕ ಪ್ರಜ್ಞೆ–ಹೊಣೆಗಾರಿಕೆ, ಬದ್ಧತೆಗಳನ್ನು ಕುರಿತು ಮಾತನಾಡುವಾಗ– ಸಾಹಿತಿಯಾದವನು ದಂತ ಗೋಪುರದಲ್ಲಿ ಕುಳಿತುಕೊಂಡಿರಬಾರದು ಎಂಬ ವಾದ ಮೊದಲಿನಿಂದಲೂ ಇದೆ. ಯಾವುದೇ ಶ್ರೇಷ್ಟ ಕಲಾಕೃತಿಗಳು ಆಯಾ ಕಾಲದ ಸಮಾಜದ ಕೈಗನ್ನಡಿಯಾಗಿರುವುದು, ದಿಟವಾದರೂ ಸಾಹಿತಿ–ಸಮಾಜಮುಖಿಯಾದ–ಪ್ರಗತಿಪರನಾದ–ಪರಿವರ್ತನಾಶೀಲ ಮನಸ್ಸುವುಳ್ಳವನು ತೊಳಲಾಟವನ್ನು ಅನುಭವಿಸಲೇಬೇಕಾಗುತ್ತದೆ. ಆರೋಗ್ಯಕರ ಸಮಾಜದ ನಿರ್ಮಾಣ–ಒಂದು ಉನ್ನತ ಹಂತದ ಆದರ್ಶವೇ ಹೊರತು–ಅದನ್ನು ನನಸಾಗಿಸುವಲ್ಲಿ–ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಕೊಡುಗೆಗಳು ಮುಖ್ಯವಾದರೂ ಅದೇ ಪ್ರಧಾನವಾದುದಲ್ಲ.–ಯಾಕೆಂದರೆ ಯಾವುದೇ ಶ್ರೇಷ್ಟ ಬರಹಗಾರ ತನ್ನ, ಕೃತಿಗಳಲ್ಲಿ ಸಮಾಜದ ಯಾವ ವರ್ಗದವರನ್ನು–ಕುರಿತು–ತೀವ್ರವಾಗಿ ಭಾವಿಸುತ್ತಾನೋ. ಅವರಿಗೆ–ಅದು

ಸಾಹಿತ್ಯದ–ಹಾಗೂ ಸಾಹಿತಿಯ–ಸಂಕಲ್ಪ ಶಕ್ತಿ ಯಾವುದು? ಸಮಾಜದ ಎಚ್ಚರದ ಧ್ವನಿಯಾಗಿ, ಆತ್ಮ ಸಾಕ್ಷಿಯ 'ಗರುಡ ಗಂಭ' ದಂತೆ ನಿಲ್ಲಬೇಕಾದರೆ ಅವರು ಏನು ಮಾಡಬೇಕು?

ಸಂವಹನವಾಗುತ್ತದೆಂಬ ಗ್ಯಾರಂಟಿಯಿಲ್ಲ. ನಾಗೇಂದ್ರಕುಮಾರ್‌ರವರು 'ಬರ'ದ ನಾಯಕನ ತೊಳಲಾಟದೊಂದಿಗೆ –ಮೂರ್ತಿಯವರನ್ನು ಹೋಲಿಸಿರುವುದು ಈ ನಿಟ್ಟಿನಲ್ಲಿ ಸರಿ ಏಕೆಂದರೆ ಎಲ್ಲಾ ಗೊತ್ತಿದ್ದು ಈ ವ್ಯವಸ್ಥೆಯಲ್ಲಿ ಏನು ಮಾಡಲಾಗದ ಅಸಹಾಯಕತೆ–ಸಹಜವಾದುದು, ಆದರೆ ವಿಮರ್ಶಕ ಡಿ.ಎಸ್. ನಾಗಭೂಷಣ್ ತಮ್ಮ ಅನಂತಮೂರ್ತಿ ೨–೩ ಲೇಖನದಲ್ಲಿ ಇದರ ಬಗ್ಗೆ ವಿವರವಾಗಿ ಇನ್ನೊಂದು ನೆಲೆಯಲ್ಲಿ ವಿಶ್ಲೇಷಿಸುತ್ತಾ "ಗಾಂಧಿ ಮತ್ತು ನೆಹರೂ ನಡುವಿನ ಸೈದ್ಧಾಂತಿಕ ತಿಕ್ಕಾಟದಲ್ಲಿ–ಯಾವ ದ್ವಂದ್ವಗಳೂ ಇಲ್ಲದ ನಿಲುವನ್ನು ಹೇಗೆ ತೆಗೆದುಕೊಳ್ಳಬೇಕು ಎಂಬುದು ಸ್ಪಷ್ಟವಾಗುತ್ತಿಲ್ಲ– ಎಂಬ ಮೂರ್ತಿಯವರ ಮಾತಿಗೆ ಪ್ರತಿಕ್ರಿಯಿಸುತ್ತ ಬಹುಶಃ ಸ್ವಾತಂತ್ರ್ಯೋತ್ತರದಲ್ಲಿ ಭಾರತ ಎದುರಿಸಿದ ಬಹುದೊಡ್ಡ ದ್ವಂದ್ವ, ಅಸ್ಪಷ್ಟತೆ ಹಾಗೂ ಕಷ್ಟವಿದು, ಆದರೆ ಇಂತಹ ಅಸ್ಪಷ್ಟತೆ–ದ್ವಂದ್ವ ಹಾಗೂ ಕಷ್ಟಗಳನ್ನು ಪರಿಹರಿಸಬೇಕಾದ ಅನಂತಮೂರ್ತಿಯವರಂತಹ ಬುದ್ಧಿಜೀವಿಗಳೇ ಹೀಗೆ ಇಷ್ಟು ಕಾಲದವರೆಗೂ ಸ್ವತಂತ್ರ ಭಾರತ ತನ್ನ ೬೦ನೇ ವರ್ಷ ಆಚರಿಸಿಕೊಳ್ಳುತ್ತಿರುವವರೆಗೂ ಕೈ ಚೆಲ್ಲಿ ಕೂತರೆ ಮುಖ್ಯವಾಹಿನಿ ಎಳೆದುಕೊಂಡು ಹೋದ ಕಡೆ ಹೋಗಿ ಹಲುಬುತ್ತಾ ನಿಂತರೆ, ಅವರನ್ನು ಬುದ್ಧಿಜೀವಿಗಳೆಂದು ಏಕೆ ಮಾನ್ಯ ಮಾಡಬೇಕು? ಬೌದ್ಧಿಕವಾಗಿ ಹಲುಬುವುದಷ್ಟೇ ಬುದ್ಧಿಜೀವಿತ್ವವಾದರೇ, ವ್ಯಾವಹಾರಿಕವಾದ ಬುದ್ಧಿವಂತರಿಗೂ, ಚಿಂತನಾಶೀಲರಾದ–ಬುದ್ಧಿಜೀವಿಗಳಿಗೂ ವ್ಯತ್ಯಾಸವಾದರೂ ಏನು? ಎಂದು ಈ ಲೇಖನದಲ್ಲಿ ಮುಂದುವರಿದು, ಅನೇಕ ಮುಖ್ಯ ಪ್ರಶ್ನೆಗಳನ್ನ, ನಮ್ಮ ಮುಂದಿಡುತ್ತಾರೆ. ನಮಗೆ ಈಗ ಮುಖ್ಯವಾಗುವುದು–ಸಾಹಿತ್ಯದ–ಹಾಗೂ ಸಾಹಿತಿಯ–ಸಂಕಲ್ಪ ಶಕ್ತಿ ಯಾವುದು? ಸಮಾಜದ ಎಚ್ಚರದ ಧ್ವನಿಯಾಗಿ, ಆತ್ಮ ಸಾಕ್ಷಿಯ 'ಗರುಡ ಗಂಭ' ದಂತೆ ನಿಲ್ಲಬೇಕಾದರೆ ಅವರು ಏನು ಮಾಡಬೇಕು? ಸಮಾಜದ ವಾಹಿನಿಗೆ–ಹೋರಾಟದ ಮುಂಚೂಣಿಗೆ ನಿಲ್ಲಬೇಕಾ? ಅಥವಾ ಮಾತಿನ ವೀರರಾಗಿ–ಬೌದ್ಧಿಕ ಕಸರತ್ತಿನಲ್ಲಿ–ಒಣಚರ್ಚೆಯಲ್ಲಿ ಸುಖಿಸಬೇಕಾ? ಲೇಖಕನ ಜವಾಬ್ದಾರಿಗಳೇನು? ಬರಹಗಾರನಿಗೆ–ಇದಕ್ಕೆ ಸಂಬಂಧಿಸಿದ ಮ್ಯಾನಿಫೆಸ್ಟೊಗಳನ್ನು ರೂಪಿಸಿಕೊಡುವವರು ಯಾರು? ಪ್ರಶ್ನೆಗಳು ಇನ್ನು ಹಲವಿದೆ. ಅಥವಾ ನಾನು ನನ್ನ ಬರಹದಲ್ಲಿ–ನನ್ನೆಲ್ಲ ವಿಚಾರಗಳನ್ನು ವ್ಯಕ್ತಪಡಿಸಿದ್ದೇನೆ. ಇನ್ನು ನನಗೂ ಈ ಲೋಕಕ್ಕೂ ಯಾವುದೇ ಸಂಬಂಧವಿಲ್ಲ–ಎಂದರೆ, 'ಕಲೆಗಾಗಿ ಕಲೆ' ಎಂಬ ಮಾತು ಅರ್ಥ ಕಳೆದುಕೊಂಡು ಹಳತಾಯಿತಲ್ಲ! ಇದು–ಕೇವಲ ಒಬ್ಬಬ್ಬರು ಲೇಖಕರಿಗೆ–ಅನ್ವಯಿಸಿ ನೋಡುವುದಲ್ಲ, ಒಟ್ಟು ಸಮಾಜದ–ಕೆನೆಪದರವೆಂದು–ಭಾವಿಸುತ್ತಿದ್ದ ಮಂದಿ–ಈಗ–ಆಸೆ, ಆಮಿಷಗಳಿಗೆ ಬಲಿಯಾಗಿ–ಜಾಣಮಾನಿಗಳಾಗಿರುವ–ಇವತ್ತಿನ ದಿನಗಳಲ್ಲಿ 'ದೇಶ ಹೊತ್ತಿ ಉರಿದರೂ'–ಜಾಣ ಕಿವುಡರಂತೆ–ಮೂಗರಂತೆ–ಮೌನಿಗಳಾಗಿರುವ ಈ ಸಂದರ್ಭದಲ್ಲಿ–ನಾವು ಸಮಾಜದ ಬುದ್ಧಿಜೀವಿಗಳ ವರ್ಗದಿಂದ ಅಪೇಕ್ಷಿಸುವುದಾದರೂ ಏನನ್ನು? ನಮ್ಮ ಅಪೇಕ್ಷೆಗಳೇ ಅತಿಯಾಯಿತೋ?– ಇಲ್ಲವೇ ಯುಗಧರ್ಮದ–ಮೌಲ್ಯಗಳ ಪಲ್ಲಟವೊ– "ಹೆಳವನ ಹೆಗಲ ಮೇಲೆ ಕುರುಡು ಕೂತಿದ್ದಾನೆ–ದಾರಿ ಸಾಗುವುದೆಂತೂ ಕಾಣಬೇಕು" ಎಂಬಂತೆ ದಾರಿ ಯಾವುದು, ಎಂದು ನಿರೀಕ್ಷಿಸೋಣವೇ? ಅಥವಾ–ಈ ಎಲ್ಲಾ ಗೋಣಗಾಟಗಳು ಎಲ್ಲಾ ಕಾಲದಲ್ಲಿಯೂ ಇದ್ದದು ಎಂದು ನಮ್ಮ ಪಾಡಿಗೆ, ನಾವಿದ್ದು–ಬಿಡುವುದಾ? ಕೊನೆಯಿರದ ಪ್ರಶ್ನೆಗಳು?...ಕಾಡುತ್ತಲೆ ಇರುತ್ತದೆ. □

ದಕ್ಕಿದ ಅರಣ್ಯ ಹಕ್ಕು

ನಾ ದಿವಾಕರ

"ಪರಿಶಿಷ್ಟ ವರ್ಗ ಹಾಗೂ ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕು ಮಾನ್ಯತೆ) ಅರಣ್ಯ ಹಕ್ಕು ಕಾಯಿದೆ ೨೦೦೬" (ಅರಣ್ಯ ಕಾಯ್ದೆ) ೨೦೦೬ರ ಡಿಸೆಂಬರ್ ೧೮ರಂದು ಸಂಸತ್ತಿನಲ್ಲಿ ಮಂಡಿಸಲಾಗಿ ಬಿಲ್ ಪಾಸಾಗಿದ್ದರೂ, ಈ ಕಾಯ್ದೆಗೆ ರಾಷ್ಟ್ರಪತಿಗಳ ಅಂಕಿತವಾಗಿ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರಕ್ಕೆ ಒಂದು ವರ್ಷ ಕಾಲಾವಕಾಶ ಬೇಕಾಯಿತು. ಜನವರಿ ೧ ೨೦೦೮ ರಂದು ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಅಧಿಕೃತವಾಗಿ ಜಾರಿಗೊಳಿಸಿ, ಅಧಿಸೂಚನೆ ಹೊರಡಿಸಿದೆ. ಚಾರಿತ್ರಿಕವಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ಈ ಜನಸಮುದಾಯಗಳಿಗೆ ನ್ಯಾಯ ದೊರಕಿಸುವಲ್ಲಿ ಈ ಕಾಯ್ದೆ ಸಹಾಯಕವಾಗುತ್ತದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ ೮.೪ರಷ್ಟಿರುವ ಆದಿವಾಸಿಗಳು ಅರಣ್ಯ ಸಂಪತ್ತಿನಿಂದ ಮಧ್ಯಕಾಲೀನ ಯುಗದಿಂದಲೂ ವಂಚಿತರಾಗುತ್ತಲೇ ಇದ್ದಾರೆ. ಅರಣ್ಯಗಳಲ್ಲಿ ಲಭ್ಯವಿರುವ ಫಲವತ್ತಾದ ಭೂಮಿಯನ್ನು ಶ್ರೀಮಂತ ರೈತರು, ಭೂಮಾಲೀಕರು ಅನುಭವಿಸುತ್ತಿದ್ದಾರೆ. ಹಾಗಾಗಿ ಆದಿವಾಸಿಗಳನ್ನು ಅರಣ್ಯಗಳಿಂದ ಉಚ್ಚಾಟಿಸುವ ಪ್ರಕ್ರಿಯೆ ಬ್ರಿಟೀಷರಿಂದಲೇ ಬಂದ ಪರಂಪರೆ ಎಂದು ಹೇಳಲಾಗುವುದಿಲ್ಲ. ಅರಣ್ಯಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಿಸುವುದರ ಮೂಲಕ ಬ್ರಿಟೀಷ್ ಸರ್ಕಾರವು ತನ್ನ ಏಕಾಧಿಪತ್ಯವನ್ನು ಸಾಧಿಸಿತ್ತಷ್ಟೆ. ಸ್ವಾತಂತ್ರ್ಯೋತ್ತರ ಭಾರತದಲ್ಲೂ ಅರಣ್ಯಗಳು ಕೇಂದ್ರ ಸರ್ಕಾರದ ಅಧೀನಕ್ಕೊಳಗಾಗಿದ್ದು ಇದರ ಪರಿಣಾಮವಾಗಿ ಆದಿವಾಸಿಗಳು ಮತ್ತು ಅರಣ್ಯ ಉತ್ಪನ್ನಗಳಿಂದಲೇ ತಮ್ಮ ಜೀವನ ನಡೆಸುತ್ತಿದ್ದವರು ಕ್ರಮೇಣವಾಗಿ ಕೂಲಿಯಾಳುಗಳಾಗಿ ಪರಿವರ್ತಿತವಾದದ್ದು ಇತಿಹಾಸದ ವಿಪರ್ಯಾಸವೆಂದೇ ಹೇಳಬಹುದು.

ಆದಿವಾಸಿಗಳು ಈ ಬೆಳವಣಿಗೆಗಳನ್ನು ಮೌನವಾಗಿ ಸಹಿಸಿಕೊಂಡಿಲ್ಲ. ತಮ್ಮ ಸಾಮುದಾಯಿಕ ಅಸ್ಮಿತೆಯನ್ನೇ ಆಧರಿಸಿ ಆದಿವಾಸಿಗಳು ಅನೇಕ ಸಂದರ್ಭಗಳಲ್ಲಿ ಆಳುವ ವರ್ಗಗಳ ವಿರುದ್ಧ ತಮ್ಮ ಹಕ್ಕುಗಳಿಗಾಗಿ ಹೋರಾಡಿರುವುದು ಚರಿತ್ರೆಯಲ್ಲಿ ಕಾಣಬಹುದು. ೨೦ನೆಯ ಶತಮಾನದ ಪ್ರಾರಂಭದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಆದಿವಾಸಿಗಳನ್ನು ಸಂಘಟಿಸಿ ಭೂಮಿ ಮತ್ತು ಅರಣ್ಯ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದವು. ಅರೆ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ವಿರುದ್ಧ ಆದಿವಾಸಿಗಳನ್ನು ಸಂಘಟಿಸಿದ ಕಮ್ಯುನಿಸ್ಟ್ ಗುಂಪುಗಳು, ಆದಿವಾಸಿಗಳು ತಮ್ಮ ಹಕ್ಕುಗಳಿಗಾಗಿ ಹೋರಾಡುವ ವಿಶಾಲ ವೇದಿಕೆಯನ್ನು ಆಗಲೇ ನಿರ್ಮಿಸಿದ್ದರು. ಈ ಒತ್ತಡಗಳಿಗೆ ಮಣಿದ ಸರ್ಕಾರಗಳು ಆದಿವಾಸಿಗಳಿಗಾಗಿ ಅನೇಕ ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಂಡಿದ್ದೇ ಅಲ್ಲದೆ ಸಂವಿಧಾನದ ಐದನೆ ಮತ್ತು ಆರನೆ ಪರಿಚ್ಛೇದಗಳ ಮೂಲಕ ಆದಿವಾಸಿಗಳಿಗೆ ನೆರವಾಗುವಂತಹ ಸಮುದಾಯ ಸ್ವಾಯತ್ತ ಸಂಸ್ಥೆಗಳನ್ನು ಪ್ರಾರಂಭಿಸಿದ್ದವು. ಅದಾಗ್ಯೂ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಸಾಹತುಶಾಹಿ ನೀತಿಯನ್ನೇ ಅನುಸರಿಸಿದ ಭಾರತ ಸರ್ಕಾರದ ಅಭಿವೃದ್ಧಿ ಮಾರ್ಗವು ಆದಿವಾಸಿಗಳ ಹಕ್ಕನ್ನು ಕಾಪಾಡುವತ್ತ ಗಮನ ಹರಿಸಲೇ ಇಲ್ಲ.

ನೆಹರೂರವರ ಮಿಶ್ರ ಆರ್ಥಿಕ ನೀತಿಯಡಿಯಲ್ಲಿ ಕೈಗೊಂಡ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಆದಿವಾಸಿಗಳ ಭೂಮಿಯೇ ಆಧಾರವಾಗಿ ಪರಿಣಮಿಸಿದ್ದರಿಂದ ತಮ್ಮ ಭೂಮಿಯೊಂದಿಗೇ ಜೀವನೋಪಾಯಕ್ಕೆ ಆಧಾರವಾಗಿದ್ದ ಅರಣ್ಯ ಉತ್ಪನ್ನಗಳನ್ನೂ ಕಳೆದುಕೊಂಡ ಆದಿವಾಸಿಗಳು ಸ್ಥಾನಾಂತರಕ್ಕೊಳಗಾಗಬೇಕಾಯಿತು. ಒಂದು ರೀತಿಯಲ್ಲಿ ಬಡ ಆದಿವಾಸಿಗಳು ಅಭಿವೃದ್ಧಿ ಪಥದ ಬಲಿಪಶುಗಳಾಗಿದ್ದರೆಂದರೆ ಅತಿಶಯೋಕ್ತಿಯಲ್ಲ. ಪ್ರಭುತ್ವದ ಈ ವೈರುಧ್ಯಮಯ ನೀತಿಗಳ ಪರಿಣಾಮವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕಾದ ಆದಿವಾಸಿಗಳು ಗಾಂಧಿವಾದಿಗಳು ಮತ್ತು ಪರಿಸರವಾದಿಗಳ ಜೊತೆ ಹೋಗಬೇಕಾಯಿತು. ಈ ಸಂಘಟನೆಗಳು ಪ್ರಮುಖವಾಗಿ ಭೂಮಿ ಮತ್ತು ಅರಣ್ಯ ಉತ್ಪನ್ನಗಳಿಗಾಗಿ ಹೋರಾಟ ನಡೆಸುವುದ

ತಮ್ಮ ಸಾಮುದಾಯಿಕ ಅಸ್ಮಿತೆಯನ್ನೇ ಆಧರಿಸಿ ಆದಿವಾಸಿಗಳು ಅನೇಕ ಸಂದರ್ಭಗಳಲ್ಲಿ ಆಳುವ ವರ್ಗಗಳ ವಿರುದ್ಧ ತಮ್ಮ ಹಕ್ಕುಗಳಿಗಾಗಿ ಹೋರಾಡಿರುವುದು ಚರಿತ್ರೆಯಲ್ಲಿ ಕಾಣಬಹುದು. ೨೦ನೆಯ ಶತಮಾನದ ಪ್ರಾರಂಭದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಆದಿವಾಸಿಗಳನ್ನು ಸಂಘಟಿಸಿ ಭೂಮಿ ಮತ್ತು ಅರಣ್ಯ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದವು. ಅರೆ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಶೋಷಣೆಯ ವಿರುದ್ಧ ಆದಿವಾಸಿಗಳನ್ನು ಸಂಘಟಿಸಿದ ಕಮ್ಯುನಿಸ್ಟ್ ಗುಂಪುಗಳು, ಆದಿವಾಸಿಗಳು ತಮ್ಮ ಹಕ್ಕುಗಳಿಗಾಗಿ ಹೋರಾಡುವ ವಿಶಾಲ ವೇದಿಕೆಯನ್ನು ಆಗಲೇ ನಿರ್ಮಿಸಿದ್ದರು. ಈ ಒತ್ತಡಗಳಿಗೆ ಮಣಿದ ಸರ್ಕಾರಗಳು ಆದಿವಾಸಿಗಳಿಗಾಗಿ ಅನೇಕ ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಂಡಿದ್ದೇ ಅಲ್ಲದೆ ಸಂವಿಧಾನದ ಐದನೆ ಮತ್ತು ಆರನೆ ಪರಿಚ್ಛೇದಗಳ ಮೂಲಕ ಆದಿವಾಸಿಗಳಿಗೆ ನೆರವಾಗುವಂತಹ ಸಮುದಾಯ ಸ್ವಾಯತ್ತ ಸಂಸ್ಥೆಗಳನ್ನು ಪ್ರಾರಂಭಿಸಿದ್ದವು.

ರೊಂದಿಗೆ ಅರಣ್ಯಗಳ ಮೇಲೆ ಪ್ರಭುತ್ವದ ನಿಯಂತ್ರಣವನ್ನು ಕಡಿಮೆಗೊಳಿಸಲು ಆಗ್ರಹಿಸಲಾರಂಭಿಸಿದವು. ಈ ಹಂತದಲ್ಲೇ ಅರಣ್ಯ ಸಂಪತ್ತಿನ ಕೂಡು ಒಡೆತನದ ನಿರ್ವಹಣಾ ವ್ಯವಸ್ಥೆಯೂ ಪ್ರಾರಂಭವಾಗಿತ್ತು. ಈ ವ್ಯವಸ್ಥೆಯಲ್ಲಿ ಸರ್ಕಾರದ ಸ್ವಾಮ್ಯದೊಂದಿಗೇ ಅರಣ್ಯ ಸಂಪತ್ತನ್ನು ಅನೌಪಚಾರಿಕವಾಗಿ ನಿರ್ವಹಿಸುವ ನೀತಿಯನ್ನು ಅಳವಡಿಸಲಾಗಿತ್ತು.

ಜಾಗತೀಕರಣ ಪ್ರಕ್ರಿಯೆ ಆರಂಭಗೊಂಡ ನಂತರದಲ್ಲಿ ಸರ್ಕಾರವು ಅರಣ್ಯ ನಿರ್ವಹಣೆಯಿಂದ ಹಿಂದೆ ಸರಿದರೂ ಅದು ಕಾರ್ಪೋರೇಟ್ ಶಕ್ತಿಗಳ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆಯೇ ಕ್ರಮ ಕೈಗೊಳ್ಳಲಾರಂಭಿಸಿತು. ಹಾಗಾಗಿ ಅನೌಪಚಾರಿಕ ಅರಣ್ಯ ನಿರ್ವಹಣಾ ವ್ಯವಸ್ಥೆ ಕ್ರಮೇಣವಾಗಿ ವಿದೇಶಿ ಹಣದಿಂದ ನಡೆಯುವ ಸಂಘಟನೆಗಳ ಪಾಲಾಯಿತು. ಇದೇ ವೇಳೆಗೆ ರೈತರ ಆತ್ಮಹತ್ಯೆ, ಕೃಷಿ ಬಿಕ್ಕಟ್ಟು, ವಲಸೆ ಪ್ರಕ್ರಿಯೆಗಳು ತೀವ್ರಗೊಂಡು ಆದಿವಾಸಿಗಳ ಸ್ಥಳಾಂತರ ಪ್ರಕ್ರಿಯೆಯೂ ತೀವ್ರವಾಗತೊಡಗಿತ್ತು. ಈ ಸಂದರ್ಭದಲ್ಲಿ ಎರಡು ಪ್ರಮುಖ ಸವಾಲುಗಳು ಎದುರಾದವು. ಮೊದಲನೆಯದಾಗಿ ಆದಿವಾಸಿಗಳಿಗೆ ಅರಣ್ಯ ಉತ್ಪನ್ನಗಳು ದೊರಕುವಂತೆ ಮಾಡಿ ಅವರಿಗೆ ಜೀವನದ ಭದ್ರತೆ ಒದಗಿಸುವುದು ಮತ್ತು ಎರಡನೆಯದಾಗಿ ಕಾರ್ಪೋರೇಟ್ ಚಾಲಿತ ಅಭಿವೃದ್ಧಿಯನ್ನು ತಡೆಗಟ್ಟಲು ಅರಣ್ಯ ನಿರ್ವಹಣೆಯಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳನ್ನು ತರುವುದು. ಈ ಹಿನ್ನೆಲೆಯಲ್ಲೇ ಅರಣ್ಯ ಹಕ್ಕು ಕಾಯ್ದೆಯನ್ನು ರೂಪಿಸಲಾಯಿತು. ಆದಿವಾಸಿ ಹಕ್ಕುಗಳಿಗಾಗಿ ಹೋರಾಡುವ ಸಂಘಟನೆಗಳು ಈ ಕಾಯ್ದೆಯಿಂದ ಆದಿವಾಸಿಗಳು ಕಳೆದುಕೊಂಡಿರುವ ತಮ್ಮ ಸಂಪತ್ತನ್ನು ಮರಳಿ ಗಳಿಸಬಹುದು ಎಂದು ವಾದಿಸಿದರೆ, ಸಾಂಪ್ರದಾಯಿಕ ವನ ಸಂರಕ್ಷಣಾ ಸಂಘಟನೆಗಳು ಈ ಕಾಯ್ದೆಯನ್ನು ಜಾರಿಗೊಳಿಸುವುದರಿಂದ ವನಸಂಪತ್ತು ನಾಶವಾಗುವುದೆಂದು ವಾದಿಸಿದ್ದನ್ನು ಇಲ್ಲಿ ಸ್ಮರಿಸಬಹುದು..

ಜಂಟಿ ಸಂಸದೀಯ ಸಮಿತಿಯ ವರದಿ

ಅರಣ್ಯ ಸಂರಕ್ಷಣಾ ಕಾಯ್ದೆ ೧೯೮೦ರ ಅನ್ವಯ ಅಕ್ಟೋಬರ್ ೨೫ ೧೯೮೦ರ ನಂತರ ಅರಣ್ಯಗಳಲ್ಲಿ ವಾಸಿಸುತ್ತಿದ್ದ ಆದಿವಾಸಿಗಳೆಲ್ಲರನ್ನೂ ಅತಿಕ್ರಮಣಕಾರರೆಂದು ಪರಿಗಣಿಸಿ, ಅವರೆಲ್ಲರನ್ನೂ ಉಚ್ಚಾಟಿಸುವಂತೆ ೧೯೮೨ರ ಮೇ ತಿಂಗಳಲ್ಲಿ ಸರ್ಕಾರ ಆದೇಶ ಹೊರಡಿಸಿತ್ತು. ಈ ನ್ಯೂನತೆಯನ್ನೂ ಪ್ರಸ್ತುತ ಮಸೂದೆ ಸರಿಪಡಿಸುತ್ತದೆ ಎಂಬ ಆಶಾಭಾವನೆ ಆದಿವಾಸಿ ಪರ ಸಂಘಟನೆಗಳಿಗಿತ್ತು. ಗ್ರಾಮ ಸಭೆಗಳಿಗೆ ಅರಣ್ಯ ಹಕ್ಕುಗಳನ್ನು ನಿರ್ಧರಿಸುವ ಜವಾಬ್ದಾರಿಯನ್ನು ನೀಡಲೂ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದ್ದುದರಿಂದ ಅನೇಕ ಆದಿವಾಸಿ ಹಕ್ಕು ಸಂಘಟನೆಗಳು ಮತ್ತು ಎಡ ಪಕ್ಷಗಳು ಈ ಮಸೂದೆಯನ್ನು ಬೆಂಬಲಿಸಿದ್ದವು. ಈ ನಿಟ್ಟಿನಲ್ಲಿ ಸ್ಥಳೀಯ ಅರಣ್ಯ ಸಂಪನ್ಮೂಲ ಆಧಾರಿತ ಆದಿವಾಸಿಗಳಿಗೆ ಅನುಕೂಲವಾಗುವಂತಹ ರಚನಾತ್ಮಕ ಬದಲಾವಣೆಗಳನ್ನು ಕೈಗೊಳ್ಳಲು ಸರ್ಕಾರವು ಒಂದು ಜಂಟಿ ಸಂಸದೀಯ ಸಮಿತಿಯನ್ನೂ ನೇಮಿಸಿತ್ತು. ಈ ಸಮಿತಿಯು ನೀಡಿದ ವರದಿಯಲ್ಲಿ ಅರಣ್ಯ ಹಕ್ಕುಗಳನ್ನು ಪಡೆಯಲು ವಿಧಿಸಲಾಗಿದ್ದ ಕಡೆಯ ದಿನಾಂಕವನ್ನು ೨೫-೧೦-೧೯೮೦ರ ಬದಲಾಗಿ ೧೩-೧೨-೨೦೦೫ಕ್ಕೆ ಬದಲಿಸಲು ಸೂಚಿಸಲಾಗಿತ್ತು. ನ್ಯಾಯಯುತವಾಗಿ ಆದಿವಾಸಿಗಳಾಗಿದ್ದರೂ, ಅತಿಕ್ರಮಣಕಾರರೆಂದು ಪರಿಗಣಿಸಲ್ಪಟ್ಟಿದ್ದ ಲಕ್ಷಾಂತರ ಜನರಿಗೆ ಇದರಿಂದ ಉಪಯೋಗವಾಗುತ್ತದೆಂದು ಪ್ರತಿಪಾದಿಸಲಾಗಿತ್ತು.

> **ನೆಹರೂರವರ ಮಿಶ್ರ ಆರ್ಥಿಕ ನೀತಿಯಡಿಯಲ್ಲಿ ಕೈಗೊಂಡ ಅನೇಕ ಅಭಿವೃದ್ಧಿ ಯೋಜನೆಗಳಿಗೆ ಆದಿವಾಸಿಗಳ ಭೂಮಿಯೇ ಆಧಾರವಾಗಿ ಪರಿಣಮಿಸಿದ್ದರಿಂದ ತಮ್ಮ ಭೂಮಿಯೊಂದಿಗೇ ಜೀವನೋಪಾಯಕ್ಕೆ ಆಧಾರವಾಗಿದ್ದ ಅರಣ್ಯ ಉತ್ಪನ್ನಗಳನ್ನೂ ಕಳೆದು ಕೊಂಡ ಆದಿವಾಸಿಗಳು ಸ್ಥಾನಾಂತರಕ್ಕೊಳಗಾಗಬೇಕಾಯಿತು. ಒಂದು ರೀತಿಯಲ್ಲಿ ಬಡ ಆದಿವಾಸಿಗಳು ಅಭಿವೃದ್ಧಿ ಪಥದ ಬಲಿಪಶುಗಳಾಗಿದ್ದರೆಂದರೆ ಅತಿಶಯೋಕ್ತಿಯಲ್ಲ. ಪ್ರಭುತ್ವದ ಈ ವೈರುಧ್ಯಮಯ ನೀತಿಗಳ ಪರಿಣಾಮವಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕಾದ ಆದಿವಾಸಿಗಳು ಗಾಂಧಿವಾದಿಗಳು ಮತ್ತು ಪರಿಸರವಾದಿಗಳ ಮೊರೆ ಹೋಗಬೇಕಾಯಿತು. ಈ ಸಂಘಟನೆಗಳು ಪ್ರಮುಖವಾಗಿ ಭೂಮಿ ಮತ್ತು ಅರಣ್ಯ ಉತ್ಪನ್ನಗಳಿಗಾಗಿ ಹೋರಾಟ ನಡೆಸುವುದ ರೊಂದಿಗೆ ಅರಣ್ಯಗಳ ಮೇಲೆ ಪ್ರಭುತ್ವದ ನಿಯಂತ್ರಣವನ್ನು ಕಡಿಮೆಗೊಳಿಸಲು ಆಗ್ರಹಿಸಲಾರಂಭಿಸಿದವು. ಈ ಹಂತದಲ್ಲೇ ಅರಣ್ಯ ಸಂಪತ್ತಿನ ಕೂಡು ಒಡೆತನದ ನಿರ್ವಹಣಾ ವ್ಯವಸ್ಥೆಯೂ ಪ್ರಾರಂಭವಾಗಿತ್ತು.**

ಎರಡನೆಯದಾಗಿ ಸಮಿತಿಯು, ಸಾಂಪ್ರದಾಯಿಕವಾಗಿ ಅರಣ್ಯವನ್ನೇ ಆಶ್ರಯಿಸಿ ಬದುಕುತ್ತಿರುವ ಆದಿವಾಸಿಯೇತರ ಜನ ಸಮುದಾಯಗಳನ್ನು ಈ ಕಾಯ್ದೆಯ ಪರಿಧಿಯಲ್ಲಿ ಸೇರಿಸಿಕೊಳ್ಳುವಂತೆ ಶಿಫಾರಸ್ಸು ಮಾಡಿತ್ತು. ಮೂರು ತಲೆಮಾರುಗಳ ಕಾಲ ಅರಣ್ಯದಲ್ಲಿ ವಾಸಿಸಿದ್ದವರನ್ನು ಈ ವರ್ಗದಲ್ಲಿ ಸೇರಿಸಿಕೊಳ್ಳಲು ಆಗ್ರಹಿಸಲಾಗಿತ್ತು. ಅನೇಕ ಅಲೆಮಾರಿ ಸಮುದಾಯಗಳು, ಪರಿಶಿಷ್ಟ ಜಾತಿಗಳು ಅರಣ್ಯಗಳನ್ನೇ ನಂಬಿ ಆದಿವಾಸಿಗಳೊಡನೆಯೇ ಜೀವಿಸುತ್ತಿದ್ದರು. ಅವರನ್ನು ಕಾಯ್ದೆಯ ಪರಿಧಿಯಿಂದ ಹೊರಗಿಟ್ಟಲ್ಲಿ ಸಂಘರ್ಷಮಯ ವಾತಾವರಣ ಸೃಷ್ಟಿಯಾಗಬಹುದೆಂಬ ಸಂಶಯವನ್ನು ವರದಿ ವ್ಯಕ್ತಪಡಿಸಿತ್ತು.

ಮೂರನೆಯದಾಗಿ ಮೂಲ ಮಸೂದೆಯಲ್ಲಿ ರಾಷ್ಟ್ರೀಯ ಉದ್ಯಾನವನಗಳನ್ನು ಮತ್ತು ರಕ್ಷಿತ ಅರಣ್ಯ ಪ್ರದೇಶಗಳನ್ನು ಕಾಯ್ದೆಯ ಪರಿಧಿಯಲ್ಲಿ ಸೇರಿಸಲು ಉದ್ದೇಶಿಸಲಾಗಿತ್ತಾದರೂ, ಇದನ್ನು ಹೊರತುಪಡಿಸಲು ಸಮಿತಿ ಒತ್ತಾಯಿಸಿತ್ತು. ಸ್ಥಳೀಯ ಹಕ್ಕುಗಳನ್ನು ನಿರ್ಧರಿಸುವಲ್ಲಿ ಗ್ರಾಮಸಭೆಗಳಿಗೆ ಅಂತಿಮ ಅಧಿಕಾರ ನೀಡುವ ಮೂಲಕ ಸಮಿತಿಯು ಪ್ರಜಾತಾಂತ್ರಿಕ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಿದ್ದನ್ನು ಇಲ್ಲಿ ಗಮನಿಸಬಹುದು.

ನಾಲ್ಕನೆಯದಾಗಿ ಉಚ್ಚಾಟಿತ-ಪುನರ್ವಸತಿಗೊಳಪಟ್ಟ ಸಮುದಾಯಗಳ ಹಕ್ಕುಗಳನ್ನು ಮಾನ್ಯ ಮಾಡುವಂತೆ ವರದಿ ಶಿಫಾರಸ್ಸು ಮಾಡಿತ್ತು. ಅರಣ್ಯ ಭೂಮಿಯನ್ನು ಇತರ ಚಟುವಟಿಕೆಗಳಿಗೆ ಉಪಯೋಗಿಸುವ ಮುನ್ನ ಗ್ರಾಮಸಭೆಯ ಪರವಾನಗಿ ಪಡೆಯುವ ನೀತಿಯನ್ನೂ ಸಮಿತಿ ಸಲಹೆ ಮಾಡಿತ್ತು. ಅರಣ್ಯ ಪ್ರದೇಶಗಳನ್ನು ಕಾರ್ಪೋರೇಟ್ ಉದ್ಯಮಿಗಳಿಗೆ ಉದಾರವಾಗಿ ನೀಡುವ ಪರಿಸರ ಮತ್ತು ಅರಣ್ಯ ಇಲಾಖೆಯ ಮಂತ್ರಿಮಂಡಲದ ನಿರ್ಧಾರದ ಹಿನ್ನೆಲೆಯಲ್ಲಿ ಈ ನೀತಿ ಅತ್ಯಗತ್ಯವಾಗಿತ್ತು. ೨೦೦೬ರ ಮಂತ್ರಿಮಂಡಲದ ಅಧಿಸೂಚನೆಯ ಪ್ರಕಾರ ೧೧ ಸಾವಿರಕ್ಕೂ ಹೆಚ್ಚು ಯೋಜನೆಗಳನ್ನು ಸರ್ಕಾರ ಮಂಜೂರು ಮಾಡಿದ್ದು ಒಂಬತ್ತು ದಶಲಕ್ಷ ಆದಿವಾಸಿಗಳು ತಮ್ಮ ನೆಲೆ ಕಳೆದುಕೊಂಡಿದ್ದರು.

ಐದನೆಯದಾಗಿ ಆದಿವಾಸಿಗಳ ಮೇಲೆ ಹೇರಲಾಗಿದ್ದ ಅನೇಕ ನಿರ್ಬಂಧಗಳನ್ನು ಸಡಿಲಗೊಳಿಸಲು ಸಮಿತಿ ಒತ್ತಾಯಿಸಿತ್ತು. ೨.೫ ಹೆಕ್ಟೇರ್‌ಗಳ ಭೂ ಮಿತಿಯನ್ನು ಸಡಿಲಗೊಳಿಸುವುದು, ಅರಣ್ಯ ರಕ್ಷಣೆಯ ಹೊಣೆಗಾರಿಕೆಯನ್ನು ಆದಿವಾಸಿಗಳಿಗೆ ನೀಡುವುದು, ಅರಣ್ಯ ಭೂಮಿಯನ್ನು ವಿವಿಧ ರೀತಿ ಬಳಸಿಕೊಳ್ಳಲು ಅಧಿಕಾರ ನೀಡುವುದು, ಇವೇ ಮುಂತಾದ ಸಲಹೆಗಳನ್ನು ಸಮಿತಿ ಮಾಡಿತ್ತು.

ಕೊನೆಯದಾಗಿ ಜನತೆಗೆ ಅಭಿವೃದ್ಧಿ ಹೊಂದುವ ಹಕ್ಕನ್ನು ನೀಡುವಂತೆ ಸಮಿತಿ ಒತ್ತಾಯಿಸಿತ್ತು. ಅರಣ್ಯ ಉತ್ಪನ್ನಗಳಿಗೆ ಕನಿಷ್ಠ ಬೆಲೆ ನಿಗದಿ ಪಡಿಸಿ ಮಾರುಕಟ್ಟೆ ವ್ಯವಸ್ಥೆ ಮಾಡುವಂತೆ ಶಿಫಾರಸ್ಸು ಮಾಡಿತ್ತು. ಕಮ್ಯುನಿಸ್ಟ್ ಸಂಘಟನೆಗಳ ಅನೇಕ ವರ್ಷಗಳ ಆಗ್ರಹವೂ ಇದೇ ಆಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಜಂಟಿ ಸಂಸದೀಯ ಸಮಿತಿಯ ವರದಿಯ ಹಿಂದೆ ಎಡ ಪಕ್ಷಗಳ ಮತ್ತು ಎಡಪಂಥೀಯ ಆದಿವಾಸಿ ಸಂಘಟನೆಗಳ ಒತ್ತಾಸೆ ಬಲವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಎಡ ಪಕ್ಷಗಳ ತೀವ್ರ ಒತ್ತಡಗಳಿದ್ದುದರಿಂದಲೇ ಮಸೂದೆಯನ್ನು ಆತುರತೆಯಿಂದ ಅಂಗೀಕರಿಸಲಾಗಿದೆಯೆಂದು ಹೇಳಬಹುದು. ಸಮಿತಿಯು ನೀಡಿದ್ದ ಬಹುತೇಕ ಶಿಫಾರಸ್ಸುಗಳನ್ನು ಪ್ರಸ್ತುತ ಕಾಯ್ದೆಯಲ್ಲಿ ಅಳವಡಿಸಲಾಗಿದೆಯಾದರೂ ಸರ್ಕಾರವು ಅರಣ್ಯ ಇಲಾಖೆಯ ಅಧಿಕಾರಶಾಹಿ ಮತ್ತು ಕಾರ್ಪೋರೇಟ್ ಶಕ್ತಿಗಳ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಕೆಲವು ಸೂಕ್ಷ್ಮ ಬದಲಾವಣೆಗಳನ್ನು ತಂದಿದೆ. ಉದಾಹರಣೆಗೆ " ಅರಣ್ಯವಾಸಿ " ಗಳನ್ನು ನಿರ್ಧರಿಸುವಾಗ ಅರಣ್ಯದ ಒಳಗೆ ವಾಸಿಸುವವರನ್ನು ಮಾತ್ರ ಪರಿಗಣಿಸಿ, ಸಮೀಪದಲ್ಲಿ-ಪಕ್ಕದಲ್ಲಿ ವಾಸಿಸುವವರನ್ನು ಹೊರತುಪಡಿಸಲಾಗಿದೆ. ಇದರಿಂದಾಗಿ ಅಧಿಕೃತವಾಗಿ ಅರಣ್ಯ ಪ್ರದೇಶವೆಂದು ನಿರ್ಧರಿಸಲಾಗಿರುವ ಪ್ರದೇಶದಲ್ಲಿ ವಾಸಿಸುವವರು ಮಾತ್ರ ಅರಣ್ಯವಾಸಿಗಳಾಗುತ್ತಾರೆ. ಈ ನ್ಯೂನತೆಯನ್ನು ನಿವಾರಿಸಲು ಮಂತ್ರಿಮಂಡಲವು, ಅರಣ್ಯಪ್ರದೇಶದ ಹೊರಗಿದ್ದವರೂ, ಅರಣ್ಯದೊಳಗೆ ಭೂಮಿಯನ್ನು ಹೊಂದಿದ್ದಲ್ಲಿ ಅವರೂ ಈ ಕಾಯ್ದೆಯ ಉಪಯೋಗ ಪಡೆಯಬಹುದೆಂದು ಹೇಳುತ್ತದೆ. ಆದರೆ ಇದರಿಂದ ಅರಣ್ಯ ಉತ್ಪನ್ನಗಳನ್ನೇ ನಂಬಿಕೊಂಡಿರುವ ಅನೇಕ ದಲಿತ-ಭೂರಹಿತ ಆದಿವಾಸಿಗಳಿಗೆ ತೀವ್ರ ಪೆಟ್ಟಾಗುತ್ತದೆ. ಇನ್ನೊಂದೆಡೆ ಶ್ರೀಮಂತ ಗೈರು ಭೂಮಾಲೀಕರು ಈ ಕಾಯ್ದೆಯ ಉಪಯೋಗ ಪಡೆಯುತ್ತಾರೆ.

ಕಾಯ್ದೆಯಲ್ಲಿ ಕಂಡುಬರುವ ಮತ್ತೊಂದು ನ್ಯೂನತೆ ಎಂದರೆ ಆದಿವಾಸಿಯೇತರ ಸಮುದಾಯಗಳ ಹಕ್ಕುಗ

ಳನ್ನು ನಿರ್ಧರಿಸುವ ನಿಟ್ಟಿನಲ್ಲಿ, ಮೂರು ತಲೆಮಾರುಗಳ ಕಾಲ ಅರಣ್ಯದಲ್ಲಿ ನೆಲೆಸಿರುವವರನ್ನು ಪರಿಗಣಿಸುವುದಾದರೂ, ಒಂದು ತಲೆಮಾರಿಗೆ ೨೫ ವರ್ಷಗಳೆಂದು ನಿಗದಿಪಡಿಸಿರುವುದು, ಗಂಭೀರ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಈ ನೀತಿಯ ಪ್ರಕಾರ ಆದಿವಾಸಿಗಳು ತಾವು ೭೫ ವರ್ಷಗಳಿಂದ ಅರಣ್ಯದಲ್ಲಿ ವಾಸಿಸುತ್ತಿರುವುದನ್ನು ಸಾಬೀತುಪಡಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರವೂ ಬ್ರಿಟೀಷ್ ವಸಾಹತು ಕಾಲದ ದಾಖಲೆಗಳನ್ನೇ ಅವಲಂಬಿಸಬೇಕಾಗುತ್ತದೆ. ಇದರಿಂದಾಗಿ ಅನೇಕ ಆದಿವಾಸಿಗಳು ಅವಕಾಶ ವಂಚಿತರಾಗುವ ಸಾಧ್ಯತೆಗಳಿವೆ. ಭಾರತೀಯ ಜನತಾ ಪಕ್ಷವು, ಬಾಂಗ್ಲಾದೇಶದಿಂದ ವಲಸೆ ಬಂದಿರುವವರನ್ನು ಅರಣ್ಯಗಳಿಂದ ಉಚ್ಚಾಟಿಸಲು ಆಗ್ರಹಿಸಿರುವುದಕ್ಕೆ ಈ ಅಂಶಗಳು ಪೂರಕವಾಗಿದ್ದು, ಸಮಸ್ಯೆ ಕೋಮುವಾದಿ ಸ್ವರೂಪ ಪಡೆಯುವ ಸಾಧ್ಯತೆಗಳನ್ನೂ ತಳ್ಳಿಹಾಕುವಂತಿಲ್ಲ.

ಪ್ರಸ್ತುತ ಕಾಯ್ದೆಯಲ್ಲಿ ಕಂಡು ಬರುವ ಮತ್ತೊಂದು ಬದಲಾವಣೆ ಎಂದರೆ, ಸರ್ಕಾರವು ಗ್ರಾಮ ಸಭೆಗಳಿಗೆ ಅಧಿಕಾರ ನೀಡುವ ವಿಷಯದಲ್ಲಿ , ಗ್ರಾಮ ಆಧಾರಿತ ಪಂಚಾಯತಿಯ ಬದಲು , ಕಂದಾಯ ಆಧಾರಿತ ಪಂಚಾಯತಿಗಳನ್ನು ಪರಿಗಣಿಸಲಿದೆ. ಪರಿಣಾಮವಾಗಿ ಮೇಲ್ಜಾತಿಯವರ ಹಿಡಿತದಲ್ಲಿರುವ ಪ್ರದೇಶಗಳಲ್ಲಿ ಆದಿವಾಸಿಗಳ ಹಕ್ಕುಗಳಿಗೆ ಚ್ಯುತಿ ಬರುವ ಸಾಧ್ಯತೆಗಳು ಹೆಚ್ಚಾಗಿವೆ. ಹಕ್ಕುಗಳನ್ನು ನಿರ್ಧರಿಸುವ ಅಂತಿಮ ಅಧಿಕಾರವನ್ನು ಗ್ರಾಮಸಭೆಗಳಿಗೆ ವಹಿಸುವ ಬದಲು ಸರ್ಕಾರವು ಉಪ ವಿಭಾಗೀಯ ಸಮಿತಿಗಳಿಗೆ ವಹಿಸಿದ್ದು, ಈ ಸಮಿತಿಗಳಲ್ಲಿ ಪಂಚಾಯತಿಯ ಮೂವರು ಸದಸ್ಯರಿದ್ದು, ತಳಮಟ್ಟದ ಚಳುವಳಿಗಳಿಂದ ಯಾವುದೇ ಪ್ರತಿನಿಧಿಗಳಿರುವುದಿಲ್ಲ.

ಅರಣ್ಯ ಭೂಮಿಯನ್ನು ಇತರ ಚಟುವಟಿಕೆಗಳಿಗೆ ಉಪಯೋಗಿಸುವ ಮುನ್ನ ಗ್ರಾಮಸಭೆಗಳ ಪರವಾನಗಿ ಪಡೆಯಬೇಕೆಂಬ ಜಂಟಿ ಸಮಿತಿಯ ಶಿಫಾರಸ್ಸನ್ನು ಕಡೆಗಣಿಸಿರುವ ಸರ್ಕಾರವು ಅರಣ್ಯ ಉತ್ಪನ್ನಗಳಿಗೆ ಕನಿಷ್ಠ ಬೆಲೆ ನಿಗದಿಪಡಿಸುವ ನಿರ್ಧಾರವನ್ನೂ ಕೈಬಿಟ್ಟಿದೆ. ಇದರಿಂದ ಮಾರುಕಟ್ಟೆ ಶಕ್ತಿಗಳು ಆದಿವಾಸಿಗಳ ರಕ್ಷಿತ ಪ್ರದೇಶವನ್ನು ಆಕ್ರಮಿಸುವುದು ಸುಲಭವಾಗುತ್ತದೆ.

ಆದಿವಾಸಿಗಳ ಹಕ್ಕು ಮತ್ತು ಪರಿಸರ ರಕ್ಷಣೆ

ಆದಿವಾಸಿಗಳಿಗೆ ತಾವು ವಾಸಿಸುವ ಅರಣ್ಯದ ಭೂಮಿಯ ಮೇಲೆ ತಮ್ಮ ಹಕ್ಕನ್ನು ಪಡೆಯಲು ಇಷ್ಟು ವರ್ಷಗಳ ಕಾಲ ಸಂಘರ್ಷ ನಡೆಸಬೇಕಾಗಿ ಬಂದದ್ದೇ ನಮ್ಮ ಆಳುವ ವರ್ಗಗಳ ಅಧಿಕಾರಶಾಹಿ ಧೋರಣೆಯನ್ನು ತೋರಿಸುತ್ತದೆ. ಆಧುನಿಕ ಸಮಾಜದಲ್ಲಿ ಅರಣ್ಯದ ಹೊರಗೆ ವಾಸಿಸುವ ಜನತೆಗೆ ತಮ್ಮ ಭೂಮಿಯ ಮೇಲೆ ಸಂಪೂರ್ಣ ಒಡೆತನ ಇರುತ್ತದೆ. ನಗರವಾಸಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರಗಳಿರುತ್ತವೆ. ಅರಣ್ಯದಲ್ಲಿ ದೊರೆಯುವ ಮರ ಖರೀದಿಸಲು, ವಿದ್ಯುಚ್ಛಕ್ತಿ–ನೀರಾವರಿ ಯೋಜನೆಗಳಿಗಾಗಿ ಅರಣ್ಯಗಳನ್ನು ಮುಳುಗಿಸಲು ಹಕ್ಕುಗಳಿರುತ್ತವೆ. ಆದರೆ ಅರಣ್ಯ ಸಂಪತ್ತನ್ನೇ ನಂಬಿ ತಲತಲಾಂತರಗಳಿಂದ ಜೀವಿಸುತ್ತಿರುವ ಆದಿವಾಸಿಗಳಿಗೆ ತಮ್ಮ ಜೀವನದ ಮುಖ್ಯ ನೆಲೆಯಾದ ಅರಣ್ಯ ಸಂಪತ್ತಿನ ಮೇಲೆ ಹಕ್ಕನ್ನು ಪ್ರತಿಪಾದಿಸಿದಾಗ ಅನೇಕ ಎಡರು ತೊಡರುಗಳು, ವನ್ಯಜೀವಿ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ, ಇತ್ಯಾದಿಗಳು ಎದುರಾಗುತ್ತವೆ. ಪ್ರಸ್ತುತ ಕಾಯ್ದೆಯು ಈ ಸಂದಿಗ್ಧತೆಯಿಂದ ಹೊರಬರಲು ಸಹಾಯಕವಾಗಿದೆ. ಈ ನಿಟ್ಟಿನಲ್ಲಿ ಆದಿವಾಸಿಗಳ ಹಕ್ಕುಗಳನ್ನು ಕಾಪಾಡುವಂತೆಯೇ ನೈಸರ್ಗಿಕ ಸಂಪನ್ಮೂಲಗಳ ಮತ್ತು ವನ್ಯಜೀವಿಗಳ ಸಂರಕ್ಷಣೆಯನ್ನೂ ಮಾಡುವುದು ಅತ್ಯಗತ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಕಾಯ್ದೆಯನ್ನು ಎರಡು ಮಜಲುಗಳಲ್ಲಿ ವಿಶ್ಲೇಷಿಸಬಹುದು.

ಮೊದಲನೆಯದಾಗಿ, ವನ್ಯ ಜೀವಿ ಸಂರಕ್ಷಕರಿಗೂ, ಆದಿವಾಸಿ ಹಕ್ಕುಗಳ ಸಂಘಟನೆಗಳಿಗೂ ಲಾಗಾಯ್ತಿನಿಂದಲೂ ಸಂಘರ್ಷ ನಡೆಯುತ್ತಲೇ ಬಂದಿದೆ. ಪ್ರಸ್ತುತ ಕಾಯ್ದೆಯಲ್ಲೂ ಸಹ ಸಂರಕ್ಷಿತ ಪ್ರದೇಶಗಳೆಂದು ಪರಿಗಣಿಸಲಾಗುವ ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನಗಳ ವಿಷಯದಲ್ಲಿ ಈ ಸಂಘರ್ಷ ಮುಂದುವರೆಯುವಂತೆ ತೋರುತ್ತದೆ. ಈ ಸಂರಕ್ಷಿತ ಪ್ರದೇಶಗಳು ವನ್ಯಜೀವಿಗಳ ಮತ್ತು ನೈಸರ್ಗಿಕ ಸಂಪನ್ಮೂಲಗಳ ವಿನಾಶವನ್ನು ತಡೆಗಟ್ಟುವ ಮುಖ್ಯ ಸಾಧನಗಳಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಈಗಾಗಲೇ ಅನೇಕ ವನ್ಯಜೀವಿಗಳು ಮ್ಯೂಸಿಯಂ ವಸ್ತುಗಳಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಆದರೆ ಈ ಸಂರಕ್ಷಿತ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳನ್ನಾಗಿ ನಿರ್ಧರಿಸುವ ಮುನ್ನವೂ ಅನೇಕ ದಶಕಗಳಿಂದ ಅಲ್ಲಿ ವಾಸವಾಗಿರುವ ಅನೇಕ ಆದಿವಾಸಿ ಸಮುದಾಯಗಳನ್ನು ಕಾಣಬಹುದಲ್ಲವೇ? ಈ ನಿಟ್ಟಿನಲ್ಲಿ, ಇಂತಹ ಆದಿವಾಸಿ ಜನಸಮುದಾಯಗಳನ್ನು ಒಳಗೊಂಡಂತಹ ವನ್ಯಜೀವಿ ಸಂರಕ್ಷಣಾ ನೀತಿಗಳನ್ನು ಅನುಷ್ಠಾನಗೊಳಿಸಲು ಅನೇಕ ಪರಿಸರವಾದಿಗಳು ಪ್ರತಿಪಾದಿಸುತ್ತಿದ್ದನ್ನೂ ಇಲ್ಲಿ ಗಮನಿಸಬಹುದು. ಆದರೆ ಕೆಲವು ಪ್ರಬಲ ಪರಿಸರವಾದಿ ಗುಂಪುಗಳು ಈ ವಾದವನ್ನು ಒಪ್ಪದೆ ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಯಾವುದೇ ಬದಲಾವಣೆ ಮಾಡದಂತೆ ಸರ್ಕಾರಗಳ ಮೇಲೆ ಒತ್ತಡ ಹೇರುತ್ತಿರುವುದು ದುರದೃಷ್ಟಕರ ಬೆಳವಣಿಗೆಯಾಗಿದೆ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಂರಕ್ಷಿತ ಪ್ರದೇಶಗಳಲ್ಲಿ ಆದಿವಾಸಿಗಳಿಗೆ ಯಾವುದೇ ರೀತಿಯ ಹಕ್ಕುಗಳನ್ನು ನೀಡಲಾಗುತ್ತಿಲ್ಲವಾದ್ದರಿಂದ, ನಾಲ್ಕು ದಶಕಕ್ಕೂ ಹೆಚ್ಚು ಆದಿವಾಸಿಗಳು ಅವಸಾನದ ಅಂಚಿಗೆ ತಲುಪಿದ್ದಾರೆ.

ಆದಿವಾಸಿಗಳಿಗೆ ತಾವು ವಾಸಿಸುವ ಅರಣ್ಯದ ಭೂಮಿಯ ಮೇಲೆ ತಮ್ಮ ಹಕ್ಕನ್ನು ಪಡೆಯಲು ಇಷ್ಟು ವರ್ಷಗಳ ಕಾಲ ಸಂಘರ್ಷ ನಡೆಸಬೇಕಾಗಿ ಬಂದದ್ದೇ ನಮ್ಮ ಆಳುವ ವರ್ಗಗಳ ಅಧಿಕಾರಶಾಹಿ ಧೋರಣೆಯನ್ನು ತೋರಿಸುತ್ತದೆ. ಆಧುನಿಕ ಸಮಾಜದಲ್ಲಿ ಅರಣ್ಯದ ಹೊರಗೆ ವಾಸಿಸುವ ಜನತೆಗೆ ತಮ್ಮ ಭೂಮಿಯ ಮೇಲೆ ಸಂಪೂರ್ಣ ಒಡೆತನ ಇರುತ್ತದೆ. ನಗರವಾಸಿಗಳಿಗೆ ಇನ್ನೂ ಹೆಚ್ಚಿನ ಅಧಿಕಾರಗಳಿರುತ್ತವೆ. ಅರಣ್ಯದಲ್ಲಿ ದೊರೆಯುವ ಮರ ಖರೀದಿಸಲು, ವಿದ್ಯುಚ್ಛಕ್ತಿ–ನೀರಾವರಿ ಯೋಜನೆಗಳಿಗಾಗಿ ಅರಣ್ಯಗಳನ್ನು ಮುಳುಗಿಸಲು ಹಕ್ಕುಗಳಿರುತ್ತವೆ. ಆದರೆ ಅರಣ್ಯ ಸಂಪತ್ತನ್ನೇ ನಂಬಿ ತಲತಲಾಂತರಗಳಿಂದ ಜೀವಿಸುತ್ತಿರುವ ಆದಿವಾಸಿಗಳಿಗೆ ತಮ್ಮ ಜೀವನದ ಮುಖ್ಯ ನೆಲೆಯಾದ ಅರಣ್ಯ ಸಂಪತ್ತಿನ ಮೇಲೆ ಹಕ್ಕನ್ನು ಪ್ರತಿಪಾದಿಸಿದಾಗ ಅನೇಕ ಎಡರು ತೊಡರುಗಳು, ವನ್ಯಜೀವಿ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ, ಇತ್ಯಾದಿಗಳು ಎದುರಾಗುತ್ತವೆ.

ಪ್ರಸ್ತುತ ಕಾಯ್ದೆಯು ಈ ನಿಟ್ಟಿನಲ್ಲಿ ಸ್ವಾಗತಾರ್ಹ ಅಂಶಗಳನ್ನೊಳಗೊಂಡಿದೆ ಎಂದು ಹೇಳಬಹುದು. ಹೊಸ ಕಾಯ್ದೆಯನ್ವಯ, ಯಾವುದೇ ಸಂರಕ್ಷಿತ ಪ್ರದೇಶದಲ್ಲಿ ಆದಿವಾಸಿಗಳು, ಆ ಪ್ರದೇಶದಲ್ಲಿನ ವನ್ಯಜೀವಿಗಳೊಡನೆ ಸಹಬಾಳ್ವೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ನಿರೂಪಿತವಾದಲ್ಲಿ ಅಂತಹ ಸಮುದಾಯಗಳನ್ನು ಅನ್ಯ ಪ್ರದೇಶಕ್ಕೆ ಸ್ಥಳಾಂತರಿಸಬಹುದೆಂದು ಕಾಯ್ದೆಯಲ್ಲಿ ಹೇಳಲಾಗಿದೆ. ಆದರೆ ಈ ಕ್ರಮ ಕೈಗೊಳ್ಳುವ ಮೊದಲು ಆದಿವಾಸಿಗಳ ಒಪ್ಪಿಗೆ ಪಡೆದು, ಅವರಿಗೆ ತೃಪ್ತಿಕರವಾದ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸುವುದು ಅಗತ್ಯವಾಗುತ್ತದೆ. ಇದನ್ನು ಎಲ್ಲರೂ ಸ್ವಾಗತಿಸಬಹುದು. ಈ ರೀತಿ ಆದಿವಾಸಿಗಳನ್ನು ಸ್ಥಳಾಂತರಿಸಿ ರಕ್ಷಿಸಲ್ಪಟ್ಟ ಪ್ರದೇಶವನ್ನು ಬೇರಾವ ಉದ್ದೇಶಕ್ಕೂ ನೀಡದಿರುವ ಕಾನೂನು ಮಾಡಿರುವುದು ಅರಣ್ಯ ಸಂರಕ್ಷಕ ಸಂಘಟನೆಗಳಿಗೆ ಸಂತಸದ ವಿಷಯವಾಗಿದೆ. ಹಾಗಾಗಿ ಸಂರಕ್ಷಿತ ಪ್ರದೇಶಗಳಲ್ಲಿ ಅಣೆಕಟ್ಟುಗಳನ್ನು ನಿರ್ಮಿಸುವುದು, ವಿದ್ಯುತ್ ಘಟಕಗಳನ್ನು ಸ್ಥಾಪಿಸುವುದು, ಪ್ರವಾಸಿ ರೆಸಾರ್ಟ್‌ಗಳನ್ನು ಸ್ಥಾಪಿಸುವುದು ಇನ್ನು ಮುಂದೆ ಅಸಾಧ್ಯವಾಗುತ್ತದೆ. ಇಲ್ಲಿ ಉದ್ಭವಿಸುವ ಒಂದು ಸಮಸ್ಯೆ ಎಂದರೆ, ಹೊಸ ಕಾಯ್ದೆಯಡಿಯಲ್ಲಿ ಸಂರಕ್ಷಿತ ಪ್ರದೇಶಗಳಲ್ಲಿ ವಾಸವಿರುವ ಆದಿವಾಸಿಗಳಿಗೆ ಶಾಲೆ, ಆಸ್ಪತ್ರೆ, ಸಂಪರ್ಕ ಭವನಗಳು, ರಸ್ತೆ, ನೀರು ಸರಬರಾಜು ಮುಂತಾದವುಗಳನ್ನು ಒದಗಿಸಿ, ಅಭಿವೃದ್ಧಿಗೆ ಪೂರಕವಾಗಲು ಅವಕಾಶ ನೀಡಲಾಗಿದೆ. ಹಾಗಾಗಿ ಈ ಎಲ್ಲಾ ಸೌಕರ್ಯಗಳನ್ನು ಒದಗಿಸಿದ ನಂತರ ಆದಿವಾಸಿಗಳನ್ನು ಸ್ಥಳಾಂತರಿಸುವುದು ಕಷ್ಟಸಾಧ್ಯವಾಗುತ್ತದೆ. ಅಥವಾ ಅವರ ಪುನರ್ವಸತಿ ಸೌಕರ್ಯಗಳೂ ಅದೇ ಮಟ್ಟವನ್ನು ಹೊಂದಿರುವುದು ಅವಶ್ಯವಾಗುತ್ತದೆ.

ಅಭಿವೃದ್ಧಿಯ ನೆಪದಲ್ಲಿ ಸರ್ಕಾರಗಳು ಸಂರಕ್ಷಿತ ಮತ್ತು ಇತರ ಅರಣ್ಯ ಪ್ರದೇಶಗಳಲ್ಲಿ ನಗರಗಳಲ್ಲಿ ಕೈಗೊಳ್ಳುವಂತಹ ಚತುಷ್ಪಥ ರಸ್ತೆ ಮುಂತಾದುವನ್ನು ಕೈಗೊಂಡಲ್ಲಿ ಪರಿಸರ ನಾಶ ಕಟ್ಟಿಟ್ಟ ಬುತ್ತಿಯಾಗುತ್ತದೆ. ಗ್ರಾಮ ಪಂಚಾಯತಿಗಳಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಈ ನಿಟ್ಟಿನಲ್ಲಿ ಸರ್ಕಾರಗಳ ಮೇಲೆ ಒತ್ತಡ ತರುವ ಸಂದರ್ಭಗಳನ್ನೂ ತಳ್ಳಿಹಾಕಲಾಗುವುದಿಲ್ಲ. ಕಲ್ಲುಗಣಿ ಮತ್ತಿತರ ಗಣಿ ಉದ್ಯಮಗಳಿಗೆ ಅವಕಾಶ ನೀಡದಿರಲು ಕಾಯ್ದೆಯಲ್ಲಿ ಸ್ಪಷ್ಟಪಡಿಸುವುದು ಸ್ವಾಗತಾರ್ಹವೇ ಆದರೂ, ಇತರ ಒತ್ತಡಗಳು ಅರಣ್ಯ ಪ್ರದೇಶಗಳನ್ನು ಕಾಂಕ್ರೀಟ್ ಕಾಡುಗಳನ್ನಾಗಿ ಮಾಡುವ ಸಾಧ್ಯತೆಗಳಿರುತ್ತವೆ. ವನ್ಯಜೀವಿ ಕಾಯ್ದೆ ಹಿಂದಿನಂತೆಯೇ ಮುಂದೆಯೂ ಅನ್ವಯಿಸಿದಲ್ಲಿ ಮಾತ್ರ ಅರಣ್ಯ ಪರಿಸರ ರಕ್ಷಣೆ ಸಾಧ್ಯವಾಗಬಹುದು. ಹಾಗಾಗಿ ಅರಣ್ಯ ಪ್ರದೇಶಗಳಲ್ಲಿರುವ ಆದಿವಾಸಿಗಳ ಅನುಕೂಲಕ್ಕಾಗಿ, ಪರಿಸರ ನಾಶವಾಗದಂತಹ ಅಭಿವೃದ್ಧಿ ಕಾರ್ಯಗಳನ್ನು ಕೈಗೊ

ವನ್ಯಜೀವಿ ಮತ್ತು ಪರಿಸರದ ರಕ್ಷಣೆಯ ಹೆಸರಿನಲ್ಲಿ ಪಾರಂಪರಿಕವಾಗಿ ಅರಣ್ಯಗಳನ್ನೇ ನಂಬಿ ಬಾಳುತ್ತಿರುವ ಆದಿವಾಸಿಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವುದು ಪ್ರಜಾತಾಂತ್ರಿಕ ಲಕ್ಷಣವಾಗುವುದಿಲ್ಲ.

ಳ್ಳುವುದು ಸರ್ಕಾರದ ನೈತಿಕ ಹೊಣೆಗಾರಿಕೆಯಾಗಿರುತ್ತದೆ.

ಎರಡನೆಯದಾಗಿ, ಪ್ರಸ್ತುತ ಕಾಯ್ದೆಯು ೨೦೦೫ರ ಡಿಸೆಂಬರ್‌ಗೆ ಮುನ್ನ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಆದಿವಾಸಿಗಳು ಮತ್ತು ಮೂರು ತಲೆಮಾರುಗಳ ಕಾಲ (೭೫ ವರ್ಷ) ಅರಣ್ಯಗಳಲ್ಲಿ ನೆಲೆಸಿರುವ ಇತರೆ ಅರಣ್ಯವಾಸಿಗಳು ಅತಿಕ್ರಮಣ ಮಾಡಿರುವ ಭೂಮಿಗೆ ಮಾನ್ಯತೆ ನೀಡುತ್ತದೆ. ಈ ನಿಟ್ಟಿನಲ್ಲಿ ಸಂರಕ್ಷಣಾವಾದಿಗಳು ಈ ಕಾಯ್ದೆಯಿಂದ ಇಡೀ ಅರಣ್ಯ ಸಂಪತ್ತು ನಾಶವಾಗುತ್ತದೆ ಎಂದು ಹುಯಿಲೆಬ್ಬಿಸುತ್ತಿರುವುದು ಅರ್ಥಹೀನವೆಂದೇ ಹೇಳಬಹುದು. ಪರಿಸರ ಮತ್ತು ಅರಣ್ಯ ಇಲಾಖೆಯ ಪ್ರಕಾರ ದೇಶದ ಶೇ ೨ರಷ್ಟು ಅರಣ್ಯ ಪ್ರದೇಶ ಮಾತ್ರ ಅತಿಕ್ರಮಣಕ್ಕೊಳಗಾಗಿದೆ. ಇದರಲ್ಲಿ ಅಲ್ಪಭಾಗ ಮಾತ್ರ ಈ ಕಾಯ್ದೆಯಡಿಯಲ್ಲಿ ಸಕ್ರಮಗೊಳ್ಳುತ್ತದೆ. ಒಂದುವೇಳೆ ಸರ್ಕಾರದ ಪಟ್ಟಭದ್ರ ಹಿತಾಸಕ್ತಿಗಳು ಭೂ ಮಾಫೀಯಾದವರು ಅತಿಕ್ರಮಣ ಮಾಡಿರುವ ಪ್ರದೇಶಗಳನ್ನೂ ಸಕ್ರಮಗೊಳಿಸಿದಲ್ಲಿ ಅರಣ್ಯ ಸಂಪತ್ತು ವಿಪತ್ತಿಗೊಳಗಾಗುವ ಸಾಧ್ಯತೆಗಳಿರುತ್ತವೆ. ಇನ್ನೊಂದೆಡೆ ಸಾಂಪ್ರದಾಯಿಕ ಅರಣ್ಯವಾಸಿಗಳಿಗೆ ಭೂಮಿಯ ಪಟ್ಟಾ ನೀಡುವುದರಿಂದ ಅವರು ಅರಣ್ಯ ಸಂಪತ್ತನ್ನು ಇನ್ನೂ ಹೆಚ್ಚು ಜವಾಬ್ದಾರಿಯಿಂದ ರಕ್ಷಿಸಲು ಪ್ರೇರೇಪಿಸುತ್ತದೆ. ವಿಶ್ವದಾದ್ಯಂತ ಸಮೀಕ್ಷೆಗಳು ಹೇಳುವಂತೆ ಭೂ ಒಡೆತನದ ಬಗ್ಗೆ ಅನಿಶ್ಚಿತತೆ, ಅಭದ್ರತೆ ಇದ್ದಲ್ಲಿ ಭೂಮಿಯನ್ನು ನಾಶಮಾಡುವ ಸಂದರ್ಭಗಳು ಹೇರಳವಾಗಿರುತ್ತವೆ. ತಾವು ವಾಸಿಸುವ ಭೂಮಿ ತಮ್ಮದೇ ಎಂಬ ಭರವಸೆ ಆದಿವಾಸಿಗಳಿಗಿದ್ದರೆ, ಅವರು ಅದನ್ನು ತಮ್ಮ ಪ್ರಾಣದಂತೆ ರಕ್ಷಿಸುತ್ತಾರೆ ಎಂದು ಹೇಳಲಾಗುತ್ತದೆ.

ಸಮುದಾಯ ನಿರ್ವಹಿತ ಸಂರಕ್ಷಿತ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಲು ಸಮುದಾಯಗಳಿಗೇ ಅಧಿಕಾರ ನೀಡುವುದರಲ್ಲಿ ಹೊಸ ಕಾಯ್ದೆ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಹೇಳಬಹುದು. ದೇಶದಲ್ಲಿ ಈಗ ಹತ್ತು ಸಾವಿರಕ್ಕೂ ಹೆಚ್ಚು ಸಮುದಾಯ ನಿರ್ವಹಿತ ಅರಣ್ಯ ಪ್ರದೇಶಗಳಿದ್ದು, ಲಕ್ಷಾಂತರ ಹೆಕ್ಟೇರ್ ಅರಣ್ಯ ಭೂಮಿಯನ್ನು ಈ ಸಂಘಟನೆ–ಸಂಸ್ಥೆಗಳು ಉತ್ತಮ ರೀತಿಯಲ್ಲಿ ರಕ್ಷಿಸುತ್ತಿವೆ. ಆದರೆ ಯಾವುದೇ ಕಾನೂನು ರಕ್ಷಣೆ ಇಲ್ಲದೆ, ಭೂ ಮಾಫಿಯಾದ ಕೆಂಗಣ್ಣಿಗೆ ಗುರಿಯಾಗಿರುವ ಈ ಪ್ರದೇಶಗಳ ರಕ್ಷಣೆಗೆ ಸರ್ಕಾರ ಸಕಾಲಿಕ ಕ್ರಮ ಕೈಗೊಂಡು ಈ ರೀತಿಯ ಸಮುದಾಯ ಸಂಘಟನೆಗಳಿಗೆ ಕಾನೂನು ನೆರವು ಮತ್ತು ರಕ್ಷಣೆ ನೀಡುವುದು ಅವಶ್ಯವಾಗಿದೆ. ಗ್ರಾಮ ಸಭೆಗಳಿಗೆ ಮತ್ತು ಗ್ರಾಮೀಣ ಸಂಸ್ಥೆಗಳಿಗೆ ವನ್ಯಜೀವಿ ಸಂರಕ್ಷಣೆ, ಅರಣ್ಯ ಮತ್ತು ಅರಣ್ಯ ಉತ್ಪನ್ನಗಳ ಸಂರಕ್ಷಣೆಯ ಜವಾಬ್ದಾರಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಈ ಗ್ರಾಮ ಸಭೆಗಳು ಆದಿವಾಸಿಗಳ ಜೀವನೋಪಾಯಕ್ಕೆ ಮತ್ತು ಸಂಪನ್ಮೂಲಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳುವುದು ಸುಲಭವಾಗಿದೆ.

ವನ್ಯಜೀವಿ ಸಂರಕ್ಷಣಾ ಸಂಘಟನೆಗಳು ಈ ಮಸೂದೆಯನ್ನು ಸಾರಾಸಗಟಾಗಿ ನಿರಾಕರಿಸುವ ಬದಲು, ಆದಿವಾಸಿಗಳ ರಕ್ಷಣೆಯೊಂದಿಗೇ ಪರಿಸರ ರಕ್ಷಣೆಯನ್ನೂ ಕೈಗೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಇನ್ನೊಂದೆಡೆ ಆದಿವಾಸಿ ಸಂಘಟನೆಗಳೂ ಸಹ ಆದಿವಾಸಿಗಳ ಹಕ್ಕುಗಳೊಂದಿಗೇ ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ರಕ್ಷಿಸುವತ್ತ ಕಾರ್ಯಪ್ರವೃತ್ತರಾಗುವುದು ಇಂದಿನ ಅಗತ್ಯತೆ ಎನಿಸುತ್ತದೆ. ಈ ಹಂತದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಕಾಯ್ದೆಯನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳುವುದು ಎರಡೂ ಗುಂಪುಗಳ ನೈತಿಕ ಹೊಣೆಗಾರಿಕೆಯಾಗಿರುತ್ತದೆ.

ಅಂತಿಮವಾಗಿ

ವನ್ಯಜೀವಿ ಮತ್ತು ಪರಿಸರದ ರಕ್ಷಣೆಯ ಹೆಸರಿನಲ್ಲಿ ಪಾರಂಪರಿಕವಾಗಿ ಅರಣ್ಯಗಳನ್ನೇ ನಂಬಿ ಬಾಳುತ್ತಿರುವ ಆದಿವಾಸಿಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವುದು ಪ್ರಜಾತಾಂತ್ರಿಕ ಲಕ್ಷಣವಾಗುವುದಿಲ್ಲ. ನಿಸರ್ಗದತ್ತ ವನ್ಯ ಜೀವಿಗಳಾಗಲೀ, ಗಿಡ ಮರಗಳಾಗಲೀ, ಹೂ ಹಣ್ಣುಗಳಾಗಲೀ, ಮನುಕುಲದ ಉಳಿವಿಗೆ ಅತ್ಯಗತ್ಯ. ಅದೇ ವೇಳೆ ಈ ಅರಣ್ಯ ಉತ್ಪನ್ನಗಳನ್ನೆ ಅವಲಂಬಿಸಿ ಬಾಳುವ ಆದಿವಾಸಿಗಳ ಬದುಕೂ ಅಷ್ಟೇ ಮುಖ್ಯವಾಗುತ್ತದೆ. ಪರಿಸರ ಸಂರಕ್ಷಣೆಗಾಗಿ ಆದಿವಾಸಿಗಳನ್ನು ಅವರ ಮೂಲಸ್ಥಾನಗಳಿಂದ ಉಚ್ಚಾಟಿಸಿ ಅವರನ್ನು ನಗರೀಕೃತಗೊಳಿಸುವುದು ಘೋರ ಅಪರಾಧವಾಗುತ್ತದೆ. ಮತ್ತೊಂದೆಡೆ ಆದಿವಾಸಿಗಳನ್ನು ನಿರಂತರವಾಗಿ ಹಿಂದುಳಿದ ಸಮುದಾಯಗಳಾಗಿಯೇ ಇರಬೇಕೆಂದು ಬಯಸುವುದೂ ಪ್ರಮಾದವಾಗುತ್ತದೆ. ಆದಿವಾಸಿಗಳನ್ನೂ ನಾಗರಿಕ ಸಮಾಜದ ಅಭಿವೃದ್ಧಿಯ ಒಂದು ಭಾಗವಾಗಿ ಪರಿಗಣಿಸಿ ಅವರಿಗೆ ಹೊಸ ಜೀವನವನ್ನು ಕಲ್ಪಿಸಿಕೊಡುವುದು ಯಾವುದೇ ಸರ್ಕಾರದ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಆಳುವ ವರ್ಗಗಳು ಪ್ರಗತಿ ಮತ್ತು ಅಭಿವೃದ್ಧಿಗಳ ನಡುವೆ ಇರುವ ಅಂತರವನ್ನು ಸೂಕ್ಷ್ಮವಾಗಿ ಗಮನಿಸಿ ಕ್ರಮಕೈಗೊಳ್ಳುವುದೂ ಅನಿವಾರ್ಯವಾಗಿದೆ.

ನಗರ ಪ್ರದೇಶಗಳಲ್ಲಿ ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ವಿನಾಶ ಸಿದ್ಧಾಂತಗಳನ್ನು ಆದಿವಾಸಿಗಳ ಆವಾಸಸ್ಥಾನಗಳಲ್ಲಿ ಪ್ರಯೋಗಿಸಿದಲ್ಲಿ, ಮುಂದೊಮ್ಮೆ ಇಡೀ ವಿಶ್ವ ಅರಣ್ಯರಹಿತ ಕಾಂಕ್ರೀಟ್ ಕಾಡುಗಳಾಗಬಹುದು. ಹಾಗಾಗಿ ಅಭಿವೃದ್ಧಿ ಎಂದರೆ ಮಾನವನ ಭೌತಿಕ ಜೀವನ ಮಟ್ಟದ ಸುಧಾರಣೆ ಎಂದು ಪರಿಗಣಿಸಿ ಆದಿವಾಸಿಗಳನ್ನು ಆಧುನಿಕ ಸಮಾಜದ ಮುಖ್ಯವಾಹಿನಿಗೆ ಕರೆತರುವುದು ಸರ್ಕಾರದ ಕರ್ತವ್ಯವಾಗಬೇಕಾಗಿದೆ. ದೇಶದ ಆರ್ಥಿಕತೆ ಶೇ ೧೦ರಷ್ಟು ಅಭಿವೃದ್ಧಿ ಸಾಧಿಸಬೇಕೆಂಬ ಪಾಶ್ಚಿಮಾತ್ಯ ಪರಿಕಲ್ಪನೆ ಆದಿವಾಸಿಗಳಿಗಷ್ಟೇ ಅಲ್ಲದೆ ನಗರವಾಸಿಗಳಿಗೂ ಮಾರಕವಾಗುತ್ತಿರುವ ಸಂದರ್ಭದಲ್ಲಿ, ಮಾನವ ಹಕ್ಕುಗಳ ಪ್ರತಿಪಾದಕರು, ಅರಣ್ಯ ಸಂರಕ್ಷಣಾ ವಾದಿಗಳು ಕೈಗೂಡಿಸಿ, ದೇಶವನ್ನು ನಿಜವಾದ ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಶ್ರಮಿಸುವುದು ಇಂದಿನ ಅಗತ್ಯತೆಯಾಗಿದೆ. ಹಾಗಾದಲ್ಲಿ ಮಾತ್ರ ಅರಣ್ಯವೂ ಉಳಿಯುತ್ತದೆ, ಆದಿವಾಸಿಗಳೂ ಉಳಿಯುತ್ತಾರೆ, ಅರಣ್ಯ ಉತ್ಪನ್ನಗಳೂ ಉಳಿಯುತ್ತವೆ, ನಾಗರಿಕ ಸಮಾಜವೂ ಆರೋಗ್ಯಕರವಾಗಿರುತ್ತದೆ.

ಈ ದೃಷ್ಟಿಯಿಂದ ಪ್ರಸ್ತುತ ಅರಣ್ಯಕಾಯ್ದೆಯನ್ನು ಸ್ವಾಗತಿಸುವುದು ಸೂಕ್ತವೆನಿಸುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಿನಿಮಾ : ಒಂದು ಜನಪದ ಕಲೆ

ಪ್ರೊ॥ ಬರಗೂರು ರಾಮಚಂದ್ರಪ್ಪ

> **೧೮೪೬ರಲ್ಲಿ ವಿಲಿಯಂ ಥಾಮ್ಸ್ 'ಫೋಕ್ ಲೋರ್' ಎಂಬ ಪದವನ್ನು ರೂಪಿಸಿದರು. ಕನ್ನಡದಲ್ಲಿ 'ಜನಪದ' ಮತ್ತು 'ಜಾನಪದ' ಎಂಬ ಎರಡು ಪದಗಳು ಬಳಕೆಯಲ್ಲಿದ್ದು, ಎರಡೂ ಪದಗಳಿಗೆ ಪ್ರತ್ಯೇಕ ಅರ್ಥವಲಯವಿದೆ. ಈ ಅಂಶವನ್ನು ಡಾ॥ ಹಾ.ಮಾ. ನಾಯಕರು ತಮ್ಮ 'ಜಾನಪದ ಸ್ವರೂಪ' ಎಂಬ ಕಿರು ಹೊತ್ತಿಗೆಯಲ್ಲಿ ವಿಶದಪಡಿಸಿದ್ದಾರೆ. ಸರಳವಾಗಿ ಹೇಳುವುದಾದರೆ 'ಜನಪದ' ಎನ್ನುವುದು ಬಿಡಿಬಿಡಿಯಾದ ಅಂಶಗಳಿಗೂ 'ಜಾನಪದ' ಎನ್ನುವುದು ಇಡಿಯಾದ ವಿಭಾಗಕ್ಕೂ ಅನ್ವಯಿಸುತ್ತದೆ. ಜನಪದ ಗೀತೆ, ಜನಪದಕಲೆ, ಜನಪದ ಸಾಹಿತ್ಯ, ಜನಪದ ಆಚರಣೆ-ಹೀಗೆ ಬಿಡಿಯಾದ ಅಂಗಗಳಿಗೆ' 'ಜನಪದ' ಎಂಬ ಪದ ಬಳಕೆಯಾದರೆ, ಜನಪದದ ಎಲ್ಲವನ್ನೂ ಒಳಗೊಂಡ ಸಮಗ್ರ ಘಟಕವು 'ಜಾನಪದ' ಎನ್ನಿಸಿಕೊಳ್ಳುತ್ತದೆ. 'ಜಾನಪದ'ದಲ್ಲಿ ಸಾಹಿತ್ಯ, ಕಲೆ, ಆಟ, ಹಬ್ಬ, ಆಚರಣೆ-ಎಲ್ಲವೂ ಸೇರುತ್ತವೆ.**

ಸಿನಿಮಾ ಮಾಧ್ಯಮವು ಒಂದು ಜನಪದ ಕಲೆ ಎನ್ನುವುದು ನನ್ನ ಪರಿಕಲ್ಪನೆ. ಸಿನಿಮಾವ ಆಧುನಿಕ ಸಂದರ್ಭದ ಕಲಾರೂಪವಾದ್ದರಿಂದ ನನ್ನ ಪರಿಕಲ್ಪನೆಯಿಂದ ಕೆಲವರಿಗೆ ಆಶ್ಚರ್ಯವಾಗಬಹುದು. ನನ್ನ ಗ್ರಹಿಕೆಯನ್ನು ಒಪ್ಪಿಕೊಳ್ಳಲು ಕಷ್ಟವಾಗಬಹುದು. ಫ್ರಾನ್ಸ್‌ನ ಲ್ಯೂಮಿಯೇರ್ ಸಹೋದರರಿಂದ ೧೮೯೫ರಲ್ಲಿ ಪ್ಯಾರಿಸ್‌ನಲ್ಲಿ ಮೊಟ್ಟಮೊದಲ ಪ್ರದರ್ಶನ ಕಂಡ, ಅತ್ಯಂತ ಆಧುನಿಕ ಆವಿಷ್ಕಾರಗಳಲ್ಲೊಂದಾದ, ಸಿನಿಮಾವನ್ನು ಜನಪದ ಕಲೆ ಎಂದು ಕರೆಯಲು ಹೇಗೆ ಸಾಧ್ಯವೆಂಬ ಪ್ರಶ್ನೆ ಸಹಜವಾಗಿಯೇ ಹೇಳಬಹುದು. ನಿಜ; ಸಿನಿಮಾ ಕಲೆಯು ಒಂದು ಆಧುನಿಕ ಆವಿಷ್ಕಾರ. ಆದ್ದರಿಂದ ಅದನ್ನು ಆಧುನಿಕ ಜನಪದ ಕಲೆ ಎಂದು ಕರೆಯೋಣವೆಂದರೆ ಅದಕ್ಕೂ ಆಶ್ಚರ್ಯ, ಅಸಮ್ಮತಿಗಳು ಎದುರಾಗಬಹುದು. ಜನಪದ ಕಲೆಗಳನ್ನು ಮತ್ತು ಒಟ್ಟಾರೆ ಜಾನಪದ (Folklore)ವನ್ನು ಕುರಿತ ರೂಢ ಮೂಲ ಗ್ರಹಿಕೆಗಳು ಈ ಆಶ್ಚರ್ಯ–ಅಸಮ್ಮತಿಗಳ ಅಂತರ್ಯದಲ್ಲಿ ಕೆಲಸ ಮಾಡುತ್ತವೆ. ಜಾನಪದವೆನ್ನುವುದು ಹಳೆಯದು, ಹಳ್ಳಿಯದು ಮತ್ತು ಅನಕ್ಷರಸ್ಥರಿಗೆ ಸಂಬಂಧಿಸಿದ ಜೀವನ ವಿಧಾನವೆಂಬ ರೂಢಮೂಲ ಗ್ರಹಿಕೆಗೆ ನಿಷ್ಠರಾದವರು, ಸಿನಿಮಾವನ್ನು ಜನಪದ ಕಲೆಯೆಂದು ಪರಿಗಣಿಸುವುದು ಸಾಧ್ಯವೆ, ಸಾಧುವೆ–ಎಂದು ಕೇಳಬಹುದು. ಆಗ ನಾನು ಜಾನಪದವನ್ನು ಜಡ ಸಂಸ್ಕೃತಿಯೆಂದು ಭಾವಿಸುತ್ತೀರೊ ಚಲನಶೀಲ ಸಂಸ್ಕೃತಿಯೆಂದು ಭಾವಿಸುತ್ತೀರೊ ಎಂದು ಕೇಳಬಹುದು. ಹಾಗೆ ನೋಡಿದರೆ ಸಂಸ್ಕೃತಿಯು ಸದಾ ಚಲನಶೀಲವಾದುದು; ಜಡವಾದುದಲ್ಲ. ಜಾನಪದವನ್ನು ಕುರಿತಂತೆ ಜಗತ್ತಿನಲ್ಲಿ ನಡೆದಿರುವ ಮುಂದುವರೆದ ಸಂಶೋಧನೆ ಹೇಗೂ ಚರ್ಚೆಗಳು–ಜಾನಪದವು ಕೇವಲ ಹಳ್ಳಿಯದಲ್ಲಿ, ಅನಕ್ಷರಸ್ಥರಿಗೆ ಮಾತ್ರವೇ ಸಂಬಂಧಿಸಿದ್ದಲ್ಲಿ, ಅದು ಆಧುನಿಕವೂ ಆಗಬಹುದು ಎಂದು ಪ್ರತಿಪಾದಿಸಿವೆ; ತೆರೆದ ಮನಗಳು ನಂಬುವಂತೆ ವಿಚಾರ ಮಂಡಿಸಿವೆ. ಈ ಹಿನ್ನೆಲೆಯಲ್ಲಿ, ಮೊದಲು 'ಜಾನಪದ'ವನ್ನು ಕುರಿತಂತೆ ಇರುವ ರೂಢಮೂಲ ತಿಳುವಳಿಕೆಯಿಂದಾಚೆಗಿನ ಸಂಗತಿಯನ್ನು ಸಾದರಪಡಿಸಬಯಸುತ್ತೇನೆ.

ಆಂಗ್ಲಭಾಷೆಯ 'ಫೋಕ್‌ಲೋರ್' (Folklore) ಪದಕ್ಕೆ ಸಮಾನವಾಗಿ ಕನ್ನಡದಲ್ಲಿ 'ಜಾನಪದ' ಎಂಬ ಪದವನ್ನು ಬಳಸಲಾಗುತ್ತಿದೆ. ೧೮೪೬ರಲ್ಲಿ ವಿಲಿಯಂ ಥಾಮ್ಸ್ 'ಫೋಕ್‌ಲೋರ್' ಎಂಬ ಪದವನ್ನು ರೂಪಿಸಿದರು. ಕನ್ನಡದಲ್ಲಿ 'ಜನಪದ' ಮತ್ತು 'ಜಾನಪದ' ಎಂಬ ಎರಡು ಪದಗಳು ಬಳಕೆಯಲ್ಲಿದ್ದು, ಎರಡೂ ಪದಗಳಿಗೆ ಪ್ರತ್ಯೇಕ ಅರ್ಥವಲಯವಿದೆ. ಈ ಅಂಶವನ್ನು ಡಾ॥ ಹಾ.ಮಾ. ನಾಯಕರು ತಮ್ಮ 'ಜಾನಪದ ಸ್ವರೂಪ' ಎಂಬ ಕಿರು ಹೊತ್ತಿಗೆಯಲ್ಲಿ ವಿಶದಪಡಿಸಿದ್ದಾರೆ. ಸರಳವಾಗಿ ಹೇಳುವುದಾದರೆ 'ಜನಪದ' ಎನ್ನುವುದು ಬಿಡಿಬಿಡಿಯಾದ ಅಂಶಗಳಿಗೂ 'ಜಾನಪದ' ಎನ್ನುವುದು ಇಡಿಯಾದ ವಿಭಾಗಕ್ಕೂ ಅನ್ವಯಿಸುತ್ತದೆ. ಜನಪದ ಗೀತೆ, ಜನಪದಕಲೆ, ಜನಪದ ಸಾಹಿತ್ಯ, ಜಾನಪದ ಆಚರಣೆ–ಹೀಗೆ ಬಿಡಿಯಾದ ಅಂಗಗಳಿಗೆ' 'ಜನಪದ' ಎಂಬ ಪದ ಬಳಕೆಯಾದರೆ, ಜನಪದದ ಎಲ್ಲವನ್ನೂ ಒಳಗೊಂಡ ಸಮಗ್ರ ಘಟಕವು 'ಜಾನಪದ' ಎನ್ನಿಸಿಕೊಳ್ಳುತ್ತದೆ. 'ಜಾನಪದ'ದಲ್ಲಿ ಸಾಹಿತ್ಯ, ಕಲೆ, ಆಟ, ಹಬ್ಬ, ಆಚರಣೆ–ಎಲ್ಲವೂ ಸೇರುತ್ತವೆ. ಆದರೆ 'ಜನಪದ'ವು ಎಲ್ಲವೂ ಸೇರಿದ ಪದವಾಗಿ ಬಳಕೆಯಾಗುವುದಿಲ್ಲ. ಅಂತೆಯೇ ಗೀತ, ಸಾಹಿತ್ಯ, ಕಲೆ ಇವುಗಳ ಹಿಂದೆ 'ಜಾನಪದ' ಎಂದು ಸೇರಿಸುವುದು ಸರಿಯಲ್ಲ, ಅವುಗಳ ಹಿಂದೆ 'ಜನಪದ' ಎಂದು ಸೇರಿಸಿ ಜನಪದ ಗೀತೆ ಜನಪದ ಸಾಹಿತ್ಯ, ಜನಪದ ಕಲೆ–ಎಂದು ಬಳಸುವುದು ಸರಿಯಾದ ಕ್ರಮ, ಇದು ಜನಪದ ಮತ್ತು ಜಾನಪದಗಳ ನಡುವಿನ ವ್ಯತ್ಯಾಸ.

ಜನಪದ ಮತ್ತು ಜಾನಪದವೆಂದ ಕೂಡಲೇ ಅದು ಮೌಖಿಕ ಪರಂಪರೆ ಹಾಗೂ ಗ್ರಾಮೀಣ ಪರಂಪರೆಗೆ ಮಾತ್ರ ಸಂಬಂಧಿಸಿದ್ದು–ಎಂಬ ತಿಳುವಳಿಕೆಯು ರೂಢಿಯಲ್ಲಿದೆ. ಜೊತೆಗೆ 'ಶಿಷ್ಟ' ಮತ್ತು 'ಜಾನಪದ'ಗಳು ಪರಸ್ಪರ ವಿರೋಧಿ ಪರಿಲ್ಪನೆಗಳಾಗಿ ಪ್ರತಿಪಾದಿತವಾಗುತ್ತಿವೆ. ಅಂತೆಯೇ ಆಧುನಿಕತೆ ಮತ್ತು ಜಾನಪದಗಳು ಪರಸ್ಪರ ಪ್ರತ್ಯೇಕ ಅಥವಾ ವಿರೋಧಿ ಎಂದು ಭಾವಿಸಲಾಗಿದೆ. ಈ ರೀತಿಯ ಚಿಂತನಾಕ್ರಮವು ನಮ್ಮಲ್ಲಿ ಮುಂಚೂಣಿಯಲ್ಲಿರುವುದರಿಂದ ಜಾಗತಿಕ ಚರ್ಚೆಗಳಲ್ಲಿರುವ ಆಧುನಿಕ ಅಂಶಗಳನ್ನು ಹಿಂದಿನ ಸಾಲಿನಲ್ಲಿ ಕೂಡಿಸಲಾಗಿದೆ. ಅಥವಾ ನಿರಾಕರಿಸಲಾಗಿದೆ. ಹೀಗಾಗಿ, ಸಿನಿಮಾವನ್ನು ಒಂದು ಜನಪದ ಕಲೆಯೆಂದು ಕರೆದಾಗ ಸ್ಪಷ್ಟನೆ ಮತ್ತು ಸಮರ್ಥನೆಗಳನ್ನು ನಿರೀಕ್ಷಿಸಲಾಗುತ್ತದೆ.

'ಜಾನಪದ'ವನ್ನು ಕುರಿತು ಗಂಭೀರ ಚರ್ಚೆ ನಡೆಸಿದ ಅಲೆನ್ ದಂಡೇಸ್ ಅವರು ಜಾನಪದಕ್ಕೆ ಸಂಬಂಧಿಸಿದ ಇಪ್ಪತ್ತೊಂದು ನಿರ್ವಚನಗಳಿವೆ. ಹದಿಮೂರು ನಿರ್ವಚನಗಳಲ್ಲಿ (Definations) 'ಪರಂಪರೆ' ಎಂಬ ಉಲ್ಲೇಖ, ಆರುನಿರ್ವಚಗಳಲ್ಲಿ 'ಪ್ರಸರಣ' ಎಂಬ ಉಲ್ಲೇಖಗಳು ಪ್ರಧಾನವಾಗಿವೆ; ಈ ಸಂಬಂಧದ ಚರ್ಚೆಯನ್ನೂ ಮಾಡಲಾಗಿದೆ. ಇದರರ್ಥ ಏನು? ಪರಂಪರೆ ಮತ್ತು ಪ್ರಸರಣ ಗುಣಗಳು ಜಾನಪದದ ಅಂತಃಶಕ್ತಿ–ಎನ್ನುವುದು ಇದರ ಒಟ್ಟಾರೆ ಅರ್ಥ. 'ಪರಂಪರೆ' ಎಂದರೆ ಜಡ ಸಂಪ್ರದಾಯವಲ್ಲ. ಪರಂಪರೆಯೇ ಬೇರೆ, ಸಂಪ್ರದಾಯವೇ ಬೇರೆ, ಚಲನಶೀಲ ನಿರಂತರತೆಯನ್ನು 'ಪರಂಪರೆ' ಎಂದು ಕರೆದರೆ, ಚಲನೆಯಿಲ್ಲದೆ ಸ್ಥಗಿತವಾದ ಅಂಶಗಳನ್ನು 'ಸಂಪ್ರದಾಯ' ಎನ್ನುತ್ತೇವೆ. ಸಂಪ್ರದಾಯಗಳು ಇದ್ದಂತೆಯೇ ಮನರಾವ

ರ್ತನೆಗೊಳ್ಳುತ್ತವೆ. ಆದರೆ ಪರಂಪರ್ತೆಯ ಕಾಲದ ಆರೋಗ್ಯಕರ ಅಗತ್ಯಗಳನ್ನು ಒಳಗೊಳ್ಳುತ್ತ ಬೆಳೆಯುತ್ತದೆ. 'ಜಾನಪದ'ವನ್ನು ಕುರಿತ ನಿರ್ವಚನಗಳಲ್ಲಿ ಪರಂಪರೆ ಮತ್ತು ಪ್ರಸರಣದ ಕಲ್ಪನೆಯು ಪ್ರಧಾನವಾಗಿರುವುದನ್ನು ಗಮನಿಸಿದಾಗ, ಜಾನಪದವು ನಿಂತ ನೀರಲ್ಲ ಮತ್ತು ಜಡಸಂಪ್ರದಾಯಗಳ ಮೊತ್ತ ಮಾತ್ರವಲ್ಲ ಎಂಬುದು ಸ್ಪಷ್ಟವಗುತ್ತದೆ. ಜಾನಪದವು ಚಲನಶೀಲ ಶಕ್ತಿಯನ್ನು ಹೊಂದಿರುವ ಒಂದು ಪರಿಕಲ್ಪನೆಯೆಂಬ ಅಂಶವು ಆರಂಭಿಕ ನಿರ್ವಚನಗಳಲ್ಲೇ ಅಂತರ್ಗತವಾಗಿದೆ.

ನಮ್ಮಲ್ಲಿ 'ಜನಪದ ಸಂಸ್ಕೃತಿ'ಯ ಬಗ್ಗೆ ಮಾತಾಡುವಾಗ, ಸಾಮಾನ್ಯವಾಗಿ ಅದು 'ಗ್ರಾಮೀಣ ಸಂಸ್ಕೃತಿ' ಎಂಬ ಅರ್ಥವನ್ನು ಒಳಗೊಂಡಿರುತ್ತದೆ. ಇದು ತಪ್ಪಲ್ಲ. ಆದರೆ ಇದಿಷ್ಟೇ ಜನಪದ ಸಂಸ್ಕೃತಿಯಲ್ಲ. ಅಲೆನ್ ದಂಡೇಸ್ ಅವರು ಜನಪದ ಸಂಸ್ಕೃತಿಯನ್ನು 'ಬರಹರಹಿತ ಸಂಸ್ಕೃತಿ' (Culture without writing) ಎಂದು ಕರೆದಿದ್ದಾರೆ. ಈ ಮಾತು ಜಾನಪದಕ್ಕಿರುವ ಮೌಖಿಕ ಪರಂಪರೆಯನ್ನು ನಿರ್ದೇಶಿಸುತ್ತದೆ. ಮೌಖಿಕ ಪರಂಪರೆಯಲ್ಲಿ ಕರಗತವಾಗಿರುವ ಆಚರಣೆ, ಆಟ, ನೃತ್ಯ, ಮಾತು– ಎಲ್ಲವೂ ಜಾನಪದದ ಭಾಗವಾಗುತ್ತವೆ. ಆದರೆ ನಮ್ಮಲ್ಲಿ ಶಿಷ್ಟ ಮತ್ತು ಜಾನಪದವೆಂದು ವರ್ಗೀಕರಿಸುವಾಗ ಭರತನಾಟ್ಯವು ಶಿಷ್ಟವಾಗುತ್ತದೆ; ಸುಗ್ಗಿಕುಣಿತವು ಜಾನಪದವಾಗುತ್ತದೆ. ಇಲ್ಲಿ ನಿಜವಾಗಿಯೂ ಲಿಖಿತ ಮತ್ತು ಮೌಖಿಕ ನೆಲೆಗಳು ಶಿಷ್ಟ ಮತ್ತು ಜಾನಪದವನ್ನು ವರ್ಗಿಕರಿಸಿವೆಯೆ ಎಂಬ ಪ್ರಶ್ನೆ ನನಗೆ ಮುಖ್ಯವೆನಿಸುತ್ತದೆ. ಭರತನಾಟ್ಯವನ್ನು ಲಿಖಿತ ವಿಧಾನಕ್ಕೆ ಹೊರತಾಗಿ ಕಲಿಯಬಹುದು ಎಂಬಂಶವನ್ನಿಲ್ಲಿ ಗಮನಿಸಬೇಕು. ಗುರುವಿನ ಮೌಖಿಕ ನಿರ್ದೇಶನ ಮತ್ತು ಆಂಗಿಕ ಅಭಿನಯಗಳನ್ನು ಅನುಸರಿಸಿ ಭರತನಾಟ್ಯವನ್ನು ಕಲಿಯಬಹುದು. ಅದೇ ರೀತಿ ಶಿಷ್ಟ ಎಂದು ಕರೆಸಿಕೊಳ್ಳುವ ನೃತ್ಯ ಮತ್ತು ಸಂಗೀತ ವಿಭಾಗಗಳು ಬರಹರಹಿತ ಕಲಿಕೆಯಿಂದ ಸಾಧ್ಯವಾಗುತ್ತವೆ.

ಮೌಖಿಕ ಪರಂಪರೆಯಿಂದಲೇ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುತ್ತವೆ. ಉದಾಹಣೆಗೆ ವೀಣೆ ಕಲಿಯುವವರು ಲಿಖಿತ ಗ್ರಂಥಗಳನ್ನು ಓದದೆಯೂ ಗುರುವಿನ ಮೂಲಕ ಕಲಿಯಬಹುದು; ಯಾವುದೇ ಶಿಷ್ಟವಾದ್ಯ ಸಂಗೀತ್ಕೂ ಈ ಮಾತನ್ನು ಅನ್ವಯಿಸಬಹುದು. ವಿಷಯ ಗ್ರಹಿಕೆಯ ಶಕ್ತಿ ಇಲ್ಲಿ ಮುಖ್ಯ. ಅಂತೆಯೇ ಆಟಗಳನ್ನು ಪರಿಶೀಲಿಸಿ, ಯಾವುದೇ ಆಟವು ಆರಂಭಿಕ ದಿನಗಳಲ್ಲಿ ಲಿಖಿತ ರೂಪದ ವಿವರಗಳನ್ನು ಪಡೆದಿರಲಿಲ್ಲ. ನೋಡಿ, ಆಡಿ, ಕಲಿತದ್ದೇ ಹೆಚ್ಚು. ಈಗ ಕ್ರಿಕೆಟ್ ಆಡುವವರು ಓದಿ ಕಲಿಯುತ್ತಾರೆಯೆ? ಓದುವುದು ಒಂದು ವಿಶೇಷ ಸೇರ್ಪಡೆಯ ಗಬಹುದು. ಆಟಕ್ಕೆ ಅದೇ ಆದಿ ಮತ್ತು ಅಂತಿಮವಲ್ಲ. ಅಂದರೆ 'ಶಿಷ್ಟ'ವೆನ್ನುವ ಕಲೆ ಮತ್ತು ಕ್ರೀಡೆಗಳಲ್ಲೂ ಮೌಖಿಕ ಪರಂಪರೆಯೇ ಪ್ರಧಾನವಾಗಿದ್ದರೂ ಅವುಗಳನ್ನು 'ಜಾನಪದ' ಎನ್ನಲಿಲ್ಲ. ಹಾಗಾದರೆ ಶಿಷ್ಟ ಮತ್ತು ಜಾನಪದದ ವರ್ಗೀಕರಣಕ್ಕೆ ಲಿಖಿತ ಮತ್ತು ಮೌಖಿಕ ಎಂಬ ಮಾನದಂಡಗಳು ಮಾತ್ರವೇ ಅಂತಿಮ ಆಧಾರಗಳಾಗಿಲ್ಲ; ಅಲ್ಲವೆ? ಗಮನಿಸಿ; ಶ್ರಮಜೀವಿ ವರ್ಗಗಳ ಆಟ, ಹಾಡು, ಆಚರಣೆ ಇತ್ಯಾದಿಗಳು ಜಾನಪದವೆಂದೂ ಉಳಿದವರ ಆಟ, ಹಾಡು, ಆಚರಣೆಗಳು 'ಶಿಷ್ಟ'ವೆಂದೂ ಪ್ರಚುರಗೊಂಡದ್ದರ ಹಿಂದೆ ವರ್ಗ ದೃಷ್ಟಿಕೋನವೂ ಕೆಲಸಮಾಡಿದೆ. ಅಷ್ಟೇ ಅಲ್ಲ ವರ್ಣಾಶ್ರಮದ ಒಳ ಆಯಾಮವೂ ಈ ವರ್ಗೀಕರಣದಲ್ಲಿ ಸೇರಿಕೊಂಡಿದೆ. ವರ್ಣಾಶ್ರಮದ ಪ್ರಕಾರ

ಮೌಖಿಕ ಪರಂಪರೆ ಯಲ್ಲಿ ಕರಗತವಾಗಿರುವ ಆಚರಣೆ, ಆಟ, ನೃತ್ಯ, ಮಾತು– ಎಲ್ಲವೂ ಜಾನಪದದ ಭಾಗವಾಗುತ್ತವೆ. ಆದರೆ ನಮ್ಮಲ್ಲಿ ಶಿಷ್ಟ ಮತ್ತು ಜಾನಪದವೆಂದು ವರ್ಗೀಕರಿಸುವಾಗ ಭರತನಾಟ್ಯವು ಶಿಷ್ಟವಾಗುತ್ತದೆ; ಸುಗ್ಗಿಕುಣಿತವು ಜಾನಪದವಾಗುತ್ತದೆ. ಇಲ್ಲಿ ನಿಜವಾಗಿಯೂ ಲಿಖಿತ ಮತ್ತು ಮೌಖಿಕ ನೆಲೆಗಳು ಶಿಷ್ಟ ಮತ್ತು ಜಾನಪದವನ್ನು ವರ್ಗಿಕರಿಸಿವೆಯೆ ಎಂಬ ಪ್ರಶ್ನೆ ನನಗೆ ಮುಖ್ಯವೆನಿಸುತ್ತದೆ. ಭರತನಾಟ್ಯವನ್ನು ಲಿಖಿತ ವಿಧಾನಕ್ಕೆ ಹೊರತಾಗಿ ಕಲಿಯಬಹುದು ಎಂಬಂಶವನ್ನಿಲ್ಲಿ ಗಮನಿಸಬೇಕು.

ಉನ್ನತವೆಂದು ಕರೆಸಿಕೊಂಡಿರುವ ಕಲೆಗಳು 'ಶಿಷ್ಟ' ಎನ್ನಿಸಿಕೊಂಡು ಪ್ರಚುರಗೊಂಡರೆ, ಹಿಂದುಗಳಿಂದ ಹಾಗೂ ಕೆಳಜಾತಿ ಸಮೂಹಗಳು ಪ್ರದರ್ಶಿಸುವ ಕಲೆ–ಕ್ರೀಡೆಗಳು 'ಜಾನಪದ'ವಾದವು, ಜೊತೆಗೆ, 'ಶಿಷ್ಟ' ಎನ್ನುವುದು ಬೌದ್ಧಿಕವಲಯವಾಗಿ, 'ಜಾನಪದ' ಎನ್ನುವುದು ಬೆವರಿನ ವಲಯವಾಗಿ ವಿಂಗಡನೆಗೊಂಡು ಈ ದೇಶದ ಸಾಮಾಜಿಕ–ಆರ್ಥಿಕ ಅಸಮಾನತೆಯ ಸಂಕೇತವಾದವು. ಇದು ವರ್ಣ–ವರ್ಗಗಳು ಉಂಟುಮಾಡಿದ ವಿಪರ್ಯಾಸ.

ವಿಲಿಯಂ ಬ್ಯಾಸ್ಕಮ್ ಎಂಬ ವಿದ್ವಾಂಸ, ಜಾನಪದವನ್ನು 'ಅನಕ್ಷರಸ್ಥರ, ಅಶಿಕ್ಷಿತರ, ಸಂಸ್ಕೃತಿರಹಿತರ ಮಾನಸಿಕ ಲೋಕ' ಎಂದು ಕರೆದದ್ದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು. ಆದರೆ ಪಿ. ಬೆಯಾರ್ಡ್ ಎಂಬ ವಿದ್ವಾಂಸರಿಂದ ಈ ವ್ಯಾಖ್ಯಾನಕ್ಕೆ ಗಟ್ಟಿ ವಿರೋಧ ಬಂತು 'ಸಂಸ್ಕೃತಿ'ಯನ್ನು ಶಿಷ್ಟ ನೆಲೆಯಲ್ಲಿ ಮಾತ್ರ ಕಾಣುವ ಪಾರ್ಶ್ವ ನೋಟದ ಫಲವಾಗಿ ವಿಲಿಯಂ ಬ್ಯಾಸ್ಕಮ್ ತರದವರು ಹಾಗೆ ವ್ಯಾಖ್ಯಾನಿಸಿದ್ದಾರೆ. ಇಂತಹ ಪಾರ್ಶ್ವ ನೋಟ ನಮ್ಮ ದೇಶದಲ್ಲೂ ಹೇರಳವಾಗಿದೆ. ಸಂಸ್ಕೃತಿಗೆ ಮೇಲು ಕೀಳಿಲ್ಲ. ಖ್ಯಾತ ಮಾನವ ವಿಜ್ಞಾನ ಹರ್ಸ್‌ಕೊನಿಟ್ಸ್ ಹೇಳಿದಂತೆ 'ಸಂಸ್ಕೃತಿಯು ಜನರ ಜೀವನ ವಿಧಾನ? ಅಂದರೆ ಎಲ್ಲ ವರ್ಣ ಮತ್ತು ವರ್ಗಗಳ ಜೀವನವಿಧಾನವನ್ನು ಸಂಸ್ಕೃತಿಯು ಒಳಗೊಳ್ಳುತ್ತದೆ.

ಮತ್ತೊಂದು ಮಾತನ್ನು ಇಲ್ಲಿ ಹೇಳಬೇಕು, ಈಗ ಯಾವ ಕಲೆಗಳನ್ನು 'ಶಿಷ್ಟ'ವೆಂದು ಕರೆಯಲಾಗುತ್ತಿದೆಯೊ ಅವುಗಳಲ್ಲಿ ಬಹುಪಾಲು ಕಲೆಗಳು ಮೂಲತಃ ಮೌಖಿಕ ಪರಂಪರೆಯ ಜಾನಪದವೇ ಆಗಿದ್ದವು. ಎಷ್ಟೇ ಜನ ಅನಕ್ಷರಸ್ಥ ದೇವದಾಸಿಯರು ಭರತನಾಟ್ಯಪಾರಂಗತರಾಗಿರಲಿಲ್ಲವೆ? ಇದಕ್ಕಿಂತ ಬೇರೇನೂ ನಿದರ್ಶನ ಬೇಕು? ಇಷ್ಟಕ್ಕೂ ಈಗ 'ಜಾನಪದ'ದ ಚರ್ಚೆ ಮೌಖಿಕ ಪರಂಪರೆಗೆ ಮಾತ್ರ ಸೀಮಿತವಾಗಿಲ್ಲ. 'ಲಿಖಿತ ಜಾನಪದ' ಎಂಬ ಪರಕಲ್ಪನೆಯು ಈಗ ಸಾಕಷ್ಟು ಚಾಲ್ತಿಯಲ್ಲಿದೆ; ಪುನರಾವರ್ತನೆಗೊಂಡು ಗಟ್ಟಿಯಾಗುವ ಲಿಖಿತ ಮಾದರಿಗಳನ್ನು 'ಲಿಖಿತ ಜಾನಪದ'ದ ವ್ಯಾಪ್ತಿಯಲ್ಲಿ ವಿಶ್ಲೇಷಿಸಲಾಗುತ್ತಿದೆ. ಕ್ರಿಕೆಟ್ ಗಾದೆಗಳು, ಆಟೋಗ್ರಾಫ್ ಬರಹಗಳು, ಆಟೋರಿಕ್ಷಾ ಮೇಲಿನ ಸೂಕ್ತಿಗಳು–ಇಂತಹ ಮಾದರಿಗಳು ಲಿಖಿತ ಜಾನಪದ ಎನ್ನಿಸಿಕೊಳ್ಳುತ್ತಿವೆ. ಹೀಗಾಗಿ ಜಾನಪದದ ಕಲ್ಪನೆಯು ಮೌಖಿಕ ಪರಂಪರೆಯನ್ನು ಒಳಗೊಂಡಂತೆ ಲಿಖಿತ ಪರಂಪರೆಗೂ ವ್ಯಾಪಿಸಿದೆ, ಲಿಖಿತ ಜಾನಪದ ಎನ್ನಿಸಿಕೊಂಡಿದೆ. ನಾನು ಇದಕ್ಕೆ 'ವೈಜ್ಞಾನಿಕ ಜಾನಪದ' ಎಂಬ ಇನ್ನೊಂದು ಹೊಸ ಪರಿಕಲ್ಪನೆಯನ್ನು ಸೇರಿಸಬಯಸುತ್ತೇನೆ. ವಿಜ್ಞಾನ, ತಂತ್ರಜ್ಞಾನ ಮತ್ತು ಜಾನಪದಗಳು ವಿರೋಧಿಗಳಲ್ಲವೆಂದು ಸ್ಪಷ್ಟವಾದರೆ ಸಿನಿಮಾವನ್ನು ಜನಪದ ಕಲೆಗಳ ವ್ಯಾಪ್ತಿಯಲ್ಲಿ ಗ್ರಹಿಸುವ ದಾರಿ ಸ್ಪಷ್ಟವಾಗುತ್ತದೆ.

ಈಗ ನೋಡಿ, ಹಳ್ಳಿಗರು ಬಳಸುವ ಎತ್ತಿನ ಬಂಡಿಯನ್ನು ನಾವು ತಂತ್ರಜ್ಞಾನದ ಫಲಿತವಲ್ಲವೆಂದು ಹೇಳಲಾದೀತೆ? ಬೆಂಕಿಯ ಶೋಧವನ್ನು ವಿಜ್ಞಾನವಲ್ಲವೆಂದು ಕರೆಯಲಾದೀತೆ? 'ಚಕ್ರ'ದ ಶೋಧವು ನಮ್ಮ ತಂತ್ರಜ್ಞಾನದ ಒಂದು ಮಹಾಶೋಧವಲ್ಲವೆ? ಬೆಂಕಿಯ ಉತ್ಪಾದನೆಯು ವಿಜ್ಞಾನದ ವಿಪ್ಲವಕಾರಿ ವಿಕಾಸಕ್ಕೆ ಒಂದು ಉದಾಹರಣೆಯಲ್ಲವೆ? ಎತ್ತಿನ ಬಂಡಿಯನ್ನು ಮೊದ ಮೊದಲು ಶ್ರೀಮಂತ ಭೂಮಾಲೀಕರು ಬಳಸಿದ್ದೇ ಹೆಚ್ಚು ಆನಂತರ ಮಧ್ಯಮ ವರ್ಗದ ರೈತರಿಗೆ ಎತ್ತಿನ ಬಂಡಿ ಕೈಗೆಟುಕಿತು. ಇಂದಾದರೂ ಅಷ್ಟೆ, ಕಾರುಗಳು ಯಾರ ಸೊತ್ತಾಗಿದ್ದವು? ಶ್ರೀಮಂತರ ಸೊತ್ತಾಗಿದ್ದ ಅವು ಈಗ ಮಧ್ಯಮವರ್ಗಕ್ಕೂ ನಿಲುಕುತ್ತಿವೆ. ಅಂದಿನ ಎತ್ತಿನ ಬಂಡಿಯ ತಂತ್ರಜ್ಞಾನ ಅಂದಿಗೆ ಅದ್ಭುತ ಇಂದಿನ ಕಾರು, ವಿಮಾನಗಳ ತಂತ್ರಜ್ಞಾನ ಇಂದಿಗೆ ಅದ್ಭುತ. ಅಂದಿನ ಬೆಂಕಿಯ ಶೋಧ ಅಂದಿಗೆ ಅದ್ಭುತವಾದ ಬೆಳಕಿನ ಸಾಧನ, ಇಂದಿನ ವಿದ್ಯುಚ್ಛಕ್ತಿ ಇಂದಿನ ಸಾಧನ. ಆದರೆ ಈಗಲೂ ಎತ್ತಿನ ಬಂಡಿಯಿದೆ; ಬೆಂಕಿಯೂ ಇದೆ. ಅಂದಂದಿನ ತಂತ್ರಜ್ಞಾನ–ವಿಜ್ಞಾನಗಳು ಅಂದಂದಿಗೆ ಪ್ರಸ್ತುತವಾಗುತ್ತ ಬೆಳೆಯುತ್ತ ಬಂದಿದೆ. ಆದ್ದರಿಂದ ಜಾನಪದವನ್ನು ವಿಜ್ಞಾನ ಮತ್ತು ತಂತ್ರಜ್ಞಾನಗಳಾಚೆಗಿನ ನೆಲೆಯಲ್ಲಿ ನೋಡಬೇಕಿಲ್ಲ. ಹಾಗೆ ನೋಡುವುದು ಸರಿಯೂ ಅಲ್ಲ.

ಅವತ್ತಿನ ಜನಪದಕತೆಗಳಲ್ಲಿ ಬರುವ ಅದ್ಭುತ ಅತಿಮಾನುಷ ಘಟನಾವಳಿಗಳು ಇವತ್ತಿನ ಸಿನಿಮಾಗಳಲ್ಲಿ ಸಾಧ್ಯವಾಗುತ್ತಿಲ್ಲವೆ ಎಂದು ನೋಡೋಣ, ಜನಪದ ಕತೆಗಳನ್ನು ಸಿನಿಮಾಕ್ಕೆ ಅಳವಡಿಸುವುದು ಒಂದು ವಿಷಯ. ಇದು ಸಿನಿಮಾ ತಂತ್ರಜ್ಞಾನದಲ್ಲಿ ಹಿಂದಿನ ಜನಪದ ಕತೆಗಳನ್ನು ಪುನರ್ ಸೃಷ್ಟಿಸುವ ಸೃಜನಶೀಲ ಕೆಲಸ ಉದಾಹರಣೆಗೆ ಪಾತಾಳ ಭೈರವಿ, ಬಾಲನಾಗಮ್ಮ, ಮಾಯಲ್‌ಮರಾಠಿ, ಜಗದೇಕವೀರನ ಕತೆ, ಮುಂತಾದವು, ಇಂಥ ಪುನರ್ ಸೃಷ್ಟಿಗೆ ಹೊರತಾಗಿ ಸಿನಿಮಾದಲ್ಲಿ ವಿಜ್ಞಾನ–ತಂತ್ರಜ್ಞಾನದ ಶಕ್ತಿ ಬಳಸಿ ಹೊಸ ಜನಪದ ಕತೆಗಳನ್ನು ಸೃಷ್ಟಿಸಲಾಗುತ್ತಿದೆಯೆಂಬುದನ್ನು ಗಮನಿಸಬಹುದು. ಉದಾಹರಣೆಗೆ ಟರ್ಮಿನೇಟರ್, ಜುರಾಸಿಕ್ ಪಾರ್ಕ್ ಮುಂತಾದ ಸಿನಿಮಾಗಳನ್ನು ನೋಡಿ. ಇಲ್ಲಿ ಸೂಟುಧಾರಿಯ ಕೈ ಇದ್ದಕ್ಕಿದ್ದಂತೆ ಖಡ್ಗವಾಗಬಹುದು, ಮನುಷ್ಯ ಮತ್ತೊಂದು ರೂಪಪಡೆಯಬಹುದು, ಕಿರು ಆಕೃತಿಯೂ ಆಗಬಹುದು, ಬೃಹದಾಕಾರಿಯೂ ಆಗಬಹುದು, ಹಳೆಯ ಜನಪದ ಕತೆಗಳಲ್ಲಿನ ಪಾತ್ರಗಳಂತೆ ಇಲ್ಲಿಯೂ ಅತಿಮಾನುಷತೆ ಸಾಧ್ಯ.

ಆದರೆ ಜನಪದ ಕತೆಗಳಲ್ಲಿನ ಅತಿಮಾನುಷತೆ ಸಾಧ್ಯವಾಗುವುದು ಮಂತ್ರಶಕ್ತಿ ಮತ್ತು ದೈವಶಕ್ತಿಯಿಂದ ನಾನು ನಿದರ್ಶನವಾಗಿ ನೀಡಿದ ಆಧುನಿಕ ಸಿನಿಮಾಗಳಲ್ಲಿ ಅತಿಮಾನುಷತೆ ಸಾಧ್ಯವಾಗುವುದು ಪಾತ್ರಗಳ ಜ್ಞಾನ–

ವಿಜ್ಞಾನ ಶಕ್ತಿಯಿಂದ, ಎಂದೂ ಮಾದರಿಗಳಲ್ಲೂ ಅದ್ಭುತರಮ್ಯತೆ ಮತ್ತು ಅತಿಮಾನುಷತೆಗಳು ಸಾಮಾನ್ಯ ಸಂಗತಿಯಾಗಿವೆ. ಸಿನಿಮಾ ಮೂಲಕ ಹೊಸ ಜನಪದಕತೆಗಳು ಹುಟ್ಟುತ್ತಿವೆ. ಇಂತಹ ಸಾಧ್ಯತೆಗಳನ್ನು ನಾನು 'ವೈಜ್ಞಾನಿಕ ಜಾನಪದ' ಎಂದು ಕರೆಯಬಯಸುತ್ತೇನೆ. ಸಿನಿಮಾಕಲೆಯು 'ಲಿಖಿತ ಜಾನಪದ'ದ ವ್ಯಾಪ್ತಿಗೂ ಬರುತ್ತದೆ; 'ವೈಜ್ಞಾನಿಕ ಜಾನಪದ'ದ ವ್ಯಾಪ್ತಿಗೂ ಬರುತ್ತದೆ. ಸಿನಿಮಾವು ಏಕಕಾಲಕ್ಕೆ ಲಿಖಿತ, ಮೌಖಿಕ ಮತ್ತು ವೈಜ್ಞಾನಿಕ ನೆಲೆಗಳನ್ನು ಪಡೆದಿರುತ್ತದೆ. ಸಿನಿಮಾಕ್ಕೂ ಲಿಖಿತ ಪರಂಪರೆಗೂ ಇರುವ ಸಂಬಂಧ ಸ್ಪಷ್ಟ. ಚಿತ್ರಕತೆ, ಸಂಭಾಷಣೆ, ಹಾಡು ಇವನ್ನೆಲ್ಲ ಬರೆಯಬೇಕು. ಸಿನಿಮಾ ರೂಪಿತವಾಗಲು ವಿಜ್ಞಾನ-ತಂತ್ರಜ್ಞಾನ ಬೇಕೇ ಬೇಕು. ಸಿನಿಮಾ ಮೂಲತಃ ವಿಜ್ಞಾನ ಮತ್ತು ತಂತ್ರಜ್ಞಾನಗಳ ಸೃಷ್ಟಿ. ಅಂತೆಯೇ ಜಾನಪದವು ವಿಜ್ಞಾನ ತಂತ್ರಜ್ಞಾನಕ್ಕೆ ಮತ್ತು ಆಧುನಿಕತೆಗೆ ವಿರೋಧಿಯಾದುದಲ್ಲ.

ಜಾನಪದ ಮತ್ತು ಆಧುನಿಕತೆಯನ್ನು ಎದುರುಬದುರಾಗಿ ನಿಲ್ಲಿಸುವ ಅಗತ್ಯವೂ ನನಗೆ ಕಾಣುವುದಿಲ್ಲ. ನನ್ನ ದೃಷ್ಟಿಯಲ್ಲಿ ಆಧುನಿಕತೆ ಎನ್ನುವುದು ಎಲ್ಲ ಕಾಲದಲ್ಲೂ ಇರುವ 'ವಿಕಾಸದ ಹೊಸ ಹಂತ'. ಬೆಂಕಿ, ಎತ್ತಿನ ಬಂಡಿಗಳನ್ನು ಕಂಡು ಹಿಡಿದಾಗ ಅದೇ ಆಧುನಿಕ; ಬೆತ್ತಲೆಯಿಂದ ಬಟ್ಟೆಗೆ ಬಂದಾಗ ಅದೇ ಆಧುನಿಕ ಮರದ ಪೊಟರೆ ಮತ್ತು ಗುಹೆಗಳಿಂದ ಗುಡಿಸಲಿಗೆ ಬಂದಾಗ ಗುಡಿಸಲೇ ಆಧುನಿಕ ಇವುಗಳು ಅಂದಂದಿನ ವೈಜ್ಞಾನಿಕ ಆವಿಷ್ಕಾರಗಳು, ಅಂದಂದಿನ ಜೀವನ ವಿಧಾನ, ಉತ್ಪಾದನೆಯ ಸಾಧನಗಳ ಒಟ್ಟು ಪರಿಣಾಮದ ಫಲವಾಗಿ ಅದಕ್ಕೆ ತಕ್ಕಂತೆ ಕತೆ, ಗೀತೆ, ಆಟ ಆಚರಣೆಗಳೂ ರೂಪುತಾಳುತ್ತವೆ. ಜೀವನವಿಧಾನ ಬದಲಾದಂತೆ ಅವೂ ಬದಲಾಗುತ್ತವೆ. ಆದ್ದರಿಂದ ಹಳೆಯದು ಮಾತ್ರವೇ ಜಾನಪದ ಎಂದು ನಾವು ಕರೆದು ಜಾನಪದಕ್ಕೆ ಆಧುನಿಕ ಮುಖವಿಲ್ಲವೆಂದು ಭಾವಿಸುವುದು ಸರಿಯಲ್ಲ.

ಜಾನಪದವು ಗ್ರಾಮೀಣ ಪರಂಪರೆಯಿಂದ ನಗರಕ್ಕೂ ಬಂದಿದೆ. ಮೌಖಿಕ ಪರಂಪರೆಯಿಂದ ಲಿಖಿತಕ್ಕೂ ಬಂದಿದೆ. ಈಗ ವಿಜ್ಞಾನ ವಲಯಕ್ಕೂ ವಿಕಸನ ಹೊಂದಿದೆ. ಆದ್ದರಿಂದ ನಾವು ಅರ್ಥಮಾಡಿಕೊಳ್ಳಬೇಕು: ಜಾನಪದವು ವಿವಿಧ ರೂಪಗಳಲ್ಲಿ ಪರಿವರ್ತನೆಗೊಳ್ಳುತ್ತ ಬೆಳೆಯುವ ಚಲನಶೀಲ ಪರಂಪರೆ. ಈ ಚಲನಶೀಲ ಪರಂಪರೆಯ ಭಾಗವಾಗಿ ಸಿನಿಮಾ ಕಲೆಯನ್ನು ನೋಡಿದಾಗ ಅದರ ಜನಪದೀಯ ಆಯಾಮಗಳು ಅರ್ಥವಾಗುತ್ತವೆ.

ಜಾನಪದವನ್ನು ಲಿಖಿತ ಜಾನಪದ ಮತ್ತು ವೈಜ್ಞಾನಿಕ ಜಾನಪದ ಎಂಬ ವಿಕಾಸದ ಹಂತಗಳಲ್ಲಿ ಗ್ರಹಿಸಿದಾಗ, ಈ ಎರಡು ವಿಭಾಗಗಳಲ್ಲಿ ಅಂದರೆ ಲಿಖಿತ ಜಾನಪದ ಮತ್ತು ವೈಜ್ಞಾನಿಕ ಜಾನಪದಗಳಲ್ಲಿ ಸಿನಿಮಾ ಕಲೆಗೆ ಸ್ಥಾನ ಕೊಡುವುದು ಸಾಧ್ಯ ಮತ್ತು ಸೂಕ್ತ. ಹಿಂದಿನ ಜನಪದ ಕತೆಗಳಲ್ಲಿ ಕೆಲವು 'ಆಶಯಗಳು' ಪುನರಾವರ್ತನೆಗೊಳ್ಳುವಂತೆ ಸಿನಿಮಾದಲ್ಲೂ ಪುನರಾವರ್ತನೆಗೊಳ್ಳುತ್ತವೆ. ಒಂದು ಸಿನಿಮಾದ ಯಶಸ್ಸಿನ ಸೂತ್ರವು ಅನೇಕ ಕಾಲ ತಾನೇತಾನಾಗಿ ಮುಖ್ಯ ಆಶಯವಾಗಿ ಮುಂದುವರೆಯುವ 'ರೂಢಿ'ಯನ್ನು ಸಿನಿಮಾದಲ್ಲಿ ಕಾಣಬಹುದು. ಪ್ರೇಮ, ಕುಣಿತ, ಹೊಡೆದಾಟ, ಕೌಟುಂಬಿಕ ಸನ್ನಿವೇಶ-ಇತ್ಯಾದಿಗಳು ಮುಖ್ಯವಾಹಿನಿಯಾಗಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಜನಪದ ಆಚರಣೆಯಂತೆ ಪುನರಾವರ್ತನೆಗೊಳ್ಳುವ ಸಿನಿಮಾಗಳ ಸಂಖ್ಯೆಯೇ ಹೆಚ್ಚು. ಅದಕ್ಕನುಗುಣವಾದ ಚಿತ್ರಕತೆರಚನೆ, ಅದೇ ರೀತಿಯ ಸಂಭಾಷಣೆಗಳು ಸದಾ ಚಾಲ್ತಿಯಲ್ಲಿರುವುದು ಎಲ್ಲರಿಗೂ ಗೊತ್ತು. ಯಾವುದೇ ಸಿನಿಮಾದಲ್ಲಿ ಪ್ರೇಮ ಪ್ರಕರಣ ಬಂದಾಗ ಅಪ್ಪ ಮಗನಿಗೆ 'ನನ್ನ ಆಸ್ತಿಯಲ್ಲಿ ಪಾಲಿಲ್ಲ' ಎನ್ನುವುದೂ ಇನ್ನು ಕೆಲವು ಸಿನಿಮಾಗಳಲ್ಲಿ ಉದಾತ್ತ ಅಣ್ಣ, ಅಪ್ಪಂದಿರು ಇರುವುದು, ತಾಯಿಯ ಮಮತೆ ಸದಾ ಮಿಡಿಯುವುದು, ಅಣ್ಣ-ತಂಗಿಯರ ಸಂಬಂಧ, ಅತ್ತೆ ಸೊಸೆಯರ ಸಂಬಂಧ ಹಳಕತೆಗಳಂತೆಯೇ ಇರುವುದು ಇದೆಲ್ಲ ಬಹುಪಾಲು ಸಿನಿಮಾಗಳಲ್ಲಿ ಸಾಮಾನ್ಯ. ಈ ಪುನರಾವರ್ತನೆಯು ಸಿನಿಮಾ ವಸ್ತುವಿಗೆ ಒಂದು ಮಾದರಿಯ 'ಜನಪದೀಯ' ಸ್ವರೂಪವನ್ನು ತನಗೆ ತಾನೇ ತಂದುಕೊಡುತ್ತದೆ. ಈ ಮಾದರಿಯನ್ನು ಮೀರಿದ ಸಿನಿಮಾಗಳೂ ಇರುವುದರಿಂದ ಎಲ್ಲ ಸಿನಿಮಾಗಳಿಗೂ 'ಜನಪದೀಯತೆ'ಯನ್ನು ಅನ್ವಯಿಸುವುದು ಹೇಗೆ ಸರಿಯಾದೀತು ಎಂಬ ಪ್ರಶ್ನೆ ಏಳಬಹುದು. ಇಲ್ಲಿ ಸಿನಿಮಾದಲ್ಲಿರುವ ಆಂಶಿಕ ಜನಪದೀಯತೆಯನ್ನಷ್ಟೇ ನಾನು ಪ್ರಸ್ತಾಪಿಸಿದ್ದೇನೆ. ಈ ಅಂಶಗಳು ಸಿನಿಮಾವು ಒಂದು ಜನಪದ ಕಲೆ ಎಂಬ ಕಲ್ಪನೆಗೆ ಪೂರಕವಾಗಬಹುದೇ ಹೊರತು ಅಂತಿಮವಾಗುವುದಿಲ್ಲವೆಂದು ನನಗೆ ಗೊತ್ತು. ಆದ್ದರಿಂದ ಈಗ ಜನಪದ ಕಲೆಗಳ ಮೂಲ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದು ಮತ್ತು ಆ ಮೂಲಕ ಸಿನಿಮಾ ಕಲೆಯನ್ನು ನೋಡುವುದು ಅಗತ್ಯ.

ಮೊದಲನೆಯದಾಗಿ ಬಹುಪಾಲು ಜನಪದಕಲೆಗಳು ಸಮೂಹ ಸೃಷ್ಟಿಯಾಗಿರುತ್ತವೆ. ಸಮೂಹವೊಂದರ ಭಾಗವಹಿಸುವಿಕೆಯಿಂದ ಕ್ರಿಯಾಶೀಲವಾಗುತ್ತವೆ. ಲಿಖಿತ ಪರಂಪರೆಯ ಸಾಹಿತ್ಯ, ಚಿತ್ರಕಲೆಗಳು ಸಮೂಹದ ಭಾಗವಹಿಸುವಿಕೆಯಿಂದ ರೂಪಿತವಾಗುವುದಿಲ್ಲ. ಏಕವ್ಯಕ್ತಿ ಏಕಾಗ್ರತೆಯನ್ನು ಬಯಸುವ ಲಿಖಿತ ಸಾಹಿತ್ಯಾದಿ ಕಲೆಗಳಿಗೂ ಜನಪದ ಕಲೆಗಳಿಗೂ ಇರುವ ಮುಖ್ಯ ವ್ಯತ್ಯಾಸ ಇದಾಗಿದೆ. ಕೋಲಾಟ, ಬಯಲಾಟ, ದೊಂಬರಾಟ, ಹಗಲುವೇಷ, ಡೊಳ್ಳುಕುಣಿತ, ಇತ್ಯಾದಿ ಜನಪದ ಕಲೆಗಳೆಲ್ಲವೂ ಸಮೂಹವನ್ನು ಒಳಗೊಂಡಿರುತ್ತವೆ. ಸಿನಿಮಾ ಸಹ ಒಂದು ಸಮೂಹ ಸೃಷ್ಟಿ. ಸಿನಿಮಾದಲ್ಲಿ ಸಮೂಹವೊಂದರ ಭಾಗವಹಿಸುವಿಕೆ ಅಗತ್ಯ ಹಾಗೂ ಅನಿವಾರ್ಯ. ನಿರ್ದೇಶಕನು

ಜಾನಪದ ಮತ್ತು ಆಧುನಿಕತೆಯನ್ನು ಎದುರುಬದುರಾಗಿ ನಿಲ್ಲಿಸುವ ಅಗತ್ಯವೂ ನನಗೆ ಕಾಣುವುದಿಲ್ಲ. ನನ್ನ ದೃಷ್ಟಿಯಲ್ಲಿ ಆಧುನಿಕತೆ ಎನ್ನುವುದು ಎಲ್ಲ ಕಾಲದಲ್ಲೂ ಇರುವ 'ವಿಕಾಸದ ಹೊಸ ಹಂತ'. ಬೆಂಕಿ, ಎತ್ತಿನ ಬಂಡಿಗಳನ್ನು ಕಂಡು ಹಿಡಿದಾಗ ಅದೇಆಧುನಿಕ; ಬೆತ್ತಲೆಯಿಂದ ಬಟ್ಟೆಗೆ ಬಂದಾಗ ಅದೇ ಆಧುನಿಕ ಮರದ ಪೊಟರೆ ಮತ್ತು ಗುಹೆಗಳಿಂದ ಗುಡಿಸಲಿಗೆ ಬಂದಾಗ ಗುಡಿಸಲೇ ಆಧುನಿಕ ಇವುಗಳು ಅಂದಂದಿನ ವೈಜ್ಞಾನಿಕ ಆವಿಷ್ಕಾರಗಳು, ಅಂದಂದಿನ ಜೀವನ ವಿಧಾನ, ಉತ್ಪಾದನೆಯ ಸಾಧನಗಳ ಒಟ್ಟು ಪರಿಣಾಮದ ಫಲವಾಗಿ ಅದಕ್ಕೆ ತಕ್ಕಂತೆ ಕತೆ, ಗೀತೆ, ಆಟ ಆಚರಣೆಗಳೂ ರೂಪುತಾಳುತ್ತವೆ. ಜೀವನವಿಧಾನ ಬದಲಾದಂತೆ ಅವೂ ಬದಲಾಗುತ್ತವೆ. ಆದ್ದರಿಂದ ಹಳೆಯದು ಮಾತ್ರವೇ ಜಾನಪದ ಎಂದು ನಾವು ಕರೆದು ಜಾನಪದಕ್ಕೆ ಆಧುನಿಕ ಮುಖವಿಲ್ಲವೆಂದು ಭಾವಿಸುವುದು ಸರಿಯಲ್ಲ. ಜಾನಪದವು ಗ್ರಾಮೀಣ ಪರಂಪರೆಯಿಂದ ನಗರಕ್ಕೂ ಬಂದಿದೆ. ಮೌಖಿಕ ಪರಂಪರೆಯಿಂದ ಲಿಖಿತಕ್ಕೂ ಬಂದಿದೆ. ಈಗ ವಿಜ್ಞಾನ ವಲಯಕ್ಕೂ ವಿಕಸನ ಹೊಂದಿದೆ.

ಕೇಂದ್ರ ಶಕ್ತಿಯಾಗಿದ್ದರೂ ನಿರ್ದಿಷ್ಟ ಸಮೂಹದ ದುಡಿಮೆಯಿಲ್ಲದೆ ಸಿನಿಮಾ ಸೃಷ್ಟಿ ಸಾಧ್ಯವಿಲ್ಲ. ಸಿನಿಮಾಕ್ಕೆ ಕತೆ, ಚಿತ್ರಕತೆಯನ್ನು ಸಿದ್ಧಪಡಿಸುವಾಗಲೇ ನಿರ್ದೇಶಕರ ಆಯ್ಕೆಯ ಗುಂಪಿನ ಜೊತೆ ಚರ್ಚೆಯಾಗುವುದು ಸಾಮಾನ್ಯ ಸಂಗತಿ. ಕತೆ, ಚಿತ್ರಕತೆ, ಸಂಭಾಷಣೆ ಮತ್ತು ಗೀತರಚನೆಯ ಕೆಲಸವನ್ನು ಅಂತಿಮವಾಗಿ ನಿರ್ದಿಷ್ಟ ವ್ಯಕ್ತಿಗಳೇ ನಿರ್ವಹಿಸುತ್ತಾರಾದರೂ ಆರಂಭದಲ್ಲಿ ಚಿಕ್ಕ ಸಮೂಹದೊಂದಿಗೆ ಚರ್ಚೆ, ಅಥವಾ ಅನುಸಂಧಾನ ನಡೆಯುತ್ತದೆ. ಇದು ಕಡ್ಡಾಯವಲ್ಲವಾದರೂ ಸಮೂಹ ಮಾಧ್ಯಮದ ಸೃಷ್ಟಿಕ್ರಿಯೆಗೆ ತಾನಾಗಿಯೇ ಒದಗಿಬರುವ ಒಂದು ಒತ್ತಾಸೆಯಾಗಿರುತ್ತದೆ. ಚಿತ್ರಕತೆ, ಸಂಭಾಷಣೆಗಳು ಸಿದ್ಧವಾದ ಮೇಲೆ ಅದನ್ನು ಸಿನಿಮಾರೂಪಕ್ಕೆ ತರುವಾಗ ಕಲಾವಿದರು, ತಂತ್ರಜ್ಞರು, ಶ್ರಮಜೀವಿಗಳು ಸೇರಿ ನಿರ್ದೇಶಕರ ಕೇಂದ್ರ ಸಂವೇದನೆಗೆ ಸ್ಪಂದಿಸಿ ದುಡಿಯುತ್ತಾರೆ.

ಇನ್ನೊಂದು ಅಂಶವನ್ನು ಇದೇ ಸಂದರ್ಭದಲ್ಲಿ ಹೇಳಬೇಕು. ಸಿನಿಮಾ ಒಂದು ಒಕ್ಕೂಟ ಕಲೆ (Federal Art). ಅನೇಕ ಕಲೆಗಳ ಸಮಸಂಯೋಜನೆಯಿಂದಾಗಿಯೇ ಸಿನಿಮಾ ಸೃಷ್ಟಿಯಾಗುತ್ತದೆ. ಸಾಹಿತ್ಯ, ಸಂಗೀತ, ಸಂಕಲನ, ಛಾಯಾಗ್ರಹಣ, ಕಲಾನಿರ್ದೇಶನ, ಅಭಿನಯ ಹೀಗೆ ಅನೇಕ ಕಲಾಮಾಧ್ಯಮಗಳು ಅಗತ್ಯಕ್ಕನುಸಾರವಾಗಿ ಒಟ್ಟಿಗೆ ಸೇರಿ ನಿರ್ದಿಷ್ಟ ವಿನ್ಯಾಸ ಕೊಡುವ ಕ್ರಿಯೆಯ ಫಲವಾಗಿ ಸಿನಿಮಾ ರೂಪುಗೊಳ್ಳುತ್ತದೆ. ವಿವಿಧ ಕಲಾಪ್ರಕಾರಗಳನ್ನು ದುಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಿನಿಮಾಕ್ಕೆ ಪ್ರಜಾಸತ್ತಾತ್ಮಕ ಸ್ವರೂಪ ಲಭ್ಯವಾಗುತ್ತದೆ. ನಿರ್ದೇಶಕರೇ ಕೇಂದ್ರ ಶಕ್ತಿಯಾದರೂ ಇನ್ನಿತರ ವಿಭಾಗಗಳನ್ನು ಆಯಾ ವಿಭಾಗದ ಕಲಾಶಕ್ತಿಗಳನ್ನೂ ಗೌಣಗೊಳಿಸುವಂತಿಲ್ಲ. ಕೇಂದ್ರಶಕ್ತಿ ಮತ್ತು ಪೂರಕ ಶಕ್ತಿಗಳು ಕೂಡಿಯೇ ಸಿನಿಮಾ ಸೃಷ್ಟಿಯಾಗುವುದರಿಂದ ಅದು ತನ್ನೊಳಗೆ ಪ್ರಜಾಸತ್ಮಕತೆಯನ್ನು ಪಡೆದುಕೊಳ್ಳುವ ಒಕ್ಕೂಟ ಕಲೆಯಾಗುತ್ತದೆ. ವಿವಿಧ ಕಲಾಪ್ರಕಾರಗಳು ತಂತಮ್ಮ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡೂ ಸಿನಿಮಾದಲ್ಲಿ ಒಂದಾಗುತ್ತವೆ. ಇಲ್ಲಿ ಸ್ವತಂತ್ರ ಅಸ್ತಿತ್ವ ಮತ್ತು ಕೇಂದ್ರ ಮುಖ್ಯಕ್ರಿಯೆ ಎರಡೂ ಮುಖ್ಯ. ನಮ್ಮ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಒಟ್ಟಿಗೇ ಕ್ರಿಯಾಶೀಲವಾದಂತೆ ಸಿನಿಮಾದ ಸ್ವರೂಪ, ಹೀಗಾಗಿ ಸಿನಿಮಾ ಸಮೂಹ ಸೃಷ್ಟಿಯ ಒಂದು ಒಕ್ಕೂಟ ಕಲೆ,

ಎರಡನೆಯದಾಗಿ, ಜನಪದಕಲೆಗಳಲ್ಲಿ ಮೌಖಿಕ ಪರಂಪರೆಯು ಮೇಲುಗೈ ಪಡೆದಿರುತ್ತದೆ. ಅನಕ್ಷರಸ್ಥರೂ ಬಯಲಾಟ (ದೊಡ್ಡಾಟ)ದಲ್ಲಿ ಪಾತ್ರ ಮಾಡಬಹುದು; ಕೋಲಾಟ, ಸುಗ್ಗಿ ಕುಣಿತ, ಡೊಳ್ಳು ಕುಣಿತದ ಕಲಾವಿದರಾಗಬಹುದು. ಜನಪದ ಕಲೆಗಳಲ್ಲಿ ಲಿಖಿತ ನಿರ್ದೇಶನ ಲಿಖಿತ ಸಂವಹನಗಳ ಬದಲಾಗಿ ಮೌಖಿಕದ ಪಾತ್ರ ಪ್ರಧಾನವಾದುದು. ಕಲಿಸುವವರು ಕಲಿಯುವವರು ಅಕ್ಷರಸ್ಥರೊ ಅನಕ್ಷರಸ್ಥರೊ ಎನ್ನುವುದಿಲ್ಲಿ ಅಮುಖ್ಯ. ಸಿನಿಮಾ ರೂಪುದಾಳುವ ಸನ್ನಿವೇಶವನ್ನು ಗಮನಿಸಿ. ಸಮೂಹ ಚರ್ಚೆಯ ಫಲವಾಗಿ ಸಿದ್ಧವಾದ ಲಿಖಿತ ಚಿತ್ರಕತೆಯ ವಿವರಗಳನ್ನು ನಿರ್ದೇಶಕರು ಎಲ್ಲರಿಗೂ ಮೌಖಿಕವಾಗಿ ವಿವರಿಸಿ ಸೂಚನೆ ನೀಡುತ್ತಾರೆ. ಸಿನಿಮಾ ಕಲಾವಿದರು ಅಷ್ಟಿಷ್ಟು ವಿದ್ಯೆ ಕಲಿತವರೇ ಆಗಿರುತ್ತಾರಾದರೂ ಅದು ಮಾನದಂಡವಲ್ಲ. ಹೇಳಿಗನ್ನು ಕೇಳಿ ಅಭಿನಯಿಸಬಹುದು. (ಕಿವಿ ಕೇಳಿಸದಿದ್ದರೂ ಜೊತೆ ಕಲಾವಿದರ ತುಟಿ ಚಲನೆಯನ್ನು ಗಮನಿಸಿ ತಮ್ಮ ಸಂಭಾಷಣೆಯನ್ನು ಸಕಾಲಕ್ಕೆ ಹೇಳುತ್ತಿದ್ದ ಟಿ.ಎನ್. ಬಾಲಕೃಷ್ಣ ಮತ್ತು ಮೂರನೇ ತರಗತಿಯನ್ನು ಪೂರೈಸದಿದ್ದರೂ ಅದ್ಭುತ ಪ್ರತಿಭೆಯಾಗಿ ರೂಪುಗೊಂಡ ಡಾ॥ ರಾಜಕುಮಾರ್ ಅವರನ್ನು ಇಲ್ಲಿ ನೆನೆಯಬಹುದು.) ಕಲಾವಿದರಷ್ಟೇ ಅಲ್ಲ, ಛಾಯಾಗ್ರಾಹಕರ ಸೂಚನೆಗಳು, ಕಲಾನಿರ್ದೇಶಕರು ಸಹಾಯಕರಿಗೆ ಕೊಡುವ ಸೂಚನೆಗಳು ಹೀಗೆ ಮೌಖಿಕಮಯವಾದ ವಾತಾವರಣದಲ್ಲಿ ಸಿನಿಮಾ ಚಿತ್ರೀಕರಣಗಳೆರಡೂ ಸಿನಿಮಾ ತಯಾರಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಮೂರನೆದಾಗಿ, ಜನಪದ ಕಲೆಗಳು ಸಾಮಾನ್ಯವಾಗಿ ಆಯಾ ಕಲಾವಿದರ ಕಸುಬು (ವೃತ್ತಿ) ಮತ್ತು ಕಲೆ ಎರಡೂ ಆಗಿರುತ್ತವೆ. ದೊಂಬಿದಾಸರು ಆಡುವ ನಾಟಕಗಳು ಅವರ ಕಸುಬಾಗಿದ್ದು ಆನಂತರ ನೋಡುಗರಿಂದ ಕಲೆ ಎಂದು ಕರೆಸಿಕೊಳ್ಳುತ್ತವೆ. ಹಗಲುವೇಷ ಹಾಕುವ ಅಲೆಮಾರಿ ಜನಾಂಗದವರ (ಬುಡಗ ಜಂಗಮರು) ಕಸುಬೇ ಹಗಲುವೇಷ ಹಾಕುವುದು. ಅದೇ ಅವರ ವೃತ್ತಿ, ಆದರೆ ಅದು ಕಲೆಯೂ ಹೌದು, ದೊಂಬರು ನೀಡುವ ಪ್ರದರ್ಶನಗಳು ಅವರ ಕಸುಬಾಗಿರುತ್ತವೆ. ಕಲೆಯೂ ಆಗಿರುತ್ತವೆ. ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಸಿನಿಮಾ ಕಲೆಯಲ್ಲೂ ಅಷ್ಟೆ, ಬಹುಪಾಲು ತಂತ್ರಜ್ಞಾರಿಗೆ ಮತ್ತು ಕಲಾವಿದರಿಗೆ ಸಿನಿಮಾ 'ಕಲಿತ' ಕಸುಬೂ ಹೌದು. ಕಲೆಯೂ ಹೌದು, ಛಾಯಾಗ್ರಾಹಕ ಸಂಕಲನಕಾರ, ಸಂಗೀತ ನಿರ್ದೇಶಕ, ನಿರ್ದೇಶಕ, ಕಲಾನಿರ್ದೇಶಕ, ನೃತ್ಯ ನಿರ್ದೇಶಕ, ಸೌಂಡ್ ಇಂಜಿನಿಯರ್, ಕಲಾವಿದರು-ಎಲ್ಲರೂ-ಕೆಲವು ಅಪವಾದಗಳನ್ನು ಬಿಟ್ಟರೆ, ಬಹುಪಾಲು ಮಂದಿ ಸಿನಿಮಾವನ್ನು ಕಸುಬಾಗಿ (ವೃತ್ತಿಯಾಗಿ) ಸ್ವೀಕರಿಸಿರುತ್ತಾರೆ. ಹೀಗಾಗಿ ಜನಪದ ಕಲೆಯಂತೆ ಇಲ್ಲಿಯೂ ಕಸುಬು ಮತ್ತು ಕಲೆ ಒಂದಾದ ಸನ್ನಿವೇಶವಿರುತ್ತದೆ.

ನಾಲ್ಕನೆಯದಾಗಿ, ಜನಪದಕಲೆಗಳು ಶ್ರಮ ಮತ್ತು ಸೃಜನಶೀಲತೆಯ ನೆಲೆಗಳನ್ನು ಒಟ್ಟಿಗೇ ಒಳಗೊಂಡಿರುತ್ತದೆ. ಜನಪದಕಲೆಗಳು ಬಹುಪಾಲು ಶ್ರಮಜೀವಿಗಳ ಕಲಾರೂಪಗಳು. ಅವುಗಳ ಸ್ವರೂಪದಲ್ಲಿ ಶ್ರಮದ ಪಾತ್ರವೂ ಇರುತ್ತದೆ; ಸೃಜನಶೀಲತೆಯೂ ಇರುತ್ತದೆ. ಅಂತೆಯೇ ಸಿನಿಮಾ ಕಲೆಯಲ್ಲಿ ಶ್ರಮದ ನೆಲೆಯೂ ಇದೆ, ಸೃಜನಶೀಲತೆಯ ನೆಲೆಯಂತೂ ಇದ್ದೇ ಇದೆ. ಸಿನಿಮಾ ತಯಾರಿಯಲ್ಲಿ ಲೈಟ್ ಬಾಯ್‌ಗಳಾದಿಯಾಗಿ ಅನೇಕ ಶ್ರಮಜೀವಿಗಳು ಭಾಗವಹಿಸುತ್ತಾರೆ. ಟ್ರಾಲಿಟ್ರ್ಯಾಕ್, ಕ್ರೇನ್ ಮುಂತಾದ ಬಳಕೆಯಲ್ಲದೆ ಲೈಟ್‌ಗಳನ್ನು ಹೊರುವುದು, ಸೂಕ್ತವಾಗಿ ಬಳಸುವುದು ಇಂತಹ ಕ್ರಿಯೆಗಳಲ್ಲಿ ಶ್ರಮ ಮತ್ತು ಸೃಜನಶೀಲತೆ ಒಟ್ಟಿಗೇ ಇರುತ್ತದೆ. ಸಿನಿಮಾಕ್ಕೆ ಒಂದು ಸೆಟ್ ಹಾಕಬೇಕೆಂದರೆ ಅಲ್ಲಿಯೂ ಶ್ರಮ ಮತ್ತು ಸೃಜನಶೀಲತೆ ಒಂದಾಗುತ್ತವೆ. ಕ್ಯಾಮರಾ ಚಲನೆಗೂ ಶ್ರಮವಹಿಸಬೇಕು. ಸೃಜನಶೀಲವಾಗಿರಬೇಕು. ಹೀಗೆ ಸಿನಿಮಾ ಸೃಷ್ಟಿಯ ವಿವಿಧ ವಿಭಾಗಗಳು ಏಕಕಾಲಕ್ಕೆ ಶ್ರಮ ಮತ್ತು ಸೃಜನಶೀಲತೆಯನ್ನು ಬಯಸುತ್ತವೆ. ಇದೊಂದು ಅನಿವಾರ್ಯ ಪ್ರಕ್ರಿಯೆ.

ಈ ಎಲ್ಲ ವಿವರ ಮತ್ತು ವಿಶ್ಲೇಷಣೆಯ ಮೂಲಕ ನಾನು ಲೇಖನದ ಆರಂಭದಲ್ಲಿ ಹೇಳಿದ ಮಾತಿಗೆ ಬರುತ್ತೇನೆ: ಸಿನಿಮಾ ಒಂದು ಜನಪದ ಕಲೆ, ಆಧುನಿಕ ಜನಪದ ಕಲೆ. □

STATEMENT ABOUT OWNERSHIP AND OTHER PARTICULARS ABOUT NEWSPAPER

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		63, Anjananagar, Vishwaneedam Post, Bangalore-560 091
4.	Publisher's Name	:	**S.R. Govindu**
	Nationality		Indian
	Address		63, Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		402,1st main,2nd Block, HBR Layout, Bangalore-560 043
6.	Name and address of individuals who own the newspaper and partners and share holders holding more than one percent of the total capital	:	Spoorthidhama, 63, Anjananagar, Vishwaneedam Post, Bangalore-560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Sd/-
S.R. Govindu
Publisher

Date: 29-02-2008

ಮೆಕಾಲೆ ತಿರಸ್ಕಾರ ಯೋಗ್ಯರೇ?

ಚಂದ್ರಭಾನ್ ಪ್ರಸಾದ್
ಅನು: ಸತ್ಯಪ್ರಕಾಶ್ ಎಂ.ಆರ್

ಕಾನೂನಿನ ಎದುರು ಎಲ್ಲ ಭಾರತೀಯರು ಸಮಾನರು ಎಂದು ಪರಿಗಣಿಸುವ ಭಾರತೀಯ ದಂಡ ಸಂಹಿತೆಯನ್ನು ರಚಿಸಿದವ ಲಾರ್ಡ್ ಮೆಕಾಲೆ ಎಂಬುದನ್ನು ನಾವು ನೆನಪಿಡಬೇಕು. ಭರತ ಖಂಡವನ್ನು ಗೆದ್ದ ರಾಬರ್ಟ್ ಕ್ಲೈವ್, ಇಲ್ಲಿನ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಲಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಭಾರತದ ಪರವಾಗಿದ್ದ ಲಾರ್ಡ್ ಮೆಕಾಲೆ, ಜಾತಿ ಪದ್ಧತಿಯಂತಹ ಹಲವು ಕೆಟ್ಟ ಆಚರಣೆಗಳನ್ನು ವಿರೋಧಿಸಿದ. ಹೀಗಾಗಿ, ಮುಖ್ಯವಾಹಿನಿಯ ಭಾರತೀಯರು ಲಾರ್ಡ್ ಮೆಕಾಲೆಯನ್ನು ಎಂದಿಗೂ ಮನ್ನಿಸುವುದಿಲ್ಲ. ಭಾರತದಲ್ಲಿ ಇದುವರೆಗೆ ಬುದ್ಧನಿಂದ, ಅಂಬೇಡ್ಕರ್‌ವರೆಗೆ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದವರೆಲ್ಲರೂ, ತಿರಸ್ಕಾರಕ್ಕೊಳಗಾಗಿದ್ದಾರೆ. ಬೌದ್ಧಧರ್ಮ ಭಾರತದಿಂದ ಬಹುತೇಕ ಕಣ್ಮರೆಯಾಗಿದೆ. ಭಾರತೀಯ ಸಂವಿಧಾನದ ಕರ್ತೃವಾದರೂ, ಅಂಬೇಡ್ಕರ್ ಚುನಾವಣೆಗಳಲ್ಲಿ ಸೋಲನುಭವಿಸಿದರು.

ಪ್ರಜಾಪ್ರಭುತ್ವ, ಭಾರತಕ್ಕೆ ಅತ್ಯಂತ ಸೂಕ್ತವಾದ ರಾಜಕೀಯ ವ್ಯವಸ್ಥೆ ಎಂಬುದನ್ನು ಬಹುತೇಕ ಭಾರತೀಯರು ಒಪ್ಪುತ್ತಾರೆ. ಆದರೆ ಜಾತಿ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಎದುರಿಸುವ ನಿಟ್ಟಿನಲ್ಲಿ ಈ ಪ್ರಜಾಪ್ರಭುತ್ವ ವ್ಯವಸ್ಥೆ ಸೋತಿದೆ ಎಂಬುದು ನನ್ನ ವಾದ.

ಭಾರತದ ಬಹುಸಂಖ್ಯಾತ ರಾಜಕಾರಣಿಗಳು, ರಾಜಕೀಯ ತಜ್ಞರು, ಹಾಗೂ ಜನಸಾಮಾನ್ಯರು ಭಾರತದ ಪ್ರಜಾತಂತ್ರ ವ್ಯವಸ್ಥೆ ಪಶ್ಚಿಮದ ಪ್ರಜಾತಂತ್ರ ವ್ಯವಸ್ಥೆಗಿಂತ ಭಿನ್ನವಾದ, ತನ್ನದೇ ಆದ ವಿಶಿಷ್ಟವಾದ ಸ್ವರೂಪವನ್ನು ಹೊಂದಿದೆ ಎಂಬ ವಿವರಣೆ ನೀಡುತ್ತಾರೆ. ಆದರೆ ಇಂತಹ ಧೋರಣೆಯ ಅಂತರಾಳದಲ್ಲಿ ಒಟ್ಟಾರೆ ಪಶ್ಚಿಮದ ವಿಚಾರಧಾರೆಯ ನಿಂದನೆಯನ್ನು ನಾವು ಗುರುತಿಸಬಹುದು.

ಸಾಮುದಾಯಿಕವಾದ ಮೌಲ್ಯಗಳನ್ನು ಒಪ್ಪಿಕೊಂಡ, ಮತ್ತದನ್ನು ನಂಬಿಕೊಂಡ ಭಾರತೀಯತೆಯ ಬಗ್ಗೆ ನಾವು ಹೆಮ್ಮೆ ಪಡುತ್ತೇವೆ. ಇಂತಹ ಒಂದು ಭಾರತೀಯ ಅಸ್ಮಿತೆಯನ್ನು, ಭಾರತೀಯ ಸಾಮಾಜಿಕ ವ್ಯವಸ್ಥೆಯೆಂದು ನಾನು ಕರೆಯುತ್ತೇನೆ. ಇದು ಪಶ್ಚಿಮದ ಪ್ರಜಾತಂತ್ರ ವ್ಯವಸ್ಥೆ, ಆಧುನಿಕತೆ, ಮತ್ತು ಬಂಡವಾಳಶಾಹಿ ವ್ಯವಸ್ಥೆಗೆ ವಿರುದ್ಧವಾದುದು. ಈ ಭಾರತೀಯತೆ, ನಮ್ಮ ಸಾಮಾಜಿಕ ಸಂರಚನೆಯ ಹೃದಯಭಾಗದಲ್ಲಿರುವ ಜಾತಿ ವ್ಯವಸ್ಥೆಯನ್ನು ಸಕಾರಾತ್ಮಕವಾಗಿ ನೋಡುತ್ತದೆ.

ಇದರಿಂದ ನಮ್ಮ ಮನಸಿನೊಳಗೆ, ಜಾತಿ ಮತ್ತು ಆಧುನಿಕತೆಯ ನಡುವೆ ಅಥವಾ ಆಧುನಿಕ ರಾಷ್ಟ್ರೀಯತೆ ಹಾಗೂ ಜಾತಿ ವ್ಯವಸ್ಥೆಯ ನಡುವೆ ಕಾಳಗ ನಡೆಯುತ್ತಲೇ ಇರುತ್ತದೆ. ಒಂದು ವೇಳೆ ಆಯ್ಕೆಯ ಸಂದರ್ಭ ಒದಗಿಬಂದರೆ, ನಾವು ದೇಶದ ಬದಲಿಗೆ, ಜಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಈ ಪ್ರಜ್ಞೆ ನಮ್ಮ ಮನಸಿನೊಳಗೆ ಸುಪ್ತವಾಗಿರುತ್ತದೆ. ಅಧಿಕೃವಾಗಿ ನಾವು ಇದನ್ನು ಒಪ್ಪಿಕೊಳ್ಳುವುದೂ ಇಲ್ಲ. ಆದರೆ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಇದು ವಿವಿಧ ರೀತಿಯಲ್ಲಿ ಹೊರಬರುತ್ತದೆ.

ಇತಿಹಾಸದ ಈ ಘಟ್ಟದಲ್ಲಿ ಭಾರತ, ತನ್ನೊಡನೆಯೇ ಕಾಳಗಕ್ಕೆ ನಿಂತಿರುವ ಭಯಂಕರ ಸ್ಥಿತಿಯಲ್ಲಿದೆ: ಇದು ಜಾತಿ ವ್ಯವಸ್ಥೆ ಹಾಗೂ ಭಾರತದ 'ರಾಷ್ಟ್ರೀಯತೆ'ಯ ನಡುವಿನ ಕಾಳಗ. ರಾಷ್ಟ್ರೀಯತೆಯನ್ನು ಯಾವ ಹಂತದವರೆಗೆ ಸ್ವೀಕರಿಸಬೇಕೆಂಬುದನ್ನು ನಿರ್ಧರಿಸಲು ಭಾರತೀಯರಿಗೆ ಸಾಧ್ಯವಾಗಿಲ್ಲ. ರಾಷ್ಟ್ರೀಯತೆ ದೇಶದ ಬಹುತೇಕ ಜನರಿಗೆ ಮೊದಲ ಆಯ್ಕೆಯಾಗಿಲ್ಲದಿರುವುದರಿಂದ, ಜಾತಿ ವ್ಯವಸ್ಥೆಗೆ ಸವಾಲೊಡ್ಡುವ ಯಾವುದೇ ವಿಚಾರಧಾರೆ ಅಥವಾ ಸಿದ್ಧಾಂತವಿರಲಿ– ಉದಾಹರಣೆಗೆ, ಬಂಡವಾಳಶಾಹಿ ವ್ಯವಸ್ಥೆ– ಪ್ರಬಲವಾದ ಪ್ರತಿರೋಧ ವ್ಯಕ್ತಪಡಿಸುತ್ತಾರೆ.

ಬಂಡವಾಳಶಾಹಿ ವ್ಯವಸ್ಥೆ, ಕೇವಲ ಆರ್ಥಿಕ ಆಯಾಮವನ್ನು ಮಾತ್ರ ಹೊಂದಿಲ್ಲ; ಅದೊಂದು ಸಾಮಾಜಿಕ ವ್ಯವಸ್ಥೆ. ಭಾರತಕ್ಕೆ ಕೈಗಾರಿಕೀಕರಣ ಅನಿವಾರ್ಯ. ಆದರೆ, ಬಂಡವಾಳಶಾಹಿ ವ್ಯವಸ್ಥೆಯಿಲ್ಲದೆ ಕೈಗಾರಿಕೀಕರಣ ಸಾಧ್ಯವಿಲ್ಲ. ಬಂಡವಾಳಶಾಹಿತ್ವ ಒಂದು ಸಾಮಾಜಿಕ ವ್ಯವಸ್ಥೆ ಕೂಡ ಆಗಿರುವುದರಿಂದ, ಜಾತಿ ವ್ಯವಸ್ಥೆಯ ಸ್ಥಾನವನ್ನು ಆಕ್ರಮಿಸುವ ಕ್ಷಮತೆಯನ್ನು ಹೊಂದಿದೆ.

ಜಾತಿಯನ್ನು ಛಿದ್ರಗೊಳಿಸುವ ತಾಕತ್ತು ಬಂಡವಾಳಶಾಹಿ ವ್ಯವಸ್ಥೆಗಿರುವುದರಿಂದ, ಆಧುನಿಕತೆ ಹಾಗೂ ಬಂಡವಾಳಶಾಹಿ ವ್ಯವಸ್ಥೆಯ ಎಲ್ಲ ಪ್ರತೀಕಗಳು ಭಾರತದಲ್ಲಿ ಆಕ್ರಮಣಕ್ಕೊಳಗಾಗುತ್ತಿವೆ. ಆದರೆ ಇದಕ್ಕೆ ಒಂದು ಸಕಾರಾತ್ಮಕ ಆಯಾಮ ಕೂಡ ಇದೆ. ಅದೇನೆಂದರೆ, ಇದೇ ಕಾಲಘಟ್ಟದಲ್ಲಿ ಜಾತಿವಿರೋಧಿ ಸಂಘಟನೆಗಳು ಕೂಡ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿವೆ. ಇದರಿಂದಾಗಿಯೇ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಘರ್ಷಣೆಗಳು ನಡೆಯುತ್ತಲಿರುತ್ತದೆ. ಆದರೆ, ಈ ಹಿಂದೆ ಜಾತಿ ವ್ಯವಸ್ಥೆಯ ಕುದುರೆ ಯಾವುದೇ ಲಂಗು ಲಗಾಮಿಲ್ಲದೆ ಓಡುತ್ತಿದ್ದ ಸಂದರ್ಭದಲ್ಲಿ ಅದನ್ನು ಪ್ರಬಲವಾಗಿ ವಿರೋಧಿಸಿದ ಕಾರಣಕ್ಕಾಗಿ ಲಾರ್ಡ್ ಮೆಕಾಲೆಯನ್ನು ರಾಕ್ಷಸನಂತೆ ಚಿತ್ರಿಸಿ, ಮೂಲೆಗುಂಪು ಮಾಡಿರುವುದನ್ನು ಕೂಡ ನಾವಿಲ್ಲಿ ಗಮನಿಸಬಹುದು.

'ಸರ್ ರಾಬರ್ಟ್ ಕ್ಲೈವ್ ಅಥವಾ ಲಾರ್ಡ್ ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ ಇವರ ಚಿತ್ರಪಟಗಳಲ್ಲಿ ನೀವು ಯಾರಿಗೆ ಗುಂಡಿಟ್ಟು ಹೊಡೆಯಲು ಬಯಸುತ್ತೀರಾ' ಎಂಬ ಪ್ರಶ್ನೆಯನ್ನು ನೀವು ಮುಖ್ಯವಾಹಿನಿಯ ಯಾವುದೇ ಭಾರತೀಯನಿಗೆ ಕೇಳಿದರೆ, ಥಟ್ಟನೆ ಮೆಕಾಲೆ ಎಂಬ ಉತ್ತರ ಬರುವ ಸಾಧ್ಯತೆಯೇ ಹೆಚ್ಚು.

ಸರ್ ರಾಬರ್ಟ್ ಕ್ಲೈವ್‌ಗಿಂತ ಹೆಚ್ಚಾಗಿ ಲಾರ್ಡ್ ಮೆಕಾಲೆಯನ್ನು ಭಾರತೀಯರು ದ್ವೇಷಿಸಲು ಕಾರಣವೇನು? ರಾಬರ್ಟ್ ಕ್ಲೈವ್ ಭಾರತವನ್ನು ಬ್ರಿಟನ್ನಿಗೆ ಗೆದ್ದುಕೊಟ್ಟು, ದೇಶವನ್ನು ವಸಾಹತೀಕರಣಗೊಳಿಸಿದ ದೇಶ ವಿರೋಧಿ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಲಾರ್ಡ್ ಮೆಕಾಲೆ ಓರ್ವ ಭಾರತೀಯ ರಾಷ್ಟ್ರೀಯವಾದಿಯಾಗಿದ್ದವನು. ಭಾರತದ ಇತಿಹಾಸದ ಬಗ್ಗೆ ಪ್ರಪಂಚದ ವಿದ್ವಾಂಸರು ಬರೆದ ವಿವರಗಳನ್ನು ಪರಾಮರ್ಶಿಸಿ ನೋಡಿ. ಭಾರತದ 'ಸ್ವಾತಂತ್ರ್ಯ'ದ ಬಗ್ಗೆ ಮೊದಲಿಗೆ ಮಾತನಾಡಿದವರು ಯಾರು ಎಂಬುದನ್ನು ಹುಡುಕುವ ಪ್ರಯತ್ನ ಮಾಡಿ.

ನಮ್ಮ ದುರಾಡಳಿತದಡಿ ಇರುವುದಕ್ಕಿಂತ ಭಾರತೀಯರು ಸ್ವತಂತ್ರವಾಗಿ ಆಡಳಿತ ನಡೆಸುವುದು ನಮಗೇ ಒಳಿತು. ಇಂಗ್ಲಿಷರ ಉತ್ಪನ್ನಗಳನ್ನು ಖರೀದಿಸಲಾಗದ ಬಡ ಭಾರತೀಯರು, ಇಂಗ್ಲಿಷ್ ಕಲೆಕ್ಟರ್‌ಗಳು, ಮ್ಯಾಜಿಸ್ಟ್ರೇಟರುಗಳಿಗೆ ಸಲಾಂ ಹೊಡೆಯುವ ಬದಲು ತಮ್ಮ ಮಹಾರಾಜರುಗಳ ಆಡಳಿತಕ್ಕೊಳಪಡುವುದೇ ಸರಿ. ಯಾಕೆಂದರೆ, ಅನಾಗರಿಕರನ್ನು ಆಳುವುದಕ್ಕಿಂತ, ನಾಗರಿಕರೊಂದಿಗೆ ವ್ಯವಹಾರ ನಡೆಸುವುದು ಹೆಚ್ಚು ಲಾಭದಾಯಕ.



(ಬ್ರಿಟನ್ನಿನ ಸದನದಲ್ಲಿ ೧೮೩೩ರ ಜುಲೈ ೧೦ ರಂದು ಲಾರ್ಡ್ ಮೆಕಾಲೆ ಭಾರತ ಸರ್ಕಾರವನ್ನು ಕುರಿತು ಮಾಡಿದ ಭಾಷಣದಲ್ಲಿನ ಯಥಾವತ್ ತುಣುಕು ಇದು.)

ಬ್ರಿಟಿಷ್ ಆಡಳಿತಾವಧಿಯಲ್ಲಿ ಭಾರತೀಯರು ಸರ್ಕಾರಿ ಕಾರ್ಯಭಾರ ವಹಿಸಿಕೊಳ್ಳುವ ಅರ್ಹತೆ ಹೊಂದಿದ್ದಾರೆ ಎಂದು ಮೊದಲಿಗೆ ಗುರುತಿಸಿದವರು ಯಾರು?

ಉನ್ನತವಾದ ನಾಗರಿಕ ಹಾಗೂ ಮಿಲಿಟರಿ ಅಧಿಕಾರವನ್ನು ವಹಿಸಿಕೊಳ್ಳಲು ಭಾರತೀಯರಿಗೆ ಸಾಧ್ಯವೇ ಇಲ್ಲ ಎಂದು ಹೇಳಲಾಗುತ್ತಿದೆ. ಇದೇ ಕಾರಣದಿಂದ ನಾವು ಅಧಿಕಾರದ ಚುಕ್ಕಾಣಿ ಹಿಡಿದಿದ್ದೇವೆ ಎಂದು ಕೂಡ ನಂಬಿಸಲಾಗುತ್ತಿದೆ. ನಮ್ಮ ಅಧಿಕಾರಕ್ಕೊಳಪಟ್ಟ ಭಾರತೀಯ ಜನತೆಗೆ ಎಲ್ಲ ಸೌಕರ್ಯಗಳನ್ನು ಒದಗಿಸುವ ಬಾಧ್ಯತೆ ನಮಗಿದೆಯೆಂದಾದರೆ, ನಮ್ಮ ಪ್ರಾಬಲ್ಯಕ್ಕೆ ತೊಂದರೆಯಾಗದ ಹಾಗೆ ಅವರಿಗೆ ಈ ಸೌಕರ್ಯ ಕೊಡಬೇಕೆನ್ನುವುದು ನೈತಿಕವಾದ ನೀತಿಯಂತೂ ಖಂಡಿತ ಅಲ್ಲ.

(ಅದೇ ಭಾಷಣದಿಂದ ಆಯ್ದ ಭಾಗ)

ಭಾರತ ಲಾರ್ಡ್ ಮೆಕಾಲೆಗೆ ಮರಣೋತ್ತರವಾಗಿಯಾದರೂ ಗೌರವಾನ್ವಿತ ಪೌರತ್ವ ನೀಡಬೇಕಾಗಿತ್ತು. ಆದರೆ, ನಾವು ಲಾರ್ಡ್ ಮೆಕಾಲೆಯ 'ಮೈನೂಟ್ಸ್ ಆನ್ ಎಜುಕೇಷನ್' ಕೃತಿಯನ್ನು ಹೆಸರಿಸಿ, 'ಚಿಂತನೆಯ ವಸಾಹತುಕಾರ' ಎಂದು ದೂಷಿಸುತ್ತೇವೆ. "... ಗುಮಾಸ್ತರನ್ನು ಸೃಷ್ಟಿಸುವ ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯನ್ನು ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ ಸ್ಥಾಪಿಸಿದ." ಎಂದು ಪ್ರಫುಲ್ ಬಿದ್ವಾಯಿ ೨೦೦೬ ಡಿಸೆಂಬರ್‌ನಲ್ಲಿ, 'ಖಲೀಜ್ ಟೈಮ್ಸ್' ಪತ್ರಿಕೆಯ ಅಂಕಣವೊಂದರಲ್ಲಿ ಬರೆದಿದ್ದಾರೆ.

ಭಾರತೀಯ ಶಾಲೆಗಳಲ್ಲಿ ಮಕ್ಕಳು ಏನು ಕಲಿಯುತ್ತಾರೆ ನೋಡೋಣ;

"ನಾವು ಆಡಳಿತ ನಡೆಸುತ್ತಿರುವ ದೇಶದ ಲಕ್ಷಾಂತರ ಜನರ ಹಾಗೂ ನಮ್ಮ ನಡುವೆ ಸಂಬಂಧ ಕಲ್ಪಿಸುವ ವಿಶ್ಲೇಷಕ ವರ್ಗವನ್ನು ನಾವು ಈಗ ರಚಿಸಬೇಕಿದೆ; ಈ ವರ್ಗದ ಭಾರತೀಯರ ಅಭಿರುಚಿ, ಅಭಿಪ್ರಾಯ, ಮೌಲ್ಯಗಳು ಹಾಗೂ ಬುದ್ಧಿಮತ್ತೆ ಇಂಗ್ಲಿಷ್‌ಮಯವಾಗಿರಬೇಕು." ಮೆಕಾಲೆಯ ಈ ಮೇಲಿನ ಆಯ್ದ ಮಾತುಗಳನ್ನು ಇಲ್ಲಿ ಖ್ಯಾತ ಇತಿಹಾಸ ತಜ್ಞರಾದ ಬಿಪಿನ್ ಚಂದ್ರ ಎನ್‌ಸಿಆರ್‌ಟಿ ಈ ಇತಿಹಾಸ ಪಠ್ಯಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಭಾರತದ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಏನು ಕಲಿಸಲಾಗುತ್ತಿದೆ ನೋಡಿ; "ಇಂಗ್ಲಿಷ್ ಶಿಕ್ಷಿತ ಭಾರತೀಯ ಬೌದ್ಧಿಕವಲಯ– ಕಂದು ಬಣ್ಣದವರಿಂದ ಕೂಡಿದ್ದು, ಅವರ ಚಿಂತನೆ ಮತ್ತು ಅಭಿರುಚಿ ಇಂಗ್ಲಿಷಿನವರಂತಿರಬೇಕು." ಎಂದು ಮೆಕಾಲೆ 'ಮಾಡರ್ನ್ ಇಂಡಿಯಾ' ಪುಸ್ತಕದಲ್ಲಿ ಬರೆದಿರುವುದನ್ನು ಪ್ರೊ. ಸುಮಿತ್ ಸರ್ಕಾರ್ ಉಲ್ಲೇಖಿಸುತ್ತಾರೆ.

ಭಾರತದ ಬಹುತೇಕ ಎಲ್ಲ ಇತಿಹಾಸ ಪಠ್ಯ ಪುಸ್ತಕಗಳು, ಭಾರತೀಯರನ್ನು, ಬ್ರಿಟಿಷ್ ಅಧಿಪತ್ಯಕ್ಕೆ ಸೇವೆ ಸಲ್ಲಿಸುವ ಬೌದ್ಧಿಕ ಜೀತದಾಳುಗಳನ್ನಾಗಿ ಪರಿವರ್ತಿಸಲು ಮೆಕಾಲೆ ಯತ್ನಿಸಿದ ಎಂದು ಚಿತ್ರಿಸಿವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇಂಗ್ಲಿಷ್ ಮಾತನಾಡುವ ಭಾರತೀಯರನ್ನು 'ಮೆಕಾಲೆಯ ಮಕ್ಕಳು' ಎಂದು ಜರಿದಿದೆ.

ನಿಜವಾಗಿಯೂ ಮೆಕಾಲೆ ಭಾರತೀಯರು ದೂಷಿಸುವಂತಹ ಶಿಕ್ಷಣ ವ್ಯವಸ್ಥೆ ಸೃಷ್ಟಿಸುವ ಗುರಿ ಹೊಂದಿದ್ದನೇ? 'ಮೈನೂಟ್ಸ್ ಆನ್ ಎಜುಕೇಷನ್' ಕೃತಿಯಲ್ಲಿ ಮೆಕಾಲೆ ಈ ರೀತಿ ಹೇಳುತ್ತಾನೆ.

ನಮ್ಮ ಸೀಮಿತವಾದ ಸಂಪನ್ಮೂಲಗಳನ್ನು ಬಳಸಿಕೊಂಡು, ಭಾರತೀಯರಿಗೆ ಶಿಕ್ಷಣ ನೀಡಲು ಯತ್ನಿಸುವುದು ಅಸಾಧ್ಯವಾದ ಕೆಲಸ ಎಂಬ ವಾದವನ್ನು ನಾನು ಒಪ್ಪುತ್ತೇನೆ. ಆದ್ದರಿಂದ ನಾವು ಕನಿಷ್ಠ, ದೇಶದ ಲಕ್ಷಾಂತರ ಜನರ ಹಾಗೂ ನಮ್ಮ ನಡುವೆ ಸಂಬಂಧ ಕಲ್ಪಿಸುವ ವಿಶ್ಲೇಷಕ ವರ್ಗವನ್ನು ಈಗ ರಚಿಸಬೇಕಿದೆ; ಈ ವರ್ಗದ ಭಾರತೀಯರ ಅಭಿರುಚಿ, ಅಭಿಪ್ರಾಯ, ಮೌಲ್ಯಗಳು ಹಾಗೂ ಬುದ್ಧಿಮತ್ತೆ ಇಂಗ್ಲಿಷ್‌ಮಯವಾಗಿರಬೇಕು. ಜ್ಞಾನವನ್ನು ದೇಶದ ಜನರಿಗೆ ತಲುಪಿಸುವ ನಿಟ್ಟಿನಲ್ಲಿ, ಈ ವರ್ಗ ಪಾಶ್ಚಿಮಾತ್ಯ ಜ್ಞಾನಶಾಖೆಗಳಿಂದ ಪರಿಕಲ್ಪನೆಗಳನ್ನು ಪಡೆದುಕೊಂಡು, ತಮ್ಮ ಪ್ರಾದೇಶಿಕ ಭಾಷೆಗಳ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬೇಕಿದೆ.

ನಿಜವಾಗಿಯೂ ಮೆಕಾಲೆ ಭಾರತೀಯರು ದೂಷಿಸುವಂತಹ ಶಿಕ್ಷಣ ವ್ಯವಸ್ಥೆ ಸೃಷ್ಟಿಸುವ ಗುರಿ ಹೊಂದಿದ್ದನೇ? 'ಮೈನೂಟ್ಸ್ ಆನ್ ಎಜುಕೇಷನ್' ಕೃತಿಯಲ್ಲಿ ಮೆಕಾಲೆ ಈ ರೀತಿ ಹೇಳುತ್ತಾನೆ. ನಮ್ಮ ಸೀಮಿತವಾದ ಸಂಪನ್ಮೂಲಗಳನ್ನು ಬಳಸಿಕೊಂಡು, ಭಾರತೀಯರಿಗೆ ಶಿಕ್ಷಣ ನೀಡಲು ಯತ್ನಿಸುವುದು ಅಸಾಧ್ಯವಾದ ಕೆಲಸ ಎಂಬ ವಾದವನ್ನು ನಾನು ಒಪ್ಪುತ್ತೇನೆ. ಆದ್ದರಿಂದ ನಾವು ಕನಿಷ್ಠ, ದೇಶದ ಲಕ್ಷಾಂತರ ಜನರ ಹಾಗೂ ನಮ್ಮ ನಡುವೆ ಸಂಬಂಧ ಕಲ್ಪಿಸುವ ವಿಶ್ಲೇಷಕ ವರ್ಗವನ್ನು ಈಗ ರಚಿಸಬೇಕಿದೆ; ಈ ವರ್ಗದ ಭಾರತೀಯರ ಅಭಿರುಚಿ, ಅಭಿಪ್ರಾಯ, ಮೌಲ್ಯಗಳು ಹಾಗೂ ಬುದ್ಧಿಮತ್ತೆ ಇಂಗ್ಲಿಷ್‌ಮಯವಾಗಿರಬೇಕು. ಜ್ಞಾನವನ್ನು ದೇಶದ ಜನರಿಗೆ ತಲುಪಿಸುವ ನಿಟ್ಟಿನಲ್ಲಿ, ಈ ವರ್ಗ ಪಾಶ್ಚಿಮಾತ್ಯ ಜ್ಞಾನಶಾಖೆಗಳಿಂದ ಪರಿಕಲ್ಪನೆಗಳನ್ನು ಪಡೆದುಕೊಂಡು, ತಮ್ಮ ಪ್ರಾದೇಶಿಕ ಭಾಷೆಗಳ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬೇಕಿದೆ.

ಲಾರ್ಡ್ ಮೆಕಾಲೆ ಅವರ ಅಭಿಪ್ರಾಯವನ್ನು ಉಲ್ಲೇಖಿಸುವಾಗ, ಮೊದಲ ಹಾಗೂ ಕೊನೆಯ ಸಾಲನ್ನು ಯಾಕೆ ಕೈಬಿಡಲಾಗಿದೆ ಎಂದು ನಾವು ಪ್ರಶ್ನಿಸಬಾರದೇ? ತಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಧುನಿಕರಣಗೊಳಿಸುವ ನಿಟ್ಟಿನಲ್ಲಿ ಭೌತಿಕ ಸೌಕರ್ಯವಾಗಲೀ, ಇಚ್ಛಾಶಕ್ತಿಯಾಗಲೀ ಭಾರತೀಯರಿಗಿಲ್ಲ ಎಂಬ ವಿಷಯವನ್ನು ಕುರಿತು ಮೆಕಾಲೆ ಮಾತನಾಡಿದ್ದಾನೆ ಎಂಬ ಕಾರಣಕ್ಕಾಗಿ ಪ್ರಶ್ನಿಸಬಾರದೇ?

'ಯುರೋಪಿನ ಉತ್ತಮ ಗ್ರಂಥಾಲಯವೊಂದರ ಒಂದು ಕಪಾಟು, ಭಾರತ ಮತ್ತು ಅರಬ್ಬ್‌ನ ಎಲ್ಲ ಒಟ್ಟಾರೆ ಸಾಹಿತ್ಯಕ್ಕೆ ಸಮ' ಎಂಬ ಮೆಕಾಲೆಯ ಮಾತನ್ನು ಆ ಸಂಗರ್ಭದಿಂದ ಹೊರತಾಗಿ ಉಲ್ಲೇಖಿಸಿ, 'ಮೆಕಾಲೆ ಭಾರತೀಯ ಜ್ಞಾನವನ್ನು ತುಚ್ಛವಾಗಿ ಕಾಣುತ್ತಿದ್ದ' ಎಂದು ಹೇಳುತ್ತಾರೆ.

ಸಂದರ್ಭವನ್ನು ಬಿಟ್ಟು, ಈ ಮೇಲಿನ ಮಾತನ್ನು ಉಲ್ಲೇಖಿಸಿದರೆ, ಮೆಕಾಲೆ ವರ್ಣ ತಾರತಮ್ಯ ಮಾಡುತ್ತಾನೆ ಎಂದು ಹೇಳಬಹುದು. ಆದರೆ, 'ಮೈನೂಟ್ಸ್ ಆನ್ ಎಜುಕೇಷನ್' ಕೃತಿಯಲ್ಲಿ ಮೆಕಾಲೆ ಏನು ಹೇಳುತ್ತಾನೆ ನೋಡಿ;

'ಹದಿನೈದನೆಯ ಶತಮಾನದ ಅಂತ್ಯದ ಹೊತ್ತಿಗೆ ಹಾಗೂ ಹದಿನಾರನೆಯ ಶತಮಾನದ ಆರಂಭದ ಹೊತ್ತಿಗೆ ಪಶ್ಚಿಮದ ದೇಶಗಳಲ್ಲಾದ ಸಾಹಿತ್ಯದ ಪುನರುತ್ಥಾನದ ಬಗ್ಗೆ ನಾನಿಲ್ಲಿ ಮಾತನಾಡುತ್ತಿದ್ದೇನೆ. ಆ ಸಂದರ್ಭದಲ್ಲಿ ಗ್ರೀಕ್ ಮತ್ತು ರೋಮನ್ ಭಾಷೆಗಳಲ್ಲಿ ಪ್ರಪಂಚದ ಅತ್ಯುತ್ತಮ ಸಾಹಿತ್ಯ ಲಭ್ಯವಿತ್ತು. ಇಂದಿನ ಸಾರ್ವಜನಿಕ ಶಿಕ್ಷಣ ಸಮಿತಿಯಂತೆ ನಮ್ಮ ಪೂರ್ವಿಕರು ನಡೆದುಕೊಂಡಿದ್ದರೆ; ಸಿಸಿರೋ ಮತ್ತು ಟಾಸಿಟಸ್‌ನ ಭಾಷೆಗಳನ್ನು ಅವರು ಕಡೆಗಣಿಸಿದ್ದರೆ; ನಮ್ಮ ದೇಶದ ಹಳೆಯ ಭಾಷೆಗಳ ಕಡೆಗೆ ಮಾತ್ರ ಗಮನಹರಿಸಿದ್ದರೆ; ವಿಶ್ವವಿದ್ಯಾನಿಲಯಗಳಲ್ಲಿ ಏನನ್ನೂ ಕಲಿಸದೆ, ಯಾವ ಕೃತಿಗಳನ್ನೂ ಪ್ರಕಟಿಸದೆ, ಆಂಗ್ಲೋ–ಸಾಕ್ಸನ್, ಹಾಗೂ ನಾರ್ಮನ್–ಫ್ರೆಂಚ್ ಭಾಷೆಗಳನ್ನು ಮಾತ್ರ ಬಳಸುತ್ತಾ ಬಂದಿದ್ದರೆ, ಇಂಗ್ಲೆಂಡ್ ಈ ಮಟ್ಟಕ್ಕೆ ಬರಲು ಸಾಧ್ಯವಾಗುತ್ತಿತ್ತೆ? ಮೋರ್, ಅಷಮ್ ಅವರ ಸಮಕಾಲೀನರಿಗೆ ಗ್ರೀಕ್ ಮತ್ತು ಲಾಟಿನ್ ಯಾವ ರೀತಿ ಮುಖ್ಯವಾಯಿತೋ, ಅದೇ ರೀತಿ ಭಾರತದ ಜನರಿಗೆ ಇಂಗ್ಲಿಷ್ ಭಾಷೆ ಮುಖ್ಯ'

ತನ್ನ ದೇಶದ ಇತಿಹಾಸ, ಮತ್ತು ಭಾಷೆಯ ಬಗ್ಗೆ ಲಾರ್ಡ್ ಮೆಕಾಲೆ ಈ ರೀತಿಯ ಅಭಿಪ್ರಾಯ ಹೊಂದಿರುವುದಾದರೆ, ಆತ ಹೇಗೆ ಚಿಂತನೆಯ ವಸಾಹತುಕಾರನಾಗುತ್ತಾನೆ?!

ಭಾರತೀಯ ಶಿಕ್ಷಣ ಪದ್ಧತಿಯಿಂದ ಹಿಡಿದು ಜಾತಿ ಪದ್ಧತಿವರೆಗೆ, ಎಲ್ಲವನ್ನೂ ಬೆರಗಿನಿಂದ ಒಪ್ಪಿಕೊಳ್ಳುತ್ತಿದ್ದವರೊಂದಿಗೆ, ಕದನಕ್ಕಿಳಿದಿದ್ದ ಲಾರ್ಡ್ ಮೆಕಾಲೆ, ಭಾರತ ಶಾಶ್ವತವಾಗಿ ಇಂಗ್ಲೆಂಡ್ ದೇಶವನ್ನು ಅವಲಂಬಿಸುವುದನ್ನು ವಿರೋಧಿಸಿದವನು. ಭಾರತ, ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡು, ಆಧುನಿಕ ಮಾರ್ಗದಲ್ಲಿ ನಡೆಯಬೇಕೆಂದು ವಾದಿಸಿದವನು.

ಹಾಗಾದರೆ, ಲಾರ್ಡ್ ಮೆಕಾಲೆಯನ್ನು ನಾವು ಸರ್ ರಾಬರ್ಟ್ ಕ್ಲೈವ್‌ಗಿಂತ ಹೆಚ್ಚು ದ್ವೇಷಿಸಲು ಕಾರಣವೇನು? ಉತ್ತರಕ್ಕೆ ಲಾರ್ಡ್ ಮೆಕಾಲೆ ಬ್ರಿಟನ್ನಿನ ಸದನದಲ್ಲಿ ಮಾಡಿದ ಭಾಷಣವನ್ನು ಗಮನಿಸಿ.

"... ಭಾರತಕ್ಕೆ, ಕಠಿಣವಾದ ದಂಡ ಸಂಹಿತೆಗಿಂತ, ಮೆದುವಾದ ದಂಡ ಸಂಹಿತೆ ಸೂಕ್ತವೆಂದು ನನಗನಿಸದರೂ, ಸೃಷ್ಟಿಕರ್ತನ ಶಿರದಿಂದ ಹುಟ್ಟಿದವರೆಂದು ಹೇಳಲಾದ ಬ್ರಾಹ್ಮಣರಿಗೆ ಮೆದುವಾದ ದಂಡ ಸಂಹಿತೆ ಹಾಗೂ ಪಾದದಿಂದ ಹುಟ್ಟಿದವರೆಂದು ಹೇಳಲಾದ ಶೂದ್ರರಿಗೆ ಕಠಿಣ ದಂಡ ಸಂಹಿತೆ ಅನ್ವಯಿಸುವ ವ್ಯವಸ್ಥೆ, ಅತ್ಯಂತ ಕಳಪೆಯಾದುದು. ಜಾತಿವ್ಯವಸ್ಥೆ ಹಾಗೂ ಆಳವಾಗಿ ಬೇರೂರಿವ ಜಾತಿ ವ್ಯವಸ್ಥೆ ಸೃಷ್ಟಿಸಿರುವ ತಾರತಮ್ಯಗಳಿಂದ ಭಾರತ ಈಗಾಗಲೇ ಸಾಕಷ್ಟು ತೊಂದರೆ ಅನುಭವಿಸಿದೆ. ಹೀಗಿರುವಾಗ, ನಾವು ಭಾರತದ ಮೇಲೆ ಹೊಸ ರೀತಿಯ

(೩೧ನೇ ಪುಟಕ್ಕೆ)

'ನ್ಯಾನೋ' ಕಾರು: ಜನತೆಯ ಹೆಸರಲ್ಲಿ ಟಾಟಾ ತೇರು!

ಟಾಟಾ ಸಂಸ್ಥಾನ ಈ ಮಧ್ಯೆ ತಾನು ಉದ್ಯಮದಲ್ಲಿರುವ ಬೇರೆ ಬೇರೆ ಕ್ಷೇತ್ರಗಳಲ್ಲಿ ಹಲವಾರು ವಿಸ್ತರಣಾ ಯೋಜನೆಗಳನ್ನು ಹಾಕಿಕೊಂಡಿದೆ. ಅವೆಲ್ಲದರ ಹಿಂದೆ ಇದ್ದದ್ದು ಕಡಿಮೆ ವೆಚ್ಚದಲ್ಲಿ ಅತ್ಯಧಿಕ ಲಾಭ ಪಡೆಯುವ ಆಸಕ್ತಿಗಳೆ ವಿನಃ ಭಾರತದ ಜನತೆಯ ಹಿತಾಸಕ್ತಿಗಳಲ್ಲ. ಉದಾಹರಣೆಗೆ ಎರಡು ವರ್ಷದ ಕೆಳಗೆ ಇದೇ ರತನ್ ಟಾಟಾರವರು ತಮ್ಮ ಸ್ಟೀಲ್ ಉದ್ಯಮದ ವಿಸ್ತರಣೆಯ ಭಾಗವಾಗಿ ಒರಿಸ್ಸಾದ ಕಳಿಂಗನಗರದಲ್ಲಿ ಆದಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಅತ್ಯಂತ ಅಗ್ಗದ ದರದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕಳೆದ ವರ್ಷ ಪ್ರಾರಂಭವಾದದ್ದೇ ಈ ಯೋಜನೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಕಳಿಂಗನಗರದ ಆದಿವಾಸಿಗಳ ಮಾರಣ ಹೋಮದಿಂದ. ದೇಶಕ್ಕೆ ಜನತೆಯ ಕಾರನ್ನು ನೀಡಿದ ಜನಾನುರಾಗಿ ಟಾಟಾಗೆ ಕಳಿಂಗನಗರದ ಆದಿ ವಾಸಿಗಳು ಭಾರತದ ಜನತೆ ಎಂದೆನಿಸಲೇ ಇಲ್ಲವೇಕೆ?

ಶಿವಸುಂದರ್

ನ್ಯಾನೋ ಎಂಬ ಕಾರಿರಲಿ ಅದರ ಕನಸೇ ಭರ್ಜರಿ ಮಾರಾಟವಾಗುತ್ತಿದೆ! ಟಾಟಾ ಇದನ್ನು ಪೀಪಲ್ಸ್ ಕಾರ್-ಜನತೆಯ ಕಾರು ಎಂದು ಕರೆದಿದ್ದಾರೆ. ಈ ಜನತೆ ಯಾರು? ಅದರ ಬಗ್ಗೆ ನ್ಯಾನೋ ಕಾರಿನ ಅನಾವರಣದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಟಾಟಾ ಸ್ಪಷ್ಟ ಪಡಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಅವರು ಒಮ್ಮೆ ನಗರ ಒಂದರಲ್ಲಿ ಚೇತಕ್ ಸ್ಕೂಟರ್ ಮೇಲೆ ಸವಾರಿ ಮಾಡುತ್ತಿದ್ದ ಒಂದು ಸಂಸಾರವನ್ನು ನೋಡಿದರಂತೆ. ಮುಂದೆ ಒಂದು ಮಗು ಹ್ಯಾಂಡಲ್ ಹಿಡಿದುಕೊಂಡು ನಿಂತಿದ್ದರೆ ಗಂಡ, ಅವನ ಹಿಂದೆ ಹೆಂಡತಿ ಮತ್ತು ಆಕೆಯ ತೊಡೆಯ ಮೇಲೊಂದು ಮಗು. ಹೀಗೆ ಆ ನಾಲಕ್ಕು ಜನರ ಸಂಸಾರ ಕಷ್ಟದ ಮತ್ತು ಅಪಾಯಕಾರಿ ಪ್ರಯಾಣ ಮಾಡುತ್ತಿರುವುದನ್ನು ನೋಡಿದ ಕೂಡಲೇ ಅವರಿಗೆ ಈ ಮಧ್ಯಮ ವರ್ಗಕ್ಕೆ ತಲುಪಬಹುದಾದ ನಾಲಕ್ಕು ಜನರ ಪುಟ್ಟ ಕಾರೊಂದನ್ನು ಉತ್ಪಾದಿಸಬೇಕು ಎಂದು ಅನಿಸಿತಂತೆ. ಸಂತೋಷ!

ಆದರೆ ಈ ಮಧ್ಯಮ ವರ್ಗದ ಕುಟುಂಬ ಕಳೆದ ನಾಲಕ್ಕು ದಶಕಗಳಿಂದಲೂ ರತನ್ ಟಾಟಾರ ಮನೆ ಮತ್ತು ಫ್ಯಾಕ್ಟರಿಯ ಮುಂದೆಯೇ ಓಡಾಡುತ್ತಿದ್ದರೂ ಮೂರು ವರ್ಷದ ಕೆಳಗೆ ಮಾತ್ರ ಕಾಣಿಸಿದ್ದು ಏಕೆ? ಹತ್ತು ವರ್ಷದ ಕೆಳಗೆ ಮೊಟ್ಟ ಮೊದಲ ಭಾರತೀಯ ಕಾರೆಂಬ ಹೆಗ್ಗಳಿಕೆಯ 'ಟಾಟಾ ಇಂಡಿಕಾ'ವನ್ನು ಉತ್ಪಾದಿಸುವಾಗಲೂ ಈ ಸ್ಕೂಟರ್ ಓಡಿಸುವ ಮಧ್ಯಮ ವರ್ಗ ಏಕೆ ಕಣ್ಣಿಗೆ ಕಾಣಲಿಲ್ಲ. ಈಗಲೂ ನ್ಯಾನೋ ಕಾರನ್ನು ಜನತೆಯ ಕಾರು ಎಂದು ಕರೆಯುತ್ತಿರುವಾಗ ಭಾರತದ ೧೦೬ ಕೋಟಿ ಜನತೆಯಲ್ಲಿ ಇದ್ದ ಸ್ಕೂಟರ್ ಅನ್ನು ಮಾರಿಕೊಂಡು ಸೈಕಲ್‌ಗೆ ಅಥವಾ ಕಾಲ್ನಡಿಗೆಗೆ ಮರಳುತ್ತಿರುವ ನಗರದ ಮಧ್ಯಮ ವರ್ಗವಾಗಲೀ ಅಥವಾ ಗ್ರಾಮೀಣ ಭಾರತಕ್ಕೆ ನ್ಯಾನೋ ಕಾರು ಎಂದಾಗ ಅಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಮಧ್ಯಮ ವರ್ಗದ ರೈತಾಪಿ ಜನತೆಯಾಗಲೀ ಕಾಣದೆ ಸ್ಕೂಟರ್‌ನಲ್ಲಿ ಅಪಾಯಕಾರಿ ಪ್ರಯಾಣ ಮಾಡುತ್ತಿರುವ ನಾಲಕ್ಕು ಜನರ ಕುಟುಂಬ ಅಥವಾ ಜಾಗತೀಕರಣ ಹುಟ್ಟಿಹಾಕಿರುವ ನವ ಮಧ್ಯಮ ವರ್ಗ ಮಾತ್ರ ಟಾಟಾ ಕಣ್ಣಿಗೆ ಕಾಣುತ್ತಿರುವುದಕ್ಕೆ ಏನು ಕಾರಣವಿರಬಹುದು? ಇರಲಿ ಬಿಡಿ. ನಮ್ಮದು ಅರ್ಜುನ ಸಂಸ್ಕೃತಿ. ಬೇಟೆಗಾರ ಯಾವ ಮಿಕವನ್ನು ಗುರಿಯಿಟ್ಟು ಹೊಡೆಯಬೇಕೆಂದುಕೊಳ್ಳುತ್ತಾನೋ ಆ ಗುರಿಯನ್ನು ಹೊರತುಪಡಿಸಿ· ಬೇರಾವುದೂ ಆತನ ಲಕ್ಷ್ಯದಲ್ಲಿ ಇರಬಾರದು. ಮಾರುಕಟ್ಟೆ ಬೇಟೆಯಲ್ಲೂ ಅಷ್ಟೆ!

ಆದರೆ ಮಾಧ್ಯಮಗಳು ಮತ್ತು ಟಾಟಾ ಮಾರಿದ ಕನಸನ್ನು ಕಿರಾಯಿಗೆ ಕೊಂಡಿರುವ ನವ ಶ್ರೀಮಂತ ವರ್ಗ ಮತ್ತು ಮಾಧ್ಯಮಗಳು ಇದನ್ನು ಟಾಟಾ ಸಾಮ್ರಾಜ್ಯದ ಕಾರು ಮಾರುಕಟ್ಟೆಯ ವಿಸ್ತರಣೆಯ ಮತ್ತೊಂದು ಯೋಜನೆಯಾಗಿ ಮಾತ್ರ ಪರಿಗಣಿಸುತ್ತಿಲ್ಲ. ಅವರ ಪ್ರಕಾರ ಇದೊಂದು ಕ್ರಾಂತಿ. ಮಾಧ್ಯಮಗಳ ಪ್ರಕಾರ ಇದು ಭಾರತದ ಜನತೆಯ ಬಗ್ಗೆ ಟಾಟಾ ಸಂಸ್ಥಾನಕ್ಕಿರುವ ಕಾಳಜಿಯ ಪ್ರತೀಕ. ಇನ್ನೂ ಕೆಲವರ ಪ್ರಕಾರ ಇದು ಟಾಟಾನ ಸಾಮಾಜಿಕ ಜವಾಬ್ದಾರಿಯ ದ್ಯೋತಕ. ಸ್ಕೂಟರ್ ಸವಾರಿಯನ್ನು ಹಳಿಯುತ್ತಾ ಜಾಗತೀಕರಣ ಸೃಷ್ಟಿಸಿದ ಸೀಮಿತ ಅವಕಾಶಗಳನ್ನು ಪಡೆದುಕೊಂಡು ಮೇಲ್ಮುಖಿ ಚಲನೆಯಲ್ಲಿರುವ ಮಧ್ಯಮ ವರ್ಗಕ್ಕಂತೂ ರತನ್ ಟಾಟಾ ಈಗ.ಭಾರತ ರತ್ನ!



ಟಾಟಾ ಸಂಸ್ಥಾನ ಈ ಮಧ್ಯೆ ತಾನು ಉದ್ಯಮದಲ್ಲಿರುವ ಬೇರೆ ಬೇರೆ ಕ್ಷೇತ್ರಗಳಲ್ಲಿ ಹಲವಾರು ವಿಸ್ತರಣಾ ಯೋಜನೆಗಳನ್ನು ಹಾಕಿಕೊಂಡಿದೆ. ಅವೆಲ್ಲದರ ಹಿಂದೆ ಇದ್ದದ್ದು ಕಡಿಮೆ ವೆಚ್ಚದಲ್ಲಿ ಅತ್ಯಧಿಕ, ಲಾಭ ಪಡೆಯುವ ಆಸಕ್ತಿಗಳೆ ವಿನಃ ಭಾರತದ ಜನತೆಯ ಹಿತಾಸಕ್ತಿಗಳಿಲ್ಲ. ಉದಾಹರಣೆಗೆ ಎರಡು ವರ್ಷದ ಕೆಳಗೆ ಇದೇ ರತನ್ ಟಾಟಾರವರು ತಮ್ಮ ಸ್ಟೀಲ್ ಉದ್ಯಮದ ವಿಸ್ತರಣೆಯ ಭಾಗವಾಗಿ ಒರಿಸ್ಸಾದ ಕಳಿಂಗನಗರದಲ್ಲಿ ಆದಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಅತ್ಯಂತ ಅಗ್ಗದ ದರದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ಕಳೆದ ವರ್ಷ ಪ್ರಾರಂಭವಾದದ್ದೇ ಈ ಯೋಜನೆಯ ವಿರುದ್ಧ ಪ್ರತಿಭಟಿಸುತ್ತಿದ್ದ ಕಳಿಂಗನಗರದ ಆದಿವಾಸಿಗಳ ಮಾರಣಹೋಮದಿಂದ. ಭಾರತದ ಜನತೆಗೆ ಜನತೆಯ ಕಾರನ್ನು ನೀಡಿದ ಜನಾನುರಾಗಿ ಟಾಟಾಗೆ ಕಳಿಂಗನಗರದ ಆದಿವಾಸಿಗಳು ಭಾರತದ ಜನತೆ ಎಂದೆನಿಸಲೇ ಇಲ್ಲವೇಕೆ?

ಅಷ್ಟು ಮಾತ್ರವಲ್ಲ. ಇಡೀ ವಿಶ್ವವೇ ಕಂಡರಿಯದ ಕೈಗಾರಿಕಾ ದುರಂತಕ್ಕೆ ಕಾರಣರಾದ ಭೂಪಾಲಿನ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಈಗ ಅದರಷ್ಟೇ ಮಾರಕ ಮತ್ತು ಲಾಭಕೋರ ಕಂಪನಿಯಾದ ಡೌ ಎಂಬ ಅಮೆರಿಕದ ಕಂಪನಿ ಕೊಂಡುಕೊಂಡಿದೆ. ಈ ಕಂಪನಿ ಎರಡನೇ ಮಹಾಯುದ್ಧದಲ್ಲಿ ಜರ್ಮನಿಗೆ ಮಾರಕ ಅಸ್ತ್ರಗಳನ್ನು ಸರಬರಾಜು ಮಾಡಿದ ಮತ್ತು ಇರಾಕ್‌ನ ಸದ್ದಾಂ ಹುಸೇನ್ ಅಮೆರಿಕದ ಸ್ನೇಹಿತನಾಗಿದ್ದಾಗ ರಾಸಾಯನಿಕ ಅಸ್ತ್ರಗಳನ್ನು ಸರಬರಾಜು ಮಾಡಿದ ಕುಖ್ಯಾತ ಕಂಪನಿ. ಅದೀಗ ಭಾರತವನ್ನು ಕೇಂದ್ರವಾಗಿಟ್ಟುಕೊಂಡು ಇಡೀ ದಕ್ಷಿಣ ಏಷಿಯಾದಲ್ಲಿ ಮಾರುಕಟ್ಟೆಯನ್ನು ಕಬಳಿಸುವ ಆಕ್ರಮಣಕಾರಿ ಮಾರ್ಕೆಟಿಂಗ್ ಯೋಜನೆಯನ್ನು ಹಾಕಿಕೊಂಡಿದೆ. ಆ ಉದ್ದೇಶದಿಂದಲೇ ಅದು ಭಾರತದ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಕೊಂಡುಕೊಂಡಿದೆ. ಆದರೆ ಈ ನೆಲದ ಕಾನೂನಿನ ಪ್ರಕಾರ ಡೌ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಕೊಂಡ ಮೇಲೆ ಅದರ ಜವಾಬ್ದಾರಿಯನ್ನೆಲಾ ಹೊರಬೇಕಷ್ಟೆ.

ಭೂಪಾಲಿನಲ್ಲಿರುವ ಆ ಕಾರ್ಖಾನೆಯನ್ನು ಲೀಕ್ ಆದ

ಮೀಥೈಲ್ ಐಸೊ ಸಿಯನೇಟ್ ರಾಸಾಯನಿಕದಿಂದ ಮುಕ್ತಗೊಳಿಸುವ ಜವಾಬ್ದಾರಿಯೂ ಅದಕ್ಕಿತ್ತು. ಈ ಕೆಲಸ ಇನ್ನೂ ಆಗದೇ ಇರುವುದರಿಂದ ಭೂಪಾಲಿನ ಲಕ್ಷಾಂತರ ಜನ ಹಲವಾರು ಕಾಯಿಲೆಗಳನ್ನು ಅನುಭವಿಸುತ್ತಿದ್ದಾರೆ. ಮತ್ತು ಅದು ಪೂರ್ಣವಾಗದೆ ಡೌ ಕಂಪನಿ ಭಾರತದಲ್ಲಿ ತನ್ನ ವಿಸ್ತರಣೆ ಮಾಡುವಂತಿಲ್ಲ. ಆದರೆ ನಮ್ಮ ಟಾಟಾ ಮಹಾಶಯರು ಡೌ ಕಂಪನಿಯ ಜೊತೆ ತಮ್ಮ ರಾಸಾಯನಿಕ ಸರಕುಗಳ ಸಾಮ್ರಾಜ್ಯ ವಿಸ್ತರಣೆ ಮಾಡುವ ರಹಸ್ಯ ಯೋಜನೆ ಹೊಂದಿದ್ದರಿಂದ ಡೌ ಕಂಪನಿಯನ್ನು ಆ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕೆಂದು ಇನ್ನಿಲ್ಲದ ಪ್ರಯತ್ನಗಳನ್ನು ಸತತವಾಗಿ ಮಾಡುತ್ತಿದ್ದಾರೆ. ಭೂಪಾಲ್ ದುರಂತದಿಂದ ಪ್ರಾಣ ಕಳೆದುಕೊಂಡವರಾಗಲೀ, ಅದರಿಂದ ಈಗಲೂ ಸಂತ್ರಸ್ತರಾಗಿರುವವರಾಗಲೀ ಭಾರತದ ಜನತೆಯೆಂದು ಟಾಟಾಗೇಕೆ ಅನಿಸುವುದಿಲ್ಲ? ಬದಲಿಗೆ ಯೂನಿಯನ್ ಕಾರ್ಬೈಡ್ ಕಂಪನಿಯ ಮಾಲೀಕ ಆಂಡರ್‌ಸನ್ ಅನ್ನು ಯಾಯ ಕಾರಣಕ್ಕೂ ಬಂಧಿಸಬಾರದೆಂದು ಭಾರತದ ಜನತೆಯ ವಿರುದ್ಧ ಆಂದೋಲನವನ್ನೇ ನಡೆಸಿದ್ದ ಆ ಕಂಪನಿಯ ಕಾನೂನು ಸಲಹೆಗಾರನಾದ ಡೇವಿಡ್ ಗುಡ್ ಟಾಟಾದ ಅಮೆರಿಕನ್ ಕಾರ್ಪೊರೇಟ್ ಕಚೇರಿಯ ಮುಖ್ಯಸ್ಥನಾಗಿರುವುದೇಕೆ?

ರತನ್‌ಟಾಟಾರನ್ನು ಮತ್ತು ಅವರ ನ್ಯಾನೋ ಕಾರನ್ನು ಜನತೆಯ ಕಾರೆಂದು ಸಂಭ್ರಮಿಸುತ್ತಾ ಟಾಟಾರನ್ನು ಜನತೆಯ ಉದ್ಯಮಿಯೆಂದು ಬಣ್ಣಿಸುತ್ತಿರುವ ಹೊತ್ತಿನಲ್ಲಿ ಅಹಿತಕರವಾದ ಈ ಪ್ರಶ್ನೆಗಳನ್ನು ಹಾಕಿಕೊಳ್ಳಲೇಬೇಕಿದೆ. ಏಕೆಂದರೆ ನ್ಯಾನೋ ಕಾರು ಟಾಟಾ ಸಾಮ್ರಾಜ್ಯದ ಕಾರು ಮಾರುಕಟ್ಟೆಯ ವಿಸ್ತರಣಾ ಯೋಜನೆಯೇ ಹೊರತು ಮತ್ತೇನೂ ಅಲ್ಲ. ಅಷ್ಟು ಮಾತ್ರವಲ್ಲ. ಕಡಿಮೆ ದರದ ಈ ಕಾರಿಗಾಗುವ ವೆಚ್ಚವನ್ನು ಟಾಟಾ ತನ್ನ ಲಾಭದ ದರವನ್ನು ಕಡಿಮೆ ಮಾಡಿ ಭರಿಸುತ್ತಿಲ್ಲ. ಏಕೆಂದರೆ ಒಂದು ಲಕ್ಷಕ್ಕೆ ಒಂದು ಕಾರು ಕೊಡಲು ಸಾಧ್ಯವಾದದ್ದು ತಮ್ಮ ೫೦೦ ಜನ ತಂತ್ರಜ್ಞಾರು ಹಗಲು ರಾತ್ರಿ ಕೆಲಸ ಮಾಡಿ ಕಡಿಮೆ ವೆಚ್ಚದ ತಂತ್ರಜ್ಞಾನ ಮತ್ತು ವಸ್ತುಗಳನ್ನು ಬಳಸಿದ್ದಕ್ಕೆ ಎಂದು ಟಾಟಾ ಸಂಸ್ಥೆ ಹೇಳಿಕೊಳ್ಳುತ್ತಿದೆ. ಆದರೆ ಟಾಟಾ ತನ್ನ ಕಾರಿನ ದರವನ್ನು ಕಡಿಮೆ ಮಾಡಲು ಸಾಧ್ಯವಾದದ್ದು ಸರ್ಕಾರಗಳನ್ನು ಭ್ರಷ್ಟಗೊಳಿಸಿ ಜನರ ಕಣ್ಣಿಗೆ ಮಣ್ಣೆರೆಚುವ ಮೂಲಕ ಎಂಬುದನ್ನು ಮರೆಸಲಾಗುತ್ತಿದೆ.

ವಾರ್ಷಿಕ ೧.೫ ಲಕ್ಷ ಕಾರುಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಉಳ್ಳ ಈ ಕಾರ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಆಗುವ ವೆಚ್ಚ ೧೭೦೦ ಕೋಟಿ ರುಪಾಯಿಗಳು. ಇದರಲ್ಲಿ ಈ ಕಾರ್ಖಾನೆಗಾಗಿ ಭೂಮಿಯನ್ನು ಕೊಂಡುಕೊಳ್ಳಲು ತಗಲುವ ವೆಚ್ಚದಿಂದ ಮೊದಲುಗೊಂಡು ಅದನ್ನು ಅಭಿವೃದ್ಧಿ ಪಡಿಸಲು, ನೀರು, ವಿದ್ಯುತ್ ಇತ್ಯಾದಿಗಳ ವೆಚ್ಚ ಎಲ್ಲವೂ ಸೇರುತ್ತದೆ. ಇದಲ್ಲದೆ ಪ್ರತಿಯೊಂದು ಹಂತದಲ್ಲೂ ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ವೆಚ್ಚವೂ ಸೇರಿರುತ್ತದೆ. ಆ ನಂತರದಲ್ಲಿ ಖಂಡಿತವಾಗಿ ಯಂತ್ರೋಪಕರಣಗಳ ಮತ್ತು ತಂತ್ರಜ್ಞಾನದ ವೆಚ್ಚ ಸೇರುತ್ತದೆ. ಆದರೆ ಒಟ್ಟಾರೆ ವೆಚ್ಚದಲ್ಲಿ ನೆಲ, ವಿದ್ಯುತ್, ನೀರು, ತೆರಿಗೆಗಳ ವೆಚ್ಚ ಏನಿಲ್ಲವೆಂದರೂ ಶೇ.೩೦ರಿಂದ ಶೇ.೪೦ರಷ್ಟಾಗುತ್ತದೆ. ಆದರೆ ನ್ಯಾನೋ ಕಾರಿನ ಸಂದರ್ಭಲ್ಲಿ ಈ ಶೇ.೪೦ ರಷ್ಟು ವೆಚ್ಚವನ್ನು ಭರಿಸಿರುವುದು ಜನರೇ ಹೊರತು ಟಾಟಾ ಅಲ್ಲ. ಉದಾಹರಣೆಗೆ ಈ

ಕಾರು ಉತ್ಪಾದನೆಯಾಗುವುದು ಪ.ಬಂಗಾಳದ ಸಿಂಗೂರಿನಲ್ಲಿ.

ಅಲ್ಲಿನ ಕಮ್ಯುನಿಸ್ಟ್ ಸರ್ಕಾರದ ಬೆಂಬಲದೊಂದಿಗೆ ಬಡ ರೈತಾಪಿಯಿಂದ ಬಲವಂತದಿಂದ ೯೯೭ ಎಕರೆ ಜಮೀನನ್ನು ಕಸಿದುಕೊಂಡು ನ್ಯಾನೊ ಕಾರ್ ಫ್ಯಾಕ್ಟರಿ ಸ್ಥಾಪಿಸಲಾಗುತ್ತಿದೆ. ಅದಿರಲಿ. ಬೇರೆ ಸಂದರ್ಭದಲ್ಲಿ ಈ ೯೯೭ ಎಕರೆ ಜಮೀನಿಗೆ ೧೪೦ ಕೋಟಿ ರೂ. ಪರಿಹಾರವನ್ನು ಕಂಪನಿ ನೀಡಬೇಕಾಗುತ್ತಿತ್ತು. ಆದರೆ ಇಲ್ಲಿ ೧೪೦ ಕೋಟಿಗಳಲ್ಲಿ ಟಾಟಾ ನೀಡುತ್ತಿರುವುದು ಕೇವಲ ಇಪ್ಪತ್ತು ಕೋಟಿಗಳು ಮಾತ್ರ, ಅದೂ ಐದು ವರ್ಷಗಳಲ್ಲಿ. ಉಳಿದ ೧೨೦ ಕೋಟಿಗಳನ್ನು ಪ.ಬಂಗಾಳದ ಸರ್ಕಾರವೇ ಬೊಕ್ಕಸದಿಂದ ನೀಡುತ್ತದೆ. ಅಂದರೆ ಜನರೇ ಟಾಟಾಗೆ ಸಬ್ಸಿಡಿ ನೀಡುತ್ತಿದ್ದಾರೆ. ಅದೇ ರೀತಿ ಒಮ್ಮೆ ಜಮೀನನ್ನು ವಶಪಡಿಸಿಕೊಂಡ ನಂತರ ಆ ಭೂಮಿಯನ್ನು ಕಾರ್ಖಾನೆಗೆ ತಕ್ಕಂತೆ ಅಭಿವೃದ್ಧಿ ಪಡಿಸುವ ವೆಚ್ಚವೂ ಆ ಕಂಪನಿಯದ್ದೇ ಆಗಿರಬೇಕಿತ್ತು. ಆದರೆ ಇಲ್ಲಿ ಅದನ್ನು ಸರ್ಕಾರವೇ ಜನರ ದುಡ್ಡಿನಲ್ಲಿ ಟಾಟಾಗಾಗಿ ಮಾಡಿಕೊಡುತ್ತದೆ. ಉದಾಹರಣೆಗೆ ಸಿಂಗೂರಿನ ಆ ಪ್ರದೇಶದಲ್ಲಿ ಮಳೆ ಬಂದಾಗ ನೀರು ನಿಲ್ಲುತ್ತದೆ.

ಅದನ್ನು ಆ ಪ್ರದೇಶದಿಂದ ಹೊರತೆಗೆಯುವ ವೆಚ್ಚ ಕಂಪನಿಯ ಒಟ್ಟಾರೆ ಹೂಡಿಕಾ ವೆಚ್ಚದ ಭಾಗವೇ. ಆದರೆ ಸಿಂಗೂರಿನಲ್ಲಿ ಸರ್ಕಾರವೇ ೧೭೦ ಕೋಟಿ ಖರ್ಚು ಮಾಡಿ ಟಾಟಾಗಾಗಿ ಒಳ ಚರಂಡಿ ವ್ಯವಸ್ಥೆ ಮಾಡಿಕೊಡುತ್ತಿದೆ. ಅದೇ ರೀತಿ ವಿದ್ಯುತ್ ಮತ್ತು ನೀರನ್ನು ಸಹ ಶೇ. ೫೦ ರಷ್ಟು ರಿಯಾಯತಿ ದರದಲ್ಲಿ ರಾಜ್ಯ ಸರ್ಕಾರವೇ ಪೂರೈಸುತ್ತದೆ. ಇದಲ್ಲದೆ ಈಗ ಟಾಟಾ ತಮ್ಮ ಈ ಉದ್ಯಮಕ್ಕೆ ಎಕ್ಸೈಸ್ ತೆರಿಗೆಯನ್ನು ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಿದ್ದಾರೆ. ಇದಲ್ಲದೆ ರಾಜ್ಯ ಸರ್ಕಾರ ಈಗಾಗಲೇ ಹಲವಾರು ತೆರಿಗೆ ರಿಯಾಯತಿಯನ್ನು ನೀಡಿದೆ. ಅಂದರೆ ಒಂದು ವೇಳೆ ಇದೇ ರಿಯಾಯತಿಯನ್ನು ಹಿಂದೊಮ್ಮೆ ಸರ್ಕಾರದ್ದೇ ಸಂಸ್ಥೆಯಾಗಿದ್ದ ಮಾರುತಿಗೂ ನೀಡಿದ್ದರೆ ಅದೂ ಸಹ ಹೆಚ್ಚು ಕಡಿಮೆ ಇದೇ ದರಕ್ಕೆ ಕಾರನ್ನು ಒದಗಿಸುತ್ತಿತ್ತಲ್ಲವೇ? ಅಂದರೆ ಇದರಲ್ಲಿ ಟಾಟಾ ಜನರಿಗಾಗಿ ಮಾಡುತ್ತಿರುವ ಹೊಸ ಸೇವೆಯೇನು? ಬದಲಿಗೆ ಜನರಿಂದ ಸುಲಿದು ತನ್ನ ಮಾರುಕಟ್ಟೆಯನ್ನು ವಿಸ್ತರಿಸ್ಕೊಳ್ಳುತ್ತಿರುವ ಒಂದು ಪಕ್ಕಾ ಬಿಸಿನೆಸ್ ಯೋಜನೆಯಲ್ಲದೇ ಮತ್ತೇನು?

ಏಕೆಂದರೆ ಇಂದು ಭಾರತದಲ್ಲಿ ವೆಚ್ಚ ಮಾಡಬಲ್ಲಷ್ಟು ಸಾಮರ್ಥ್ಯವಿರುವ ಒಂದು ಮೇಲ್ಮುಖಿ ಚಲನೆಯಲ್ಲಿರುವ ಶೇ.೧೦ ರಷ್ಟು ಅಂದರೆ ೧೦ ಕೋಟಿಯಷ್ಟಿರುವ ನವ ಮಧ್ಯಮ ವರ್ಗ ಸೃಷ್ಟಿಯಾಗಿದೆ. ಈ ನವ ಮಧ್ಯಮ ವರ್ಗ ಬೆಳೆದದ್ದೇ ಆಕ್ರಮಣ ಶೀಲ ಜಾಗತೀಕರಣದ ಸಂದರ್ಭದಲ್ಲಿ. ಹುಟ್ಟಿನೊಂದಿಗೇ ಕೊಳ್ಳುಬಾಕತನವನ್ನು ಮತ್ತು ಸಾಮಾಜಿಕ ನ್ಯಾಯ, ಸಮಾನತೆ ಇನ್ನಿತ್ಯಾದಿ ಮೌಲ್ಯಗಳ ಬದಲಿಗೆ ಇಂದಿನ, ಈಗಿನ ಸ್ವಂತ ಸುಖವೇ ಪ್ರಧಾನವೆಂಬ ಮೌಲ್ಯವನ್ನು ಕಟ್ಟಿಕೊಂಡು ಹುಟ್ಟಿರುವ ಈ ಮಧ್ಯಮ ವರ್ಗಕ್ಕೇ ಅಪಾರ ಕೊಳ್ಳುವ ಹಸಿವಿದೆ ಮತ್ತು ಕಿಸೆಯಲ್ಲಿ ದುಡ್ಡಿದೆ. ಇವೆರಡರ ಮಿಲನದಲ್ಲೇ ನ್ಯಾನೋ ಕಾರು ಹುಟ್ಟಿದೆ. ಇಂದು ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿ ಸಾವಿರ ಜನರಿಗೆ ೫೦೦-೮೦೦ ಕಾರುಗಳಿದ್ದರೆ ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ಕೇವಲ ೭ ಕಾರುಗಳಿವೆ. ಇದಲ್ಲದೆ ಕಾರು ಮಾರುಕಟ್ಟೆಗೆ ಜಗತ್ತಿನಾದ್ಯಂತ ವಿಸ್ತರಣಾ ಸಾಧ್ಯತೆ ಇರುವುದೇ ಈ ಸಣ್ಣ ಮಾರುಕಟ್ಟೆ ಕ್ಷೇತ್ರದಲ್ಲಿ. ಹೀಗಾಗಿ ಕೇವಲ ಟಾಟಾ ಅಲ್ಲ ನಾಳೆ ಎಲ್ಲಾ ಕಾರು ಉದ್ಯಮಿಗಳು ಸಣ್ಣ ಕಾರಿನ ಕ್ಷೇತ್ರಕ್ಕೆ ಲಗ್ಗೆ ಇಡಲಿದ್ದಾರೆ. ಇದರಲ್ಲಿ ಇರುವುದು ಲಾಭದ ಹಿತಾಸಕ್ತಿಯೇ ಹೊರತು ಜನತೆಗಾಗಿ ಕಾರು, ಸ್ಕೂಟರ್ ಕುಟುಂಬದ ಬಗ್ಗೆ ಕಣ್ಣೀರು ಇವೆಲ್ಲಾ ತಮ್ಮ ನರಭಕ್ಷಕ ಲಾಭಕೋರತನಕ್ಕೆ ನೈತಿಕ ಮುಖವಾಡವಷ್ಟೇ.

ವಾಸ್ತವದಲ್ಲಿ ಈ ನ್ಯಾನೋ ಕಾರಿನ ಸುತ್ತಾ ಸೃಷ್ಟಿಯಾಗಿರುವ ಈ ಉನ್ಮಾದದಿಂದ ಮತ್ತು ಟಾಟಾ ಬೀಸಿರುವ ಕನಸಿನ ಬಲೆಯಿಂದ ಹೊರ ಬಂದು ಇದರ ಪರಿಣಾಮವನ್ನು ನಿಜಕ್ಕೂ ಜನತೆಯ ಪರಿಸರದಲ್ಲಿಟ್ಟು ನೋಡುವ ಅಗತ್ಯವಿದೆ. ಟಾಟಾ ಕಂಪನಿಯ ಕಾರು ಮಧ್ಯಮ ವರ್ಗದ ಕನಸನ್ನೇನೋ ಪೂರೈಸಬಹುದು. ಆದರೆ ಆ ಕಾರು ನಿಜಕ್ಕೂ ಓಡಬೇಕಿರುವುದು ರಸ್ತೆಗಳಲ್ಲಿ. ಭಾರತದ ರಸ್ತೆಗಳಲ್ಲಿ ಈಗಾಗಲೇ ೧.೨ ಕೋಟಿ ಕಾರುಗಳು ಮತ್ತು ೬ ಕೋಟಿ ದ್ವಿ ಚಕ್ರ ವಾಹನಗಳು ರಸ್ತೆಯಲ್ಲಿವೆ. ನ್ಯಾನೋ ಕಾರಿನಿಂದಾಗಿ ದ್ವಿಚಕ್ರ ವಾಹನಗಳ ಸಂಖ್ಯೆಯಲ್ಲಿ ದೊಡ್ಡ ಏರು ಬೇರೇನಾಗದಿದ್ದರೂ ಕಾರುಗಳ ಸಂಖ್ಯೆ ವರ್ಷಕ್ಕೆ ಮೂರು ಲಕ್ಷದಷ್ಟು ಹೆಚ್ಚಲಿವೆ. ಒಂದು ಅಂದಾಜಿನ ಪ್ರಕಾರ ಈ ಪ್ರಮಾಣದಲ್ಲಿ ಮಾರಾಟವಾಗದಿದ್ದರೆ ನ್ಯಾನೋ ಕಾರು ವಹಿವಾಟು ಹೆಚ್ಚಿನ ಲಾಭವನ್ನೇನೂ ತರುವುದಿಲ್ಲವಂತೆ. ಒಂದು ಅಂದಾಜಿನ ಪ್ರಕಾರ ೧೯೫೧ರ ನಂತರ ಭಾರತದ ನಗರದ ಜನಸಂಖ್ಯೆ ೪.೬ ಪಟ್ಟು ಹೆಚ್ಚಿದ್ದರೆ ವಾಹನಗಳ ಸಂಖ್ಯೆ ೧೫೮ ಪಟ್ಟು ಹೆಚ್ಚಿದೆ. ಆದರೆ ರಸ್ತೆಗಳ ಧಾರಣಾ ಸಾಮರ್ಥ್ಯವೇನು ಹೆಚ್ಚಾಗಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿ ರಸ್ತೆಗಳ ಧಾರಣಾ ಸಾಮರ್ಥ್ಯಕ್ಕಿಂತ ನಾಲಕ್ಕು ಪಟ್ಟು ಹೆಚ್ಚು ವಾಹನಗಳಿವೆ.

ಮತ್ತು ಅದರಲ್ಲಿ ಶೇ. ೯೦ ಭಾಗ ಖಾಸಗಿ ವಾಹನಗಳೆ ಹೆಚ್ಚು. ಆದರೆ ಸಾರ್ವಜನಿಕ ಸಂಚಾರ ಸಾಧನಗಳಾದ ಬಸ್ಸು ಇತ್ಯಾದಿಗಳು ರಸ್ತೆಯ ಶೇ. ೧೦ ಭಾಗವನ್ನು ಮಾತ್ರ ಆಕ್ರಮಿಸಿ "ಜನತೆಯ" ಶೇ. ೭೦ ರಷ್ಟು ಸಂಚಾರ ಬೇಡಿಕೆಯನ್ನು ಪೂರೈಸುತ್ತದೆ. ಆದರೆ ಕಾರು ಮತ್ತು ದ್ವಿಚಕ್ರ ವಾಹನಗಳು ರಸ್ತಯ ಶೇ.೯೦ ಭಾಗವನ್ನು ಆಕ್ರಮಿಸಿ ಶೇ. ಐದರಷ್ಟು ಸಂಚಾರ ಬೇಡಿಕೆಯನ್ನು ಪೂರೈಸುತ್ತದೆ. ಅಂದರೆ ಒಂದು ಲೀಟರ್ ಇಂಧನಕ್ಕೆ ಬಸ್ಸು ಅತಿ ಹೆಚ್ಚು ಜನರನ್ನು ಸಾಗಾಟ ಮಾಡುತ್ತದೆ. ಆ ಮೂಲಕ ಪ್ರತಿ ಮನುಷ್ಯನ ಸಂಚಾರದ ಕಾರಣದಿಂದ ಉಂಟಾಗುವ ಮಾಲಿನ್ಯವನ್ನು ಆದಷ್ಟು ಕಡಿಮೆ ಮಾಡುತ್ತದೆ. ಆದರೆ ಶ್ರೀಮಂತ ಮತ್ತು ಮೇಲ್‌ಮಧ್ಯಮ ವರ್ಗದ ಕಾರುಗಳಲ್ಲಿ ಸಾಮಾನ್ಯವಾಗಿ ಆರೆಂಟು ಜನರನ್ನು ಸಾಗಿಸಬಲ್ಲ ಸೀಟು

(೨೪ನೇ ಪಟಕ್ಕೆ)

ಮೋದಿತ್ವ ಮತ್ತು ಕರಾಳ ಪ್ರಜಾಪ್ರಭುತ್ವ

ಬಿ.ಎಂ. ಮುಸ್ತಾಫಾ
ಆತೂರು

ಗುಜರಾತ್ ಗಾಂಧಿಯ ನಾಡಾಗಿ ಉಳಿದಿಲ್ಲ. ಅದು ಮೋದಿಯ ನಾಡಾಗಿದ್ದು 'ನನ್ನ ಬಂದೂಕೇ ನನ್ನ ಸಂದೇಶ' ಎನ್ನುವ ಮೋದಿಯ ಮೋಡಿ ಎಲ್ಲೆಡೆ ಕೆಲಸ ಮಾಡುತ್ತಿದೆ. ಇನ್ನು ಮೋದಿಯನ್ನು ಹಾಡಿ ಹೊಗಳುವವರು, ಆತ ಕೇವಲ ದಿನದಲ್ಲಿ ನಾಲ್ಕು ಗಂಟೆ ಮಾತ್ರ ಮಲಗುತ್ತಾರೆ. ಆರು ವರ್ಷದಲ್ಲಿ ಒಂದು ದಿನವೂ ರಜೆ ತೆಗೆದು ಕೊಂಡಿಲ್ಲ. ಐಶಾರಾಮಿ, ವಿಲಾಸಿ ಜೀವನದ ಹುಚ್ಚು ಆತನಿಗಿಲ್ಲ. ಆತನ ಮೇಲೆ ಒಂದೇ ಒಂದು ಭ್ರಷ್ಟಾಚಾರದ ಆರೋಪಗಳಿಲ್ಲ. ತೆರಿಗೆ ದಾರರ ಹಣ ಪೋಲಾಗುವುದನ್ನು ತಡೆಗಟ್ಟಿದ, ಅರ್ಪಣಾ ಮನೋಭಾವದ, ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳದ ದಿಟ್ಟ ನಾಯಕತ್ವದ ಶೈಲಿಗೆ ಮೋದಿಗೆ ಮೋದಿಯೇ ಸಾಟಿ ಎನ್ನುತ್ತಾರೆ.

ಗುಜರಾತಿನಲ್ಲಿ ೨೦೦೭ರ ಚುನಾವಣೆಯೊಂದಿಗೆ ನರೇಂದ್ರ ಮೋದಿ ಮತ್ತೆ ದಿಗ್ವಿಜಯ ಸಾಧಿಸಿದ್ದಾರೆ. ಮೋದಿಯ ಸೈದ್ಧಾಂತಿಕ ವಿರೋಧಿಗಳು ಪ್ರಜಾಸತ್ತಾತ್ಮಕ ಗೊಂದಲದಲ್ಲಿದ್ದಾರೆ. ಈ ವಿರೋಧಿಗಳನ್ನು ಭಯೋತ್ಪಾದಕರ ಪರವಿರುವವರು, ಗುಜರಾತ್ 'ಅಸ್ಮಿತೆ'ಯನ್ನು ಅಪಮಾನಿಸುವವರು, ಅಭಿವೃದ್ಧಿಯ ವಿರೋಧಿಗಳು ಎಂದು ಬಿಂಬಿಸುವಲ್ಲಿ ಮೋದಿ ಯಶಸ್ವಿಯಾಗಿದ್ದಾರೆ.

ಗೋಧ್ರಾಘಟನೆಯನ್ನು ನೆಪವಾಗಿಸಿ, ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರಗೈದು, ಬರ್ಬರವಾಗಿ ಹತ್ಯೆ ಗೈದು, ಬೆಂಕಿ ಹಚ್ಚಿ ಸುಟ್ಟು ಕರಕಲಾಗಿಸಿದವರು, ಮಹಿಳೆಯ ಗರ್ಭ ಸೀಳಿ, ಭ್ರೂಣವನ್ನು ತ್ರಿಶೂಲದಿಂದ ಚುಚ್ಚಿ ಬೆಂಕಿಗೆ ಆಹುತಿ ಮಾಡಿದವರು, ಹಾಲುಗಲ್ಲದ ಹಸುಳೆಗಳು ಸೇರಿದಂತೆ, ಮುಗ್ಧರ ಜೀವಿಗಳನ್ನು ಅತ್ಯಂತ ಕ್ರೂರ ಮತ್ತು ಪೈಶಾಚಿಕವಾಗಿ ಕೊಂದು, ಮಾನವೀಯತೆಗೆ ಕಳಂಕ ಹಚ್ಚಿದವರು ಮತ್ತು ಇವರ 'ಹೃದಯ ಸಾಮ್ರಾಟ' ಗುಜರಾತಿನ 'ಗೌರವ' ಅಭಿವೃದ್ಧಿಯ ಘೋಷಣೆಯೊಂದಿಗೆ ತನ್ನ ರಕ್ತ ಸಿಕ್ತ ಕೈಗಳಿಂದಲೇ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಗುಲ್‌ಮಾರ್ಗ್ ಸೊಸೈಟಿ, ನರೋದಾ ಪಾಟಿಯ ಸೇರಿದಂತೆ ಗುಜರಾತಿನ ಬೀದಿ ಬೀದಿಗಳಲ್ಲಿ ತನ್ನದೇ ರಾಜ್ಯದ ಮುಗ್ಧ ದುರ್ಬಲ, ಮಹಿಳೆಯರು ಹೆಣ್ಣು ಮಕ್ಕಳು, ಹಸುಳೆಗಳ ಪ್ರಾಣ, ಮಾನಗಳನ್ನು ನಮ್ಮ ಸಂಸ್ಕೃತಿಯ ಗುತ್ತಿಗೆದಾರರು ಗುಜರಾತ್‌ನ ಗೌರವ ಯಾತ್ರೆಯ ಸಿಪಾಯಿಗಳು ಹಾಡುಹಗಲೇ ಕಾನೂನಿನ ಆಡಳಿತವನ್ನು ಕೈಗೆತ್ತಿಕೊಂಡು ಚೆಂದಿ ಉಡಾಯಿಸಿದಾಗ, ಸಂವಿಧಾನಕ್ಕೆ ನಿಷ್ಠೆಯನ್ನು ತೋರಿ ಪ್ರಮಾಣ ವಚನ ಸ್ವೀಕರಿಸಿದ ಗುಜರಾತಿನ ಮುಖ್ಯಮಂತ್ರಿ ಎಲ್ಲವನ್ನೂ ತಣ್ಣನೆ ವೀಕ್ಷಿಸಿ, ಈ ಕಿರಾತಕರ ಬರ್ಬರತೆಗಳಿಗೆ ತಲೆದೂಗಿ, ಇವರಿಗೆ ರಾಜಾರೋಷದಿಂದ ಮೆರೆಯಲು ಕಾನೂನಿನ ಸಹಾಯಗಳನ್ನು ನೀಡಿದರೆಂಬುದು ಜಗಜ್ಜಾಹೀರಾಗಿರುವ ಸತ್ಯ.



೨೦೦೨ರಲ್ಲಿ ಹಿಂಸೆಯಿಂದ ತತ್ತರಿಸುತ್ತಿರುವ ತನ್ನ ಪ್ರದೇಶದಿಂದ ಜೀವ ರಕ್ಷಣೆಗಾಗಿ ಸುರಕ್ಷಿತ ಸ್ಥಳಕ್ಕೆ ಓಡಿಹೋಗುತ್ತಿದ್ದ ಸಂದರ್ಭದಲ್ಲಿ ಮತಾಂಧ ಕೊಲೆಗಡುಕರು ಎಳೆಯ ಹಸುಳೆಗಳು ಸೇರಿದಂತೆ ಬಿಲ್ಕೀಸ್ ಬಾನು ಕುಟುಂಬದ ಹದಿನಾಲ್ಕು ಜನರನ್ನು ಕೊಂದ ಕೇಸಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಮುಂಬಯಿ ನ್ಯಾಯಾಲಯ ಹನ್ನೊಂದು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಆರು ವರ್ಷಗಳಿಂದ ಭಯಭೀತಳಾಗಿ ಕಂಗೆಟ್ಟಿದ್ದ ಬಲ್ಕೀಸ್ ಬಾನುಗೆ ಈ ತೀರ್ಪಿನಿಂದ ಪೂರ್ಣ ಭದ್ರತೆ ಮತ್ತು ಸ್ವಾತಂತ್ರ್ಯದ ಭರವಸೆಯಿಲ್ಲ. ಸೇಡು ಮತ್ತು ಪ್ರತೀಕಾರ ಕೊನೆಗೊಳ್ಳುತ್ತದೆಂದು ಭಾವಿಸಲಾರೆ. ಆದರೆ ಈ ತೀರ್ಪಿನಿಂದಾಗಿ, ಅಂದಿನ ಭಯಾನಕ ಹಗಲು-ರಾತ್ರಿಗಳಲ್ಲಿ ಗುಜರಾತಿನ ಮಹಿಳೆಯರ ಸ್ಥಿತಿ ಏನಾಗಿತ್ತೆಂಬುದನ್ನು ಯಾರಿಂದಲೂ ನಿರಾಕರಿಸಲು ಸಾಧ್ಯವಿಲ್ಲವೆಂದು ಭಾನು ಹೇಳುತ್ತಾರೆ.

ಪ್ರಜಾಪ್ರಭುತ್ವದ ದೊಡ್ಡ ಸಮಸ್ಯೆಯೆಂದರೆ ಅದು ಸರ್ವಾಧಿಕಾರಿಗಳನ್ನು ಮತ್ತು ಕೊಲೆ ಪಾತಕಿಗಳ ಸಂತತಿಯನ್ನು ಪ್ರಜಾಸತ್ತಾತ್ಮಕವಾಗಿಯೇ ಬೆಳೆಸುತ್ತದೆ. ಒಂದು ಸಾಮೂಹಿಕ ಹತ್ಯಾಕಾಂಡ ಮತ್ತು ಬರ್ಬರತೆಗಳೇ ಚುನಾವಣೆಯಲ್ಲಿ ಬಹುಮತವನ್ನು ತಂದುಕೊಡುವುದು, ಸ್ವಸ್ಥ ಮಾನವೀಯ ಮತ್ತು ನಾಗರಿಕ ಸಮಾಜವನ್ನೇ ಬೆಚ್ಚಿ ಬೀಳಿಸಿದ ಮಾರಣ ಹೋಮ ಮತ್ತು ರಕ್ತಪಾತಗಳನ್ನು ಪ್ರಜಾಸತ್ತಾತ್ಮಕ ಜನವಿಧಿ ಪುರಸ್ಕರಿಸುತ್ತದೆ ಎನ್ನುವ ಮಟ್ಟಕ್ಕೆ ಬೆಳೆಯುತ್ತಿರುವ ಒಂದು ಮನೋಸ್ಥಿತಿ ನಿಜಕ್ಕೂ ದುರಂತವೇ ಸರಿ. ಪ್ರಜಾಪ್ರಭುತ್ವ ಹೇಗೆ ಒಂದು ಗೂಢ ರಹಸ್ಯ-ಕಳಂಕಿತ ವ್ಯವಸ್ಥೆಯಾಗಿ ಅಧಃಪತನಗೊಳ್ಳುತ್ತದೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಕಾಲಕಾಲಕ್ಕೆ ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆಯೆಂದೆನಿಸಿಕೊಳ್ಳುವ ಪರಿಪಾಠ, ಬಹುಮತದೊಂದಿಗೆ ಆರಂಭವಾಗಿ, ಕೊನೆಗೊಳ್ಳುವ ಪ್ರಜಾಪ್ರಭುತ್ವವೇ ಆತ್ಯಂತಿಕ. ಅದರಾಚೆಗೆ ಏನೂ ಇಲ್ಲವೆಂದು ನಾವು ನಂಬಿಕೊಂಡಿದ್ದೇವೆ. ಪ್ರಜಾಪ್ರಭುತ್ವ ಚುನಾವಣೆಗಳನ್ನಷ್ಟೇ ಹೊಂದಿರುವುದಿಲ್ಲ. ಬಹಳ ಪ್ರಾಮುಖ್ಯವಾಗಿ ಪ್ರತಿಯೊಬ್ಬ ನಾಗರಿಕ ಮತ್ತು ಪೌರನ ಹಕ್ಕು ಮತ್ತು ಸ್ವಾತಂತ್ರ್ಯಗಳ ರಕ್ಷಣೆ ಯಾವುದೇ ಪ್ರಜಾಪ್ರಭುತ್ವದ ಮೂಲ ತಳಹದಿ. ಆದರೆ ಮುಗ್ಧ ನಾಗರಿಕರ ಹಕ್ಕು ಮತ್ತು ಸ್ವಾತಂತ್ರ್ಯ ಬಿಡಿ, ಅವರ ಜೀವ ಮತ್ತು ಉಸಿರುಗಳನ್ನೇ ನಿರ್ದಯವಾಗಿ ಮತ್ತು ಪೈಶಾಚಿಕವಾಗಿ ಹರಣಮಾಡಿದ ಅತ್ಯಂತ ಘೋರ ನರಮೇಧದ ರೂವಾರಿ ನರೇಂದ್ರ ಮೋದಿಗೆ ಪ್ರಜಾಪ್ರಭುತ್ವದ ಮೂಲಕ ಸತತ ಎರಡನೇ ದಿಗ್ವಿಜಯ ದೊರೆತಿರುವುದು ನಮ್ಮ ಕಣ್ಣ ಮುಂದಿದೆ.

ಭಾರತದ ವಿವಿಧ ಭಾಗಗಳಲ್ಲಿ ಶೋಷಿತ ಮತ್ತು ದಮನಿತ ಜನವರ್ಗಗಳ ಸಮಾಧಿಯ ಮೇಲೆಯೇ ಕೆಲವೊಮ್ಮೆ ನಮ್ಮ ಪ್ರಜಾಪ

ಪ್ರಭುತ್ವ ಅಲಂಕಾರಗೊಳ್ಳುತ್ತದೆ ಎಂದರೆ ತಪ್ಪಾಗಲಾರದು. ಯಾವುದೇ ರಾಜಕೀಯ ಪಕ್ಷವಾಗಲಿ, ಸಿದ್ಧಾಂತಗಳಾಗಲಿ ಜನರ ಹಕ್ಕುಗಳನ್ನು ಉಲ್ಲಂಘಿಸುವ ವಿಷಯದಲ್ಲಿ ಏಕಸ್ವಾಮ್ಯವನ್ನು ಹೊಂದಿಲ್ಲ. ಜನರ ಪರವಾಗಿ ಮಾರ್ಕ್ಸಿಸ್ಟ್ ಸರಕಾರ ನಂದಿಗ್ರಾಮದಲ್ಲಿ ತನ್ನ ರಕ್ತದಾಹವನ್ನು ಸಾಬೀತು ಪಡಿಸಿ ಪ್ರಜಾಪ್ರಭುತ್ವ ವಿಶ್ವಾಸಿಗಳನ್ನು ಇನ್ನಷ್ಟು ದಂಗು ಬಡಿಸಿದೆ.

ಇಂದಿನ ಹೈಟೆಕ್ ಯುಗದಲ್ಲೂ ಪ್ರತೀ ಗಂಟೆಗೆ ಭಾರತದಲ್ಲಿ ದಲಿತರ ಕೊಲೆ ಸೇರಿದಂತೆ ಅವರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಬಿಹಾರದ ಬೆಲ್ಚಿಯಲ್ಲಿ ದಲಿತರನ್ನು ಜೀವಂತ ಸುಟ್ಟು ಹಾಕಲಾಯಿತು. ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ದಲಿತ ತಾಯಿ–ಮಗಳ ಮೇಲೆ ಅತ್ಯಾಚಾರವೆಸಗಿ ಅವರನ್ನು ಸುಟ್ಟು ಕೊಲ್ಲಲಾಯಿತು. ದನದ ಚರ್ಮ ಸಾಗಿಸುತ್ತಿದ್ದರೆಂಬ ಕಾರಣಕ್ಕಾಗಿ ಹರಿಯಾಣದ ಜುಜ್ಜಾರ್‌ನಲ್ಲಿ ದಲಿತರನ್ನು ಕೊಚ್ಚಿ ಹಾಕಿರುವುದು, ಕರ್ನಾಟಕದ ಕಂಬಾಲಪಲ್ಲಿಯಲ್ಲಿ ಏಳು ಮಂದಿ ದಲಿತರನ್ನು ಜೀವಂತ ದಹನ ಮಾಡಿರುವುದು ಇದೇ ಪ್ರಜಾಪ್ರಭುತ್ವ ದೇಶದಲದಲ್ಲಿ ಜನರ ಹಕ್ಕುಗಳ ಉಲ್ಲಂಘನೆಯ ವಿಷಯದಲ್ಲಿ ಯಾವುದೇ ಧಾರ್ಮಿಕ ಮೂಳಭೂತವಾದಿಗಳಿಗೂ ಏಕ ಸ್ವಾಮ್ಯವಿಲ್ಲ. ತಸ್ಲಿಮಾನಸ್ರೀನ್‌ಗೆ ಮುಸ್ಲಿಂ ಮೂಲಭೂತವಾದಿಗಳ ಭಯವಾದರೆ ಎಂ.ಎಫ್. ಹುಸೇನ್‌ಗೆ ಹಿಂದೂ ಮೂಲಭೂತವಾದಿಗಳ ಬೆದರಿಕೆಯಿದೆ.

ನರ್ಮದಾ ಬಚಾವೋ ಆಂದೋಲನ ನೇತೃತ್ವವಹಿಸಿ, ಅಣೆಕಟ್ಟಿನಿಂದ ನಿರ್ವಸಿತರಾಗುವ ಜನತೆಯ ಬದುಕು ಮತ್ತು ಭವಿಷ್ಯಕ್ಕಾಗಿ ಉಪವಾಸ ಸತ್ಯಾಗ್ರಹದ ಮೂಲಕ ಧ್ವನಿ ಎತ್ತಿ ಆದಿವಾಸಿಗಳ ಪರ ಹೋರಾಟ ನಡೆಸಿ, ಜನತೆಯ ನೋವನ್ನು ತನ್ನ ನೋವಾಗಿ ಪರಿವರ್ತಿಸಿಕೊಂಡ ಮೇಧಾ ಪಾಟ್ಕರ್‌ಗೆ ನಮ್ಮ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ನ್ಯಾಯಬದ್ಧ ರಾಜಕೀಯ, ಸಾಮಾಜಿಕ, ಆರ್ಥಿಕ, ರಕ್ಷಣೆ ಅವಕಾಶಗಳನ್ನು ಜನರಿಗೆ ಹೇಗೆ ಖಾತರಿಗೊಳಿಸುವುದು? ಎಂಬ ಬಗ್ಗೆ ಈ ಪ್ರಜಾಪ್ರಭುತ್ವಕ್ಕೆ ಆಸಕ್ತಿ ಇಲ್ಲ.

ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲರಲ್ಲೂ ಸರಿಯಾದ ಪರಿಜ್ಞಾನ ಮತ್ತು ಜಾಗೃತಿ ಮೂಡಿಸುವುದು, ಅಭ್ಯರ್ಥಿಗಳು ಮತದಾರರು, ಮೇಲ್ವಿಚಾರಣಾ ಅಧಿಕಾರಿಗಳು, ಮಾಧ್ಯಮ ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕಾಗಿದೆ. ಚುನಾವಣೆಗಳೆಂದರೆ ನಮ್ಮನ್ನು ಆಳುವುದಕ್ಕಾಗಿ ರಾಜಕಾರಣಿಗಳನ್ನು ಅಧಿಕಾರಕ್ಕೆ ತರುವುದು ಮಾತ್ರವಲ್ಲ, ಸಾರ್ವಜನಿಕ ಹುದ್ದೆಗಳಿಗಾಗಿ, ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಸಮರ್ಥ, ಪ್ರಾಮಾಣಿಕ, ಪ್ರಜಾಹಿತಕ್ಕಾಗಿ ಶ್ರಮಿಸುವ ಮತ್ತು ಸಮಾನ ಉತ್ತರದಾಯಿತ್ವ ಆಡಳಿತವನ್ನು ನಡೆಸುವುದಕ್ಕೆ ಅನುವುಮಾಡಿಕೊ.

ಚುನಾಯಿತ ಪ್ರತಿನಿಧಿಗಳು ಪ್ರಜಾಪ್ರಭುತ್ವದಲ್ಲಿ ಹೇಗೆ ಸಾರ್ವಜನಿಕ ಹಿತಕ್ಕೆ ಧಕ್ಕೆ ಬಾರದಂತೆ ಕೆಲಸ ನಿರ್ವಹಿಸಬೇಕು? ತನ್ನ ವಿರುದ್ಧ ಮತ ಚಲಾಯಿಸಿದವರೂ ಸೇರಿದಂತೆ ಸಮಸ್ತ ಮತದಾರರೆಲ್ಲರ ಸೇವೆ ಮಾಡಬೇಕೇ ಹೊರತು ಅವರ ಮೇಲೆ ಯಜಮಾನಿಕೆ ಸ್ಥಾಪಿಸಬೇಕಾದುದಲ್ಲ. ಒಂದು ಸಮಾಜದಲ್ಲಿರುವ ವೈವಿಧ್ಯತೆ, ಭಿನ್ನತೆಗಳನ್ನು ತಿರಸ್ಕರಿಸುವ ಒಂದು ಸಾಮಾಜಿಕ ಮತ್ತು ರಾಜಕೀಯ ಅಜೆಂಡಾವನ್ನು ಪ್ರಜಾಪ್ರತಿನಿಧಿಯೊಬ್ಬ ಪ್ರೋತ್ಸಾಹಿಸಬಹುದೆ?

ಜನರ ಮೇಲೆ ತಮಗಿಚ್ಚೆಬಂದಂತೆ ಆಡಳಿತ ನಡೆಸಲು ಮುಕ್ತ ಪರವಾನಿಗೆಯೆಂದು ಭಾವಿಸಿದಂತಿದೆ. ಚುನಾವಣೆಗಳು ಪ್ರಜಾಪ್ರಭುತ್ವದ ಒಂದು ಪ್ರಕ್ರಿಯೆಯಾಗಿದ್ದು ಸಂವಿಧಾನದ ಪ್ರಕಾರ ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸಲು ಯಾರು ಸಮರ್ಥರು ಅಥವಾ ಯೋಗ್ಯರೆಂದು ಅದು ತೀರ್ಮಾನಿಸುತ್ತದೆ. ಚುನಾವಣೆಯ ನಂತರ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಬೆಲೆಯಿಲ್ಲವೆ? ಜನವಿಧಿ (Popular Mandate) ಕಾನೂನು ಮತ್ತು ಹಕ್ಕುಗಳ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸಲು ಪ್ರತಿನಿಧಿಗಳಿಗೆ ಒಂದಷ್ಟು ಮುಕ್ತತೆಯನ್ನು ನೀಡುತ್ತದೆಯೇ ಹೊರತು ಅದು ಜನರ ಪ್ರಾಣಮಾನಗಳಿಗೆ ಬೆಲೆ ಕಲ್ಪಿಸದೆ ಅವರ ಬದುಕು ಮತ್ತು ಭವಿಷ್ಯದೊಂದಿಗೆ ಚೆಲ್ಲಾಟವಾಡಲು ನಿರಂಕುಶ ಅಧಿಕಾರವಲ್ಲ.

ಇತ್ತೀಚಿಗಿನ ಪ್ರಜಾ ತಾಂತ್ರಿಕ ರಾಜಕಾರಣದ ಕೆಲವೊಂದು ಅನುಭವದ ಬೆಳಕಿನಲ್ಲಿ ನೋಡುವುದಾದರೆ ರಾಜಕಾರಣಿಗಳು ತಮಗೆ ದೊರೆತಿರುವ ಚುನಾವಣಾ ವಿಜಯವೆಂದರೆ, ಜನರ ಮೇಲೆ ತಮಗಿಚ್ಚೆಬಂದಂತೆ ಆಡಳಿತ ನಡೆಸಲು ಮುಕ್ತ ಪರವಾನಿಗೆಯೆಂದು ಭಾವಿಸಿದಂತಿದೆ.

ಚುನಾವಣೆಗಳು ಪ್ರಜಾಪ್ರಭುತ್ವದ ಒಂದು ಪ್ರಕ್ರಿಯೆಯಾಗಿದ್ದು ಸಂವಿಧಾನದ ಪ್ರಕಾರ ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸಲು ಯಾರು ಸಮರ್ಥರು ಅಥವಾ ಯೋಗ್ಯರೆಂದು ಅದು ತೀರ್ಮಾನಿಸುತ್ತದೆ.

ಚುನಾವಣೆಯ ನಂತರ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಬೆಲೆಯಿಲ್ಲವೆ? ಜನವಿಧಿ (Popular Mandate) ಕಾನೂನು ಮತ್ತು ಹಕ್ಕುಗಳ ಚೌಕಟ್ಟಿನಲ್ಲಿ ಕರ್ತವ್ಯ ನಿರ್ವಹಿಸಲು ಪ್ರತಿನಿಧಿಗಳಿಗೆ ಒಂದಷ್ಟು ಮುಕ್ತತೆಯನ್ನು ನೀಡುತ್ತದೆಯೇ ಹೊರತು ಅದು ಜನರ ಪ್ರಾಣಮಾನಗಳಿಗೆ ಬೆಲೆ ಕಲ್ಪಿಸದೆ ಅವರ ಬದುಕು ಮತ್ತು ಭವಿಷ್ಯದೊಂದಿಗೆ ಚೆಲ್ಲಾಟವಾಡಲು ನಿರಂಕುಶ ಅಧಿಕಾರವಲ್ಲ.

ಕಾನೂನಿನ ಆಡಳಿತ (Rule of Law)ವೇ ಪ್ರಜಾಪ್ರಭುತ್ವದ ಶಿರಸ್ಸು. ಒಂದು ಗೂಂಡಾಪಡೆ ಕಾನೂನಿನ ಪ್ರಕಾರ ವಿಧಿಸಿರುವ ಷರತ್ತು ಮತ್ತು ವಿಧಿವಿಧಾನಗಳನ್ನು ಗಾಳಿಗೆ ತೂರಿ, ಕಾನೂನನ್ನು ಕೈಗೆತ್ತಿಕೊಂಡು ಶಾಂತಿ ಮತ್ತು ಸುವ್ಯವಸ್ಥೆಯನ್ನು ಹಾಳುಗೆಡವಲು ಹೊರಟಾಗ, ಸಾರ್ವಜನಿಕ ಹುದ್ದೆಯಲ್ಲಿರುವ ಅಥವಾ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವ ಮುಖ್ಯಮಂತ್ರಿಯೊಬ್ಬರು ಕಾನೂನಿನ ಆಡಳಿತನ್ನು ಧಿಕ್ಕರಿಸಿ, ಹಿಂಸಾಚಾರ, ದೊಂಬಿಗಳನ್ನು ಪ್ರೋತ್ಸಾಹಿಸಿದರೆ ಅಥವಾ ಈ ಗೂಂಡಾಗಳಿಗೆ ಕಾನೂನಿನ ರಕ್ಷಣೆಯನ್ನು ನೀಡಲು ಹೊರಟರೆ ಅದು ಪ್ರಜಾಪ್ರಭುತ್ವವೇ?

ಆದುದರಿಂದ ಜಾತಿ, ಮತ, ಪಂಥ ಅಥವಾ ಆರ್ಥಿಕ ಸ್ಥಾನಮಾನಗಳ ವಿಷಯದಲ್ಲಿ ಯಾವುದೇ ತಾರತಮ್ಯವಿಲ್ಲದ ಪೌರಪ್ರಜಾಪ್ರಭುತ್ವ (Citizens Democracy) ಬಲಗೊಳ್ಳಬೇಕೆ ಹೊರತು ಮೋದಿ ಮಾದರಿಯ ಡೆಮಾಕ್ರಸಿ ಆಗಬಾರದು. ಮತದಾನದ ಸಂದರ್ಭದಲ್ಲಿ ಮಾತ್ರ ಪೌರನಿಗೆ ಜವಾಬ್ದಾರಿಗಳಿರುವುದಿಲ್ಲ, ಬದಲಾಗಿ ಯಾವುದೇ ಪ್ರಜಾವಿರೋಧಿ ಶಕ್ತಿಗಳು ಅಥವಾ ಮಾನವ ವಿರೋಧಿ ಶಕ್ತಿಗಳ ಧಾಳಿಗೆ ನಮ್ಮ ಸಹ ಪೌರರು ತುತ್ತಾದಾಗ ಅವರ ದುಃಖ–ನೋವಿನಲ್ಲಿ ನಾವು ಒಂದಾಗಿ ನಿಂತು ನ್ಯಾಯಕ್ಕಾಗಿ ಹೋರಾಡುವುದು, ಪೌರರ ಪ್ರಜಾತಂತ್ರಿಕ ಕರ್ತವ್ಯವೂ ಆಗಿದೆ. ನಾವು ನ್ಯಾಯ ನೀತಿ ಮತ್ತು ಸಹಬಾಳ್ವೆಗಾಗಿ ಒಂದಾಗಬೇಕಾದವರು ಅನ್ಯಾಯ ಆಕ್ರಮಗಳಿಗಾಗಿ ಅಲ್ಲ. ಹಾಗಾದರ ಮಾತ್ರ ಈ ದೇಶದ ಜನತೆಯ ನಡುವಿನ ಸಂಬಂಧಗಳ ಪ್ರಜಾತಾಂತ್ರೀಕರಣ ಹೆಚ್ಚು ಅರ್ಥಪೂರ್ಣವಾಗುತ್ತದೆ. ವಿಶ್ವದ ಯಾವುದೇ ಮೂಲೆಗೆ ಹೋದರೂ ನಾವು ಗಾಂಧಿಯ ನಾಡಿನವರು ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತೇವೆ. ನನ್ನ ಬದುಕೇ ನನ್ನ ಸಂದೇಶ ಎಂದು ಹೇಳಲು ಗಾಂಧೀಜಿಯಂತಹ ಮಹಾಪುರುಷನಿಗೆ ಮಾತ್ರ ಸಾಧ್ಯವಾಗಿತ್ತು. ಎರಡು ತುಂಡು ಬಟ್ಟೆಯ ಫಕೀರ, ಒಂದು ಕೀಟವನ್ನು ಸಾಯಿಸಲಾರ, ವೈರಿಯನ್ನೇ ಕಂಡರಿಯದ ಶಾಂತಿಯ ಹರಿಕಾರ ಸರ್ವಮನುಕುಲದ ಅಂತಃ ಪ್ರಜ್ಞೆಯ ಪ್ರತಿನಿಧಿಯಾಗಿ, ಎಲ್ಲರನ್ನೂ ಮೀರಿ ಎತ್ತರಕ್ಕೆ ನಿಂತ ಅನರ್ಘ್ಯ ವ್ಯಕ್ತಿ.

ಆದರೆ ದುರದೃಷ್ಟವಶಾತ್ ಇಂದು ಗುಜರಾತ್ ಗಾಂಧಿಯ ನಾಡಾಗಿ ಉಳಿದಿಲ್ಲ. ಅದು ಮೋದಿಯ ನಾಡಾಗಿದ್ದು 'ನನ್ನ ಬಂದೂಕೇ ನನ್ನ ಸಂದೇಶ' ಎನ್ನುವ ಮೋದಿಯ ಮೋಡಿ ಎಲ್ಲೆಡೆ ಕೆಲಸ ಮಾಡುತ್ತಿದೆ. ಇನ್ನು ಮೋದಿಯನ್ನು ಹಾಡಿ ಹೊಗಳುವವರು, ಆತ ಕೇವಲ ದಿನದಲ್ಲಿ ನಾಲ್ಕು ಗಂಟೆ ಮಾತ್ರ ಮಲಗುತ್ತಾರೆ. ಆರು ವರ್ಷದಲ್ಲಿ ಒಂದು ದಿನವೂ ರಜೆ ತೆಗೆದುಕೊಂಡಿಲ್ಲ. ಐಶಾರಾಮಿ, ವಿಲಾಸಿ ಜೀವನದ ಹುಚ್ಚು ಆತನಿಗಿಲ್ಲ. ಆತನ ಮೇಲೆ ಒಂದೇ ಒಂದು ಭ್ರಷ್ಟಾಚಾರದ ಆರೋಪಗಳಿಲ್ಲ. ತೆರಿಗೆ ದಾರರ ಹಣ ಪೋಲಾಗುವುದನ್ನು ಕಟ್ಟಿದ, ಅರ್ಪಣಾ ಮನೋಭಾವದ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳದ ದಿಟ್ಟ ನಾಯಕತ್ವದ ಶೈಲಿಗೆ ಮೋದಿಗೆ ಮೋದಿಯೇ ಸಾಠಿ ಎನ್ನುತ್ತಾರೆ. ಜನಾಂಗ ದ್ವೇಷದ ಹೆಸರಿನಲ್ಲಿ ಲಕ್ಷಾಂತರ ಜನರ ಮಾರಣ ಹೋಮ ಮಾಡಿದ ಕ್ರೂರ ನರಪಾತಕಿ ಜರ್ಮನಿಯ ಹಿಟ್ಲರ್ ಕೂಡಾ ಸರಳತೆಗೆ ಇನ್ನೊಂದು ಹೆಸರಾಗಿದ್ದ. ಸಸ್ಯಹಾರಿಯಾಗಿದ್ದ ಹಿಟ್ಲರ್, ಐಶಾರಾಮಿ ಬದುಕನ್ನು ತಿರಸ್ಕರಿಸಿದ್ದ. ರಸ್ತೆಯ ಪಕ್ಕದಲ್ಲಿ ತನ್ನ ಕಾರು ನಿಲ್ಲಿಸಿ, ಮಕ್ಕಳೊಂದಿಗೆ ತಿಂಡಿ ತಿನಿಸುಗಳನ್ನು ಹಂಚಿ ತಿನ್ನುತ್ತಿದ್ದ, ಕೊರೆಯುತ್ತಿರುವ ಚಳಿಗಾಲದ ಸಂದರ್ಭದಲ್ಲಿ ನಿರ್ಗತಿಕರಿಗೆ ತನ್ನ ಕೋಟನ್ನು ನೀಡುತ್ತಿದ್ದ. ಇವು ಹಿಟ್ಲರನ ಕಳಂಕವನ್ನು ತೊಡೆದು ಹಾಕಬಹುದೇ? ರೈಲು ನಿಲ್ದಾಣದಲ್ಲಿ ಟೀ ಮಾರಾಟ ಮಾಡುತ್ತಿದ್ದ ಮೋದಿ, ಗುಜರಾತಿನ ದೀರ್ಘಕಾಲದ ಮುಖ್ಯಮಂತ್ರಿ, ಬಿ.ಜೆ.ಪಿ.ಯ ಪೋಸ್ಟರ್ ಬಾಯ್, ಭವಿಷ್ಯದ ಪ್ರಧಾನಿ, ಇತ್ಯಾದಿಯಾಗಿ ಪ್ರವರ್ಧಮಾನಕ್ಕೆ ಬರುತ್ತಿರುವುದರ ಹಿಂದಿರುವ ಮಾಂತ್ರಿಕ ಶಕ್ತಿ, ಭಾರತದ ಪ್ರಜಾಪ್ರಭುತ್ವದ ಭವಿಷ್ಯದ ದಿಕ್ಕುಗಳ ಬಗ್ಗೆ ಗಂಭೀರವಾಗಿ

(೩೭ನೇ ಪುಟಕ್ಕೆ)

ಕರ್ನಾಟಕದಲ್ಲಿ ನೀರಿನ ಖಾಸಗೀಕರಣಕ್ಕೆ ಸಂಬಂಧಿಸಿದಂತೆ ಎಲ್ಲ ವರ್ಗಗಳ ನಡುವೆ ಎಲ್ಲಾ ರೀತಿಯ ಪ್ರಯತ್ನಗಳೂ ನಡೆಯುತ್ತಲೇ ಇವೆ. ಇದಕ್ಕಾಗಿ ಬಹುಪಾಲು ನಮ್ಮ ಬ್ಯೂರಾಕ್ರಸಿ ಮತ್ತು ಶ್ರೀಮಂತ ವರ್ಗ ಅಲರ್ಟ್ ಸ್ಥಿತಿಯಲ್ಲಿ ನಿಂತಿವೆ. ಖಾಸಗೀ ಕರಣನ್ನು 'ಜನರ ಮುಂದಿರುವ ಸುವರ್ಣಾವಕಾಶ, ಇದೊಂದು ವರದಾನ' ಎಂಬಂತೆ ಬಿಂಬಿಸುತ್ತಿವೆ. ಖಾಸಗೀಕರಣದ ನಿಜವಾದ ಅಪಾಯ ಇರುವುದು ಇಲ್ಲಿಯೇ. ಇವರ ಕಾರ್ಯಸಾಧನೆ ಆಗುವವರೆಗೂ ಗುಳ್ಳೇನರಿಗಳಂತೆ ನಾವು ಅಂದಿದ್ದನ್ನೆಲ್ಲಾ ಅನ್ನಿಸಿಕೊಳ್ಳುವ ಈ ಜನ ಒಮ್ಮೆ ಖಾಸಗೀಕರಣ ವಾಯಿತೆಂದರೆ ಸಿಂಹ-ಶಾರ್ದೂಲಗಳಾಗಿ ನಮ್ಮ ಮೇಲೆ ಬೀಳುತ್ತವೆ. ಎಂಥಾ ಪೆಟ್ಟಿಗೂ ಬಗ್ಗದೆ ನಮ್ಮ ರಕ್ತ ಹೀರಲು ಆರಂಭಿಸುತ್ತವೆ. ಈ ಹಿಂಸೆ ತಾಳಲಾರದೆ ಜನ ತಿರುಗಿಬಿದ್ದರೆ, ಸರ್ಕಾರ ಜನರ ಪರವಾಗಿ ನಿಲ್ಲ ಬಯಸಿದರೂ ಸಾಧ್ಯವಾಗದಂತ ನಿಬಂಧನೆಗಳ ನಡುವೆ ನಮ್ಮ ಪ್ರಜಾಸತ್ತಾತ್ಮಕ ಸರ್ಕಾರಗಳು ಸಿಕ್ಕಿಬಿದ್ದಿರುತ್ತವೆ.

ಬಡವರ ತಲೆ ಒಡೆಯುವ ನೀರಿನ ಖಾಸಗೀಕರಣ

'ಸರ್ವರೋಗಕ್ಕೂ ಖಾಸಗೀರಣವೇ ಮದ್ದು' ಎಂದು ಇತ್ತೀಚಿನ ವರ್ಷಗಳಲ್ಲಿ ರಣಕಹಳೆ ಊದುತ್ತಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರುವ ಖದೀಮರು ಮೂರು ಕಾಸಿನ ಬೆಲೆಗೆ ಕರ್ನಾಟಕದಾದ್ಯಂತ ನೀರನ್ನು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುತ್ತಿವೆ. ಖಾಸಗಿ ಕಂಪನಿಗಳು ಲಾಭಕ್ಕಾಗಿ ಎಂತಹ ತುಚ್ಛ ದಾರಿಗಿಳಿಯುತ್ತವೆಂಬುದಕ್ಕೆ ಈಗಾಗಲೇ ನಮ್ಮೆದುರು ಅನೇಕ ನಿದರ್ಶನಗಳು ಇರುವಾಗ ಕೆಳ ಮಧ್ಯಮವರ್ಗದವರಿಗೆ ಮತ್ತು ಬಡಜನರಿಗೆ ಸಂವಿಧಾನಾತ್ಮಕವಾಗಿರುವ 'ಬದುಕುವ ಹಕ್ಕಿನ ಅರ್ಥವಾದರೂ ಏನು? ನೀರಿನ ಖಾಸಗೀಕರಣದ ಅಪಾಯದ ಬಗ್ಗೆ ಕಣ್ಣುತೆರೆಸುವಷ್ಟು ಉದಾಹರಣೆಗಳು ನಮ್ಮೆದುರು ಇರುವಾಗ ಪ್ರಜ್ಞಾವಂತರಾದ ನಾವೇಕೆ ಇದರ ಬಗ್ಗೆ ಧ್ವನಿ ಎತ್ತುತ್ತಿಲ್ಲ? ಖಾಸಗಿ ಕಂಪನಿಗಳು ತಮಗೆ ಲಾಭ ಗಳಿಸುವವರೆಗೂ ಬೂಟಾಟಿಕೆಯಿಂದ ವರ್ತಿಸುತ್ತಾ ನಷ್ಟವನ್ನು ಯಾರ ತಲೆಗಾದರೂ ಕಟ್ಟುವ ಚಾಲಾಕಿತನ ಜಾಣತನವನ್ನು ನಾವೇಕೆ ಒಪ್ಪುತ್ತಿದ್ದೇವೆ. ಖಾಸಗಿ ಕಂಪನಿಗಳು ನಮ್ಮನ್ನು ನಂಬಿಸುವಂತೆ ಅವು ಹೆಚ್ಚಿನ ವೃತ್ತಿಪರತೆ ಹೊಂದಿವೆಯೇ? ಇದೂ ಸಹ ಖಾಸಗಿ ಕಂಪನಿಗಳು ಹರಡುತ್ತಿರುವ ಸುಳ್ಳಿನ ಕಂತೆಯೇ ಆಗಿದೆ.

ಖಾಸಗೀಕರಣ ಎಂಬ ಪದ ಕೇಳುತ್ತಿದ್ದಂತೆ ನಮ್ಮಲ್ಲಿ ಒಂದು ವರ್ಗ ಖುಷಿಪಡುತ್ತದೆ. ಕಾರಣ ಅವರಿಗೆ ಅಗತ್ಯವಾದ ಸೇವೆಗಳು ಬಹಳ ಅಗ್ಗವಾಗಿ ದೊರೆಯುತ್ತವೆಯಂತೆ. ಅಲ್ಲಿ ಭ್ರಷ್ಟತೆ ಇರುವುದಿಲ್ಲವಂತೆ. ಹೀಗೆ ಯೋಚಿಸುವಾಗ ರಸ್ತೆ, ಕರೆಂಟು, ನೀರು, ಏನೇ ಆಗಲಿ ಖಾಸಗೀಕರಣ ಮಾಡುವುದು ಬಹಳ ಪ್ರಯೋಜನಕಾರಿಯಾದುದೇ! ಆದರೆ ಇದೆಷ್ಟು ನಿಜ. ಆದರೆ ಇಲ್ಲೊಂದು ಪ್ರಶ್ನೆ ಇದೆ. ಖಾಸಗೀ ಸೇವೆಯನ್ನು ಕೊಳ್ಳುವ, ಅನುಭೋಗಿಸುವ ಹಣದ ಮಾಲೀಕರು ನಿಜವಾಗಿಯೂ ಯಾರು? ಬೆವರು ಹರಿಸಿ ದುಡಿಯುವ ಶ್ರಮಿಕರದ್ದೇ ಅಥವಾ ಸಾರ್ವಜನಿಕ ಇಲಾಖೆಗಳ ಮೂಲಕ ಉನ್ನತ ಶಿಕ್ಷಣ ಪಡೆದು 'ಹೇಗೋ', ಎಲ್ಲೋ ಹೋಗಿ ಕದಿಯುವ ಜ್ಞಾನವನ್ನೇ ನಿಜವಾದ ಶ್ರಮ ಎಂದು ಭ್ರಮಿಸುತ್ತಿರುವ ಸುಖ ಸಂಸ್ಕೃತಿಯ ಅಲ್ಪ ಸಂಖ್ಯಾತ್ಯರದ್ದೇ? ಈ ಪ್ರಶ್ನೆಗೆ ಉತ್ತರವನ್ನು ಯಾರೂ ಸಹ ಹೇಳಬಹುದಾಗಿದೆ. ಅಲ್ಲದೆ ಹೀಗೆ ನಿರ್ದಿಷ್ಟವಾದ ಜಾತಿ, ಧರ್ಮ, ಲಿಂಗ ಬೇಧ ಏನೂ ಅಗತ್ಯವಿಲ್ಲ. ಸುಖ ಎತ್ತಲಿಂದಾದರೂ ಹರಿದು ಬರಲಿ ಅವೆಲ್ಲವೂ ಅವರಿಗೇ ಉಳಿಯಲಿ ಅಲ್ಲವೇ? ಇದು ಈ ದೇಶದ ಪ್ರಜಾಪ್ರಭುತ್ವವೇ?



ಇಂದಿನ ಖಾಸಗೀಕರಣದ ಚಿಂತನೆಯ ಬೆಂಬಲಿಗರಿಗೆ ಈ ಸಮಸ್ಯೆಯ ಅಂತರಾಳ ಸ್ಪಷ್ಟವಾಗಿ ಗೊತ್ತಿದೆ. ಹಾಗಾಗಿಯೇ ಅವರು ಸಾರ್ವಜನಿಕ ಸರಬರಾಜು ವ್ಯವಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಈ ದೇಶ-ಜನರನ್ನೇ ಆಯ್ಕೆ ಮಾಡುತ್ತವೆ. ಹಂತಹಂತವಾಗಿ ಒಂದೊಂದೇ ವರ್ಗಗಳ ತಲೆ ಸವರುತ್ತಾ ಹೋಗುತ್ತವೆ. ಹೀಗೆ ತಲೆ ಸವರುವಾಗ ಅವರು ಕೆಲವು ಭ್ರಮಿಸುವ ಮಂತ್ರಗಳನ್ನು ಪಠಿಸುತ್ತಾರೆ. "ನಿರಂತರ ಕರೆಂಟು-ನೀರು, ಚರಂಡಿ-ಆರೋಗ್ಯ ನಿಮಗೆ ಒದಗಿಸುತ್ತೇವೆ. ಈಗ ನೋಡಿ ಹೇಗಿದೆ. ನಿಮ್ಮ ಸ್ಥಿತಿ, ನಿಮಗೆ ಶುದ್ಧ ಕುಡಿಯುವ ನೀರಿಲ್ಲ, ಆರೋಗ್ಯ ಸ್ಥಿತಿ ಹದೆಗೆಡುತ್ತಿದೆ, ಹೀಗೇ ಇರುವುದು ಅನಾಗರೀಕವಲ್ಲವೆ? ಒಂದು ದೇಶದಲ್ಲಿ ಒಂದು ಸರ್ಕಾರ ನಿಮ್ಮಂತ ಗೌರವಾನ್ವಿತ ಪ್ರಜೆಗಳನ್ನು ಹೇಗಿಟ್ಟಿದೆ ನೋಡಿ?!. ಅವರ ಸರಬರಾಜು ವ್ಯವಸ್ಥೆ ಹೇಗೆ ಎಕ್ಕುಟ್ಟಿ ಹೋಗಿದೆ ನೋಡಿ. ಇಂದಿನ ನಿಮ್ಮ ದೇಶದ ಆಡಳಿತ ವ್ಯವಸ್ಥೆಗೆ ಇದನ್ನು ಸರಿಪಡಿಸಲು ಸಾಧ್ಯವೇ ಇಲ್ಲ. ಹಾಗೆ ಸಾಧ್ಯವಿದ್ದಿದ್ದರೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷ ಬೇಕಿತ್ತು?" ಎಂದೆಲ್ಲಾ ಹೇಳುತ್ತಾರೆ. ಹೀಗೆ ತಲೆ ಸವರಲು ಅವರು ಬಳಸುವುದು ಶುದ್ಧ ಸ್ವದೇಶೀ ಕೈ-ಬಾಯಿಗಳನ್ನೇ. ಅಂಥ ಕೈ ಬಾಯಿಗಳು ಸಾಮಾನ್ಯವಾಗಿ ಮೇಲೆ ಹೇಳಿದ ಮೊದಲ ವರ್ಗದವರಾಗಿರುತ್ತಾರೆ. ಇದನ್ನು ಅವರು "ದೇಶ ಸೇವೆ ಮಾಡುತ್ತಿದ್ದೇವೆ" ಎಂಬ ಉಮೇದಿನಲ್ಲೇ ಮಾತಾನಾಡುತ್ತಾ ಮಾಡುತ್ತಾರೆ. ಇಂಥಾ ದೇಶ ಸೇವೆ ಮಾಡಲು ಅವರ ಬಳಿ ಬೇಕಾದಷ್ಟು ಪುರುಸೊತ್ತಿರುತ್ತದೆ. ಒಮ್ಮೆ ಈ ದೇಶ ಸೇವೆ ಆಚರಣೆಗ ಬಂದಿತೆಂದರೆ ಅದರಿಂದ ಅವರಿಗೆ ಎಷ್ಟು ಪರ್ಸೆಂಟ್ ಸಿಗುತ್ತದೆ ಎಂದು ಸಹ ಅವರಿಗೆ ಗೊತ್ತು.

ಸದ್ಯಕ್ಕೆ ಕರ್ನಾಟಕದಲ್ಲಿ ನೀರಿನ ಖಾಸಗೀಕರಣಕ್ಕೆ ಸಂಬಂಧಿಸಿದಂತೆ ಈ ಎಲ್ಲ ವರ್ಗಗಳ ನಡುವೆ ಎಲ್ಲಾ ರೀತಿಯ ಪ್ರಯತ್ನಗಳೂ ನಡೆಯುತ್ತಲೇ ಇವೆ. ಇದಕ್ಕಾಗಿ ಬಹುಪಾಲು ನಮ್ಮ ಬ್ಯೂರಾಕ್ರಸಿ ಮತ್ತು ಶ್ರೀಮಂತ ವರ್ಗ ಅಲರ್ಟ್ ಸ್ಥಿತಿಯಲ್ಲಿ ನಿಂತಿವೆ. ಖಾಸಗೀಕರಣನ್ನು "ಜನರ ಮುಂದಿರುವ ಸುವರ್ಣಾವಕಾಶ, ಇದೊಂದು ವರದಾನ" ಎಂಬಂತೆ ಬಿಂಬಿಸುತ್ತಿವೆ. ಖಾಸಗೀಕರಣದ ನಿಜವಾದ ಅಪಾಯ ಇರುವುದು ಇಲ್ಲಿಯೇ. ಇವರ ಕಾರ್ಯಸಾಧನೆ ಆಗುವವ

ರೆಗೂ ಗುಳ್ಳೇನರಿಗಳಂತೆ ನಾವು ಅಂದಿದ್ದನ್ನೆಲ್ಲಾ ಅನ್ನಿಸಿಕೊಳ್ಳುವ ಈ ಜನ ಒಮ್ಮೆ ಖಾಸಗೀಕರಣವಾಯಿತೆಂದರೆ ಸಿಂಹ–ಶಾರ್ದೂಲಗಳಾಗಿ ನಮ್ಮ ಮೇಲೆ ಬೀಳುತ್ತವೆ. ಎಂಥಾ ಪೆಟ್ಟಿಗೂ ಬಗ್ಗದೆ ನಮ್ಮ ರಕ್ತ ಹೀರಲು ಆರಂಭಿಸುತ್ತವೆ. ಈ ಹಿಂಸೆ ತಾಳಲಾರದೆ ಜನ ತಿರುಗಿಬಿದ್ದರೆ, ಸರ್ಕಾರ ಜನರ ಪರವಾಗಿ ನಿಲ್ಲಬಯಸಿದರೂ ಸಾಧ್ಯವಾಗದಂತ ನಿಬಂಧನೆಗಳ ನಡುವೆ ನಮ್ಮ ಪ್ರಜಾಸತ್ತಾತ್ಮಕ ಸರ್ಕಾರಗಳು ಸಿಕ್ಕಿಬಿದ್ದಿರುತ್ತವೆ. ಅಂಥ ಅಸಹಾಯಕತೆಯಲ್ಲಿ ಒಂದೋ ಸರ್ಕಾರಗಳೇ ಉರುಳಿ ಬೀಳುತ್ತವೆ. ಇಲ್ಲವೇ ಅಂತಾರಾಷ್ಟ್ರೀಯ ದಿಗ್ಬಂಧನಗಳಿಗೆ ಒಳಗಾಗಿ ನರಳುತ್ತವೆ.

ಈ ಜಗತ್ತಿನ ಎಲ್ಲಾ ಬಡ ರಾಷ್ಟ್ರಗಳ ನೀರೇ ಮೊದಲಾದ ಸಾರ್ವಜನಿಕ ವಿರತಣಾ ವ್ಯವಸ್ಥೆಗಳನ್ನು ಖಾಸಗೀರಣಕ್ಕೆ ಒಳಪಡಿಸಬೇಕು ಎಂದು ವಿವಿಧ ಒಪ್ಪಂದಗಳಿಗೆ ಬೆದರಿಕೆ, ಬ್ಲಾಕ್‌ಮೇಲ್ ತಂತ್ರಗಳ ಮೂಲಕ ಸಹಿ ಮಾಡಿಸಿಕೊಂಡಿರುವ ಯೂರೋಪಿಯನ್ ಸಮುದಾಯದ ರಾಷ್ಟ್ರಗಳು ಅದರಲ್ಲೂ ಮುಖ್ಯವಾಗಿ ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಹಾಗೂ ಏಷ್ಯಾಖಂಡದಲ್ಲೇ ಇದ್ದರೂ ಯೂರೋಪಿಯನ್ನರಿಗೇ ಹುಟ್ಟಿದವರಂತೆ ವರ್ತಿಸುತ್ತಿರುವ ಜಪಾನಿನಂತಹ ದೇಶಗಳ ಒಕ್ಕೂಟ ಈ ಜಗತ್ತನ್ನಾಗಲೀ ಅಥವಾ ಬಡರಾಷ್ಟ್ರಗಳನ್ನಾಗಲೀ ಉದ್ಧಾರ ಮಾಡಲೇನೂ ಹೊರಟಿಲ್ಲ. ಇವರೆಲ್ಲಾ ಸೇರಿ, ಇವರೆಲ್ಲರ ಹಂಗಾಮಿ ದುಡಿಮೆಯ ದುಡ್ಡನ್ನು ಷೇರು ಬಂಡವಾಳ ಹೂಡಿ ಸ್ಥಾಪಿಸಿರುವ ವಿಶ್ವಬ್ಯಾಂಕ್ ಮತ್ತು ಅದರ ಮರಿ ಬ್ಯಾಂಕುಗಳನ್ನು ಲಾಭದಲ್ಲಿ ನಡೆಸುವ ಏಕೈಕ ಉದ್ದೇಶವನ್ನು ಮಾತ್ರ ಹೊಂದಿವೆ.

ಇಂದು ಜಗತ್ತಿನ ಎಲ್ಲಾ ಬಡರಾಷ್ಟ್ರಗಳ ಮೂಲಭೂತ ಸೌಕರ್ಯಗಳ ಸಬಲೀಕರಣ, ವಿಸ್ತರಣೆ, ಮುಖ್ಯವಾಗಿ ನಗರೀಕರಣ, ನಗರಗಳ ಸೌಂದರ್ಯೀಕರಣ ಎಂದು ಬಿಲಿಯಗಟ್ಟಲೆ ಡಾಲರ್ ಸಾಲ ಕೊಡಲು ಮುಂದಾಗುತ್ತಿರುವ ವಿಶ್ವಬ್ಯಾಂಕು, ಏಶಿಯಾ ಡೆವಲಪ್‌ಮೆಂಟ್ ಬ್ಯಾಂಕು, ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್‌ನಂಥ ಅಂತಾರಾಷ್ಟ್ರೀಯ ಲೇವಾದೇವಿಗಾರರು ಸುಮ್ಮನೆ, ತಮಾಷೆಗೆ ಸಾಲ ನೀಡುತ್ತಿದ್ದಾರೇನು? ಸಾಲ ಕೊಡುವ ಅವರ ಏಕೈಕ ಗುರಿ ನಮ್ಮ ಸಾರ್ವಜನಿಕ ವ್ಯವಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಮೂಲಕ ತಮ್ಮ ಆದಾಯವನ್ನು ಸುಲಭವಾಗಿ ಮತ್ತು ನಿರಂತರವಾಗಿ ವೃದ್ಧಿಸಿಕೊಳ್ಳುವ ಒಂದೇ ಉದ್ದೇಶ ಅಷ್ಟೆ.

ಈಗಾಗಲೇ ಬಿಸ್ಲರಿ ಬಾಟ್ಲಿಯ ನೀರಿನ ಲಾಭ ಬೇರೆ ಯಾವುದರಿಂದ ಸಾಧ್ಯ! ಇವರು ಹೇಳುವ 'ನಿರಂತರ–ಸುಲಲಿತ' ನೀರಿನ ಸರಬರಾಜು ಎಂಬ ಭ್ರಮೆಯನ್ನೇ ನಾವು ನಂಬುವುದಾದರೆ, ಇದನ್ನು ಮಾಡುವವರು ಯಾರು? ಇದಕ್ಕಾಗಿ ಅವರು ವಿದೇಶದಿಂದ ಜನರನ್ನು ಕರೆತರುತ್ತಾರೆಯೇ? ಅದು ಸಾಧ್ಯವಿಲ್ಲ. ಅವರ ದೇಶಗಳಲ್ಲಿ ಅವರ ಜನರ ಜೀವನ ಮಟ್ಟಕ್ಕೆ ಸಂಬಳ ಕೊಡಲಾಗದ ಇದೇ ದೇಶಗಳು ಹೊರಗುತ್ತಿಗೆ ನೆಪದಲ್ಲಿ ನಮ್ಮ ದೇಶದ ಮಾನವಸಂಪನ್ಮೂಲವನ್ನು "ಥರಾವರಿ" ಬಳಸಿಕೊಳ್ಳುತ್ತಿರುವುದನ್ನು ನಾವೇ ನೋಡುತ್ತಿದ್ದೇವಲ್ಲ.

ಈಗಾಗಲೇ ಬಿಸ್ಲರಿ ಬಾಟ್ಲಿಯ ನೀರಿನ ಲಾಭ ಬೇರೆ ಯಾವುದರಿಂದ ಸಾಧ್ಯ! ಇವರು ಹೇಳುವ 'ನಿರಂತರ–ಸುಲಲಿತ' ನೀರಿನ ಸರಬರಾಜು ಎಂಬ ಭ್ರಮೆಯನ್ನೇ ನಾವು ನಂಬುವುದಾದರೆ, ಇದನ್ನು ಮಾಡುವವರು ಯಾರು? ಇದಕ್ಕಾಗಿ ಅವರು ವಿದೇಶದಿಂದ ಜನರನ್ನು ಕರೆತರುತ್ತಾರೆಯೇ? ಅದು ಸಾಧ್ಯವಿಲ್ಲ. ಅವರ ದೇಶಗಳಲ್ಲಿ ಅವರ ಜನರ ಜೀವನ ಮಟ್ಟಕ್ಕೆ ಸಂಬಳ ಕೊಡಲಾಗದ ಇದೇ ದೇಶಗಳು ಹೊರಗುತ್ತಿಗೆ ನೆಪದಲ್ಲಿ ನಮ್ಮ ದೇಶದ ಮಾನವಸಂಪನ್ಮೂಲವನ್ನು "ಥರಾವರಿ" ಬಳಸಿಕೊಳ್ಳುತ್ತಿರು ವುದನ್ನು ನಾವೇ ನೋಡುತ್ತಿದ್ದೇವಲ್ಲ.

ಈಗಾಗಲೇ ನೀರಿನ ಖಾಸಗೀಕರಣ ಮಾಡಿರುವ ಕರ್ನಾಟದ ಕೆಲವು ನಗರ ಪ್ರದೇಶಗಳಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಾನದಂಡಗಳಿಗಿಂತ ಹೀನವಾದ ಮಟ್ಟದಲ್ಲಿ ನೀರನ್ನು ಒದಗಿಸುತ್ತಿವೆ. ಹಾಗಾದರೆ ಖಾಸಗೀಕರಣದಿಂದ ಸ್ವಾವಲಂಬನೆ ಮತ್ತು ಸ್ಥಿರತೆ ಕುಡಿಯುವ ನೀರಿನಲ್ಲಿ ಸಾಧ್ಯವೇ? ಹೀಗಿರುವಾಗ ಮೂಲಭೂತವಾಗಿ ನಗರಗಳಲ್ಲಿ ನೀರಿನ ಖಾಸಗೀಕರಣದ ನೀತಿಗಳನ್ನು ನಾವು ಒಪ್ಪಬೇಕೆ? ಖಂಡಿತವಾಗಿಯೂ ಇಲ್ಲ.

ಆದ್ದರಿಂದ 'ಯಾವುದೇ ರೀತಿಯ ಸುಧಾರಣಾ ಅಜೆಂಡಾ ಮತ್ತು ನೀರಿನ ಖಾಸಗೀಕರಣದ ನೀತಿಗಳನ್ನು ನಾವು ಒಪ್ಪುವುದಿಲ್ಲ' ಎಂದು ಸಾರಿ ಹೇಳುತ್ತೇವೆ.

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ನಿಗಮ (ಕೆ.ಯು.ಐ.ಡಿ.ಎಫ್.ಸಿ) ೧೯೯೩ರಿಂದಲೇ ಆಂತರಿಕವಾಗಿ ಮತ್ತು ಬಾಹ್ಯವಾಗಿ ನಗರ ಮೂಲಸೌಕರ್ಯ ಅಭಿವೃದ್ಧಿಗಾಗಿ ಹಣವನ್ನು ಪಡೆಯುತ್ತಾ, ಅದನ್ನು ವಿನಿಯೋಗಿಸುತ್ತಲೇ ಬರುತ್ತಿದೆ. ಆಡಳಿತ ಸುಧಾರಣೆ ಮತ್ತು ನಗರ ನೀರು ಸರಬರಾಜು ಮುಂತಾದ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರಸ್ತುತದಲ್ಲಿ ಹರಿದು ಬರುತ್ತಿರುವ ಶೇ. ೯೦ರಷ್ಟು ಅಂತಾರಾಷ್ಟ್ರೀಯ ನಿಧಿಯನ್ನು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೋರೇಷನ್ (ಕೆ.ಯು.ಐ.ಡಿ.ಎಫ್.ಸಿ) ಸಂಸ್ಥೆಯೇ ನಿಭಾಯಿಸುತ್ತಿದೆ. ಹೀಗೆ ಹರಿದು ಬರುತ್ತಿರುವ ಅಂತಾರಾಷ್ಟ್ರೀಯ ನಿಧಿಯ ಕರಾರುವಕ್ಕಾದ ನೀತಿಯೆಂದರೆ **ಈಗಾಗಲೇ ಸರ್ಕಾರ ಅನುಸರಿಸುತ್ತಿರುವ ಅಭಿವೃದ್ಧಿ ನೀತಿ ಹಾಗೂ ನಗರ ನೀರು ಸರಬರಾಜು ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ತರುವುದು.** ಇದಕ್ಕೆ ನಿದರ್ಶಗಳೆಂದರೆ, ಕರ್ನಾಟಕ ನಗರ ನೀರುಸರಬರಾಜು ಯೋಜನೆ, ಗ್ರೇಟರ್ ಬೆಂಗಳೂರು ನೀರುಸರಬರಾಜು ಯೋಜನೆ, ಕೆ.ಯು.ಐ.ಡಿ.ಎಫ್.ಸಿಗೆ ತಾಂತ್ರಿಕ ನೆರವು ಯೋಜನೆ, ನೀರಿನ ಖಾಸಗೀಕರಣ ಮತ್ತು ಅನುಷ್ಠಾನದಲ್ಲಿ ತಾಂತ್ರಿಕ ಸಲಹಾ ಯೋಜನೆ ಮುಂತಾದ ಯೋಜನೆಗಳು ಅತ್ತ ವಿದೇಶಿ ನೆರವನ್ನು ಪಡೆಯುತ್ತಲೇ ಇತ್ತ ತಮ್ಮ ಹಿಂದಿನ ನೀತಿಗಳಿಗೆ ಮಹತ್ತಾದ ತಿದ್ದುಪಡಿಗಳನ್ನು ಮಾಡಿಕೊಂಡು, ಚುನಾಯಿತ ಪ್ರತಿನಿಧಿಗಳ ಕಣ್ಣಿಗೆ ಏನೂ ಗೊತ್ತಾಗದಂತೆ ಪದಪುಂಜಗಳನ್ನು ಆ ನೀತಿಗಳಿಗೆ ಬಳಸುತ್ತಾ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅಂದರೆ ನೀರಿನ ಸರಬರಾಜು ಮತ್ತು ನಿರ್ವಹಣೆಯಲ್ಲಿ ಎಲ್ಲೂ ಸಹ ಹಣ ಪೋಲಾಗದಂತೆ ವಸೂಲಿ ಮಾಡುವುದು ಸೇರಿ ದಂತೆ ಖಾಸಗಿ ಸಹಭಾಗಿತ್ವವನ್ನು ಒಳಗೊಳ್ಳಾಗುತ್ತಿದೆ.

ಕಳೆದ ದಶಕದಲ್ಲಿ ಕೆ.ಯು.ಐ.ಡಿ.ಎಫ್.ಸಿಯು ವಿಶ್ವ ಬ್ಯಾಂಕ್ ಮತ್ತು ಅದರ ಅಂಗ ಸಂಸ್ಥೆಗಳ ಅಣತಿಯಂತೆಯೇ ಕಾರ್ಯ ನಿರ್ವಹಿಸುತ್ತಾ ತನ್ನ ಅಸಾಹಕತೆಯನ್ನು ವ್ಯಕ್ತ ಪಡಿಸುತ್ತಾ ಸಂವಿಧಾನಾತ್ಮ ವ್ಯವಸ್ಥೆಗೆ ಮಾರಕವಾಗಿ ವರ್ತಿಸುತ್ತಿದೆ.

ಇದಕ್ಕೆ ಪೂರಕವೆಂಬಂತೆ ಗೆಝೆಟ್ ಗೊತ್ತುವಳಿಯಲ್ಲಿ ಅಂಗೀಕರಿಸಲಾಗಿರುವ ೧. ಮೌಲ್ಯಮಾಪನ ಮತ್ತು ಕಾನೂನು ಚೌಕಟ್ಟು ಏರ್ಪಾಟ್ಟು ವ್ಯವಸ್ಥೆಯ ದಾಖಲೆ, ೨. ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಕೌನ್ಸಿಲ್ ಮಾರ್ಗದರ್ಶಿ ಸೂತ್ರಗಳು, ೩. ಸೇವಾ ವಿಸ್ತರಣೆಗಾಗಿ ಸಾಂಸ್ಥಿಕ ಏರ್ಪಾಟು, ೪. ನೀರು ಸರಬರಾಜು ಮತ್ತು ನೈರ್ಮಲ್ಯ ಹೂಡಿಕೆ ಮತ್ತು ದರ ನಿಗದಿ ಚೌಕಟ್ಟು, ೫. ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯಸ್ತೆತೆ ಬಗ್ಗೆ ರಾಜ್ಯಮಟ್ಟದಲ್ಲಿ ಮಾಹಿತಿ ವ್ಯವಸ್ಥೆ... ಮುಂತಾದ ಮಹತ್ತರ ನೀತಿಗಳ ಬಗ್ಗೆ ಸದನದಲ್ಲಿ ಚರ್ಚೆಯಾಗದೆ ಹೊರಬಂದು ಅನುಷ್ಠಾನಗೊಳ್ಳುತ್ತಿವೆ.

ಬೆಂಗಳೂರು ಮತ್ತು ಸುತಮುತ್ತಲ ಎಂಟು ಪುರಸಭೆಗಳ ನೀರಿನ ಖಾಸಗೀಕರಣದ ಯೋಜನೆಯನ್ನು **ನೀರಿನ ಖಾಸಗಿಕರಣ ವಿರೋಧಿ ಜನಾಂದೋಲನ** ಪರಿಣಾಮಕಾರಿಯಾಗಿ ವಿರೋಧಿಸಿ ಅದನ್ನು ಸಂವಿಧಾನ ಬದ್ಧ ಬೆಂಗಳೂರು ನೀರು ಸರಬರಾಜು ನಿಗಮವೇ ಕೈಗೆತ್ತಿಕೊಳ್ಳುವಂತೆ ಮಾಡಿದ್ದನ್ನು ನಾವ್ಯಾರು ಮರೆಯುವಂತಿಲ್ಲ. ಅದನ್ನು ಸ್ವಲ್ಪ ವಿಶ್ಲೇಷಿಸಿ ನೋಡಿದಲ್ಲಿ ಬೆಂಗಳೂರಿನ ಎಂಟು ಪುರಸಭೆಗಳ ಜನರ ಆರ್ಥಿಕ ಸ್ವರೂಪ, ಆದಾಯದ ಮೂಲ ಮೊತ್ತಗಳನ್ನು ಗಮನಿಸಬೇಕಾಗುತ್ತದೆ. ಸದ್ಯಕ್ಕೆ ಪುರಸಭೆಗಳು ವಿಧಿಸುತ್ತಿರುವ ನೀರಿನ ಬಿಲ್ಲನ್ನು ಕಟ್ಟಲಾಗದ, ಸಾರ್ವಜನಿಕ ನಲ್ಲಿಗಳನ್ನೇ ಅವಲಂಬಿಸಿರುವ ಜನರ ಸಂಖ್ಯೆ ಶೇಕಡಾ ೪೫ಕ್ಕಿಂತ ಹೆಚ್ಚು. ಇನ್ನು ಬೆಂಗಳೂರಿನಲ್ಲಿರುವ ಸ್ಲಂಗಳ ಸಂಖ್ಯೆ ಅಧಿಕೃತವಾಗಿಯೇ ೪೦೦, ಅನಧಿಕೃತವಾಗಿ ೧೨೦೦ಕ್ಕಿಂತ ಹೆಚ್ಚು. ಇಲ್ಲಿನ ಜನ ಇಂದೂ ನೀರಿಗೆ ಪರದಾಡುತ್ತಿದ್ದಾರೆ ಎಂಬುದು ನಿಜ. ಆದರೆ ಹೇಗೋ ಸದ್ಯಕ್ಕೆ ನೀರನ್ನು ಪಡಿಯುತ್ತಿದ್ದಾರೆ. ಈ ವಿಷಮ ಸ್ಥಿತಿ ಮುಂದುವರೆಯುತ್ತಿರುವಾಗ, ಇಂದಲ್ಲಾ ನಾಳೆ ನಮ್ಮ ಚುನಾಯಿತ ಸರ್ಕಾರಗಳು ನೀರನ್ನು ನೀಡುತ್ತವೆ ಎಂಬ ಭರವಸೆ ಹೊಂದಿವೆ. ಆದರೆ ಒಮ್ಮೆ ಈ ನೀರು ಖಾಸಗೀಕರಣವಾಯಿತೆಂದರೆ ಸದ್ಯಕ್ಕೆ ಅವರೇ ನೀಡಿರುವ ಸೂಚನೆಯ ಪ್ರಕಾರ ಕನಿಷ್ಠ ೩–೫ ಜನರಿರುವ ಮನೆಗೆ ರೂ. ೨೫೦೦೦–೩೦೦೦ ಮಾಸಿಕ ಬಿಲ್ಲು ಬರುತ್ತದೆ. ಈ ಪ್ರದೇಶದ ಜನರ ಮಾಸಿಕ ಆದಾಯವೇ ೩೦೧೧ ದಾಟದೇ ಇದ್ದಾಗ, ಅವರು ಈ ನೀರಿನ ಬಿಲ್ಲನ್ನು ಕಟ್ಟಲು ಸಾಧ್ಯವೇ?

ಇದು ಆರ್ಥಿಕತೆಯ ಪ್ರಶ್ನೆಯಾದರೆ ನೈತಿಕವಾಗಿ ಒಂದು ಸಾರ್ವಭೌಮ ಸಂವಿಧಾನವನು ಹೊಂದಿರುವ ಸರ್ಕಾರವೊಂದು ತನ್ನ ದೇಶದ ಪ್ರಜೆಗಳಿಗೆ ಅತ್ಯಂತ ಮೂಲಭೂತ ಅವಶ್ಯಕತೆಯಾದ ನೀರನ್ನೂ ಕೊಡಲಾಗದು ಎಂದರೆ ಅದರ ಅಸ್ಥಿತ್ವಕ್ಕೆ ಯಾವ ನೈತಿಕತೆ ಇದೆ? ಈ ದೇಶದ ಜನರ ತೆರಿಗೆ, ನೈಸರ್ಗಿಕ ಸಂಪನ್ಮೂಲಗಳ ಮೇಲೆ ಬದುಕುವ ಸರ್ಕಾರವೊಂದು ನೀರನ್ನು ಸರಬ

[illegible] ವಿದೇಶಿ ಕಂಪನಿಯಿಂದ ಸಾಲ ಪಡೆದು, [illegible]ನ್ನು, ಪ್ರಜೆಗಳಿಂದ ಗ್ರಾಹಕರನ್ನಾಗಿ ಪರಿವ ರ್ತಿಸಿ, [illegible] ಇಡ ಇಚ್ಛುತ್ತವೆ ಎಂದಾ ದರೆ [illegible] ಮಾಡುತ್ತವೆ?

ಇವೆಲ್ಲಕ್ಕಿಂತ ಮುಖ್ಯವಾಗಿ ಸಂವಿಧಾನದ ೨೧ನೇ ವಿಧಿಯ ಪ್ರಕಾರ ನೀರು ಬದುಕುವ ಹಕ್ಕಿನ ಭಾಗ ಇದು. ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು. ನೀರಿನ ಮಾರಾಟ ಮಾನವ ಹಕ್ಕುಗಳ ಉಲ್ಲಂಘನೆ ಸಹ. ಹಾಗೆಯೇ ಸಂವಿಧಾನದ ೭೪ನೇ ತಿದ್ದುಪಡಿಯ ಪ್ರಕಾರ ತನ್ನ ಪ್ರಜೆಗಳಿಗೆ ನೀರನ್ನು ಪೂರೈಸುವುದು ಚುನಾಯಿತ ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯದ ಬಾಧ್ಯತೆ ನಗರಾಡಳಿತಕ್ಕಿರಬೇಕೆಂದು ಸಂವಿಧಾನ ಹೇಳುತ್ತದೆ. ಸಂವಿಧಾನ ಈ ರಾಷ್ಟ್ರದ ತಾಯಿ. ಹಾಗಾದರೆ ಈಗ ನಮ್ಮ ಸರ್ಕಾರಗಳು ತೆರಮರೆಯಲ್ಲಿ ಮಾಡ ಹೊರಟಿರುವ ಖಾಸಗೀಕರಣದ ಕರಾಮತ್ತು ತಾಯ್ಗಂಡತನವಾಗು ವುದಿಲ್ಲವೇ?

ಆದ್ದರಿಂದ ಪ್ರಜಾಸತ್ತಾತ್ಮಕವಾಗಿರುವ ಸರ್ಕಾರಿ ಸಂಸ್ಥೆಗಳೇ ನಗರ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳಬೇಕೇ ಹೊರತು ವಿದೇಶಿ ಖಾಸಗೀ ಸಂಸ್ಥೆಗಳು ಈ ನಾಡಿನಲ್ಲಿ ಸೇವೆಯನ್ನು ಒದಗಿ ಸಲು ಬಿಡಬೇಕೆ? ಖಂಡಿತವಾಗಿಯೂ ಇದು ಸಾಧ್ಯವಿಲ್ಲ.

ಸಂದಿಗ್ಧ ಪ್ರಶ್ನೆಗಳು

* ಜೀವದ ಅವಶ್ಯಕವಾದ ನೀರನ್ನು ಹೀಗೆ ವಾಣಿಜ್ಯದ ವಸ್ತುವಾಗಿ ಮಾರ್ಪಡಿಸಿ ಬಡವರಿಗೆ ಅದರಲ್ಲೂ ಕಡಿಮೆ ಆದಾಯದ ವರ್ಗಗಳಾದ ದಲಿತರಿಗೆ ದೊರಕ ದಂತೆ ಮಾಡುವುದು ಸರಿಯೇ? ಈ ಜಲ ವಾಣಿಜ್ಯಕ ರಣವು ಎಲ್ಲಾ ಸ್ವಾಭಾವಿಕ ನ್ಯಾಯದ ನಿಯಮಗಳು ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ?

* ಲಾಭಾಧಾರಿತ ತಾಂತ್ರಿಕತೆಯಿಂದ ಕೂಡಿದ ವ್ಯವಸಾಯ ಯೋಜನೆಗಳು ಭೂರಹಿತರಲ್ಲಿ ಬಹುಸಂಖ್ಯಾ ತರಾದ ದಲಿತರಿಗೆ ನೀರನ್ನು ನಿರಾಕರಿಸುವುದು, ಮಾನವ ಹಕ್ಕುಗಳ ಕ್ರೂರ ಮತ್ತು ಭೀಕರ ಉಲ್ಲಂಘನೆಯಾಗುತ್ತದೆ ಯಲ್ಲವೇ?

* ಮಹಿಳೆಯರು ನೀರಿನ ಖಾಸಗೀಕರಣದ ಪ್ರಥಮ ಬಲಿಪಶುಗಳೆಂದು ತಿಳಿಯುವುದು ಲಿಂಗೀಯ ನ್ಯಾಯ ಒದಗಿಸುವುದರ ಮೊದಲ ಹೆಜ್ಜೆಯಾಗುತ್ತದೆ. ರಾಜಕೀಯ ಪ್ರತಿನಿಧಿಗಳನ್ನು ಚುನಾಯಿಸಿ ಪ್ರಜಾಪ್ರಭುತ್ವ ವನ್ನು ಎತ್ತಿಹಿಡಿದಿರುವ ಮಹಿಳೆಯರಿಗೆ ಸರ್ಕಾರವು ಜವಾ ಬ್ದಾರಿಯ ಉತ್ತರವನ್ನು ಈ ಸನ್ನಿವೇಶದಲ್ಲಿ ಕೊಡ ಬೇಡವೇ?

* ನಾಗರಿಕ ಸಮಾಜ ಎದ್ದು ವಿಶ್ವಬ್ಯಾಂಕನ್ನು ಒಂದೆ ಧ್ವನಿಯಿಂದ ಪ್ರತಿಭಟಿಸಿ, "ಇಷ್ಟು ಸಾಕು, ಇನ್ನು ಜಾಗ ಖಾಲಿ ಮಾಡಿ" ಎಂದು ಹೇಳುವ ಸಮಯ ಬಂದಿಲ್ಲವೇ? ತಡವಾಗುವುದಕ್ಕಿಂತ ಮೊದಲೆ, ಅಂತರರಾಷ್ಟ್ರೀಯ ಸಂಸ್ಥೆ ಗಳು ಮತ್ತು ಅದರ ಸಮೂಹ ಮಾಧ್ಯಮಗಳು ಆಹಾರ, ನೀರು, ಗಾಳಿ... ಮುಂತಾದ ಸ್ವಾಭಾವಿಕ ಸಂಪನ್ಮೂಲ ಗಳನ್ನು ನಾವೇ ರಕ್ಷಿಸಬೇಕಾದ ಅನಿವಾರ್ಯತೆ ಸಮ್ಮೆದುರಿಗಿದೆ. ಹಾಗಾದರೆ ಸಂವಿಧಾನಬದ್ಧ ನಮ್ಮ ಹಕ್ಕುಗಳನ್ನು ನಾವೇಕೆ ವಿದೇಶಿಯರಿಗೆ ನೀಡುತ್ತಿದ್ದೇವೆ?

* ತಮ್ಮ ಜೀವನೋಪಾಯಕ್ಕೆ ಭೂಮಿಯ ಮೇಲಿನ ಸಂಪನ್ಮೂಲಗಳನ್ನೇ ಆಶ್ರಯಿಸಿರುವ ಜನರಲ್ಲಿ ಬಹುಸಂಖ್ಯಾತರಾಗಿರುವ ದಲಿತರು, ಆದಿವಾಸಿಗಳು ಮತ್ತು ನಾಗರಿಕ ಸಮಾಜ ಮುಂದಾಳತ್ವವನ್ನು ವಹಿಸಿ ನೀರಿನ ಮೂಲಗಳ ಖಾಸಗೀಕರಣವನ್ನು ಒಟ್ಟಾಗಿ ವಿರೋ ಧಿಸಿ ಈ ದೇಶದ ಸಂವಿಧಾನವನ್ನು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವ ಅವಕಾಶ ನಮ್ಮದಾಗಿದೆ. ಇದರತ್ತ ನಾವೆಲ್ಲಾ ಒಮ್ಮತದ ನಿರ್ಧಾರ ಮಾಡಬೇಕಾಗಿದೆಯಲ್ಲವೇ.

ಕರ್ನಾಟಕ ರಾಜ್ಯದ ನಗರ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಯಲ್ಲಿ ವಿದೇಶಿ ಸಂಸ್ಥೆಗಳು ಪಾಲ್ಗೊಳ್ಳದಂತೆ ತಡೆಯಲು ಮತ್ತು ಎಲ್ಲರಿಗೂ ಅನುಕೂ ಲಕರವಾದ ನೀರು ಸರಬರಾಜು ಮತ್ತು ನಿರ್ವಹಣಾ ವ್ಯವ ಸ್ಥೆಯ ನೀತಿಯನ್ನು ರೂಪಿಸುವಲ್ಲಿ ಸರ್ಕಾರ ಸೋತಿದೆ ಯಾದ್ದರಿಂದ ನಾವೇ ಅಂಥ ಒಂದು ನೀತಿಯನ್ನು ರೂಪಿ ಸಬೇಕಾಗಿದೆ. ಅದಕ್ಕಾಗಿ ನಿಮ್ಮ ಅತ್ಯಮೂಲ್ಯ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಲು ಈ ಸಣ್ಣ ಲೇಖನ ಪ್ರಚೋ ದನೆಯಾಗಲಿ.

(ಫೆ. ೭, ೨೦೦೮ರಂದು ಬೆಂಗಳೂರಿನಲ್ಲಿ ನಡೆದ ನೀರಿನ ಖಾಸಗೀಕರಣ ಚರ್ಚೆಯಲ್ಲಿ ವಿತರಿಸಲಾದ ಮಾಹಿತಿ ಪತ್ರ ಇದು) □

'ನ್ಯಾನೋ' ಕಾರು:

(೯ನೇ ಪುಟದಿಂದ)

ಸಾಮರ್ಥ್ಯವಿದ್ದರೂ ಶ್ರೀಮಂತರ ಐಷಾರಾಮಿ ಜೀವನ ಶೈಲಿಯ ಭಾಗವಾಗಿ ಅದರಲ್ಲಿ ಓಡಾಡುವುದು ಒಬ್ಬೊಬ್ಬರೇ ಆದ್ದರಿಂದ ಪ್ರತಿ ಲೀಟರ್ ಇಂಧನ ದುರುಪಯೋಗವಾಗು ತ್ತದೆ ಮತ್ತು ಮಾಲಿನ್ಯ ಹೆಚ್ಚುತ್ತದೆ. ಹೀಗಾಗಿ ಸಾಮೂಹಿಕ ಸಾರಿಗೆಗೆ ಬದಲಾಗಿ ಕಾರಿನಂತ– ಅದು ನ್ಯಾನೋ ಕಾರೇ ಆಗಿರಲಿ–ಖಾಸಗಿ ವಾಹನಗಳ ಬಳಕೆ ಹೆಚ್ಚಾದಷ್ಟು ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ.

ಇದರ ನೇರ ಪರಿಣಾಮ ಬೀರುವುದು ನಗರದ ಕೆಳ ಮಧ್ಯಮ ವರ್ಗಗಳ ಮೇಲೆಯೇ ಹೊರತು ಈ ಮಾಲಿನ್ಯದ ಹೊಣೆಯನ್ನಾಗಲೀ ಅಥವಾ ಭಾರವನ್ನಾಗಲೀ ಶ್ರೀಮಂತರು ಹೊರುವುದಿಲ್ಲ. ಉದಾಹರಣೆಗೆ ರಸ್ತೆಯೆಂ ಬುದು ಈವರೆಗೆ ಎಲ್ಲಾ ಸಾರ್ವಜನಿಕರಿಗೆ ಮುಕ್ತವಾಗಿರು ತ್ತಿತ್ತು. ಅಂದರೆ ಒಂದರ್ಥದಲ್ಲಿ ಸಾರ್ವಜನಿಕ ಆಸ್ತಿಯಾಗಿ ರುತ್ತಿತ್ತು. ಈಗ ನ್ಯಾನೋ ಕಾರುಗಳ ಕಾರಣಕ್ಕೂ ರಸ್ತೆಗಳ ಮೇಲೆ ವಾಹನ ದಟ್ಟಣೆ ಏರುತ್ತಾ ಟ್ರಾಫಿಕ್ ಜಾಮ್‌ಗಳು ಹೆಚ್ಚಾಗುತ್ತವೆ.

ಅಂಥ ಸಂದರ್ಭವನ್ನು ಒಂದು ಪ್ರಜಾತಂತ್ರ ಹೇಗೆ ನಿಭಾಯಿಸುತ್ತದೆ? ಈ ಟ್ರಾಫಿಕ್ ಜಾಮ್‌ಗಳಿಗೆ ಕಾರಣ ವಾಹನ ಸಂಖ್ಯೆ ಹೆಚ್ಚಾಗಿರುವುದು ಮತ್ತು ಅದನ್ನು ಹೊರ ಬಲ್ಲಷ್ಟು ಸಾಮರ್ಥ್ಯವಿರುವ ರಸ್ತೆಗಳನ್ನು ಸರ್ಕಾರ ನಿರ್ಮಿ ಸದೇ ಇರುವುದು. ಹೀಗಾಗಿ ಈ ಸಮಸ್ಯೆಗೆ ಪರಿಹಾರವಿರು ವುದೇ ವಾಹನಗಳ ಸಮಸ್ಯೆಯನ್ನು ಅಂದರೆ ಖಾಸಗಿ ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಿ ಸಾರ್ವಜನಿಕ ಸಾಗಾಟ ವ್ಯವಸ್ಥೆಯನ್ನು ಹೆಚ್ಚಿಸುವಲ್ಲಿ. ಆದರೆ ಪ್ರಜಾ ತಂತ್ರದ ಹೆಸರಲ್ಲಿ ಮೂಲಭೂತವಾಗಿ ಶ್ರೀಮಂತರ ಪರ ವಾದ ತಾರತಮ್ಯವಾದಿ ನೀತಿಗಳನ್ನೇ ರೂಪಿಸುವ ಬಡಿವಾ ರದ ಪ್ರಜಾತಂತ್ರ ಏನು ಮಾಡುತ್ತದೆ? ಶ್ರೀಮಂತರ ಜೀವನ ಶೈಲಿ ಮಾಲಿನ್ಯಕ್ಕೆ ಮತ್ತು ಒತ್ತಡಕ್ಕೆ ಕಾರಣವಾಗಿ ದ್ದರೂ ಅದರ ಶಿಕ್ಷೆಯನ್ನು ಬಡ ಮಧ್ಯಮ ವರ್ಗಕ್ಕೆ ವಿಧಿ ಸುತ್ತದೆ. ಹೀಗಾಗಿ ಅದು ತೋರುವ ಪರಿಹಾರ ರಸ್ತೆಗಳ ಖಾಸಗೀಕರಣ. ವಾಸ್ತವವಾಗಿ ರಸ್ತೆ ಒಂದು ಸಾರ್ವಜನಿಕ ಆಸ್ತಿ. ಆದರೆ ವಾಹನ ದಟ್ಟಣೆಯ ಹೆಸರಲ್ಲಿ ಪ್ರತ್ಯೇಕವಾದ ಖಾಸಗಿ ರಸ್ತೆಗಳನ್ನು ಸುಂಕದ ರಸ್ತೆಗಳನ್ನು ಸರ್ಕಾರ ನಿರ್ಮಿಸುತ್ತದೆ. ದುಬಾರಿ ಸುಂಕ ಕೊಡದ ವಾಹನಗಳನ್ನು ಅರ್ಥಾತ್ ಜನ ವರ್ಗಗಳನ್ನು ರಸ್ತೆಯಿಂದ ಹೊರ ಹಾಕು ತ್ತದೆ. ಅಂದರೆ ಬಡವರ ಸಾಗಾಟ ಸಾಧನವಾದ ಸೈಕಲ್, ಆಟೋಗಳನ್ನು ಹೊರಹಾಕಲಾಗುತ್ತದೆ. ಅಷ್ಟು ಮಾತ್ರ ವಲ್ಲದೆ ಮಾಲಿನ್ಯ ನಿಯಂತ್ರಣದ ಹೆಸರಲ್ಲಿ ಹತ್ತು ವರ್ಷ ಕ್ಕಿಂತ ಹಳೆಯದಾದ ವಾಹನಗಳನ್ನು ರಸ್ತೆಯಿಂದ ಹೊರ ಹಾಕಲಾಗುತ್ತದೆ.

ನ್ಯಾನೋ ಕಾರು ಜಗತ್ತಿನ ಗಮನವನ್ನು ತದ್ವಿ ರುದ್ಧ ದಿಕ್ಕಿನಲ್ಲಿ ತಿರುಗಿಸಿರುವುದು ಒಂದು ಸೂಚನೆಯಷ್ಟೇ. ದೆಹಲಿಯ ಪ್ರಗತಿ ಮೈದಾನ ದಲ್ಲಿ ನ್ಯಾನೋ ಕಾರು ಪ್ರದರ್ಶನದ ವೇಳೆ ಸಿಂಗೂರಿನ ಟಾಟಾ ಮಾಡಿದ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತಿದ್ದ ಜನರು ರತನ್ ಟಾಟಾರ ಹಾಸ್ಯದ ವಸ್ತುವಾಗಿದ್ದು ಮತ್ತು ನೆರೆ ದಿದ್ದ ಜನತೆಯ ಸಂಪೂರ್ಣ ಅವಗಣನೆಗೆ ತುತ್ತಾಗಿದ್ದು ನ್ಯಾನೋ ಹುಟ್ಟುಹಾಕುವ ಸಂಸ್ಕೃತಿಯ ಸೂಚನೆಯಷ್ಟೇ.

ಹೀಗೆ ಅಪರಾಧ ಶ್ರೀಮಂತ ವರ್ಗದ್ದಾದರೂ ಶಿಕ್ಷೆ ಮಾತ್ರ ಬಡ ಮಧ್ಯಮ ವರ್ಗಕ್ಕೇ ಆಗುತ್ತದೆ. ಆದರೆ ಇದನ್ನು ಕೇವಲ ನ್ಯಾನೋ ಎಂಬ ಮಧ್ಯಮ ವರ್ಗದ ಕಾರು ರಸ್ತೆಯ ಮೇಲೆ ಬರುತ್ತಿರುವಾಗಲೇ ಮುಂದಿ ಡುತ್ತಿರುವುದು ಏಕೆ ಎಂಬ ಸಹಜ ಪ್ರಶ್ನೆಯೂ ಎದಿರಾಗು ತ್ತದೆ. ಆದರೆ ಇದು ಮಧ್ಯಮ ವರ್ಗದ ವಿರೋಧಿ ವಾದ ವಲ್ಲ. ಬದಲಿಗೆ ಈ ಮಧ್ಯಮ ವರ್ಗ ಎಂದಿಗೂ ಸೇರಲಾ ಗದ ಶ್ರೀಮಂತ ವರ್ಗ ಮಧ್ಯಮ ವರ್ಗದ ಈ ಕನಸನ್ನು ತನ್ನ ದುರಾಸೆಗೆ ನೈತಿಕ ಸಮರ್ಥನೆಯಾಗಿ ಬಳಸಿಕೊಳ್ಳುತ್ತಿ ರುವ ಬಗ್ಗೆ ಮತ್ತು ಈ ಬಗೆಯ ಪರಿಹಾರದಿಂದ ಇಡೀ ಜನತೆ, ನ್ಯಾನೋ ಜನತೆಯನ್ನು ಒಳಗೊಂಡಂತೆ, ಇಡೀ ವಿಶ್ವ ನಿಧಾನವಾಗಿ ಪ್ರಪಾತದೆಡೆಗೆ ಸಾಗುತ್ತಿರುವ ಬಗ್ಗೆ ಎಚ್ಚ ರಿಕೆ ಅಷ್ಟೆ. ಜಾಗತಿಕ ತಾಪಮಾನದ ಅಪಾಯವು ತಡವಾಗಿ ಯಾದರೂ ಎಲ್ಲೆಡೆ ಸಾರ್ವಜನಿಕ ಸಾಗಾಟ ವ್ಯವಸ್ಥೆಯ ಬಗ್ಗೆ ಚಿಂತನೆಗೆ ಹಚ್ಚುತ್ತಿರುವ ಹೊತ್ತಿನಲ್ಲಿ ನ್ಯಾನೋ ಕಾರು ಜಗತ್ತಿನ ಗಮನವನ್ನು ತದ್ವಿರುದ್ಧ ದಿಕ್ಕಿನಲ್ಲಿ ತಿರುಗಿಸಿರು ವುದು ಒಂದು ಸೂಚನೆಯಷ್ಟೇ. ದೆಹಲಿಯ ಪ್ರಗತಿ ಮೈದಾನದಲ್ಲಿ ನ್ಯಾನೋ ಕಾರು ಪ್ರದರ್ಶನದ ವೇಳೆ ಸಿಂಗೂರಿನ ಟಾಟಾ ಮಾಡಿದ ಅನ್ಯಾಯದ ವಿರುದ್ಧ ಪ್ರತಿಭ ಟಿಸುತ್ತಿದ್ದ ಜನರು ರತನ್ ಟಾಟಾರ ಹಾಸ್ಯದ ವಸ್ತುವಾ ಗಿದ್ದು ಮತ್ತು ನೆರೆದಿದ್ದ ಜನತೆಯ ಸಂಪೂರ್ಣ ಅವಗಣ ನೆಗೆ ತುತ್ತಾಗಿದ್ದು ನ್ಯಾನೋ ಹುಟ್ಟುಹಾಕುವ ಸಂಸ್ಕೃತಿಯ ಸೂಚನೆಯಷ್ಟೇ. □

ಫೆಲೆಸ್ತೀನ್ ಹೋರಾಟದ ಚಿರಸ್ಫೂರ್ತಿ

ಹಬಶ್ ಆದರ್ಶ: ಅಮರ

ತನ್ನ ಇಡೀ ಜೀವಮಾನವನ್ನು ತಾಯ್ನಾಡಿನ ವಿಮೋಚನೆಗಾಗಿ ಮುಡಿಪಾಗಿರಿಸಿದ್ದ ಹಿರಿಯ ಫೆಲೆಸ್ತೀನ್ ಹೋರಾಟಗಾರ ಡಾ॥ ಜಾರ್ಜ್ ಹಬಶ್ ತನ್ನ ಗುರಿ ಈಡೇರುವ ಮುನ್ನವೇ ಇಹಲೋಕ ಯಾತ್ರೆ ಮುಗಿಸಿದ್ದಾರೆ.

ಝಿಯುನಿಸ್ಟ್ ಅರ್ಬುದದ ವಿರುದ್ಧ ತನ್ನ ಕೆಚ್ಚೆದೆಯ ಹೋರಾಟದ ಬದುಕಿನಲ್ಲಿ ಹಬಶ್ ಬೈರೂತ್‌ನಿಂದ ಆ್ಯಡನ್, ಡಮಾಸ್ಕಸ್ ಮತ್ತು ಕೊನೆಯಲ್ಲಿ ಅಮ್ಮಾನ್‌ನಲ್ಲಿ ಗಡಿಪಾರು ಜೀವನವನ್ನು ಎದುರಿಸಬೇಕಾಗಿ ಬಂದುದು ಅತಿದೊಡ್ಡ ದುರಂತ

ಮೊನ್ನೆ ಜನವರಿ ೨೬ರಂದು ಅಮ್ಮಾನ್‌ನ ಆಸ್ಪತ್ರೆಯೊಂದರಲ್ಲಿ ತನ್ನ ೮೧ರ ಹರೆಯದಲ್ಲಿ ಕೊನೆಯುಸಿರೆಳೆದ ಈ ಅಪರೂಪದ ವ್ಯಕ್ತಿ, ತಾಯ್ನಾಡಿಗೆ ಮರಳುವ ಮತ್ತು ಸ್ವತಂತ್ರ, ಸಾರ್ವಭೌಮ ಫೆಲೆಸ್ತೀನ್ ದೇಶವನ್ನು ನೋಡುವ ಕನಸು ನನಸಾಗದೆಯೇ ಜೋರ್ಡಾನ್‌ನ ಭೂಮಿಯಲ್ಲೇ ಸಮಾಧಿಯಾದರು. ಆದರೆ, ಅವರ ಕನಸು ಇದೀಗ ಲಕ್ಷಾಂತರ ಫೆಲೆಸ್ತೀನಿಯರ ಜೀವನೋದ್ದೇಶವಾಗಿದೆ. ಹಬಶ್ ತುಳಿದ ದಾರಿ ಹೊಸ ತಲೆಮಾರಿನ ಫೆಲೆಸ್ತೀನ್ ಹೋರಾಟಗಾರರಿಗೆ ಸ್ಫೂರ್ತಿಯಾಗಿದೆ.

ಫೆಲೆಸ್ತೀನ್ ಸಮಸ್ಯೆಯು ಕೇವಲ ಮುಸ್ಲಿಮ್ ಸಮುದಾಯದ ಸಮಸ್ಯೆಯಲ್ಲ; ಬದಲಾಗಿ ಇಡೀ ಮಾನವ ಕುಲದ ಸಮಸ್ಯೆಯಾಗಿದೆ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವರೇ ಜಾರ್ಜ್ ಹಬಶ್ ಇಸ್ರೇಲ್ ಎಂಬ ದೇಶವನ್ನು ಹಬಶ್ ಭೂಮಿಯ ಮೇಲಿನ ಅರ್ಬುದ ಗಡ್ಡೆ'ಯ ರೂಪದಲ್ಲಿ ನೋಡುತ್ತಿದ್ದರು.

ಶ್ರೀಮಂತ, ಸಂಪ್ರದಾಯಬದ್ಧ ಕ್ರೈಸ್ತ ಕುಟುಂಬವೊಂದರಲ್ಲಿ ಜನಿಸಿದ ಹಬಶ್ ಅಮೆರಿಕನ್ ಯೂನಿವರ್ಸಿಟಿ ಆಫ್ ಬೈರೂತ್‌ನಲ್ಲಿ ವೈದ್ಯಕೀಯ ಪದವಿಯನ್ನು ಪಡೆದರೂ, ಸೂಜಿಯ ಬದಲು ತನ್ನ ಕೈಗೆ ಬಂದೂಕನ್ನು ಎತ್ತಿಕೊಳ್ಳಬೇಕಾದಂತಹ ಅನಿವಾರ್ಯ ಪರಿಸ್ಥಿತಿ ತಂದೊಡ್ಡಿದ್ದು ಇಸ್ರೇಲ್‌ನ ದುರಾಕ್ರಮಣಗಳು.

೧೯೪೮ರಲ್ಲಿ ಅರಬ್ ಸೇನೆಗಳನ್ನು ಹಿಮ್ಮೆಟ್ಟಿಸಿದ ಇಸ್ರೇಲಿ ಅತಿಕ್ರಮಣಕಾರಿ ಪಡೆಯು ಜೋರ್ಡಾನ್‌ನಲಿದ್ದ ಪ್ರದೇಶವನ್ನು ವಶಪಡಿಸಿಕೊಂಡು, ಅಲ್ಲಿನ ಸುಮಾರು ೧೦ ಸಾವಿರಕ್ಕೂ ಅಧಿಕ ಫೆಲೆಸ್ತೀನಿ ನಿವಾಸಿಗಳನ್ನು ಹೊರಗಟ್ಟಿತು. ನೂರಾರು ಫೆಲೆಸ್ತೀನಿಯರ ಸಾವಿಗೆ ಕಾರಣವಾದ ಈ ಭಯಾನಕ ಘಟನೆಯ ಸಂದರ್ಭದಲ್ಲಿ ಹಬಶ್‌ರ ಕುಟುಂಬ ನಿರಾಶ್ರಿತರ ಸಾಲಿಗೆ ಸೇರಿತು. ೧೯೫೧ರಲ್ಲಿ ವೈದ್ಯಕೀಯ ಪದವಿಯನ್ನು ಪೂರೈಸಿದ ಹಬಶ್ ಆರಂಭದಲ್ಲಿ ಜೋರ್ಡಾನ್‌ನಲ್ಲಿ ಫೆಲೆಸ್ತೀನಿಯರ ನಿರಾಶ್ರಿತ ಶಿಬಿರಗಳಲ್ಲಿ ಸೇವೆಸಲ್ಲಿಸಿದರು. ಹಬಶ್ ಇದೇ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಅರಬ್ ರಾಷ್ಟ್ರೀಯ ಚಳವಳಿಯ ಸ್ಥಾಪಕ ಸದಸ್ಯರಾಗಿದ್ದರು. ಅನೇಕ ಸಂದರ್ಭಗಳಲ್ಲಿ ಹಬಶ್ ಅರಬ್ ದೊರೆಗಳ ಕ್ರೋಧಕ್ಕೂ ಗುರಿಯಾದರು.



ಮೊನ್ನೆ ಜನವರಿ ೨೬ರಂದು ಅಮ್ಮಾನ್‌ನ ಆಸ್ಪತ್ರೆಯೊಂದರಲ್ಲಿ ತನ್ನ ೮೧ರ ಹರೆಯದಲ್ಲಿ ಕೊನೆಯುಸಿರೆಳೆದ ಈ ಅಪರೂಪದ ವ್ಯಕ್ತಿ, ತಾಯ್ನಾಡಿಗೆ ಮರಳುವ ಮತ್ತು ಸ್ವತಂತ್ರ, ಸಾರ್ವಭೌಮ ಫೆಲೆಸ್ತೀನ್ ದೇಶವನ್ನು ನೋಡುವ ಕನಸು ನನಸಾಗದೆಯೇ ಜೋರ್ಡಾನ್‌ನ ಭೂಮಿಯಲ್ಲೇ ಸಮಾಧಿಯಾದರು. ಆದರೆ, ಅವರ ಕನಸು ಇದೀಗ ಲಕ್ಷಾಂತರ ಫೆಲೆಸ್ತೀನಿಯರ ಜೀವನೋದ್ದೇಶವಾಗಿದೆ.

ಸಶಸ್ತ್ರ ಪ್ರತಿರೋಧವೂ ಸೇರಿದಂತೆ, ಸಕಲ ಸಂಭಾವ್ಯ ವಿಧಾನಗಳ ಮೂಲಕವೂ ಫೆಲೆಸ್ತೀನ್‌ನ ವಿಮೋಚನೆಗಾಗಿ ಹೋರಾಟ ನಡೆಸಬೇಕೆಂಬ ಧೋರಣೆಯನ್ನು ತನ್ನದಾಗಿಸಿಕೊಂಡಿದ್ದ ಹಬಶ್ ಅಂದಿನ ಈಜಿಪ್ಟ್ ಅಧ್ಯಕ್ಷ ಜಮಾಲ್ ಅಬ್ದುನ್ನಾಸಿರ್‌ರ ಅರಬ್ ರಾಷ್ಟ್ರೀಯವಾದಿ ನಿಲುವುಗಳಿಂದ ಪ್ರಭಾವಿತರಾಗಿದ್ದರು. ೧೯೬೭ರವರೆಗೆ ಅವರು ಫೆಲೆಸ್ತೀನ್ ವಿಮೋಚನಾ ಸಂಘಟನೆಯ ಮುಂಚೂಣಿಯ ಸದಸ್ಯರಾಗಿದ್ದರು. ಆ ವರ್ಷ ನಡೆದ 'ಆರು ದಿನಗಳ ಯುದ್ಧ'ದಲ್ಲಿ ಇಸ್ರೆಲಿ ಅತಿಕ್ರಮಣಕಾರಿ ಪಡೆಗಳು ಪಾಶ್ಚಿಮಾತ್ಯ ರಾಷ್ಟ್ರಗಳ ಬೆಂಬಲದೊಂದಿಗೆ ಅರಬ್ ಸೇನೆಗಳನ್ನು ಮಣಿಸಿ ಇನ್ನಷ್ಟು ಅರಬ್ ಭೂಭಾಗಗಳನ್ನು ವಶಪಡಿಸಿಕೊಂಡ ಬಳಿಕದ ಬೆಳವಣಿಗೆಗಳಲ್ಲಿ ಕೆಲಕಾಲ ನೇಪಥ್ಯಕ್ಕೆ ಸರಿದ ಅವರು, ಪಾಪ್ಯುಲರ್ ಫ್ರಂಟ್ ಫಾರ್ ದಿ ಲಿಬರೇಶನ್ ಆಫ್ ಫೆಲೆಸ್ತೀನ್ (ಪಿಎಫ್‌ಎಲ್‌ಪಿ) ಎಂಬ ಚಳವಳಿಯನ್ನು ಹುಟ್ಟುಹಾಕುವ ಮೂಲಕ ಮತ್ತೆ ತನ್ನ ಹೋರಾಟವನ್ನು ತೀವ್ರಗೊಳಿಸಿದರು. ೨೦೦೦ದ ತನಕವೂ ಪಿಎಫ್‌ಎಲ್‌ಪಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಬಶ್, ಯಾಸಿರ್ ಅರಫಾತ್‌ರ ಎದುರಲ್ಲಿದ್ದುಕೊಂಡೇ ಕೊನೆತನಕವೂ ತನ್ನ ಆದರ್ಶಗಳಿಗೆ ಬದ್ಧರಾಗಿಯೇ ಇದ್ದರು.

ತನ್ನ ಜೀವಮಾನದುದ್ದಕ್ಕೂ ಹಬಶ್ ವಿವಿಧ ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ಬದಲಾವಣೆಗಳಿಗೆ ಸಾಕ್ಷಿಯಾಗಿದ್ದರು.

ಫೆಲೆಸ್ತೀನಿಯರ ಸ್ವಾಭಿಮಾನಕ್ಕೆ ಸವಾಲೆಸೆದ ೧೯೯೩ರ ಓಸ್ಲೋ ಒಪ್ಪಂದದ ಬಳಿಕ ಹಬಶ್ ಮತ್ತು ಅವರ ನೇತೃತ್ವದ ಪಿಎಫ್‌ಎಲ್‌ಪಿ, ಫತಹ್ ನಾಯಕ ಯಾಸಿರ್ ಅರಫಾತ್‌ರ ವಿರುದ್ಧ ರಾಜಕೀಯ ಸಂಘರ್ಷಕ್ಕಿಳಿದುದು ಮಾತ್ರವಲ್ಲ, ಪ್ರಥಮ ಇಂತಿಫಾದ ಚಳವಳಿ ಸಂದರ್ಭದಲ್ಲಿ ಜನಪ್ರಿಯಗೊಂಡ ಹಮಾಸ್ ಹಾಗೂ ಇಸ್ಲಾಮಿಕ್ ಜಿಹಾದ್‌ನಂತಹ ಫೆಲೆಸ್ತೀನಿ ಪ್ರತಿರೋಧ ಸಂಘಟನೆಗಳ ಜೊತೆಗೂಡಿ ಡಮಾಸ್ಕಸ್‌ನಲ್ಲಿ ಓಸ್ಲೋ ವಿರೋಧಿ ಮೈತ್ರಿಕೂಟವನ್ನೂ ರಚಿಸಿಕೊಂಡಿತು.

ಫೆಲೆಸ್ತೀನಿಯರ ಒಗ್ಗಟ್ಟಿನ ಮಹತ್ವವನ್ನು ಅರಿತಿದ್ದ ಹಬಶ್, ಈ ಬೆಳವಣಿಗೆಗಳ ಹೊರತಾಗಿಯೂ ಯಾಸಿರ್ ಅರಫಾತ್‌ರ ಜೊತೆಗಿನ ಸಂಬಂಧವನ್ನು ಸುಧಾರಿಸಿಕೊಂಡು, ಓಸ್ಲೋ ಒಪ್ಪಂದೋತ್ತರ ಫೆಲೆಸ್ತೀನ್ ರಾಜಕಾರಣದಲ್ಲೂ ಪ್ರಮುಖ ಪಾತ್ರವಹಿಸಿದರು. ಆದಾಗ್ಯೂ, ಅವರು ತನ್ನ ಪಿಎಫ್‌ಎಲ್‌ಪಿ ಧೋರಣೆಗಳಲ್ಲಿ ರಾಜಿ ಮಾಡಿಕೊಂಡವರಲ್ಲ.

ಅಖಂಡ ಫೆಲೆಸ್ತೀನ್ ಭೂಮಿ ಇಡಿಯಾಗಿ ಫೆಲೆಸ್ತೀನಿಯರಿಗೇ ಬೇಕು ಎಂದು ಹಟ ಹಿಡಿದಿದ್ದ ಹಬಶ್, ಪಾಶ್ಚಿಮಾಯ ಪ್ರೇರಿತ 'ದ್ವಿರಾಷ್ಟ್ರ ಪರಿಹಾರ' (ಇಸ್ರೇಲ್‌ಗೆ ಹೊಂದಿಕೊಂಡಿರುವ ಸ್ವತಂತ್ರ ಫೆಲೆಸ್ತೀನ್ ದೇಶದ ಸ್ಥಾಪನೆ) ವನ್ನು ಕೂಡಾ ಒಪ್ಪಿಕೊಂಡವರಲ್ಲ.

೧೯೯೦ರ ದಶಕದ ಉತ್ತರಾರ್ಧದಲ್ಲಿ ಹಬಶ್‌ರ ಆರೋಗ್ಯ ಸ್ಥಿತಿಯು ಹದಗೆಡಲಾರಂಭಿಸಿದಂತೆ ಅವರ ನೇತೃತ್ವದ ಪಿಎಫ್‌ಎಲ್‌ಪಿ ಕೂಡಾ ರಾಜಕೀಯವಾಗಿ ಕ್ಷೀಣಿಸಲಾರಂಭಿಸಿತು.

ಎಂಟು ವರ್ಷಗಳ ಹಿಂದೆ ಹಬಶ್ ತನ್ನ ಚಳವಳಿಯ ನೇತೃತ್ವವನ್ನು ಅಬೂ ಅಲಿ ಮುಸ್ತಫಾರಿಗೊಪ್ಪಿಸಿ (ದ್ವಿತೀಯ ಇಂತಿಫಾದ ಚಳವಳಿಯ ಸಂದರ್ಭದಲ್ಲಿ ಮುಸ್ತಫಾರನ್ನು ಇಸ್ರೇಲ್ ಹತ್ಯೆಗೈದಿತ್ತು), ಅಮ್ಮಾನ್‌ನಲ್ಲಿ ನೆಲೆಸಿದರೂ, ಫೆಲೆಸ್ತೀನಿಯರಲ್ಲಿ ಅವರ ಜನಪ್ರಿಯತೆ ಇಂದಿಗೂ ಅಚ್ಚಳಿಯದೆ ಉಳಿದಿದೆ.

"ಜಾರ್ಜ್ ಹಬಶ್ ತನ್ನ ಜೀವಮಾನವನ್ನು ಫೆಲೆಸ್ತೀನ್‌ನ ರಕ್ಷಣೆಗಾಗಿ ವ್ಯಯಿಸಿದರು" ಎಂಬ ಹಮಾಸ್ ನಾಯಕ ಇಸ್ಮಾಯೀಲ್ ಹಾನಿಯಾರ ಮಾತು ಇಲ್ಲಿ ಅರ್ಥ ಪೂರ್ಣ.

ಜೀವನ್

(ಸೌಜನ್ಯ ವಾರ್ತಾಭಾರತಿ)

ಕರ್ನಾಟಕದ ರಾಜಕೀಯ ಹಿಂದೆಂದೂ ಕಾಣದಷ್ಟು ಅಧಃಪತನವನ್ನು ಈಗ ಕಂಡಿದೆ. ಬಹುತೇಕ ಎಲ್ಲ ಪ್ರಮುಖ ಪಕ್ಷಗಳೂ ಯಾವುದೇ ರಾಜಕೀಯ ತತ್ವ-ಸಿದ್ಧಾಂತಗಳಿಗೂ ಬದ್ಧವಾಗದೇ ಅಧಿಕಾರ ಲಾಭಕೋರತನವನ್ನೇ ಗುರಿಯಾಗಿಸಿಕೊಂಡಿವೆ. ಹಾಗಾಗಿ ರಾಜ್ಯದ ರಾಜಕೀಯ ನಗೆಪಾಟಲಿಗೆ ಗುರಿಯಾಗಿದೆ. ಸುಳ್ಳರ ಸಂತೆಯಾಗಿದೆ. ಪ್ರಾಮಾಣಿಕ ಮತ್ತು ಪ್ರಜ್ಞಾವಂತ ರಾಜಕೀಯ ಇಲ್ಲಿ ಸಾಧ್ಯವೇ ಇಲ್ಲ ಎಂಬ ಹತಾಶೆ ಜನರಲ್ಲಿ ಮೂಡಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ರಾಜಕೀಯ ಸ್ಥಿತಿ-ಗತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರು ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳಲ್ಲಿ ಕೆಲವನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಉಳಿದವುಗಳನ್ನು ಮುಂದೆ ಪ್ರಕಟಿಸಲಾಗುವುದು. ಓದುಗರೂ ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು:

೧. ಕರ್ನಾಟಕದ ಸಧ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂಥ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

೨. ಜಾತ್ಯಾತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

೪. ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ, ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಮುಂಗಾಣುತ್ತೀರಿ?

೬. ಕರ್ನಾಟಕದ ಮುಂದಿನ ರಾಜಕಾರಣ ಹೇಗಿರಬೇಕೆಂದು ನೀವು ಬಯಸುತ್ತೀರಿ?

'ಅಧಿಕಾರದ ಸ್ವರೂಪ'ದ ಅಸ್ಪಷ್ಟತೆ

ಎಸ್.ಕೆ. ಹನುಮಂತಯ್ಯ

ಕವಿ, ಚಿಂತಕ

ಕರ್ನಾಟಕದ [illegible] ಕನ್ನಾಗಿಸಿ ಖರೀದಿಸಲಾಗುತ್ತದೆ. ರಾಜಕಾರಣವನ್ನು ಹಣ ಚೆಲ್ಲಿ ಹಣ ಬೆಳೆಯುವ ಉದ್ಯಮವನ್ನಾಗಿಸಿರುವ ರಾಜಕೀಯ ಉದ್ಯಮಿಗಳು ಪ್ರಜಾಪ್ರಭುತ್ವದ ಅಂತಃಸತ್ವವನ್ನು ಬತ್ತಿಸತೊಡಗಿದ್ದಾರೆ. ಜನರೊಳಗಿನ ಸಾಮಾಜಿಕ ಹಾಗೂ ಸಾಮೂಹಿಕ ಕಾಳಜಿಗಳನ್ನು ಇಲ್ಲವಾಗಿಸಿ ಜಾತಿಯನ್ನು ಸಂಘಟಿಸಲಾಗುತ್ತಿದೆ.

ಸೋಲು-ಗೆಲುವು ಎಂಬುದು ಯುದ್ಧದ ಪರಿಭಾಷೆ. ಇದು ಇಂದಿನ ರಾಜಕೀಯ ಪಕ್ಷಗಳ ಧ್ಯೇಯವಾಗುತ್ತಿದೆ. ಜನರಿಗಿದ್ದ 'ಆಯ್ಕೆ'ಯ ಹಕ್ಕು ನಾಶವಾಗಿ, ಜನರು ಜಾತಿಗೆ ಅಂಟಿಕೊಂಡು ಸ್ವತಃ ತಾವೇ ಆಯ್ಕೆಗೊಳಗಾಗುತ್ತಿದ್ದಾರೆ. ಸಾಮಾಜಿ ಮೌಲ್ಯಗಳೆಲ್ಲ ಸೋಲು-ಗೆಲುವಿನ ಭರಾಟೆಯಲ್ಲಿ ಸಾಯತೊಡಗಿವೆ. ಈ ಎಲ್ಲ ಕಾರಣಗಳಿಂದ ಕರ್ನಾಟಕದ ಸಧ್ಯದ ರಾಜಕೀಯ ರೋಗಗ್ರಸ್ಥವಾಗಿದೆ.

೨. ತನ್ನನ್ನು ತೀರ್ಥವೆಂದು ಘೋಷಿಸಿಕೊಂಡು, ಅಧಿಕಾರದ ದಾಹಕ್ಕಾಗಿ ಕ್ರಮೇಣ "ಮೂತ್ರದ ಜೊತೆ ಬೆರತು, ನಂತರ, ಮೂತ್ರ ಅಪಾಯಕಾರಿಯೆಂದು ಹೊರ ಬಂದಿರುವೆ. ನಾನೀಗ ಮೊದಲಿನಂತೆ ತೀರ್ಥ." ಎಂದು ನಂಬಿಸ ಹೊರಟಂತಿದೆ, ಜೆಡಿಎಸ್‌ನ ವರ್ತನೆ. ತನ್ನ ಜಾತ್ಯತೀತಧೋರಣೆ ಹುಸಿಯೆಂದು ಜನರಿಗೆ ಅನುಭವವಾಗುವಂತೆ ವರ್ತಿಸಿರುವ ಜೆಡಿಎಸ್. ನೈತಿಕ ದಿವಾಳಿಗೊಳಗಾಗಿದೆ. ಆದ್ದರಿಂದ ದ್ವಿಪಕ್ಷ ಪದ್ಧತಿ ವಿಜೃಂಭಿಸುವ ಸಾಧ್ಯತೆ ಹೆಚ್ಚು.

೩. ಅಧಿಕಾರವನ್ನು ತಮ್ಮ ಸಿದ್ಧಾಂತದ ಅಂತಿಮ ಫಲವನ್ನಾಗಿ ಭಾವಿಸಿದರೆ ಹಾಗೂ ತನ್ನ ನಿಲುವು ಮಾತ್ರ ಶ್ರೇಷ್ಠವೆಂಬ ಭ್ರಮೆಗೊಳಗಾದರೆ, ಇತರ ಸಮಾನಮನಸ್ಕರ ಬಗ್ಗೆ ಅಸೂಯೆ, ತಾತ್ಸಾರ, ಆಕ್ರೋಶ ಹೆಡೆಯೆತ್ತುವುದು ಸಹಜ. ತಮ್ಮಂತೆ ಚಿಂತಿಸುವ ಇತರರನ್ನು ವೈರಿಯನ್ನಾಗಿ ಭಾವಿಸುವ ಅಪಾಯ ಇಂದಿನ ಎಡ ಹಾಗೂ ಪ್ರಜಾತಾತ್ಮಕ ಶಕ್ತಿಗಳನ್ನು ಛಿದ್ರಗೊಳಿಸುತ್ತಿದೆ. ಸಾಮಾಜಿಕ ಕಾಳಜಿಗಳು ಗೌಣವಾಗುವ ಮತ್ತು ಮಾನವೀಯ ಮೌಲ್ಯಗಳು ವಾಣಿಜ್ಯೀಕರಣಕ್ಕೊಳಗಾಗುವ ದುರಂತ ಈ ಒಗ್ಗೂಡುವಿಕೆಗೆ ತಡೆಯೊಡ್ಡುತ್ತಿದೆ. ಇತರ ಪಕ್ಷಗಳು ಆಳದಲ್ಲಿ ಕನಸುತ್ತಿರುವ ಅಧಿಕಾರದ ಕಲ್ಪನೆಗೂ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಕನಸಿಗೂ ವ್ಯತ್ಯಾಸವಿಲ್ಲದಂತಾಗುತ್ತಿರುವುದೂ ಪರಸ್ಪರ ಭೇದಕ್ಕೆ ಕಾರಣ.

೪. ಜನಪರ ಚಳವಳಿಗಳಿಗೆ 'ಅಧಿಕಾರದ ಸ್ವರೂಪ'ದ ಬಗ್ಗೆ ಅಸ್ಪಷ್ಟತೆಯಿದೆ. ರಾಜಕೀಯ ಪಕ್ಷಗಳು ಪಡೆಯುವ ಅಧಿಕಾರದಲ್ಲಿ ಪ್ರಜಾಭ್ರಷ್ಟತೆ ಮತ್ತು ಪ್ರತಿರೋಧ ನಾಶ ಅಡಗಿರುವುದನ್ನಾಗಲಿ ಅಥವಾ ಉದ್ಯಮದಾಹವಿರುವುದನ್ನಾಗಲೀ ನಮ್ಮ ಜನಪರಚಳುವಳಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಜನರೇ 'ಅಧಿಕಾರ'ವನ್ನು ರೂಪಿಸುವ ಶಕ್ತಿಯೆಂಬ ಮೇಲೆ, ಚುನಾವಣೆಗೆ ಹೊರತಾದ ಅಧಿಕಾರ ಸೃಷ್ಟಿಯೂ ಜನರಿಂದ ಸಾಧ್ಯವೆಂಬುದನ್ನು ನಂಬದಿದ್ದರೆ ಚಳವಳಿಗಳು ವಿಫಲವಾಗುತ್ತವೆ. ಜನಪರ ಚಳವಳಿಗಳು ಜಾತಿ, ಧರ್ಮ, ಹಣ, ಹೆಂಡಗಳಿಂದ ಹೆಣೆದ ರಾಜಕೀಯ ಗೂಡಿನಲ್ಲಿ ಕೂರುವುದನ್ನೇ ಅಧಿಕಾರವೆಂದು ತಿಳಿಯದೆ, ಇಂಥ ಕೇಡಿಲ್ಲದ ಸಮಾಜನಿರ್ಮಾಣದ ಶಕ್ತಿಯನ್ನು ಹೆಣಿದು. ಆ ಮೂಲಕ ಅಧಿಕಾರವನ್ನು ರೂಪಿಸಿಕೊಳ್ಳುವ ಅಗತ್ಯವಿದೆ. ಇಲ್ಲವಾದರೆ, ನಿರ್ಣಾಯಕ ಪಾತ್ರವಹಿಸುವುದು ಕಷ್ಟ.

೫. ತಳ ಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆ. ಆದರೆ, ಅವುಗಳ ಸ್ವಾತಂತ್ರ್ಯ, ಸ್ವಾಭಿಮಾನ, ಸಮಾನತೆಯ ಆತಂರಿಕ ದಂಗೆ ಆರಬಾರದು. ಇಂದು ವಿವಿಧ ಆಮಿಷ್ಗಳಿಗೆ ತಳಸಮುದಾಯಗಳ ತಳ ಒಡೆಯುತ್ತಿದೆ. ಪ್ರತಿಸಮಾಜ ನಿರ್ಮಾಣದ ಹಾಗೂ ಸಮುದಾಯ ಐಕ್ಯದ ತುಡಿತಗಳು ತಮ್ಮ (ದಿಢೀರ್ ಅಭಿವೃದ್ಧಿಯ ಭ್ರಮೆಯಲ್ಲಿ ನಾಶವಾದರೆ ತಳಸಮುದಾಯಗಳಲ್ಲಿ ರಾಜಕಾರಣದ ನಿಯಂತ್ರಕ ಶಕ್ತಿಯನ್ನು ಆಶಿಸುವುದು ಭ್ರಮ.

೬. ಹನ್ನೆರಡನೆಯ ಶತಮಾನದಲ್ಲಿ ಸ್ಫೋಟಿಸಿದ ಸಕಲ ಸಮುದಾಯಗಳ ಆಳದ ಐಕ್ಯತೆಯ ಚೈತನ್ಯ, ಕರ್ನಾಟಕದ ಮತದಾರನ ಮತದಲ್ಲಿ ಹೊಳೆಯಬೇಕು. ಆ ಹೊಳಪಿನಲ್ಲಿ ಜಾತಿ, ಹಣ, ಹಿಂಸೆಗಳ ಕ್ರೂರ ಅಧಿಕಾರ ಅಳಿದು ಚಳವಳಿಗಳ ನಗುವುಳ್ಳ ನಿಜ ಪ್ರಜಾಪ್ರಭುತ್ವ ಬೆಳಗಬೇಕು. ರಾಜಕಾರಣವನ್ನು, ಮತದಾರರನ್ನು ತಮ್ಮ ಹಿಂಸಾತ್ಮಕ ಹಾಗು ಸಮಾಜ ವಿರೋಧಿಬಲದಿಂದ ಬಂಧಿಸಿರುವ ರಾಜಕೀಯ ಮತ್ತು ರಾಜಕಾರಣಿಗಳು ಇಲ್ಲವಾಗಬೇಕು. ಎಲ್ಲರ ಆತ್ಮಸಂಗಾತಿಯಂಥ ಅನುಭಾವಿಕ ರಾಜಕಾರಣ ನನ್ನ ಕನಸು. □

ಅನಾಥ ಪ್ರಜ್ಞೆಯಿಂದ ನರಳುವ ಜನ

ನ್ಯಾ॥ ಎ.ಜೆ. ಸದಾಶಿವ
ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು



೧. ಇದು ಕೇವಲ ರಾಜಕೀಯ "ಅಧಃಪತನ" ಮಾತ್ರವಲ್ಲ. ಸಮಗ್ರ ಬದುಕಿನ ಅಧಃಪತನವೂ ಹೌದು. ಜನ ಯಾವುದೇ ವ್ಯಕ್ತಿ, ಸಂಘ/ಸಂಸ್ಥೆಗಳ ವಿಷಯದಲ್ಲಿಯೂ ನಂಬಿಕೆ ಕಳೆದುಕೊಂಡು ಅನಾಥ ಪ್ರಜ್ಞೆಯಿಂದ ನರಳುವ ಸ್ಥಿತಿ ತಲುಪಿದ್ದಾರೆ. ಇದು ಇಂದು ನಿನ್ನೆಯದಲ್ಲ. ದಶಕಗಳ ಬೆಳವಣಿಗೆ; ಅರ್ಬುದ ರೋಗದಂತೆ ಈಗ ಹೆಚ್ಚು ಹೆಚ್ಚು "ಪ್ರಕಾಶ"ಗೊಳ್ಳುತ್ತಿದೆ. ಈ ಪರಿಸ್ಥಿತಿ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ.

ಅಧಿಕಾರ ದಾಹ, ತತ್ವರಹಿತ ರಾಜಕಾರಣ, ನೀತಿಗೆಟ್ಟ ನಾಯಕರು, ಅವರ ಅಂಧ ಹಿಂಬಾಲಕರು, ಅಧಿಕಾರವಿಲ್ಲದೆ ಅಸ್ಥಿತಿ ಕಾಣದ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು, ಅಧಿಕಾರಕ್ಕಾಗಿ ಪಕ್ಷಗಳ ಹುಡುಕಾಟದಲ್ಲಿರುವ ಶಾಸಕರು; ಅವರ ಸ್ವಾಗತಕ್ಕೆ ಅಂಗಡಿ ಬಾಗಿಲು ತೆರೆದು ಕಾಯ್ದು ಕುಳಿತಿರುವ ರಾಷ್ಟ್ರೀಯ ಪಕ್ಷಗಳು, ಪಕ್ಷಗಳ ಬೆಳವಣಿಗೆಗೆ ಸೃಷ್ಟಿಯಾಗುವ ವರ್ಗ ಮತ್ತು ವರ್ಣ ಗುಂಪುಗಳು; ಮೋಸಗೊಳಿಸುವ ಅಸಾಧ್ಯ ಮತ್ತು ಅಸಾಧು ವಾಗ್ದಾನಗಳು, ಘೋಷಣೆಗಳು; ಕಾನೂನು ಮತ್ತು ವ್ಯವಸ್ಥೆಯ ಕುಸಿತ; ನಿಷ್ಠೆಯಿಲ್ಲದ ಬದುಕು; ತಳವಿಲ್ಲದ ಭ್ರಷ್ಟಾಚಾರ, ಹೀಗೆ ನೂರಾರು ಕಾರಣಗಳೂ. ಇವುಗಳ ಜೊತೆಗೆ ದುಡಿಮೆಯಿಲ್ಲದ, -ಇದ್ದರೂ ಸೂಕ್ತ ಪ್ರತಿಫಲ ಕಾಣದ-ಜನ; ಕಂಗಾಲಾದ ರೈತ; ಇರುವ ಕೆಲಸ ಕಳೆದುಕೊಳ್ಳುವ ಭಯದಿಂದ ಬದುಕುತ್ತಿರುವ ಶ್ರಮಜೀವಿ; ಇವೆಲ್ಲವನ್ನೂ ನಿರಾಸಕ್ತಿಯಿಂದ ನೋಡುತ್ತಿರುವ ಬುದ್ಧಿಜೀವಿಗಳು; ವಸ್ತು ನಿಷ್ಠತೆಯಿಲ್ಲದ ಸುದ್ದಿ ಮಾಧ್ಯಮ; ಇವುಗಳ ಲಾಭ ಪಡೆಯಲು ಕಾಯುತ್ತಿರುವ ಪುಡಾರಿಗಳು ಈ ದುಸ್ಥಿತಿಗೆ ಕಾರಣ.

೨. ದ್ವಿಪಕ್ಷ ರಾಜಕೀಯ ಪದ್ಧತಿ ನಮ್ಮ ದೇಶದಲ್ಲಿ ಒಂದು ಮರೀಚಿಕೆ. ಇದು ಸಾಧ್ಯವೇ ಇಲ್ಲದ ಕನಸು. ದೇಶದ ೩೩ ಕೋಟಿ ದೇವರುಗಳೂ ನಾಯಕರಾಗಲೇಬೇಕೆಂಬ 'ಆದರ್ಶದಿಂದ ದುಡಿಯುತ್ತಿರುವ' ರಾಜಕೀಯ ವ್ಯವಸ್ಥೆಯಲ್ಲಿ, ಇರುವಪಕ್ಷಗಳು ಮರಿ ಹಾಕದಿದ್ದರೆ ಅದೇ ಒಂದು ದೊಡ್ಡ ಸಾಧನೆ. ನೈತಿಕ ಕುಸಿತ ಜೆ.ಡಿ.ಎಸ್. ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಜೆ.ಡಿ.ಎಸ್. ಪಕ್ಷದ ಗುತ್ತಿಗೆಯೂ ಅಲ್ಲ. ಎಲ್ಲಾ ರಾಷ್ಟ್ರೀಯ ಮತ್ತು ಸ್ಥಳೀಯ ಪಕ್ಷಗಳೂ ಈ ದಿಕ್ಕಿನಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಾ ಅದನ್ನು ಸಾಕಾರಗೊಳಿಸಲು ಯಥಾಶಕ್ತಿ ಪ್ರಯತ್ನಿಸುತ್ತಿವೆ.

೩. ಪಕ್ಷ ರಾಜಕಾರಣ. ದೇಶಕ್ಕಿಂತ ಪಕ್ಷವೇ ದೊಡ್ಡದು ಎನ್ನುವ ಮನೋಭಾವ, ತಮ್ಮ ಪಕ್ಷವೇ-ಪಕ್ಷದ ನೀತಿಯೇ-ಪರಮ ಶ್ರೇಷ್ಠ ಎನ್ನುವ ಮೂರ್ಖತನ. ಸಂಯುಕ್ತ ಸರ್ಕಾರಗಳು ಅಧಿಕಾರಕ್ಕೆ ಬಂದಾಗಲೂ ತಮ್ಮ ಪಕ್ಷವೇ ಸಮಾಜ ಮುಖಿ ಎಂದು ಕೂಗಾಡಿ, ಆ ಮೂಲಕ ತಮ್ಮ ವೈಯಕ್ತಿಕ ಹಿರಿಮೆಯನ್ನು ಸಾಧಿಸಲು ಡೊಂಬರಾಟಗಳು ನಡೆಯುವವರೆವಿಗೂ ಎಲ್ಲಾ ಆಶಯಗಳೂ ಅನುಕೂಲ ಸಿಂಧು ಆಶಯಗಳೇ ಆಗಿರುತ್ತವೆ.

೪. ಈಗ ಯಾವ ಚಳವಳಿಗಳಲ್ಲೂ ಜನಪರತೆ ಕಾಣುತ್ತಿಲ್ಲ. ಮೊದಲನೆಯದಾಗಿ ಜನಪರ ಚಳವಳಿ 'ಜನಹಿ

ದ್ವಿಪಕ್ಷ ರಾಜಕೀಯ ಪದ್ಧತಿ ನಮ್ಮ ದೇಶದಲ್ಲಿ ಒಂದು ಮರೀಚಿಕೆ. ಇದು ಸಾಧ್ಯವೇ ಇಲ್ಲದ ಕನಸು. ದೇಶದ ೩೩ ಕೋಟಿ ದೇವರುಗಳೂ ನಾಯಕರಾಗಲೇ ಬೇಕೆಂಬ 'ಆದರ್ಶದಿಂದ ದುಡಿಯುತ್ತಿರುವ' ರಾಜಕೀಯ ವ್ಯವಸ್ಥೆಯಲ್ಲಿ, ಇರುವಪಕ್ಷಗಳು ಮರಿ ಹಾಕದಿದ್ದರೆ ಅದೇ ಒಂದು ದೊಡ್ಡ ಸಾಧನೆ. ನೈತಿಕ ಕುಸಿತ ಜೆ.ಡಿ.ಎಸ್. ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಜೆ.ಡಿ.ಎಸ್. ಪಕ್ಷದ ಗುತ್ತಿಗೆಯೂ ಅಲ್ಲ. ಎಲ್ಲಾ ರಾಷ್ಟ್ರೀಯ ಮತ್ತು ಸ್ಥಳೀಯ ಪಕ್ಷಗಳೂ ಈ ದಿಕ್ಕಿನಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಾ ಅದನ್ನು ಸಾಕಾರಗೊಳಿಸಲು ಯಥಾಶಕ್ತಿ ಪ್ರಯತ್ನಿಸುತ್ತಿವೆ. ಪಕ್ಷ ರಾಜಕಾರಣ. ದೇಶಕ್ಕಿಂತ ಪಕ್ಷವೇ ದೊಡ್ಡದು ಎನ್ನುವ ಮನೋಭಾವ, ತಮ್ಮ ಪಕ್ಷವೇ-ಪಕ್ಷದ ನೀತಿಯೇ-ಪರಮ ಶ್ರೇಷ್ಠ ಎನ್ನುವ ಮೂರ್ಖತನ. ಸಂಯುಕ್ತ ಸರ್ಕಾರಗಳು ಅಧಿಕಾರಕ್ಕೆ ಬಂದಾಗಲೂ ತಮ್ಮ ಪಕ್ಷವೇ ಸಮಾಜ ಮುಖಿ ಎಂದು ಕೂಗಾಡಿ, ಆ ಮೂಲಕ ತಮ್ಮ ವೈಯಕ್ತಿಕ ಹಿರಿಮೆಯನ್ನು ಸಾಧಿಸಲು ದೊಂಬರಾಟಗಳು ನಡೆಯುವವರೆವಿಗೂ ಎಲ್ಲಾ ಆಶಯಗಳೂ ಅನುಕೂಲ ಸಿಂಧು ಆಶಯಗಳೇ ಆಗಿರುತ್ತವೆ.

ತ'ಕ್ಕಾಗಿ ಹೋರಾಡಿದ್ದರೆ, ಚಳವಳಿ ನಿಷ್ಫಲವಾಗುತ್ತದೆ. ಈಗ ನಮ್ಮ ಎಲ್ಲ ಚಳವಳಿಗಳನ್ನು ನಡೆಸುತ್ತಿರುವ ನಾಯಕರುಗಳು ಜನಪರತೆಯನ್ನು ತಮ್ಮ ಸ್ವಂತ ಅನಿಸಿಕೆಗಳಲ್ಲಿ ಕಾಣುತ್ತಿದ್ದಾರೆ. ಇದಕ್ಕಾಗಿ ಅವರು ಅನುಸರಿಸಿರುವ ಹಠಮಾರಿ ಧೋರಣೆಗಳು ಚಳವಳಿಯನ್ನೇ ಒಡೆಯುವ ಮಟ್ಟವನ್ನು ಮುಟ್ಟಿರುವುದನ್ನೂ ನೋಡುತ್ತಿದ್ದೇವೆ. ಬಹುಜನರ ಅಭಿಪ್ರಾಯವನ್ನೇ 'ಜನಪರ' ಎಂದುಕೊಂಡರೆ 'ಜನಹಿತ' ಸಾಧನೆಯಾಗುವುದಿಲ್ಲ, ಅದಿಲ್ಲದೆ ಚಳವಳಿಗಳು ಯಶಸ್ವಿಯಾಗಲಾರವು. ನಮ್ಮ ಎಲ್ಲ ಚಳವಳಿಗಳೂ ಜನಹಿತವನ್ನು ಜನಪರತೆಯಲ್ಲಿ ಮುಚ್ಚಿಹಾಕುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

೫. ತಳ ಸಮುದಾಯಗಳು ಬಹುಸಂಖ್ಯಾತ ಮೇಲು ಜಾತಿಯ ಸಮುದಾಯಗಳ ಅಧಿಕಾರ ರಾಜಕಾರಣದ ಕೈಗೊಂಬೆಯಾಗಿರುವುದನ್ನು ತಪ್ಪಿಸಲಾಗದಿದ್ದರೆ ಅವುಗಳ ನಿಯಂತ್ರಕ ಶಕ್ತಿಗಳಾಗುವುದಾದರೂ ಹೇಗೆ? ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿ. ಅಧಿಕಾರಕ್ಕೆ ಬಂದ ಮಾತ್ರಕ್ಕೆ ಇದೇ ಪರಿಸ್ಥಿತಿ ಮುಂದುವರಿದು ದೇಶದಲ್ಲೆಲ್ಲಾ ಬದಲಾವಣೆಯನ್ನು ಕಾಣಬಹುದು ಎಂದುಕೊಳ್ಳುವುದು ತಪ್ಪು. ಪ್ರಶ್ನೆಯಲ್ಲಿ ನಮೂದಿಸಿರುವ ಎಲ್ಲ ಪಕ್ಷಗಳೂ ತಮ್ಮದೇ ಆದ ದ್ವಂದ್ವ ನೀತಿ ಅನುಸರಿಸುವವರೆವಿಗೂ ಅಥವಾ ತಮ್ಮ ಪಕ್ಷದ ನೀತಿಗೆ ತಮ್ಮ ಸಮುದಾಯವನ್ನು ಒಲಿಸಿಕೊಳ್ಳುವವರೆವಿಗೂ ಹೀಗೆ ಗುರಿಯಿಲ್ಲದೆ ಮುಂದುವರಿಯಬೇಕಾಗಿದೆ. ಎಲ್ಲಿಯವರೆವಿಗೆ ಜಾತಿಯ ಬಲಗಳ ಮೇಲೆ ರಾಜಕಾರಣ ನಡೆಯುವುದೋ ಅಲ್ಲಿಯವರೆವಿಗೂ ಏನನ್ನೂ ಹೇಳಲಾಗದು.

೬. ನನ್ನಂಥಹವನ ಅನಿಸಿಕೆಗಳು ಅನೇಕರಿಗೆ ಹುಚ್ಚು ಎನಿಸಬಹುದು. ಆದರೆ ಇಂದು ರಾಜ್ಯದಲ್ಲಿ ನಡೆಯುತ್ತಿರುವ ಹುಚ್ಚಾಟಗಳಿಗೆ ಜನ ಕಡಿವಾಣ ಹಾಕುವುದನ್ನು ಕಾಣಲು ಬಯಸುತ್ತೇನೆ. ಒಂದು ನಂಬಿಕೆ/ತತ್ವ ಅದರ ಮೇಲಿನ ಅಚಲ ಶ್ರದ್ಧೆ, ಅದರ ಅನುಷ್ಠಾನಕ್ಕಾಗಿ ನಿರಂತರ ಹೋರಾಟ ನಡೆಸುವ, ಪಕ್ಷಾಂತರಿಗಳಿಲ್ಲದ, ಪಕ್ಷದಿಂದ ಪಕ್ಷಕ್ಕೆ ಹಾರುವವರನ್ನು ದೂರವಿಡುವ ಪಕ್ಷಗಳನ್ನು ನೋಡುವ ಆಸೆ. ಇಂತ ಜನ ಮತ್ತು ಪಕ್ಷಗಳನ್ನು ಕಂಡರೆ ಅಸಹ್ಯಪಡುವ ಜನಸಾಮಾನ್ಯರನ್ನು ನೋಡುವ ಬಯಕೆ. □

ಎಡ ಮತ್ತು ಜಾತ್ಯಾತೀತ ವ್ಯಕ್ತಿಗಳು ಸಾಮಾನ್ಯ ಪ್ರನಾಳಿಕೆಯಡಿ ಒಂದುಗೂಡಬೇಕು

ಶಿವಮೊಗ್ಗ ಸುಬ್ಬಣ್ಣ
ರಾಷ್ಟ್ರ ಪ್ರಶಸ್ತಿ ವಿಜೇತ ಗಾಯಕರು

ರಾಜಕಾರಣ ಚರ್ಚೆ

ಕ[illegible] "ಗಾಂಧಿನಗರ" [illegible] ಎಂಬತ್ತರ ದಶಕದವರೆಗೂ ಕರ್ನಾಟಕ ಚಲಚಿತ್ರ ಜಗತ್ತಿನಲ್ಲಿ ರಂಗಭೂಮಿಯಿಂದ ಬಂದ ಕಲಾವಿದರೂ, ಕಲೆಯ ವಿಚಾರದಲ್ಲಿ ಗಂಭೀರವಾದ ಕಾಳಜಿಯುಳ್ಳ ವ್ಯಕ್ತಿಗಳೂ ಪ್ರಮುಖ ಪಾತ್ರ ವಹಿಸಿದ್ದರು. ಎಂಬತ್ತರ ದಶಕದ ನಂತರ "ರಿಯಲ್ ಎಸ್ಟೇಟ್" ಕುಳಗಳು ಗಾಂಧಿನಗರ ಪ್ರವೇಶ ಮಾಡಿದರು.

ರಿಯಲ್ ಎಸ್ಟೇಟ್ ದಂಧೆಯಲ್ಲಿ ಅಪಾರ ಹಣ ಲೂಟಿ ಮಾಡಿದವರಾದ ಅವರಿಗೆ ಚಲನಚಿತ್ರದ ಗ್ಲಾಮರ್ ಮತ್ತು ಮಾಧ್ಯಮಗಳಲ್ಲಿ ಸಿಕ್ಕುವ ಪುಗಸಟ್ಟೆ ಪ್ರಚಾರ ಬಹಳ ಆಕರ್ಷವಾಗಿ ಕಂಡಿತು. ಅವರಿಗೆ ಚಲನಚಿತ್ರ ಒಂದು ಕಲಾಮಾಧ್ಯಮವೆಂದಾಗಲಿ, ಸಾಮಾಜಿಕ ಬದ್ಧತೆಯಾಗಲೀ ಇಲ್ಲ, ಅದೇ ರೀತಿ ಕರ್ನಾಟಕ ರಾಜಕೀಯ ರಂಗದಲ್ಲಿ "ಗಣಿಗಾರಿಕೆ" ಕಪ್ಪು ಹಣ ತನ್ನ ಕಾರಳ ಛಾಯೆಯನ್ನು ಬೀರಿದೆ. ಇಪ್ಪತ್ತು ತಿಂಗಳ ಆಡಳಿತದ ನಂತರ ಜೆ.ಡಿ.ಎಸ್. ಬಿ.ಜೆ.ಪಿಗೆ ಹಸ್ತಾಂತರ ಮಾಡಬೇಕಾಗಿ ಬಂದಾಗ "ಗಣಿಗಾರಿಕೆ" ಖಾತೆಯನ್ನು ತನಗೇ ನೀಡಬೇಕೆಂಬುದು ಪ್ರಮುಖ ಬೇಡಿಕೆಯಾಗಿತ್ತು. ಜೆ.ಡಿ.ಎಸ್. ಮತ್ತು ಬಿ.ಜೆ.ಪಿ ಕ್ಷೇತ್ರದ ಖದೀಮರುಗಳಿಗೆ ಗಣಿಗಾರಿಕೆ ಮಹಿಮೆ ಚೆನ್ನಾಗಿ ಗೊತ್ತಿದೆ.

ಯಾವ ಪಕ್ಷಕ್ಕೇ ಆಗಲಿ ಗಣಿಗಾರಿಕೆ ಸಾಮಾಜಿಕ ಬದ್ಧತೆ ಮುಖ್ಯವಲ್ಲ. ಹಣದ ಮೂಲಕ ರಾಜ್ಯದ ಆರ್ಥಿಕ ಶಕ್ತಿಯನ್ನು ನಿಯಂತ್ರಿಸುವ ಅಗಮ್ಯ ಬಯಕೆ ಅಷ್ಟೆ. ಭಾರತ ಒಂದು ಬಹುಮುಖೀ ಸಂಸ್ಕೃತಿಯ ದೇಶ (Composite Culture) ಈ ದೇಶದ ಜಾಯಮಾನಕ್ಕೆ ಒಂದು ಧರ್ಮ, ಒಂದು ದೇವರು ಒಗ್ಗುವುದಿಲ್ಲ. ಆದ್ದರಿಂದಲೇ ದೇಶದ ಜನ ಗಾಂಧಿಯವರ ಹಿಂದೆ ಹೋದರು, ಸಂಘಪರಿವಾರದ ಹಿಂದೆ ಹೋಗಲಿಲ್ಲ. ಕಾಂಗ್ರೆಸ್ ಪಕ್ಷ ಜಾತ್ಯತೀತೆಯನ್ನು ತನ್ನ ಪ್ರಮುಖ ಅಂಶವಾಗಿ ಸ್ವೀಕರಿಸಿತು. ಕಾಂಗ್ರೆಸ್ ಪಕ್ಷದ ಕೆಲವು ಮೇಲು ವರ್ಗದ ನಾಯಕರನ್ನು ಬಿಟ್ಟರೆ, ಈ ದೇಶದ ಮೇಲು ವರ್ಗದ ಜನ ಎಂದೂ ಕಾಂಗ್ರೆಸ್ ಅನ್ನು ಬೆಂಬಲಿಸಲಿಲ್ಲ. ಅಲ್ಪ ಸಂಖ್ಯಾತರು ಹಿಂದುಳಿದ ವರ್ಗ ಮತ್ತು ದಲಿತರು ಆ ಪಕ್ಷದ ಬೆಂಬಲಿಗರಾಗಿದ್ದರು. ಆದರೆ ೮೦ರ ದಶಕದ ನಂತರ ದಲಿತರು ಮತ್ತು ಹಿಂದುಳಿದವರು ತಮ್ಮ ಪಕ್ಷಗಳನ್ನು ಮಾಡಿಕೊಂಡಿದ್ದರಿಂದ ಕಾಂಗ್ರೆಸ್ ಪಕ್ಷ ಸತತ ಸೋಲನ್ನು ಅನುಭವಿಸಬೇಕಾಯಿತು.

ಬಲಪಂಥೀಯ ಪಕ್ಷದ ಬಿ.ಜೆ.ಪಿ. ಭಾವನಾತ್ಮಕ ಅಂಶಗಳನ್ನು ಬಡಿದೆಬ್ಬಿಸಿ ತನ್ನ ಬಲವರ್ಧನೆ ಮಾಡಿಕೊಂಡಿತು. ಈ ದೇಶದ ಉಳಿವಿಗೆ ಒಂದೇ ದಾರಿ ಎಂದರೆ ಎಡ ಚಿಂತನೆಯ ಹಾಗೂ ಜಾತ್ಯಾತೀತೆಯ ಮನೋಭಾವದ ಎಲ್ಲ ವ್ಯಕ್ತಿಗಳೂ ಒಂದು ಸಾಮಾನ್ಯ ಪ್ರನಾಳಿಕೆಯ ಅಡಿಯಲ್ಲಿ ಒಂದುಗೂಡಲೇಬೇಕು. ಕರ್ನಾಟಕದ ಜನತೆಯ ಅಪಾರ Common Sense ನಲ್ಲಿ ನನಗೆ ಅಪಾರನಂಬಿಕೆಯಿದೆ. ಪಕ್ಕದ ನಾಡುಗಳಾದ ತಮಿಳು ನಾಡು, ಆಂಧ್ರಪ್ರದೇಶಗಳಂತೆ ಕರ್ನಾಟಕದ ಜನತೆ ಎಂದೂ ಚಲಚಿತ್ರ ಹೀರೋಗಳನ್ನು ತನ್ನ ರಾಜಕೀಯ ನಾಯಕರನ್ನಾಗಿ ಆರಿಸಿಲ್ಲ (ಮುಖ್ಯಮಂತ್ರಿಯಾಗಿ). □

ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಲು ಸಕಾಲ

ಅಲ್ಲಮಪ್ರಭು ಬೆಟ್ಟದೂರು
ಸಾಹಿತಿ, ಚಿಂತಕರು



ರಾಜಕಾರಣ ಚರ್ಚೆ

೧. ಸ್ವಾರ್ಥ, ಅಧಿಕಾರದ ಹಪಾಹಪಿ, ನೀಚತನ ಒಟ್ಟಾರೆ ನೈತಿಕ ಅಧಃಪತನವೇ ನಾನು ಕಂಡುಕೊಳ್ಳುವ ಕಾರಣ.

೨. ಈ ಸಲ ಕಾಂಗ್ರೆಸ್ ಮತ್ತು ಬಿ.ಎಸ್.ಪಿ, ಸಮಾಜವಾದಿ ಪಕ್ಷ, ರೈತ ಸಂಘ, ಸಿ.ಪಿ.ಐ, ಸಿ.ಪಿ.ಎಂ ಕೆಲವೊಂದು ಸ್ಥಾನ ಪಡೆಯಬಹುದು.

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಲು ಇದು ಸಕಾಲ. ಕೂದಲು ಸೀಳುವ ತಾತ್ವಿಕ ಪಾಂಡಿತ್ಯ ಪ್ರದರ್ಶಿಸುವ ಈ ಪಕ್ಷಗಳನ್ನು ಒಗ್ಗೂಡಿಸಲು ಜೆ.ಪಿಯಂತಹ ನಾಯಕನ ಅಗತ್ಯವಿದೆ. ೧೯೭೭ರಲ್ಲಿ ಜಯಪ್ರಕಾಶನಾರಾಯಣ ಅಂದಿನ ಎಲ್ಲ ಪಕ್ಷಗಳನ್ನು ಒಗ್ಗೂಡಿಸಿ ಕಾಂಗ್ರೆಸ್ ವಿರುದ್ಧ ನಿಲ್ಲಿಸಿ ಗೆಲ್ಲಿಸಿದರು. ಅದು ನಮಗೆ ಪಾಠವಾಗಬೇಕು.

೪. ಜನಪರ ಚಳವಳಿಗಳು ತಾವು ಹೋರಾಟ ರಂಗದಲ್ಲಿ ಮಾತ್ರ ಕಾರ್ಯ ಮಾಡುವುದಾಗಿ ಸಾರುತ್ತಾ ಬಂದು ನಂತರ ಅಭಿಪ್ರಾಯ ಬದಲಿಸಿದ್ದರಿಂದ ಜನ ನಂಬುತ್ತಿಲ್ಲ. ಹೀಗಾಗಿ ಅವರು ಮುಖ್ಯಪಾತ್ರ ಆಡಲು ಸಾಧ್ಯವಾಗುತ್ತಿಲ್ಲ.

೫. ತಳಸಮುದಾಯಗಳು ಜಾಗೃತಗೊಂಡರೆ ನಿಯಂತ್ರಕ ಶಕ್ತಿಗಳಾಗುತ್ತವೆ. ಬಿ.ಎಸ್.ಪಿ ಬೆಳೆಯುವ ಸಾಧ್ಯತೆಯಿದೆ. ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ. ಬೆಳೆಯುವ ಸಾಧ್ಯತೆಯಿಲ್ಲ.

೬. ಕರ್ನಾಟಕದ ಮುಂದಿನ ರಾಜಕಾರಣ ಜನರ ಕೈಯ್ಯಲ್ಲಿದೆ. ಜನಸಾಮಾನ್ಯರ ಪರವಾಗಿ ಕಾರ್ಯ ಮಾಡುವಂತಹ ಸರಕಾರ ಬರಬೇಕೆಂದು ಬಯಸುವೆ. □

ಡಾ॥ ಹೆಚ್.ಟಿ. ಪೋತೆ
ಸಾಹಿತಿ, ಚಿಂತಕರು

ರಾಜಕಾರಣ ಚರ್ಚೆ

ಕುರುಡು ಅಲೆಗಳು ಫಲ ನೀಡುವುದಿಲ್ಲ

೧. ಕರ್ನಾಟಕದ ಸದ್ಯದ ರಾಜಕೀಯ ಹಿಂದೆಂದೂ ಕಾಣದ ದುಃಸ್ಥಿತಿಗೆ ಇಂದು ಬಂದು ನಿಂತಿದೆ. ಇಂಥ ಅಧಃಪತನಕ್ಕೆ ನೀವು ಕಂಡುಕೊಳ್ಳುವ ಕಾರಣಗಳೇನು?

ಜೀವಮೂಲ ಕೇಂದ್ರಿತ ಸಂಸ್ಕೃತಿಯ ಶರಣ–ದಾಸರ ಅನುಯಾಯಗಳೆಂದು ಹೇಳಿಕೊಳ್ಳುತ್ತಲೇ ಕೋಮುವಾದ ಹಾಗೂ ಮತಾಂಧತೆಯನ್ನು ಪ್ರತಿಪಾದಿಸುತ್ತ ಒಂದೆಡೆ ವಚನ ಭ್ರಷ್ಟತೆ, ಇನ್ನೊಂದೆಡೆ ಅನೈತಿಕ ನೆಲೆಯ ಅಧಿಕಾರದ ವ್ಯಾಮೋಹ ಇವೆರಡೂ ಇಂದಿನ ರಾಜಕೀಯ ವಿಪ್ಲವಕ್ಕೆ ಕಾರಣಗಳಾಗಿವೆ. ತಮ್ಮ ಸ್ವಾರ್ಥಕ್ಕಾಗಿ ರಾಜಕೀಯ ನಾಯಕರು ಅಮಾಯಕ ಜನತೆಯನ್ನು ಚುನಾವಣೆಯ ಬಾಣಲೆಗೆ ನೂಕಿದ್ದಲ್ಲದೆ, ಅಪ್ರಬುದ್ಧ ಕೆಲ ರಾಜಕಾರಣಿಗಳು ಆಡಿದ ಹುಡುಗಾಟದಿಂದಾಗಿ, ಇನ್ನೂರು ಜನರ ಸುಖಕ್ಕಾಗಿ ಐದುಕೋಟಿ ಜನರು ದುಃಖ ಪಡುವಂತಾಗಿದೆ.

೨. ಜಾತ್ಯತೀತ ತೃತೀಯ ರಾಜಕೀಯ ಶಕ್ತಿಯಂತಿದ್ದ ಜೆಡಿ(ಎಸ್) ಪಕ್ಷದ ನೈತಿಕ ಕುಸಿತ ದ್ವಿಪಕ್ಷ ಪದ್ಧತಿಗೆ ದಾರಿ ಮಾಡಿಕೊಡುವ ಸಾಧ್ಯತೆ ಇದೆಯೇ?

ಸಮಾಜವಾದ, ಜಾತ್ಯತೀತತೆ ಎಂದೆಲ್ಲ ಹೇಳುತ್ತ ಹಲವು ಬಾರಿ ಅಧಿಕಾರ ನಡೆಸಿದ್ದಲ್ಲದೆ, ತೃತೀಯ ಶಕ್ತಿಯ ಚುಕ್ಕಾಣಿ ಹಿಡಿದ ಪಕ್ಷ ಕಳೆದ ನಾಲ್ಕು ವರ್ಷಗಳಲ್ಲಿ ಆಡಿದ್ದೇ ಆಟವೆಂಬ ಹುಡುಗಾಟಿಕೆಯಿಂದಾಗಿಯೇ ಬರುವ ದಿನಗಳಲ್ಲಿ ದ್ವಿಪಕ್ಷ ಪದ್ಧತಿಯನ್ನು ದಾಟಿ, ತ್ರಿಪಕ್ಷ ಸರಕಾರ ರಚನೆಗೊಂಡರೂ ಆಶ್ಚರ್ಯವೇನಿಲ್ಲ. ಆಂತರಿಕ ಕಚ್ಚಾಟದ ಕಾರಣದಿಂದ ದ್ವಿಪಕ್ಷ ವ್ಯವಸ್ಥೆಯಲ್ಲಿ ಜನತೆ ಕಡೆಗಣಿಸಲ್ಪಡುತ್ತಾರೆ. ಜಾತ್ಯತೀತತೆ, ಸಾಮರಸ್ಯ ಇವೆಲ್ಲ ರಾಜಕೀಯ ಪಕ್ಷಗಳ ಭೂಟಾಟಿಕೆಯ ಮಾತುಗಳಾಗಿಯೇ ಉಳಿದಿವೆ.

೩. ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದುಗೂಡಬೇಕೆಂಬ ಆಶಯ ನಿರಂತರವಾಗಿದ್ದರೂ ಅದು ಸಾಧ್ಯವಾಗದಿರುವುದಕ್ಕೆ ನೀವು ಗುರುತಿಸುವ ಕಾರಣಗಳೇನು?

ಒಂದೆಡೆ ಜಾತಿ ಆಧಾರಿತ ರಾಜಕೀಯ ಹಾಗೂ ಇನ್ನೊಂದೆಡೆ ತಮ್ಮ ಮತವನ್ನು ನಿರ್ಣಾಯಕ ಶಕ್ತಿಯನ್ನಾಗಿ ಬಳಸಿಕೊಳ್ಳದಿರುವ ಜನತೆ, ಇವೆರಡೂ ಇದಕ್ಕೆ ಕಾರಣ. ನಮ್ಮ ಜನತೆ ವಿಶೇಷವಾಗಿ ಅನಕ್ಷರಸ್ಥರು ಪ್ರಜಾಸತ್ತಾತ್ಮಕತೆ ಎಂದರೇನೆಂಬುದನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಅಲ್ಲದೇ ಅವರು ಅಲ್ಪ ಆಮಿಷಗಳಿಗೆ ಬಲಿಯಾಗುತ್ತಿದ್ದಾರೆ. ಮತ್ತೊಂದೆಡೆ ರಾಜಕೀಯ ನಾಯಕರು ಅಸಂಖ್ಯಾತ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ. ಒಳ್ಳೆಯ ಗುರಿ ಇರುವವರೆಗೆ ದಾರಿ ಸಿಗುತ್ತಿಲ್ಲ. ದಾರಿ ಸಿಕ್ಕವರಿಗೆ ಗುರಿ ಇಲ್ಲ. ಇನ್ನು ಎಡಪಕ್ಷಗಳ ಕಡೆಗೆ ನಾವು ನೋಡಿದಾಗ ಅವರೂ ಸಹ ತತ್ವ ಭ್ರಷ್ಟರಾಗಿರುವುದು ಸ್ಪಷ್ಟವಾಗಿರುತ್ತದೆ.

೪. ಜನಪರ ಚಳವಳಿಗಳು ಅಧಿಕಾರ ರಾಜಕಾರಣದಲ್ಲಿ ಸಮರ್ಥ (ನಿರ್ಣಾಯಕ) ಪಾತ್ರ ನಿರ್ವಹಿಸುವಲ್ಲಿ ಸೋಲುತ್ತಿರುವುದೇಕೆ?

ಇಂದು ಚಳವಳಿಗಳೇ ದಾರಿ ತಪ್ಪಿವೆ. ಅವು ಜನಹಿತಕ್ಕಾಗಿ ನಡೆಯುವ ಜನತಾ ಚಳವಳಿಗಳಾಗಿಲ್ಲ. ಅದರ ಬದಲು ಒಬ್ಬಿಬ್ಬರ ಹಿತಕ್ಕಾಗಿ ನಡೆಯುವ ಗುಂಪುಗಾರಿಕೆಗಳಾಗಿವೆ. ವಿಶಾಲ ದೃಷ್ಟಿಕೋನದ ಕೊರತೆಯಿಂದಾಗಿ ಚಳವಳಿಗಳು ಅರ್ಥಕಳೆದುಕೊಂಡಿವೆ.

೫. ತಳಸಮುದಾಯಗಳು ಅಧಿಕಾರ ರಾಜಕಾರಣದ ನಿಯಂತ್ರಕ ಶಕ್ತಿಗಳಾಗುವ ಸಾಧ್ಯತೆ ಇದೆಯಾ? ಬಿ.ಎಸ್.ಪಿ., ಸರ್ವೋದಯ ಕರ್ನಾಟಕ ಪಕ್ಷ, ಆರ್.ಪಿ.ಐ. ಇವೇ ಮೊದಲಾದ ಪಕ್ಷಗಳ ಮುಂದಿನ ದಾರಿ ಮತ್ತು ಗುರಿಗಳನ್ನು ನೀವು ಹೇಗೆ ಮುಂಗಾಣುತ್ತೀರಿ?

ತಳ ಸಮುದಾಯಗಳಲ್ಲಿ ಇಂದು ಏಕತೆ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಇಲ್ಲಿ ಜಾತಿಯೇ ಮುಖ್ಯವಾಗಿರುವಾಗ ಸಮಗ್ರತೆ ಸ್ವಲ್ಪ ಕಷ್ಟವೆ. ತಳಸಮುದಾಯಗಳಲ್ಲಿಯೂ ಅವುಗಳಿಗೆ ಅರಿವಿಲ್ಲದಂತೆ ಜಾತಿಯ ಮೇಲುರಿಮೆ ಕೆಲಸ ಮಾಡುತ್ತಿರುವುದರಿಂದ ಅಸ್ಪೃಶ್ಯ ವರ್ಗದೊಂದಿಗೆ ಗುರುತಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ತಮ್ಮಲ್ಲಿ ಮನೆಮಾಡಿರುವ ಮೇಲರಿಮೆಯನ್ನು ತೊರೆದು ತಾವು ಅಧಿಕಾರಕ್ಕೆ ಬಂದಾಗ, ತಮ್ಮ ಹಕ್ಕುಗಳನ್ನು ತಾವು ಸಲೀಸಾಗಿ ಪಡೆಯಬಹುದು ಎನ್ನುವ ದೂರದೃಷ್ಟಿ ತಳವರ್ಗಗಳ ಸಣ್ಣಪುಟ್ಟ ಸಮುದಾಯದವರಿಗೆ, ಎಲ್ಲಿಯವರೆಗೆ ಮನವರಿಕೆಯಾಗುವುದಿಲ್ಲವೋ ಅಲ್ಲಿಯತನಕ ಅಧಿಕಾರ ರಾಜಕಾರಣದ ಶಕ್ತಿಗಳಾಗುವ ಸಾಧ್ಯತೆ ಬಹಳ ಕಡಿಮೆ. ಉತ್ತರ ಪ್ರದೇಶದ ಬಿ.ಎಸ್.ಪಿ.ಯ ಈಗಿನ ಹೊಂದಾಣಿಕೆ ಚರಿತ್ರೆಯಲ್ಲಾದ ಕಹಿ ಘಟನೆಗಳ ಸಾಲಿಗೆ ಸೇರದೆ ಉಳಿದರೆ ಅದು ದೊಡ್ಡ ಸಾಧನೆಯಾಗುತ್ತದೆ. ಹಾಗೆಯೇ ಕರ್ನಾಟಕ ಸರ್ವೋದಯ ಪಕ್ಷ ಕಾವೇರಿ ಪರಿಸರದಿಂದ ಹೊರಬರಬೇಕಾಗಿದೆ. ಆರ್.ಪಿ.ಐ. ಕರ್ನಾಟಕದಲ್ಲಿ ಇಲ್ಲಿಯವರೆಗೆ ನೆಲೆಯನ್ನೇ ಕಂಡುಕೊಳ್ಳಲಿಲ್ಲ.

ತಳ ಸಮುದಾಯಗಳಲ್ಲಿ ಇಂದು ಏಕತೆ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಇಲ್ಲಿ ಜಾತಿಯೇ ಮುಖ್ಯವಾಗಿರುವಾಗ ಸಮಗ್ರತೆ ಸ್ವಲ್ಪ ಕಷ್ಟವೆ. ತಳಸಮುದಾಯಗಳಲ್ಲಿಯೂ ಅವು ಗಳಿಗೆ ಅರಿವಿಲ್ಲದಂತೆ ಜಾತಿಯ ಮೇಲುರಿಮೆ ಕೆಲಸ ಮಾಡುತ್ತಿರುವುದರಿಂದ ಅಸ್ಪೃಶ್ಯ ವರ್ಗದೊಂದಿಗೆ ಗುರುತಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ತಮ್ಮಲ್ಲಿ ಮನೆಮಾಡಿ ರುವ ಮೇಲರಿಮೆಯನ್ನು ತೊರೆದು ತಾವು ಅಧಿಕಾರಕ್ಕೆ ಬಂದಾಗ, ತಮ್ಮ ಹಕ್ಕುಗಳನ್ನು ತಾವು ಸಲೀಸಾಗಿ ಪಡೆಯಬಹುದು ಎನ್ನುವ ದೂರದೃಷ್ಟಿ ತಳವರ್ಗಗಳ ಸಣ್ಣಪುಟ್ಟ ಸಮುದಾಯದವರಿಗೆ, ಎಲ್ಲಿಯವರೆಗೆ ಮನವರಿಕೆಯಾಗುವುದಿಲ್ಲವೋ ಅಲ್ಲಿಯತನಕ ಅಧಿಕಾರ ರಾಜಕಾರಣದ ಶಕ್ತಿಗಳಾಗುವ ಸಾಧ್ಯತೆ ಬಹಳ ಕಡಿಮೆ.

೬. ಆದರ್ಶಗಳು ವಾಸ್ತವಕ್ಕೆ ಬರುವುದು ಕಷ್ಟದ ಕೆಲಸ. ಆದಾಗ್ಯೂ ಇಂದು ಮತದಾರ ಮೊದಲಿಗಿಂತ ಹೆಚ್ಚು ಹೆಚ್ಚು ಎಚ್ಚೆತ್ತುಕೊಂಡಿದ್ದಾನೆ. ಹಾಗಾಗಿ ಯಾವುದೇ ಬಗೆಯ ಕುರುಡು ಅಲೆಗಳು ಫಲ ನೀಡಲಿಕ್ಕಿಲ್ಲ. ತಮಗೆ ಯಾರು ಹಿತವರು ಎಂಬುದನ್ನು ಆಲೋಚಿಸುವ ಮತ್ತು ಅದಕ್ಕೆ ಪೂರಕವಾಗಿ ಮತ ಚಲಾಯಿಸುವ ಪ್ರಜ್ಞಾವಂತಿಕೆ ಇಂದು ಹೆಚ್ಚಾಗಿದೆ. ಇದನ್ನು ಅರ್ಥಮಾಡಿಕೊಂಡು ಜನಪರವಾಗಿ ದುಡಿಯಬಲ್ಲವರು ಮಾತ್ರ ಮತಗಳನ್ನು ತಮ್ಮತ್ತ ಸೆಳೆಯಬಲ್ಲರು. ಒಟ್ಟಾರೆ ಜಾತಿ ರಾಜಕಾರಣ ಪ್ರಜಾಸತ್ತೆಯನ್ನು ಕೊಲೆಮಾಡುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಮತಕ್ಕೆ ಸೂಕ್ತ ಗೌರವ ಸಿಗುವವರೆಗೆ ಪ್ರಜಾಸತ್ತೆ ಕಾರ್ಯಗತವಾಗುವುದಿಲ್ಲ. ಈ ಹಿನ್ನಲೆಯಲ್ಲಿ ಸರ್ವಸಮಾನತೆಯ ಸ್ಥಿತಿ ಸಾಧ್ಯವಾಗಲೆಂದು ಆಶಿಸುವೆ. □

ತಿದ್ದು ಪಡಿ

ಫೆಬ್ರುವರಿ ೨೦೦೮ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ರಾಜಕಾರಣ ಚರ್ಚೆ' ಲೇಖನ ಮಾಲೆಯ ಪುಟ ೨೯, ಕಾಲಂ ೧ರಲ್ಲಿನ ದು. ಸರಸ್ವತಿ ಅವರ ಉತ್ತರದ (೬ನೇ ಉತ್ತರ) ಕೊನೆ ಸಾಲಿನ ಕೊನೆ ವಾಕ್ಯವನ್ನು "ಇದನ್ನು ವಿರೋಧಿಸಿ ಪರ್ಯಾಯ ಆರ್ಥಿಕ ನೀತಿಗೆ ಕೊಡುಗೆ ನೀಡಬೇಕು" ಎಂದು ಓದಿಕೊಳ್ಳಬೇಕಾಗಿ ವಿನಂತಿ. –ಸಂ

ಕರ್ನಾಟಕಕ್ಕೆ ಕಾಂಗ್ರೆಸ್ಸೇ ಗತಿ

ಡಿ. ಎಸ್. ನಾಗಭೂಷಣ್
ಸಾಹಿತಿ, ಚಿಂತಕರು



೧. ಜಾ[illegible] ಎಲ್ಲಾ ರಾಜಕೀಯ ಪಕ್ಷಗಳೂ ಸ್ವಾತಂತ್ರ್ಯ [illegible] ನೆಲೆಗಳನ್ನೇ ಕಳೆದುಕೊಂಡಂತೆ, ಇದನ್ನು ಸದ್ದಿಲ್ಲದೆ ಒಪ್ಪಿಕೊಳ್ಳುವ ಮಂಕಿಗೆ ಒಳಗಾಗಿರುವುದು.

೨. ಸಾರ್ವಜನಿಕ ಜೀವನದಲ್ಲಿ ಈಗ ನೈತಿಕತೆ ಎನ್ನುವುದು ಸಾಂದರ್ಭಿಕ ಮಾತ್ರವಾಗಿರುವುದರಿಂದ, ಜೆಡಿಎಸ್ ಸದ್ಯಕ್ಕಷ್ಟೇ ಹಿನ್ನೆಲೆಗೆ ಸರಿದಂತೆ ನಮಗೆ ಕಂಡಿದ್ದರೂ, ಅದು ಪ್ರತಿನಿಧಿಸುವ ಮಧ್ಯಮ ಜಾತಿಗಳ ಊಳಿಗ ಮಾನ್ಯ ಶಕ್ತಿಗಳು ಜೀವಂತವಾಗಿರುವವರೆಗೆ ಒಂದಲ್ಲ ಒಂದು ಹೆಸರಿನಲ್ಲಿ ಅದು ಉಳಿದೇ ಉಳಿದಿರುತ್ತದೆ. ಇನ್ನು ದ್ವಿಪಕ್ಷ ಪದ್ಧತಿ, ಇಲ್ಲಿ ಎಲ್ಲಿಯವರೆಗೆ ಜಾತಿಗಳಿರುತ್ತವೋ ಅಲ್ಲಿವರೆಗೆ ಸಾಧ್ಯವಿಲ್ಲ.

೩. ಒಂದುಗೂಡಲು, ಕರ್ನಾಟಕದಲ್ಲಿ 'ಎಡ' ಹಾಗೂ 'ಪ್ರಜಾಸತ್ತಾತ್ಮಕ' ಎರಡೂ ಆಗಿರುವ ಶಕ್ತಿಗಳು ಎಲ್ಲಿ ಉಳಿದಿವೆ?

೪. ಜನಪರ ಚಳುವಳಿಗಳು ಎಂದು ಕರೆಯಲಾಗುವ ಚಳುವಳಿಗಳು ನಿಜವಾದ ಹಾಗೂ ಪೂರ್ಣವಾದ ಅರ್ಥದಲ್ಲಿ ಜನಪರವಾಗಿಲ್ಲದಿದ್ದುದೇ ಅವು ಸೋಲಲು ಕಾರಣ.

೫. ಇಂತಹ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹಾಗೂ ಕೊಡುತ್ತಾ ನಮ್ಮ ಮುಕ್ಕಾಲು ಆಯುಷ್ಯವೇ ಕಳೆದು ಹೋಗಿದೆ. ಏನೂ ಪ್ರಯೋಜನವಾಗಿಲ್ಲ. ಬಿಎಸ್‌ಪಿ ಎಂದೋ ತನ್ನ ತಾತ್ವಿಕತೆಯನ್ನು ಅನಗತ್ಯ ಭಾರವೆಂಬಂತೆ ಕಿತ್ತೆಸೆದಿದೆ. ಅದು ತನ್ನ ನಾಯಕಿಯನ್ನು ದೇಶದ ಪ್ರಧಾನಿಯಾಗಿ ಮಾಡಿಬಿಟ್ಟರೆ ತಳ ಸಮುದಾಯಗಳ ಸಮಸ್ಯೆಗಳೆಲ್ಲ ಪರಿಹಾರವಾಗಿಬಿಡುತ್ತವೆ ಎಂಬ ಹುಂಬ ನಂಬಿಕೆಯಿಂದ ಸಮಯ ಸಾಧಕ ರಾಜಕೀಯ ತಂತ್ರವನ್ನಷ್ಟೇ ತನ್ನ ದಾರಿಯನ್ನಾಗಿ ಆರಿಸಿಕೊಳ್ಳುವ ಮೂಲಕ ರಾಜಕೀಯ ಗುರಿ ಕಳೆದುಕೊಂಡಿದೆ. ಸರ್ವೋದಯ ಕರ್ನಾಟಕ ಅದು ಹುಟ್ಟಿದಾಗ ಹುಟ್ಟಿಸಿದ್ದ ಆಸೆಯನ್ನು ಈ ಮೂರು ವರ್ಷಗಳಲ್ಲಿ ತನ್ನ ನಿಷ್ಕ್ರಿಯತೆಯ ಮೂಲಕ ಮಣ್ಣುಗೂಡಿಸಿದೆ. ರಾಜ್ಯ ರಾಜಕೀಯದ ಗೊಂದಲಗಳ ಸಂದಿಯಲ್ಲಿ ತನ್ನ ರಾಜಕೀಯ ಸಮಾರಾಧನೆಯನ್ನು ಮಾಡಿಕೊಳ್ಳಲೆಣಿಸಿದ ಹುಟ್ಟಾ ಪರಾವಲಂಬಿ ಪಕ್ಷದಂತೆ ಅದು ಇಂದು

ಸಾರ್ವಜನಿಕ ಜೀವನದಲ್ಲಿ ಈಗ ನೈತಿಕತೆ ಎನ್ನುವುದು ಸಾಂದರ್ಭಿಕ ಮಾತ್ರವಾಗಿರುವುದರಿಂದ, ಜೆಡಿಎಸ್ ಸದ್ಯಕ್ಕಷ್ಟೇ ಹಿನ್ನೆಲೆಗೆ ಸರಿದಂತೆ ನಮಗೆ ಕಂಡಿದ್ದರೂ, ಅದು ಪ್ರತಿನಿಧಿಸುವ ಮಧ್ಯಮ ಜಾತಿಗಳ ಊಳಿಗ ಮಾನ್ಯ ಶಕ್ತಿಗಳು ಜೀವಂತವಾಗಿರುವವರೆಗೆ ಒಂದಲ್ಲ ಒಂದು ಹೆಸರಿನಲ್ಲಿ ಅದು ಉಳಿದೇ ಉಳಿದಿರುತ್ತದೆ. ಇನ್ನು ದ್ವಿಪಕ್ಷ ಪದ್ಧತಿ, ಇಲ್ಲಿ ಎಲ್ಲಿ ಯವರೆಗೆ ಜಾತಿಗಳಿರುತ್ತವೋ ಅಲ್ಲಿವರೆಗೆ ಸಾಧ್ಯವಿಲ್ಲ. ಒಂದುಗೂಡಲು, ಕರ್ನಾಟಕದಲ್ಲಿ 'ಎಡ' ಹಾಗೂ 'ಪ್ರಜಾಸತ್ತಾತ್ಮಕ' ಎರಡೂ ಆಗಿರುವ ಶಕ್ತಿಗಳು ಎಲ್ಲಿ ಉಳಿದಿವೆ?

ಸೈದ್ಧಾಂತಿಕ ನೆಲೆಗಟ್ಟು ಕಳೆದುಕೊಂಡ ರಾಜಕಾರಣ

ಚಂದ್ರಶೇಖರ್ ತಾಳ್ಯ
ಸಾಹಿತಿ, ಚಿಂತಕರು



ಚಿಕ್ಕಂದಿನಲ್ಲಿ ನಾನು ಕಂಡ ರಾಜಕಾರಣಿಗಳಲ್ಲಿ ಕನಿಷ್ಠ ನೈತಿಕತೆ, ಕಿಂಚಿತ್ ಸೌಜನ್ಯ, ನಾಡು-ನುಡಿಯ ಬಗ್ಗೆ ಮುಗ್ಧ ಪ್ರೀತಿಯಾದರೂ ಇತ್ತು. ಆದರೆ ಇಂದಿನ ಬಹುತೇಕ ರಾಜಕಾರಣಿಗಳಲ್ಲಿ ದುರ್ಬೀನು ಹಾಕಿ ಹುಡುಕಿದರೂ ಅದ್ಯಾವುದೂ ಕಾಣುತ್ತಿಲ್ಲ. ಐಶ್ವರ್ಯ ಮೇಲಿನ ಅಪಾರ ಮೋಹ, ಸಂಬಂಧಿಕರ ಬಗೆಗಿನ ಅತಿಯಾದ ವ್ಯಾಮೋಹ, ಕಾನೂನು, ಸಂವಿಧಾನದ ಬಗೆಗಿನ ಅಗೌರವ ತುಂಬಿ ತುಳುಕುವಷ್ಟಿದೆ. ಎಲ್ಲಕ್ಕಿಂತ ಮುಖ್ಯ ಜನತೆಯಲ್ಲಿ, ಅದರಲ್ಲೂ ಯುವ ಜನಾಂಗದಲ್ಲಿ ರಾಜಕೀಯದ ಬಗ್ಗೆ ಎಳ್ಳಷ್ಟೂ ಎಚ್ಚರ ಇಲ್ಲದಿರುವುದು, ಭ್ರಷ್ಟ ಅಧಿಕಾರಿಗಳ ವಂಚನೆ, ಮಠಾಧಿಪತಿಗಳ ಜಾತೀಯ ಒಳ ಪ್ರೀತಿ ಇವೆಲ್ಲ ಸೇರಿ ಈ ದುಸ್ಥಿತಿ.

ರಾಜಕೀಯ ಧ್ರುವೀಕರಣ ಇಂದು ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ಈ ಧ್ರುವೀಕರಣಕ್ಕೆ ಯಾವುದೇ ಸೈದ್ಧಾಂತಿಕ ನೆಲೆಗಟ್ಟು ಇಲ್ಲಿರುವುದರಿಂದ ಜೆ.ಡಿ.(ಎಸ್.) ಕುಸಿದೀತು ಎಂದು ನನಗನಿಸುತ್ತಿಲ್ಲ. ಇಂದ್ರಜಾಲವನ್ನು ಸೃಷ್ಟಿಸುವ ಮಾಯಕಾರತನ ಅದರ ನೇತಾರರಲ್ಲಿದೆ. ನೈತಿಕ ಕುಸಿತವನ್ನು ಗುರುತಿಸುವಷ್ಟು ಜನ ಪ್ರಾಜ್ಞರಾಗಿದ್ದಾರೆಯೆ ಎಂಬ ಸಂಶಯ ನನ್ನ ಕಾಡುತ್ತಿದೆ. ಹಾಗಾಗಿ ಯಥಾ ಸ್ಥಿತಿಯೇ ಮುಂದುವರಿಯುವ ಎಲ್ಲ ಸೂಚನೆಗಳೂ ಇವೆ.

ಎಡ ಪಕ್ಷ, ಪ್ರಜಾಸತ್ತಾತ್ಮಕ ಶಕ್ತಿಗಳಲ್ಲಿರುವ ಸಂದಿಗ್ಧ ಮನೋಭಾವ, ವಯಕ್ತಿಕ ಪ್ರತಿಷ್ಠೆ, ಬದ್ಧತೆಯ ಅಭಾವ, ಇಚ್ಛಾಶಕ್ತಿಯ ಕೊರತೆ ಇವೆಲ್ಲವುಗಳಿಂದ ಈ ಆಶಯ ಆಶಯವಾಗೇ ಉಳಿಯುವ ಸಾಧ್ಯತೆಯೇ ಹೆಚ್ಚು.

೪. ಚಳವಳಿಗಳು ಮೊದಲಿನ ಕಸುವು ಕಳಕೊಂಡಿವೆ. ಅವು ಜನಪರ ಅನ್ನುವುದಕ್ಕಿಂತ ಆ ಸಂಘಟನೆಯ 'ಅದಂ'ಪರ ಅನ್ನಿಸುತ್ತಿದೆ. ಹಿಂಡು ಗೂಡಿ ಕರುಳ ಸಂಬಂಧ ಇಟ್ಟುಕೊಂಡ ಆಂದೋಲನಗಳು ಸತ್ತು ಹೋದಂತಿವೆ. ಅಧಿಕಾರ ಶಕ್ತಿಗಳ ಜೊತೆ ಯಾವುದೋ ಹಂತದಲ್ಲಿ ಈ ಚಳವಳಿಗಳ ಜನ ಕರಗಿ ಹೋಗಿಬಿಡುವುದು ವೇದ್ಯ ಸಂಗತಿ. ಗಾಂಧಿ, ಅಂಬೇಡ್ಕರ್, ಲೋಹಿಯಾ ಮಾದರಿಯ ಗಟ್ಟಿ ನೈತಿಕ ಬದ್ಧತೆಯನ್ನು ಈ ಚಳವಳಿಗಳ ಜನರಲ್ಲಿ ಕಾಣಲಾಗುತ್ತಿಲ್ಲ.

ಮೇಧಾಪಾಟ್ಕರ್ ಬಿಟ್ಟರೆ ಪರ್ಯಾಯ ವ್ಯಕ್ತಿ,

ಕಾಣುತ್ತಿದೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ನಿದ್ದೆಯಿಂದ ಕಣ್ಣುಜ್ಜಿ ಕೊಂಡು ಏಳುತ್ತಿರುವಂತೆ ತೋರುವ ಅದರ ನಾಯಕರು ಯಾರಲ್ಲೂ ಹೊಸ ಹುರುಪು ಹುಟ್ಟಿಸಲಾರರು. ಇನ್ನು ಆರ್.ಪಿ.ಐ. ನನಗೆ ತಿಳಿದಂತೆ ಕರ್ನಾಟಕದ ನೆಲದಲ್ಲಿ ಎಂದೂ ನೆಲೆಯೂರಿಲ್ಲ. ಹೀಗಾಗಿ ಈ ಪಕ್ಷಗಳ ಭರವಸೆಯ ಮೇಲೆ ಕರ್ನಾಟಕದ ರಾಜಕಾರಣವನ್ನು ಪುನಾರಚಿ ಸುವುದು ಸದ್ಯಕ್ಕೆ ಅಸಾಧ್ಯವೆಂದೇ ನನಗೆ ಕಾಣುತ್ತದೆ.

೬. ಎಷ್ಟೇ ಕೆಟ್ಟಿದ್ದರೂ, ಇಂದು ಕಾಂಗ್ರೆಸ್ಸೊಂದೇ ಸದ್ಯಕ್ಕೆ ಕರ್ನಾಟಕದ ಮುಂದಿನ ರಾಜಕಾರಣಕ್ಕೆ ಆಧಾರವಾಗಬಲ್ಲ ಪಕ್ಷವೆಂದು ಹೇಳಬೇಕಾಗಿರುವ ದುಃಸ್ಥಿತಿ ನಮ್ಮದಾಗಿದೆ! ನೀವು ಹೇಳುವಂತಹ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳೇನಾದರೂ ರಾಜ್ಯದಲ್ಲಿ ಉಳಿದಿದ್ದರೆ, ಅವು ಈ ಪಕ್ಷದ ಮೇಲೆ ಒತ್ತಡ ಹೇರಿ ಅದನ್ನು ವರ್ತಮಾನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲ ರಾಜಕೀಯ ಪಕ್ಷವನ್ನಾಗಿ ಸನ್ನದ್ಧಗೊಳಿಸಬೇಕಿದೆ. ಆ ಪಕ್ಷ ಕೂಡಾ ಸೋನಿಯಾ ಗಾಂಧಿ ಪಕ್ಷವೆನ್ನಿಸಿಕೊಳ್ಳಲು ಹಿಂದೆಗೆದು, ಸ್ವಯಂ ನಂಬಿಕೆಯ ಮಹಾತ್ಮ ಗಾಂಧಿ ಪಕ್ಷವಾಗಿ ಪುನರೂಪುಗೊಳ್ಳುವ ಯುಗಸಂಕಲ್ಪ ಮಾಡಬೇಕಾಗಿದೆ. ಇದಕ್ಕಾಗಿ ಆ ಪಕ್ಷದ ಬಸವಳಿದು ಹೋಗಿರುವ ಹಿರಿಯ ನಾಯಕರು ಹೊಸ ಮತ್ತು ಯುವ ನಾಯಕತ್ವವನ್ನು ಪಕ್ಷದ ಒಳಗೂ ಹೊರಗೂ ಹುಡುಕಿ ರೂಪಿಸಬೇಕಿದೆ. ಪಕ್ಷಕ್ಕೆ ಪ್ರಾದೇಶಿಕವೆನಿಸುವ ಹೊಸ ಕಳೆ ತರಬೇಕಿದೆ. ಇದು ಕಾಂಗ್ರೆಸ್ ಇತರ ಜಾತ್ಯತೀತ ಹಾಗೂ ಪ್ರಗತಿಪರ ಶಕ್ತಿಗಳೊಡಗೂಡಿ ತುರ್ತಾಗಿ ಕೈಗೊಳ್ಳಲೇ ಬೇಕಾದ ಐತಿಹಾಸಿಕ ಕೆಲಸ. ಇಲ್ಲದೇ ಹೋದಲ್ಲಿ ಅದಕ್ಕೂ ಉಳಿಗಾಲವಿಲ್ಲ ಹಾಗೂ ಅದರೊಂದಿಗೆ ನಾವೆಲ್ಲ ರಾಜ್ಯವನ್ನು ಮತ್ತು ರಾಷ್ಟ್ರವನ್ನು ಬಿಜೆಪಿಗೆ ತಟ್ಟೆಯಲ್ಲಿಟ್ಟು ಕೊಡಲು ತಯಾರಾಗಬೇಕಾಗುತ್ತದೆ. □

ಎಡ ಪಕ್ಷ, ಪ್ರಜಾಸತ್ತಾತ್ಮಕ ಶಕ್ತಿಗಳಲ್ಲಿರುವ ಸಂದಿಗ್ಧ ಮನೋಭಾವ, ವಯಕ್ತಿಕ ಪ್ರತಿಷ್ಠೆ, ಬದ್ಧತೆಯ ಅಭಾವ, ಇಚ್ಛಾಶಕ್ತಿಯ ಕೊರತೆ ಇವೆಲ್ಲವುಗಳಿಂದ ಈ ಆಶಯ ಆಶಯವಾಗೇ ಉಳಿಯುವ ಸಾಧ್ಯತೆಯೇ ಹೆಚ್ಚು.

ಸಂಘಟನೆ ಸದ್ಯಕ್ಕೆ ನನಗೆ ಕಾಣುತ್ತಿಲ್ಲ. ನಾನು ಅಷ್ಟೊಂದು ಆಶಾವಾದಿಯಲ್ಲ. ತಳಸಮು ದಾಯಗಳ ತಳವೇ ಇನ್ನೂ ಸಭದ್ರವಾಗಿಲ್ಲ ಆದರೂ ಗವ್ ಗತ್ತಲೆಯ ಅತಿದೂರದಲ್ಲಿ ಪುಟ್ಟ ಹಣತೆಯ ಬೆಳಕಿನ ಸೆಳ ಕನ್ನು ನಾನು ನೋಗುತ್ತಿರುವುದೂ ಸತ್ಯ. ನಮೂದಿತ ಪಕ್ಷ ಗಳ ಶ್ರದ್ಧೆ, ಕ್ರಿಯಾಶೀಲತೆ, ಎಚ್ಚರ, ಜನರಿಗೆ ತಿಳಿ ಹೇಳುವ, ಪ್ರಜ್ಞೆ ಮೂಡಿಸುವ ಕೆಲಸ ನಿಷ್ಠೆಯಿಂದ, ಅರ್ಪಣಾ ಮನೋಭಾವದಿಂದ ನಡೆದರೆ ಮಾತ್ರ ನನ್ನ ಕ್ಷೀಣ ಆಸೆ ದೊಡ್ಡ ಆಸೆಯಾಗಿ ಮಾರ್ಪಟ್ಟೀತು.

ಲೋಹಿಯಾ, ಗಾಂಧಿ, ಅಂಬೇಡ್ಕರ್ ಚಿಂತನೆಗಳ ಮಿಶ್ರಣದಲ್ಲಿ ಒಂದು ಹದವಾದ ಪಾಕವನ್ನು ಸಿದ್ಧಗೊಳಿಸಿ ಅದನ್ನು ಉಣ್ಣುವ ಭಾಗ್ಯವನ್ನು ಕರ್ನಾಟಕ ಪಡೆಯುವಂತಿರಬೇಕು. ಸಾಧ್ಯವೇ? □

ಲಾರ್ಡ್ ಮೆಕಾಲೆ ತಿರಸ್ಕಾರ ಯೋಗ್ಯರೇ?

(೧೭ನೇ ಪುಟದಿಂದ)

ಜಾತಿಯನ್ನು ಹೇರಿ, ಸ್ಥಳೀಯ ನಿವಾಸಿಗಳನ್ನು ಅಸ್ಪೃಶ್ಯರಂತೆ ಪರಿಗಣಿಸುವ ನವ ಬ್ರಾಹ್ಮಣರನ್ನು ಸೃಷ್ಟಿಸದಿದ್ದರೆ ಸಾಕು."

"ವರ್ಣ, ಹುಟ್ಟು, ಅಥವಾ ಧರ್ಮದ ಕಾರಣಗಳಿಂದಾಗಿ ಭಾರತೀಯ ಸಂಸ್ಥಾನದ ಯಾವುದೇ ಸ್ಥಳೀಯ ನಾಗರಿಕ ಸಾರ್ವಜನಿಕ ಅಧಿಕಾರ ಹೊಂದುವುದನ್ನು ನಿರಾಕರಿಸದಿರುವ ಅತ್ಯುತ್ತಮವಾದ, ಉದಾರವಾದ ಶಾಸನದ ಬಗ್ಗೆ ನನ್ನ ಪ್ರಶಂಸೆಯಿದೆ." ಎಂದೂ ಹೇಳುತ್ತಾರೆ.

ತನ್ನ 'ಮೈನೂಟ್ಸ್ ಆನ್ ಎಜುಕೇಷನ್' ಕೃತಿಯಲ್ಲಿ ಹಿಂದೂ ಧಾರ್ಮಿಕತೆಯನ್ನು ಟೀಕಿಸುತ್ತಾ ಲಾರ್ಡ್ ಮೆಕಾಲೆ ಹೀಗೆ ಹೇಳುತ್ತಾನೆ:

ಸುಳ್ಳು ಧರ್ಮವೊಂದರ ಜತೆಗೆ ಬೆರೆತುಕೊಂಡಿರುವ, ಸುಳ್ಳು ವೈದ್ಯಪದ್ಧತಿ, ಸುಳ್ಳು ಇತಿಹಾಸವನ್ನು ನಾವು ಕಲಿಸುವುದಾದರೆ... ಒಂದು ಮೇಕೆಯನ್ನು ಕೊಂದು, ಕೊಲೆಯ ಅಪರಾಧದಿಂದ ತಪ್ಪಿಸಿಕೊಳ್ಳಲು ಯಾವ ವೇದವನ್ನು ಪಠಿಸಬೇಕೆಂದು ಕಲಿಯಲು ಯುವಕರು ತಮ್ಮ ಯೌವನವನ್ನು ಕಳೆದುಕೊಳ್ಳುವುದಕ್ಕಾಗಿ ಸರ್ಕಾರ ಹಣ ಒದಗಿಸಬೇಕಾದೀತು

ಹೀಗಾದಾಗ, ಕೆಲಸಕ್ಕೆ ಬಾರದ ಇತಿಹಾಸ, ಭೌತಶಾಸ್ತ್ರ, ಧರ್ಮಶಾಸ್ತ್ರಗಳಿಗೆ ಉತ್ತೇಜನ ನೀಡುವ ಭರದಲ್ಲಿ ಪ್ರಯೋಜನಕ್ಕೆ ಬಾರದ ವಿಷಯಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಸಾರ್ವಜನಿಕ ಹಣವನ್ನು ಪೋಲು ಮಾಡುವ ಮಂಡಳಿಯಾಗುತ್ತದೆ ನಮ್ಮದು.

ಕಾನೂನಿನ ಎದುರು ಎಲ್ಲ ಭಾರತೀಯರು ಸಮಾನರು ಎಂದು ಪರಿಗಣಿಸುವ ಭಾರತೀಯ ದಂಡ ಸಂಹಿತೆಯನ್ನು ರಚಿಸಿದವ ಲಾರ್ಡ್ ಮೆಕಾಲೆ ಎಂಬುದನ್ನು ನಾವು ನೆನಪಿಡಬೇಕು. ಭರತ ಖಂಡವನ್ನು ಗೆದ್ದ ರಾಬರ್ಟ್ ಕ್ಲೈವ್, ಇಲ್ಲಿನ ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಲಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಭಾರತದ ಪರವಾಗಿದ್ದ ಲಾರ್ಡ್ ಮೆಕಾಲೆ, ಜಾತಿ ಪದ್ಧತಿಯಂತಹ ಹಲವು ಕೆಟ್ಟ ಆಚರಣೆಗಳನ್ನು ವಿರೋಧಿಸಿದ.

ಹೀಗಾಗಿ, ಮುಖ್ಯವಾಹಿನಿಯ ಭಾರತೀಯರು ಲಾರ್ಡ್ ಮೆಕಾಲೆಯನ್ನು ಎಂದಿಗೂ ಮನ್ನಿಸುವುದಿಲ್ಲ. ಭಾರತದಲ್ಲಿ ಇದುವರೆಗೆ ಬುದ್ಧನಿಂದ, ಅಂಬೇಡ್ಕರ್‌ವರೆಗೆ ಜಾತಿವ್ಯವಸ್ಥೆಯನ್ನು ಪ್ರಶ್ನಿಸಿದವರೆಲ್ಲರೂ, ತಿರಸ್ಕಾರಕ್ಕೊಳಗಾಗಿದ್ದಾರೆ. ಬೌದ್ಧಧರ್ಮ ಭಾರತದಿಂದ ಬಹುತೇಕ ಕಣ್ಮರೆಯಾಗಿದೆ. ಭಾರತೀಯ ಸಂವಿಧಾನದ ಕರ್ತೃವಾದರೂ, ಅಂಬೇಡ್ಕರ್ ಚುನಾವಣೆಗಳಲ್ಲಿ ಸೋಲನುಭವಿಸಿದರು.

ಲಾರ್ಡ್ ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ ಕೂಡ ಖಂಡಿತವಾಗಿ ಇದೇ ಸಾಲಿಗೆ ಸೇರುತ್ತಾನೆ. ಮಹತ್ತರ ವ್ಯಕ್ತಿಗಳು, ಸಾಮಾಜಿಕ-ರಾಜಕೀಯ ಮತ್ತು ಧಾರ್ಮಿಕ ಚಳವಳಿಗಳಿಗೆ ಸಾಧ್ಯವಾಗದ ಕೆಲಸವನ್ನು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆ ಮಾಡಿ ತೋರಿಸುವುದೇ? ಕಾದು ನೋಡಬೇಕು. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕ್ರೈಸ್ತರ ಮೇಲಿನ ಹಲ್ಲೆಗಳು ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು

೧೯೯೮ ಮಾರ್ಚ್ ೮ ರಂದು ವಡೋದರದಲ್ಲಿ ವಿಎಚ್‌ಪಿ ಕಾರ್ಯಕರ್ತರು, ಕ್ರೈಸ್ತರ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ್ದವರನ್ನು ಥಳಿಸಿ, ಅವರ ಚರ್ಚು, ಆಸ್ತಿ-ಪಾಸ್ತಿಗಳನ್ನು ನಾಶಪಡಿಸಿದರು. ೧೯೯೮ರ ಏಪ್ರಿಲ್ ೧೨ರಂದು ಬಿಜೆಪಿ. ವಿಎಚ್‌ಸಿ, ಭಜರಂಗದಳದ ವ್ಯಕ್ತಿಗಳು ನರೋಡಾದ ಕ್ಯಾಥೋಲಿಕ್ ಚರ್ಚ್ ಅನ್ನು ಧ್ವಂಸಮಾಡಿ, ಅಲ್ಲಿನ ಸೇಂಟ್ ಮೇರಿಸ್ ಸ್ಕೂಲ್‌ನ ಸ್ವತ್ತಿಗೆ ಹಾನಿಯನ್ನುಂಟು ಮಾಡಿದರು. ಇದೇ ವರ್ಷ ಜೂನ್ ೧೬ರಂದು ಜಮಖಾವ್‌ನ ಜೆಸ್ಯೂಟ್ ಶಾಲೆಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಟ್ರಕ್‌ನಲ್ಲಿ ಬಂದ ದುಷ್ಕರ್ಮಿಗಳು ಹಲ್ಲೆ ನಡೆಸಿದರು. ಮತ್ತೆ ಜುಲೈನಲ್ಲಿ, ಹಿಂದೂ ಜಾಗರಣ ಮಂಚ್‌ನ ಕಾರ್ಯಕರ್ತರು ಭಾಷ್ಕಲ್‌ನ ಕ್ರೈಸ್ತ ಮಂದಿರವನ್ನು ಸುಟ್ಟು ಹಾಕಿದರು. ೧೯೯೯ ರಲ್ಲಿ ಆಸ್ಟ್ರೇಲಿಯಾದ ಗ್ರಹಾಂ ಸ್ಟೇನ್ಸ್ ಮತ್ತು ಆತನ ಇಬ್ಬರು ಮಕ್ಕಳನ್ನು ಭಜರಂಗದಳದ ಕಾರ್ಯಕರ್ತರು ಜೀವಂತವಾಗಿ ಸುಟ್ಟು ಹಾಕಿದರು.

ಬಿ.ಯು. ಸುಮಾ

೨೦೦೭ ಡಿಸೆಂಬರ್‌ನಲ್ಲಿ ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆದ ಹಿಂಸಾತ್ಮಕ ಹಲ್ಲೆ, ಈ ನಾಡಿನ ಕೋಮುವಾದಿ ರಾಜಕಾರಣ ತೆಗೆದುಕೊಳ್ಳುತ್ತಿರುವ ವಿಕಾರವಾದ ಆಕೃತಿಯ ಬಗ್ಗೆ ಮತ್ತೊಂದು ಜ್ವಲಂತವಾದ ಉದಾಹರಣೆಯಾಗಿದೆ.

ಕ್ರಿಸ್‌ಮಸ್ ಹಬ್ಬದ ಆಚರಣೆಯಲ್ಲಿ ಭಾಗವಹಿಸುತ್ತಿದ್ದ ಬ್ರಾಹ್ಮಣಿಗಾಂವ್‌ನ ಕ್ರೈಸ್ತರ ಮೇಲೆ ಹಠಾತನೆ ಆಕ್ರಮಣ ಮಾಡಿದ ವಿಎಚ್‌ಪಿ ಕಾರ್ಯಕರ್ತರು, ಕನಿಷ್ಟ ಹನ್ನೆರಡು ಚರ್ಚುಗಳಿಗೆ ಬೆಂಕಿ ಇಟ್ಟದ್ದಲ್ಲದೆ, ಅನೇಕರ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದರು. ಈ ರೀತಿ ಕ್ರೈಸ್ತರ ಮೇಲೆ ನಡೆಯುತ್ತಿರುವ ಹಿಂಸಾಚಾರಗಳು ಹೊಸತೇನಲ್ಲ.

೧೯೯೮ ಮಾರ್ಚ್ ೮ ರಂದು ವಡೋದರದಲ್ಲಿ ವಿಎಚ್‌ಪಿ ಕಾರ್ಯಕರ್ತರು, ಕ್ರೈಸ್ತರ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ್ದವರನ್ನು ಥಳಿಸಿ, ಅವರ ಚರ್ಚು, ಆಸ್ತಿ-ಪಾಸ್ತಿಗಳನ್ನು ನಾಶಪಡಿಸಿದರು. ೧೯೯೮ರ ಏಪ್ರಿಲ್ ೧೨ರಂದು ಬಿಜೆಪಿ. ವಿಎಚ್‌ಸಿ, ಭಜರಂಗದಳದ ವ್ಯಕ್ತಿಗಳು ನರೋಡಾದ ಕ್ಯಾಥೋಲಿಕ್ ಚರ್ಚ್ ಅನ್ನು ಧ್ವಂಸಮಾಡಿ, ಅಲ್ಲಿನ ಸೇಂಟ್ ಮೇರಿಸ್ ಸ್ಕೂಲ್‌ನ ಸ್ವತ್ತಿಗೆ ಹಾನಿಯನ್ನುಂಟು ಮಾಡಿದರು. ಇದೇ ವರ್ಷ ಜೂನ್ ೧೬ರಂದು ಜಮಖಾವ್‌ನ ಜೆಸ್ಯೂಟ್ ಶಾಲೆಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಟ್ರಕ್‌ನಲ್ಲಿ ಬಂದ ದುಷ್ಕರ್ಮಿಗಳು ಹಲ್ಲೆ ನಡೆಸಿದರು. ಮತ್ತೆ ಜುಲೈನಲ್ಲಿ, ಹಿಂದೂ ಜಾಗರಣ ಮಂಚ್‌ನ ಕಾರ್ಯಕರ್ತರು ಭಾಷ್ಕಲ್‌ನ ಕ್ರೈಸ್ತ ಪ್ರಾರ್ಥನಾ ಮಂದಿರವನ್ನು ಸುಟ್ಟು ಹಾಕಿದರು. ೧೯೯೯ರಲ್ಲಿ ಆಸ್ಟ್ರೇಲಿಯಾದ ಮಿಶನರಿಗೆ ಸೇರಿದ ಒರಿಸ್ಸಾದ ಸಮಾಜಸೇವಕ ಗ್ರಹಾಂ ಸ್ಟೇನ್ಸ್ ಮತ್ತು ಆತನ ಇಬ್ಬರು ಮಕ್ಕಳನ್ನು ಭಜರಂಗದಳದ ಕಾರ್ಯಕರ್ತರು ಜೀವಂತವಾಗಿ ಸುಟ್ಟ ಬರ್ಬರ ಘಟನೆಗೆ ನಾಡಿನ ಸಾಮಾನ್ಯ ಜನತೆ ಮಮ್ಮಲ ಮರಗಿತ್ತು. ಬಿಜೆಪಿ ಅಧಿಕಾರದಲ್ಲಿರುವ ಗುಜರಾತ್‌ನಲ್ಲಂತೂ ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ, ಅನಾಚಾರಗಳು ಸಾಮಾನ್ಯವಾದ ಸಂಗತಿಗಳಾಗಿವೆ. ಇತ್ತೀಚಿನ ಕೆಲ ವರ್ಷಗಳಲ್ಲಂತೂ ಕ್ರೈಸ್ತರ ಮೇಲೆ ಭಾರತದಲ್ಲಿ ಒಂದಲ್ಲ ಒಂದು ಕಡೆ ಹಿಂಸಾಚಾರಗಳು ನಿರಂತರವಾಗಿ ಜರುಗುತ್ತಲೇ ಇವೆ.

* * * * * * *

ನಮ್ಮ ಸಾಂಸ್ಕೃತಿಕ ಸಂಕಥಗಳಲ್ಲಿ ಮತ್ತು ಸಾಮಾಜಿಕ ವಲಯಗಳಲ್ಲಿ ಕ್ರೈಸ್ತ ಧರ್ಮದ ಬಗೆಗೆ ಹಲವು ರೀತಿಯ ಸಂಕಥನಗಳಿವೆ. ಕನ್ನಡದ ಎರಡು ಮುಖ್ಯ ಕಾದಂಬರಿಗಳಾದ 'ಚೋಮನ ದುಡಿ' ಮತ್ತು 'ಮಲೆಗಳಲ್ಲಿ ಮದುಮಗಳು' ಈ ಸಮುದಾಯದ ಸಾಮಾಜಿಕ ಚರಿತ್ರೆಯ ಸೂಕ್ಷ್ಮತೆಗಳನ್ನು ಹಿಡಿದಿಡುತ್ತವೆ.

ಬೇಸಾಯಗಾರನಾಗಬೇಕೆಂಬುದು ಚೋಮನ ಹಂಬಲ. ತಾನು ಹೊಲೆಯನಾಗಿರುವಷ್ಟು ದಿನ ಬೇಸಾಯಗಾರನಾಗುವುದು ಸಾಧ್ಯವಿಲ್ಲ ಎಂದು ಚೋಮನಿಗೆ ಅನ್ನಿಸಲಾರಂಭಿಸುತ್ತದೆ. ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿ ಬೇಸಾಯಗಾರನಾಗಿರುವ ಅವನ ಮಗ ಗುರುವನ ಉದಾಹರಣೆ ಅವನ ಮುಂದಿದೆ. ಈ ಸಂದರ್ಭದಲ್ಲಿ ಚೋಮನಿಗೆ, "ಪಾದ್ರಿಯ ದೇವರನ್ನು ನಂಬಿದರೇನು ಹಾನಿ..." "ಹೊಲೆಯರ ಕುಲ ದೇವರಿಗೂ ಬೇಡವಾದ ಕುಲ" ಎಂದೆನಿಸಲಾರಂಭಿಸುತ್ತದೆ. ಚೋಮನ ಬದುಕು ಮತ್ತು ಆಲೋಚನೆಗಳಲ್ಲಿ ಶತಾಯ ಗತಾಯ ಪ್ರಯತ್ನ ಮಾಡಿದರೂ, ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ. ತಳಸ್ತರದವರ ಬದುಕಿನ ಕ್ರಮದಲ್ಲಿ ಯಾವುದೇ ರೀತಿಯ ಬದಲಾವಣೆ ಸಾಧ್ಯವಿಲ್ಲ ಎನ್ನುವ ದಟ್ಟದ ಹತಾಶೆ ಇದೆ. ತನ್ನದೇ ಆದ, ಸ್ವಾತಂತ್ರ್ಯದ ಮತ್ತು ಘನತೆಯ ವೈಯಕ್ತಿಕ ಬದುಕನ್ನು ಪಡೆದುಕೊಳ್ಳುವ ಬಿಡುಗಡೆಯ ದಾರಿಯಾಗಿ ಚೋಮನಿಗೆ ಮತಾಂತರ ಕಾಣಿಸಲಾರಂಭಿಸುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪಾದ್ರಿ ಜೀವರತ್ನಯ್ಯನ ಉದ್ದೇಶ ಮತಾಂತರಗೊಳಿಸುವುದೇ ಆದರೂ, ಆತ, ಆಧುನಿಕ ಚಿಂತನೆಗಳ ಬೀಜಗಳನ್ನು ಮಲೆನಾಡಿನ ಗೌಡ ಜನಾಂಗದಲ್ಲಿ ಬಿತ್ತಿದವನು. ಪಾದ್ರಿಯ ಸಹವಾಸದಿಂದಾಗಿ, ದೇವಯ್ಯ ಮೂಢಾಚಾರ ಮತ್ತು ಮೂಢಾನಂಬಿಕೆಗಳನ್ನು ಪ್ರಶ್ನಿಸಲಾರಂಭಿಸಿದ್ದವನು. ಅಷ್ಟೇ ಅಲ್ಲದೆ, ಆಧುನಿಕ ಸಾಮಾಜಿಕ, ಆಡಳಿತ ಸಂಸ್ಥೆಗಳ ಕಾರ್ಯ ವಿಧಾನಗಳ ಬಗ್ಗೆ ಕಿಂಚಿತ್ತೂ ಜ್ಞಾನವಿಲ್ಲದ ಸ್ಥಳೀಯರಿಗೆ ಅದರೊಡನೆ ವ್ಯವಹರಿಸಲು ಸಹಾಯಕವಾಗುವವನು.

ನಮ್ಮ ಚಲನಚಿತ್ರಗಳಲ್ಲಿ ಬಿಂಬಿತವಾಗುವ ಕ್ರೈಸ್ತರು ಅಪಾರವಾದ ಕರುಣೆ, ತಾಳ್ಮೆ, ಸಹನೆ ಉಳ್ಳವರು. ಬದುಕನ್ನು ಪ್ರೀತಿಸುವ ಸಂದೇಶವನ್ನು ಸಾರುವವರು. ಸಾಮಾಜಿಕವಾಗಿ ತಿರಸ್ಕೃತರಾದ, ಅವಜ್ಞೆಗೆ ಒಳಗಾದ ಅನಾಥರನ್ನು, ಅಪರಾಧಿಗಳನ್ನು ತಮ್ಮ ಪ್ರೀತಿಯ ತೆಕ್ಕೆಗೆ ತೆಗೆದುಕೊಳ್ಳುವವರು.

ಭಾರತದ ಯಾವುದೇ ಪ್ರಾದೇಶಿಕ ಭಾಷೆಯ ಆಧುನಿಕ ಸಾಹಿತ್ಯ ಚರಿತ್ರೆ, ಕ್ರೈಸ್ತ ಮಿಶನರಿಗಳ ಕೊಡುಗೆಯನ್ನು ಉಲ್ಲೇಖಿಸದೆ ಮುಂದುವರೆಯುವುದು ಸಾಧ್ಯವಿಲ್ಲ. ಕ್ರೈಸ್ತ ಮಿಶನರಿಗಳ ಪ್ರತಿನಿಧಿಗಳಾದ ಅಬೆದುಬೈ, ವಾಲ್ಮರ್ ಎಲಿಯಟ್, ಹರ್ಮನ್ ಮೋಗ್ಲಿಂಗ್, ರಾಬರ್ಟ್ ಕಾಲ್ಡ್‌ವೆಲ್, ಫರ್ಡಿನಂಡ್ ಕಿಟೆಲ್, ಬಿ.ಎಲ್. ರೈಸ್, ಜೆ.ಎಫ್. ಫ್ಲೀಟರು ಕೈಗೊಂಡ ದೈತ್ಯ ಕಾರ್ಯಕ್ಕೆ ಕನ್ನಡದ ಸಂಶೋಧನಾ ಕ್ಷೇತ್ರ ಇಂದಿಗೂ ಅವರಿಗೆ ಋಣಿಯಾಗಿದೆ ಹಾಗೂ ಪ್ರೀತಿಯಿಂದ ಅವರನ್ನು ಸ್ಮರಿಸಿಕೊಳ್ಳುತ್ತದೆ.

ಅಬೆದುಬೈ ಮತ್ತು ಕಾಲ್ಡ್‌ವೆಲ್ ಬಗ್ಗೆ ಮರೆಯದೆ ಹೇಳಬೇಕಾದ ಕೆಲವು ವಿಷಯಗಳಿವೆ. ಅಬೆದುಬೈ ಜನರ ಬಡತನದ ಸಮಸ್ಯೆಯ ನಿವಾರಣೆಗಾಗಿ ಕೃಷಿಸಮುದಾಯಗಳನ್ನು ಸ್ಥಾಪಿಸಿದರು. ಸಾಂಕ್ರಾಮಿಕ ಸಿಡುಬು ರೋಗವನ್ನು ತಡೆಗಟ್ಟಲು ಲಸಿಕೆ ಹಾಕಿಸಿಕೊಳ್ಳುವಂತೆ ಅವರು ನಡೆಸಿದ ಪ್ರಯತ್ನ ಆಶ್ಚರ್ಯವನ್ನುಂಟು ಮಾಡುವಂಥದ್ದು. ಆ ಕಾಲದಲ್ಲಿ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಜನರು ಲಸಿಕೆ ಹಾಕಿಸಿಕೊಂಡಿದ್ದು ಒಂದು ದಾಖಲೆಯಾಗಿದೆ. ಇದರಲ್ಲಿ ಆತನ ಸಾಮಾಜಿಕ ಕಾಳಜಿ ಹಾಗೂ ಜನಪರ ಉದ್ದೇಶಗಳನ್ನು ಕಾಣಬಹುದು. ಅವನ ಬಗ್ಗೆ ಅಪಾರವಾದ ಗೌರವವಿದ್ದ ಹಾಸನದ ಸುತ್ತ ಮುತ್ತಲಿನ ಜನ ಅವನನ್ನು 'ದೊಡ್ಡಸ್ವಾಮಿಯವರು' ಎಂದು ಕರೆಯುತ್ತಿದ್ದರು. ಕಾಲ್ಡ್‌ವೆಲ್ ಹಾಗೂ ಅವರ ಹೆಂಡತಿ ಎಲಿಸಾ ಮಹಿಳಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಬೆಳವಣಿಗೆಗೆ ಶ್ರಮಿಸಿದವರು. ಇನ್ನು ಕಿಟೆಲ್ ಅವರಂತೂ ಕನ್ನಡದ ಸಾಹಿತ್ಯ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ತೆತ್ತುಕೊಂಡು, ಒಬ್ಬರನ್ನೂ ಕ್ರೈಸ್ತರನ್ನಾಗಿ ಮಾಡಲಿಲ್ಲ. ವಾಸ್ತವವಾಗಿ, ಭಾರತದಲ್ಲಿ ಕ್ರೈಸ್ತ ಮಿಶನರಿಗಳಿಗೆ ಎರಡು ಮುಖ್ಯ ಉದ್ದೇಶಗಳಿದ್ದವು: ಒಂದು, ಸ್ಥಳೀಯ ಜ್ಞಾನವನ್ನು ಕ್ರೋಢೀಕರಿಸಿ, ವ್ಯಾಖ್ಯಾನಿಸಿ, ಭಾರತಕ್ಕೆ ಒಂದು ಚರಿತ್ರೆಯನ್ನು ಕಟ್ಟು

ವುದು. ಎರಡು, ಕ್ರೈಸ್ತ ಧರ್ಮವನ್ನು ವಿಸ್ತರಿಸುವುದು. ಈ ಎರಡೂ ಉದ್ದೇಶಗಳಾಚೆಗೆ ಒಂದು ಮಾನವೀಯ ನೆಲೆಯಲ್ಲಿ, ಅತ್ಯಂತ ಪ್ರಾಮಾಣಿಕವಾಗ್ಗಿ ಅವರು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿದರು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಅಸ್ಪೃಶ್ಯ ಮತ್ತು ಬುಡಕಟ್ಟು ಸಮುದಾಯಗಳಲ್ಲಿ ಕ್ರೈಸ್ತರು ಮಾಡಿರುವ ಮತ್ತು ಮಾಡುತ್ತಿರುವ ಕೆಲಸವನ್ನು ಭಾರತದಲ್ಲಿ ಅನ್ಯ ಧರ್ಮೀಯರಾರೂ ಮಾಡಿಲ್ಲ ಹಾಗೂ ಮಾಡುವುದೂ ಇಲ್ಲ. ಅವರಿಗೆ ಶುಚಿತ್ವದಿಂದ ಹಿಡಿದು, ಆರೋಗ್ಯ ಶಿಕ್ಷಣ, ಜೀವನೋಪಾಯಕ್ಕೆ ಸಹಾಯಕವಾಗುವಂಥ ಸಂಗತಿಗಳ ಬಗ್ಗೆ ತಿಳುವಳಿಕೆ ನೀಡಿ, ಕನಿಷ್ಠ ಪಕ್ಷ ಮನುಷ್ಯರಂತೆ ಕಾಣುವುದಕ್ಕೆ ಮತ್ತು ಜೀವಿಸುವುದಕ್ಕೆ ಕ್ರೈಸ್ತ ಮಿಶನರಿಗಳು ನೆರವನ್ನು ನೀಡಿವೆ. ಹೀಗೆ ಮಾಡಿದ ಕಡೆಯಲೆಲ್ಲಾ ಅವರು ಮತಾಂತರವನ್ನೇನೂ ಮಾಡಿಲ್ಲ. ಹಿಂದುಗಳು ಹೋಗುವುದು ಇರಲಿ, ಹೋಗುವುದನ್ನು ಯೋಚಿಸಲೂ ಹೇಸುವಂಥ ಕಡೆಯಲ್ಲಿ ನಿಂತು, ನಿರಂತರವಾಗಿ ಕ್ರೈಸ್ತ ಮಿಶನರಿಗಳು ಕೆಲಸ ಮಾಡುತ್ತವೆ.

ಈ ವಿಷಯವನ್ನು ನಾನು ಯಾಕೆ ಇಷ್ಟು ಘಂಟಾಘೋಷಿವಾಗಿ ಹೇಳಬಲ್ಲೆ ಎಂದರೆ, ಹೊಲೆಯರ ಜಾತಿಗೆ ಸೇರುವ ನಾನು, ಶಿಕ್ಷಣ ಪಡೆದ ಎರಡನೇ ತಲೆಮಾರಿನವಳು. ನಮ್ಮ ತಾಯಿಯ ಊರು ಅಜ್ಜಂಪುರ. ಈ ಊರಿನಲ್ಲಿ ನಲವತ್ತು-ಐವತ್ತು ಹೊಲೆಯರ ಕುಟುಂಬಗಳಿವೆ. ಆಕೆಗೆ ಸುಮಾರು ಹದಿನಾಲ್ಕು ವರ್ಷವಾಗಿದ್ದಾಗ, (೧೯೬೪) ಅಜ್ಜಂಪುರಕ್ಕೆ ಅಂಗನವಾಡಿಯ ಟೀಚರ್ ಆಗಿ ಬಂದ ಕ್ರೈಸ್ತ ಹೆಣ್ಣು ಮಗಳು ಶ್ರೀಮತಿ ಲೀಲಾ ಅರ್ನೆಸ್ಟ್, ಹಗಲೆಲ್ಲಾ ಅಂಗನವಾಡಿಯಲ್ಲಿ ಟೀಚರ್ ಕೆಲಸ ಮಾಡಿದರೆ, ಸಂಜೆ ಹೊತ್ತು ತನ್ನಂತೆ ಹದಿವಯಸ್ಸಿನ ಹೆಣ್ಣು ಮಕ್ಕಳಿಗೆ ಟೈಲರಿಂಗ್, ನಿಟ್ಟಿಂಗ್ ಹೇಳಿಕೊಡುವುದರ ಜೊತೆಗೆ, ಅವರ ಆಲೋಚನೆ ಮತ್ತು ಕೆಲಸಗಳಲ್ಲಿ ಒಂದು ರೀತಿಯ 'ಎಲೈಟ್‌ನೆಸ್' ಅನ್ನು ತರುವಲ್ಲಿ ನೆರವಾದವರು, ಇಷ್ಟು ಸಾಲದೆಂಬಂತೆ ಸರ್ಕಾರದಿಂದ ಅವರಿಗೆಲ್ಲಾ ಹೊಲಿಗೆ ಯಂತ್ರವನ್ನು ಕೊಡಿಸಿ, ಹಟ್ಟಿಯ ಗಂಡು ಮಕ್ಕಳಿಗೆ ಸರ್ಕಾರಿ ಕೆಲಸಕ್ಕೆ ಅರ್ಜಿ ಹಾಕಲು ನೆರವಾಗಿ, ಅಲ್ಲಿನ ಹಲವಾರು ಕುಟುಂಬಗಳು ನೆಮ್ಮದಿಯ ಜೀವನವನ್ನು ನಡೆಸಲು ಕಾರಣರಾದವರು. ಈಗಲೂ ಹಟ್ಟಿಯ ಜನರು, ತಮ್ಮ ಮನೆಯ ಮುಖ್ಯ ಸಮಾರಂಭಕ್ಕೆ ಆಕೆಗೆ ಆಮಂತ್ರಣ ನೀಡುವುದನ್ನು ಮರೆಯುವುದಿಲ್ಲ. ಯಾವುದೇ ಸಮಾರಂಭಕ್ಕ ಆಕೆ ಬಂದರೂ, ನಮ್ಮ ತಾಯಿಯ ಸಂಬಂಧಿಕರೆಲ್ಲಾ ಆಕೆಯ ಸುತ್ತ ನೆರೆದು, ಆಕೆಯ ಕೈಯನ್ನು ಕೃತಜ್ಞತೆಯಿಂದ ಹಿಡಿದುಕೊಂಡು, "ನಿನ್ನಿಂದ ನಾವು ಉದ್ಧಾರ ಆದ್ವಿ ಕಣವ್ವ" ಎಂದು ಹೃದಯ ತುಂಬಿ ಹೇಳುತ್ತಾರೆ. ಆದರೆ, ಈ ಹಟ್ಟಿಯಲ್ಲಿ ಯಾರೂ ಮತಾಂತರವಾಗಿಲ್ಲ.

ಹೀಗೆ, ಕ್ರೈಸ್ತ ಧರ್ಮಕ್ಕೆ ಅನೇಕ ಆಯಾಮಗಳಿವೆ. ಸಾಂಸ್ಥೀಕರಣಗೊಂಡ ಪ್ರತಿಯೊಂದು ಧರ್ಮಕ್ಕೂ ಅದರದ್ದೇ ಆದ ನಿರ್ದಿಷ್ಟ ಉದ್ದೇಶಗಳಿರುತ್ತವೆ. ಈ ಉದ್ದೇಶಗಳಾಚೆಗೆ ಕ್ರೈಸ್ತ ಧರ್ಮಕ್ಕಿರುವ ಮುಖ್ಯ ಗುಣ, 'ಒಳಗೊಳ್ಳುವಿಕೆ' (Inclusiveness)

* * * * * *

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ, ಹಿಂದೂ ಚೌಕಟ್ಟಿಗೆ ಸೇರುವವರು' ಎಂದು ಸಂಘಪರಿವಾರ ಭಾವಿಸಿದ ವ್ಯಕ್ತಿಗಳನ್ನು, ಸಮುದಾಯಗಳನ್ನು ಕ್ರೈಸ್ತ ಮಿಶನರಿಗಳು ಬಲವಂತವಾಗಿ ಮತಾಂತರಗೊಳಿಸುತ್ತಿವೆ

ಹಿಂದೂ ರಾಜಕಾರಣಕ್ಕೆ ಜಾತಿ ಮತ್ತು ವರ್ಗಗಳು ಹಾಗೇ ಉಳಿಯುವುದು ತಮ್ಮ ಸ್ವಹಿತ ರಕ್ಷಣೆಗಾಗಿ, Vote bankನ ಉಳಿವಿಗಾಗಿ ಬಹಳ ಮುಖ್ಯವಾದ ವಿಷಯ. ಇದು ತಿರುವು ಮುರುವು ಆಗುವ ಯಾವುದೇ ಸಾಮಾಜಿಕ ವಿದ್ಯಮಾನವನ್ನೂ ಅದು ಸಹಿಸುವುದಿಲ್ಲ. ಅದಕ್ಕೆ emancipatory agenda ಎಂದಿಗೂ ಮುಖ್ಯವಾಗುವುದೇ ಇಲ್ಲ. ಇದೇ ಕಾರಣದಿಂದಲೇ ಅಸ್ಪೃಶ್ಯ ಹಾಗೂ ಬುಡಕಟ್ಟು ಸಮುದಾಯಗಳಲ್ಲಿ ಕ್ರೈಸ್ತ ಮಿಶನರಿಗಳು ಮಾಡುವ ಕೆಲಸವನ್ನು ವಿಎಚ್‌ಪಿ, ಸಂಘಪರಿವಾರ ಎಂದೆಂದಿಗೂ ಸಹಿಸುವುದಿಲ್ಲ. ಆಧುನಿಕ ಪ್ರಜಾತಾಂತ್ರಿಕ ವ್ಯವಸ್ಥೆ 'ಸಾಮಾಜಿಕ ನ್ಯಾಯ'ದ ಬುನಾದಿಯ ಮೇಲೆ ಕಟ್ಟ ಬಯಸಿದ ರಾಷ್ಟ್ರವನ್ನು ಆ ದಿಕ್ಕಿನತ್ತ ನಡೆಯಲು ಸಾಧ್ಯವಾಗದಂಥ ಹುನ್ನಾರುಗಳನ್ನು ಅದು ಸೃಷ್ಟಿಸಿ, ಅದು ನಿರಂತರವಾಗಿ Operate ಆಗುವಂತೆ ನೋಡಿಕೊಳ್ಳುತ್ತದೆ. ಆದ್ದರಿಂದ, 'ಸೆಕ್ಯುಲರಿಸಂ'ನ ತತ್ವವನ್ನಾಗಲಿ ಅಥವಾ ತಾನು ಇಚ್ಛಿಸಿದ ಧರ್ಮಕ್ಕೆ ಮತಾಂತರಗೊಳ್ಳುವ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನಾಗಲಿ ಅದು ಮಾನ್ಯ ಮಾಡುವುದಿಲ್ಲ.

ಎಂಬ ವಿಷಯದ ಬಗ್ಗೆ ತೀವ್ರವಾದ ಪ್ರಚಾರ ಪ್ರಾರಂಭವಾಯಿತು. ಈ ರೀತಿಯ ಪ್ರಚಾರದ ಹಿನ್ನೆಲೆಯಲ್ಲಿಯೇ, ವಿಎಚ್‌ಪಿ ಮತ್ತು ಸಂಘಪರಿವಾರದಿಂದ ಹಿಂಸಾತ್ಮಕ ಆಕ್ರಮಣಗಳೂ ಶುರುವಾದವು. ಮಿಶನರಿಗಳು ಒಡ್ಡುವ ಪ್ರಲೋಭನೆಗೆ ಒಳಗಾಗಿ 'ಹಿಂದೂಗಳು' ಮತಾಂತರಗೊಳ್ಳುತ್ತಿದ್ದಾರೆ ಎನ್ನುವುದು ವಿಎಚ್‌ಪಿಯ ವಾದವಾಗಿದೆ. ಆದರೆ, ಮತಾಂತರಗೊಳ್ಳುತ್ತಿರುವವರು ಯಾರು, ಅದರ ಹಿಂದಿನ ಕಾರಣಗಳೇನು ಎಂಬುದನ್ನು ನೋಡಿದಾಗ, ಅಲ್ಲಿ ಜಾತೀಯ ತಾರತಮ್ಯದಿಂದ ಹಾಗೂ ಇನ್ನೂ ಆಚರಣೆಯಲ್ಲಿರುವ ಅಸ್ಪೃಶ್ಯತೆಯಿಂದ ಬಿಡಿಸಿಕೊಳ್ಳಲು, ಅಸ್ಪೃಶ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರಗೊಳ್ಳುತ್ತಿರುವವರು ಎನ್ನುವ ಸಂಗತಿ ಗೋಚರವಾಗುತ್ತದೆ. ಇದರ ಜೊತೆಗೆ, ಆಧುನಿಕತೆಯ ಚೌಕಟ್ಟಿನೊಳಗೆ ಬರಬೇಕೆನ್ನುವ ಅಪೇಕ್ಷೆಯಿಂದ ಬುಡಕಟ್ಟು ಸಮುದಾಯಗಳೂ ಮತಾಂತರಕ್ಕೆ ಮನಸ್ಸನ್ನು ಕೊಡುತ್ತಿವೆ.

ಮತಾಂತರವನ್ನು ಹಿಂಸಾತ್ಮಕವಾಗಿಯಾದರೂ ತಡೆಗಟ್ಟಲೇಬೇಕೆನ್ನುವ ಇವರ ಹಠಕ್ಕೆ ಎರಡು ಮುಖ್ಯವಾದ ಕಾರಣಗಳಿವೆ: ೧. ಜಾತಿ ಆಧಾರಿತ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆ ಹಿಂದೂ ಧರ್ಮದ ಮುಖ್ಯ ಬುನಾದಿಯಾಗಿದೆ. ಅಸ್ಪೃಶ್ಯರು ಮತಾಂತರಗೊಳ್ಳಲಾರಂಭಿಸಿದರೆ, ಅವರು ಜಾತಿ ಆಧಾರಿತ ಕೆಲಸಗಳಿಂದ ಬಿಡುಗಡೆ ಪಡೆಯಲಾರಂಭಿಸುತ್ತಾರೆ. ಅವರು ಮಾಡುವ ಕೆಲಸವನ್ನು ಬೇರೆ ಇನ್ನ್ಯಾರು ಮಾಡುವುದಿಲ್ಲವಾದ್ದರಿಂದ, ಅಸ್ಪೃಶ್ಯರು ಮತಾಂತರಗೊಳ್ಳುವುದು ಇವರಿಗೆ ಒಂದು ದೊಡ್ಡ ಆತಂಕದ ಸಂಗತಿಯಾಗಿದೆ. ೨. ಶ್ರೇಣೀಕೃತ ಆರ್ಥಿಕ ವ್ಯವಸ್ಥೆ ಹಿಂದೂ ಧರ್ಮದ ಮತ್ತೊಂದು ಗುಣ. ಆಧುನಿಕತೆ ಅದನ್ನು ಛಿದ್ರಿಸುತ್ತದೆ. ಭಾರತದಲ್ಲಿ ಆಧುನಿಕತೆಯ ಸೌಲಭ್ಯಗಳನ್ನು ಪಡೆದಿರುವ ಕೆಲವು ವರ್ಗಗಳಲ್ಲಿ ಕ್ರೈಸ್ತರೂ ಮುಖ್ಯರಾಗಿರುವುದರಿಂದ, ಕ್ರೈಸ್ತ ಧರ್ಮಕ್ಕೆ ಅಸ್ಪೃಶ್ಯರ/ಬುಡಕಟ್ಟು ಸಮುದಾಯದವರ ಮತಾಂತರ ಒಂದು ಸಮಸ್ಯೆಯಾಗಿದೆ.

ಹಿಂದೂ ರಾಜಕಾರಣಕ್ಕೆ ಜಾತಿ ಮತ್ತು ವರ್ಗಗಳು ಹಾಗೇ ಉಳಿಯುವುದು ತಮ್ಮ ಸ್ವಹಿತ ರಕ್ಷಣೆಗಾಗಿ, Vote bankನ ಉಳಿವಿಗಾಗಿ ಬಹಳ ಮುಖ್ಯವಾದ ವಿಷಯ. ಇದು ತಿರುವು ಮುರುವು ಆಗುವ ಯಾವುದೇ ಸಾಮಾಜಿಕ ವಿದ್ಯಮಾನವನ್ನೂ ಅದು ಸಹಿಸುವುದಿಲ್ಲ. ಅದಕ್ಕೆ emancipatory agenda ಎಂದಿಗೂ ಮುಖ್ಯವಾಗುವುದೇ ಇಲ್ಲ. ಇದೇ ಕಾರಣದಿಂದಲೇ ಅಸ್ಪೃಶ್ಯ ಹಾಗೂ ಬುಡಕಟ್ಟು ಸಮುದಾಯಗಳಲ್ಲಿ ಕ್ರೈಸ್ತ ಮಿಶನರಿಗಳು ಮಾಡುವ ಕೆಲಸವನ್ನು ವಿಎಚ್‌ಪಿ, ಸಂಘಪರಿವಾರ ಎಂದೆಂದಿಗೂ ಮಾಡುವುದಿಲ್ಲ. ಆಧುನಿಕ ಪ್ರಜಾತಾಂತ್ರಿಕ ವ್ಯವಸ್ಥೆ 'ಸಾಮಾಜಿಕ ನ್ಯಾಯ'ದ ಬುನಾದಿಯ ಮೇಲೆ ಕಟ್ಟ ಬಯಸಿದ ರಾಷ್ಟ್ರವನ್ನು ಆ ದಿಕ್ಕಿನತ್ತ ನಡೆಯಲು ಸಾಧ್ಯವಾಗದಂಥ ಹುನ್ನಾರುಗಳನ್ನು ಅದು ಸೃಷ್ಟಿಸಿ, ಅದು ನಿರಂತರವಾಗಿ Operate ಆಗುವಂತೆ ನೋಡಿಕೊಳ್ಳುತ್ತದೆ. ಆದ್ದರಿಂದ, 'ಸೆಕ್ಯುಲರಿಸಂ'ನ ತತ್ವವನ್ನಾಗಲಿ ಅಥವಾ ತಾನು ಇಚ್ಛಿಸಿದ ಧರ್ಮಕ್ಕೆ ಮತಾಂತರಗೊಳ್ಳುವ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನಾಗಲಿ ಅದು ಮಾನ್ಯ ಮಾಡುವುದಿಲ್ಲ.

ಭಾರತದ ಅಲ್ಪಸಂಖ್ಯಾತ ಧರ್ಮಗಳನ್ನು ಪರಿಧೀಕರಿಸುವುದು ಒಂದು ರೀತಿಯ ಹಿಂದೂ ರಾಜಕಾರಣದ ಘೋಷಿತ ಅಜೆಂಡಾ ಆಗಿದ್ದರೆ, ಆಳದಲ್ಲಿ ಹೊಸದಾಗಿ ಮತಾಂತರಗೊಳ್ಳುತ್ತಿರುವ ತಳಸ್ತರಕ್ಕೆ ತಾವು ಆನಂದಿಸುತ್ತಿರುವ ಸಾಮಾಜಿಕ ಅಂತಸ್ತು, ತಮಗಿರುವ ಆರ್ಥಿಕ ಸೌಲಭ್ಯ, ರಾಜಕೀಯ ಅಧಿಕಾರ ಲಭ್ಯವಾಗಬಾರದು ಎನ್ನುವ ಪಾರಂಪರಿಕವಾದ ಹಿಂದೂ ಮನಃಸ್ಥಿತಿಯೇ ಕೆಲಸ ಮಾಡುತ್ತದೆ. ಈ ಕಾರಣದಿಂದಲೇ ಕ್ರೈಸ್ತರ ಮೇಲೆ ನಡೆಯುತ್ತಿರುವ ಹಲ್ಲೆಗಳು ಹೆಚ್ಚು ಸಂಕೀರ್ಣತೆಯ ಸ್ವರೂಪವನ್ನು ಪಡೆದುಕೊಳ್ಳುತ್ತವೆ.

ಇಂಥ ಶಕ್ತಿಗಳ ಹಿಡಿತದಲ್ಲೇ ಇರುವ ಮಾಧ್ಯಮಗಳು ಕೂಡ ಇವುಗಳ ಪ್ರಬಲವಾದ ಏಜೆಂಟ್‌ಗಳಾಗಿವೆ. ಕೆಲವು ನಿಯತಕಾಲಿಕೆಗಳಂತೂ ಪ್ರತಿದಿನ ಕ್ರೈಸ್ತರ ಬಗ್ಗೆ ನೇತ್ಯಾತ್ಮಕ ಧೋರಣೆಯನ್ನು ಸೃಷ್ಟಿಸುವಂಥ ವಿಷಯಗಳನ್ನು ವರದಿ ಮಾಡುತ್ತಿವೆ. ಈ ವರದಿಗಳನ್ನು ಸ್ವಲ್ಪ ಚಿಕಿತ್ಸಕ ದೃಷ್ಟಿಯಿಂಗ ನೋಡಿದರೆ ಸಾಕು, ಇದರ ಹಿಂದಿನ ಪೂರ್ವಾಗ್ರಹಗಳು ಸ್ಪಷ್ಟವಾಗುತ್ತವೆ.

ಬಿಜೆಪಿ, ವಿಎಚ್‌ಪಿ, ಸಂಘಪರಿವಾರ ಪ್ರತಿಪಾದಿಸುತ್ತಿರುವ 'ಹಿಂದೂ ರಾಷ್ಟ್ರ'ದಲ್ಲಿ 'ಬಹುತ್ವ'ವನ್ನು ಅದು ಸಹಿಸಿಕೊಳ್ಳುವುದಿಲ್ಲ, 'ಸಾಮಾಜಿಕ ನ್ಯಾಯ'ವನ್ನು ಎಂದೆಂದಿಗೂ ಒದಗಿಸುವುದಿಲ್ಲ ಎನ್ನುವುದು ವಾಸ್ತವಿಕವಾದ ಸಂಗತಿಯಾಗಿದೆ. □

ದೂಪ್ದಳ್ಳಿ ಸೈಕ್ಷಿ ದುರುಗ

ಕಥೆ

○ ಬಿ.ಟಿ. ಜಾಹ್ನವಿ

ರಾತ್ರಿಯೆಲ್ಲಾ ಲಕ್ಷ್ಮಿಯ ಅರಚಾಟವೇ ಅರಚಾಟ. ಆ ಅರಚಾಟ ಕೇಳಲಾರದೆ ಪರದೆ ಕಿತ್ತು ಹೊರಬಂದು 'ಥೂ, ಒಳ್ಳೆ ಮಧ್ಯರಾತ್ರೀಲಿ ಇದೊಳ್ಳೆ ದರಿದ್ರ ಗೋಳಾಟ... ನೆಟ್ಟಗೆ ನಿದ್ದೆ ಮಾಡೋಕೂ ಬಿಡಂಗಿಲ್ಲ...' ನನ್ನ ಗೊಣಗಾಟ ಕೇಳಿ ಅತ್ತ ಕಡೆ ಮಲಗಿದ್ದ ಸಣ್ಣಜ್ಜಿ ಅತ್ತಿತ್ತ ಹೊರಳಾಡಿ, ಮುಲುಕಾಡುತ್ತ 'ಅಯ್ಯೋ ನಮ್ಮವ್ವ ಬೆದಿಗ್ಬಂದೈತೆ ಕಣೆ ಅದಕ್ಕಿಂಗೆ ಅರುಸ್ತೈತೆ ಪಾಪ... ಯಾರನ ಹೋಗಿ ಕಟ್ಟಸ್ಕಂಡು ಬರಾವರ್ಗೂ ಇಂಗೆಯಾ...' ಅಂದ್ಲು. 'ಇನ್ನೊಂದಿನ ಹಿಂಗೆ ಇದು ಅರಚಾಡಿದ್ರೆ ಖಂಡಿತ ತಲೆಕೆಟ್ಟು ಮೊಸರ್ ಗಡಿಗೆಯಾಗತ್ತಷ್ಟೆ.' ಕಣ್ಣು ಮುಚ್ಚಲು ಪ್ರಯತ್ನಿಸುತ್ತ ಅಂದೆ. 'ನಾಳಿಕೆ ನಮ್ ಸಿಂಗ್ರಳ್ಳಿ ರಾಮ ಬರ್ಬದೇನೂ ಕಣೇ ನಿಮ್ಮವ್ವ ಹೇಳಿಕಳಸ್ಯಾಳೆ... ಅವ್ನು ಬಂದ್ರೆ ವಡ್ಕಂಡೋಗ್ತನ್ ಬಿಡು..' ಅಂತಂದು 'ಸಿರ್..ಸಿರ್...' ಅಂತ ಉಸಿರುದಬ್ಬುತ್ತ ಮತ್ತೆ ನಿದೆಗೆ ಜಾರಿದಳು ಸಣ್ಣಜ್ಜಿ.

ಲಕ್ಷ್ಮಿನ ನೋಡಿಕೊಳ್ಳಲು ಬಂದು ಹೋದ ಹುಡುಗರೆಷ್ಟೊ. ನಮ್ಮಮ್ಮನ ಅತಿಶಿಸ್ತು, ಅಪ್ಪನ ಕೋಪಾವೇಶಕ್ಕೆ ಬಂದವರ್ಯಾರು ಹದಿನೈದು ದಿನದ ಮೇಲಿರುತ್ತಿರಲಿಲ್ಲ. ಸಣ್ಣಜ್ಜಿ ಹೇಳಿದ ಸಿಂಗ್ರಳ್ಳಿ ರಾಮಪ್ಪನೂ ಸುಮ್ಮನೇ ಬರುವವನಲ್ಲ. ಯಾವುದಾದರೊಂದು ಮಿಕನ ಹಿಡಿದೇ ತರಬೇಕಿತ್ತು. 'ದೇವ್ರೇ ನಾಳೆ ಆ ರಾಮಪ್ಪನ್ನ ಹೇಗಾದರೂ ನಮ್ಮನೆ ತಲುಪುವಂತೆ ಮಾಡು...' ಎಂದು ಮನದಲ್ಲೇ ಕಾಣದ ಆ ದೇವರಿಗೆ ಮೊರೆಯಿಟ್ಟು, ಕಣ್ಣು ಬಿಗಿಯಾಗಿ ಮುಚ್ಚುತ್ತ ನಿದ್ರೆ ಮಾಡುವ ಪ್ರಯತ್ನಪಟ್ಟೆ.

ನನ್ನ ಮೊರೆ ಆ ದೇವರಿಗೆ ಖಂಡಿತ ಕೇಳಿಸಿರಬೇಕು, ಮರುದಿನ ಬೆಳಿಗ್ಗೆ ನಾ ಏಳುವ ಹೊತ್ತಿಗಾಗಲೇ ರಾಮಪ್ಪ ಬಂದು ಲಕ್ಷ್ಮಿಯನ್ನು ಹೊಡೆದುಕೊಂಡೂ ಹೋಗಿ ಮನ ಶಾಂತವಾಗಿತ್ತು. ನಾನು ಸೀದಾ ಅಡುಗೆ ಮನೆ ಹೊಕ್ಕೆ. ಅಮ್ಮ, ಸಣ್ಣಜ್ಜಿ ಲಕ್ಷ್ಮಿಯ ವಿಚಾರವೇ ಮಾತಾಡುತ್ತಿದ್ದರು. 'ಸದ್ಯ, ರಾಮಪ್ಪ ಬಂದ. ಇಲ್ಲಂದಿದ್ರೆ ಆಕೀ ಒದರಾಟ ಏನ್ಕೇಳ್ತಿ...?' ಎನ್ನುತ್ತಿದ್ದಳು ಸಣ್ಣಜ್ಜಿ. ಅಮ್ಮ ಕೊಟ್ಟ ಕಾಫಿ ಕುಡಿಯುತ್ತ 'ಅಲ್ಲಾ, ಲಕ್ಷ್ಮಿ ಬೆದಿಗೆ ಬಂದ್ರೆ ಇಷ್ರಿಗೆಲ್ಲಾ ಎಷ್ಟೊಂದು ಕಾಳಜಿ? ಎಷ್ಟೊಂದು ಒದ್ದಾಟ? ಅದೆಷ್ಟು ಅಂಡರ್‌ಸ್ಟ್ಯಾಂಡಿಂಗೂ...' ಅಂದುಕೊಂಡೆ. ಹಿಂದೆಯೇ ಯೋಚನೆಯೊಂದು ಹೊರಳಿ ಬಂದು ನಗು ತಡೆಯದಾಯ್ತು. ಒಬ್ಬಳೇ ನಗತೊಡಗಿದೆ. ಅಮ್ಮ ಅದೇನೆಂದು ಹೇಳುವ ತನಕ ಬಿಡಲಿಲ್ಲ. ಗದರಿಸಿ, ಗದರಿಸಿ ಕೇಳತೊಡಗಿದಳು. 'ಹೇಳಿದ್ಮೇಲೆ ಮತ್ತೆ ಬೈಬಾರ್ದು ನೋಡು...' ಎನ್ನುತ್ತಲೇ ಮೆಲ್ಲನೆ ಹೇಳಿದೆ. 'ಅಲ್ಲಾ ದನಗಳು ಬೆದೆಗೆ ಬಂದು ಒದರ್ತಾವಲ್ಲಾ... ಹಂಗೇ ಮನುಷ್ಯರೂ ಒದರಂಗಿದ್ದಿದ್ರೆ ಹೆಂಗಿರ್ತಿತ್ತೂಂತ' ಅಮ್ಮ ಪಕ್ಕದಲ್ಲಿ ಸಿಂಬೆ ಕೈಗೆತ್ತಿಕೊಂಡು 'ಎದ್ದೋಗ್ತಿಯಿಲ್ಲೆ ಗಬ್ಬುಮುಂಡೇ ಬೆಳಿಗ್ಗೆ, ಬೆಳಿಗ್ಗೆ ಅದೇನ್ನಾತು...' ಎಂದು ನನ್ನತ್ತ ಬೀಸಿ ಒಗೆದಾಗ ನಾನು ಹೊರಕ್ಕೆ ನೆಗೆದು ತಪ್ಪಿಸಿಕೊಂಡೆ. ನನ್ನ ಹಿಂದೆ ಅಮ್ಮ, ಸಣ್ಣಜ್ಜಿ ಇಬ್ಬರೂ ಮುಸಿ ಮುಸಿ ನಗುತ್ತಿದ್ದುದು ಕಿವಿಗೆ ಬೀಳದಿರಲಿಲ್ಲ.

ಮುಖ ತೊಳೆಯಲು ಹಿತ್ತಲಿಗೆ ಹೊರಟ ನಾನು ಅಲ್ಲಿ ಕಂಡ ಅಪರಿಚಿತ, ಹೊಸ ಆಕೃತಿಯನ್ನು ನೋಡಿ ಅರೆಕ್ಷಣ ಹಿಂಜರಿದು ನಿಂತೆ. ನನ್ನ ನೋಡಿದ್ದೇ ಓಡಿಹೋಗಿ ಮರೆಯಾಯ್ತು. ನನ್ನ ಹಿಂದೆಯೇ ಮುಸುರೆ ಪಾತ್ರೆಹಿಡಿದು ಬಂದ ಅಮ್ಮ ನನ್ನ ಮುಖ ನೋಡಿ, ಏನು ನಡೆದಿದೆಯೆಂದು ಊಹಿಸಿ 'ಅದೇ ಕಣೆ ರಾಮಪ್ಪಾವ ಕರ್ಕಂಡು ಬಂದಾನೆ ದುರುಗ ಅಂತ ಹೆಸರು. ಅವರೂರ ಪಕ್ಕದಳ್ಳಿ ದೂಪ್ದಳ್ಳಿ ಹಟ್ಟಿ ಹುಡುಗ್ನಂತೆ...' ಅಂತ ಡಿಟೇಲ್ಸ್ ಹೇಳಿ 'ದುರುಗಾ...' ಅಂತ ಕರೆದ್ಲು. 'ಏನಮ್ಮೋ..' ಎಂಬ ವಿಚಿತ್ರ ಶಬ್ಧ ಮಾತ್ರ ಹೊರಬಂತು ಎಮ್ಮೆ ಮನೆಯಿಂದ 'ಇದೇನಮ್ಮ ನೀನು ಕರದ್ರೆ ಅದೇನೋ ಮ್ಯೆ ಮ್ಯೆ ಅಂತಿದೆ ಒಳಗ್ನಿಂದ...' ಎಂದೆ ನಾನು ಕೀಟಲೆ ದನಿಯಲ್ಲಿ 'ಸುಮ್ನಿರೆ ಶುರು ಮಾಡ್ಬೇಡ ನಿನ್ನ ವರಸೇನ...' ಎಂದು ಗದರಿ, ಅವನನ್ನು ಹೊರಕ್ಕೆಳೆದು ತಂದಳು ಅಮ್ಮ. ಗಳುವಿನಂತೆ ಗಳಗಳ ಅಲ್ಲಾಡುತ್ತಿದ್ದ ದುರುಗನ ಮೈಬಣ್ಣವೊ ಅಮವಾಸ್ಯೆಯ ಚಂದಿರನಂತೆ. ಆದರೆನು ಹಲ್ಲು ಬಿಟ್ಟಾಗಲೆಲ್ಲಾ ಹಾಲು ಬೆಳದಿಂಗಳು. ದನದ ಮೈಯುಜ್ಜುವ ನಾರಿನಂತೆ ಬಿಡುಸಾಗಿ, ಪೊದೆಯಂತಿದ್ದ ಮೀಸೆ ಅವನ ಮುಖಕ್ಕೊಂದು ಕಳೆ ಕೊಟ್ಟಿತ್ತು. ಒಗೆದು ಇಮ್ಮರಿಸಿದ್ದ ಬಿಳಿ ಪಂಚೆ, ಬಿಳಿ ಅಂಗಿಯಲ್ಲಿ ನೋಡಲು ಲಕ್ಷಣ ಅಂತನ್ನಿಸಿದರೂ ಜನರನ್ನು ಮಿಕಿಮಿಕಿ ನೋಡುವ ರೀತಿ, ಕಣ್ಕಣ್ಣು ಬಿಡುವ ರೀತಿ ಅವನಿಗೊಂದು ತೆರನ ಪೆದ್ದುಕಳೆ ನೀಡಿದ್ದವು. ಬೇಕಂತಲೇ ಅವನನ್ನು ಮಾತನಾಡಿಸುವ ಸಲುವಾಗಿ 'ನಿನ್ನ ಹೆಸರೇನು...?' ಎಂದು ಕೇಳಿದೆ. ಒಂದು ಕೈ ಮುಖಕ್ಕೇ ಅಡ್ಡಹಿಡಿದು, ಮುಸಿಮುಸಿ ನಗುತ್ತ, ನುಲಿಯುತ್ತ 'ದುರುಗಂತ...' ಅಂದ. ಅಬ್ಬಾ, ಗಟ್ಟಿಯಾದ ಕಂಚಿನ ಕಂಠ, 'ಈ ಗಳುವಿಗೆಂತಹ ಗಟ್ಟಿ ದನಿ' ಎಂದುಕೊಂಡೆ.



ಲಕ್ಷ್ಮಿಯ ಕೆಲಸ ಪೂರ್ತಿ ಅವನ ಪಾಲಾಯ್ತು. ಅವನೂ ಸಹ ಅದೇಗೋ ಅಮ್ಮನಿಗೆ ಹೊಂದಿಕೊಂಡು ಲಕ್ಷ್ಮಿಯನ್ನು ಅಪ್ಪ, ಅಮ್ಮನಿಗಿಂತಲೂ ಚೆನ್ನಾಗಿ ಜೋಪಾನ ಮಾಡುಹತ್ತಿದ. ಅಮ್ಮ ಅವನಿಗೆ ದಿನವೂ ಸ್ನಾನ ಮಾಡುವುದನ್ನೂ, ಶೌಚಕ್ಕೆ ಹೋಗಿ ಬಂದೊಡನೆ ಕೈ ಸೋಪಚ್ಚಿ ತಿಕ್ಕಿ ತಿಕ್ಕಿ ತೊಳೆಯುವುದು, ದಿನವೂ ಹಲ್ಲುಜ್ಜುವುದು, ಪ್ರತಿಯೊಂದು ಅವನ ಬೆನ್ನತ್ತಿ ಹೇಳಿಕೊಟ್ಟಳು. ಇಷ್ಟಾದರೂ ಅವನಿಗೆ ಪ್ರವೇಶ ಮನೆಯ ಹಾಲ್‌ವರೆಗೆ ಮಾತ್ರ. ಮೊದಮೊದಲು ಅವನೂ ಕಳ್ಳಾಟ ಮಾಡಿದನಾದರೂ ಅಮ್ಮನ ಕೈಯಿಂದ ತಪ್ಪಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಇರುವ ಹಾಗಿದ್ದರೆ ಹೀಗಿರಬೇಕು ಎಂದು ಮುಲಾಜಿಲ್ಲದೆ ಹೇಳಿದಾಗ ಅವ ಬಗ್ಗಿದ. ಏನು ಹೇಳಿದರೂ ವಿಷಯ ಆ ತಲೆಯೊಳಕ್ಕೆ ಸುಲಭವಾಗಿ ಹೋಗುತ್ತಿರಲಿಲ್ಲ. ಹೀಗಾಗಿ ಅಮ್ಮನಿಂದ, ಸಣ್ಣಜ್ಜಿಯಿಂದ ಸದಾ ಬೈಸಿಕೊಳ್ಳುತ್ತಿದ್ದನವ. ಆದರೂ ನಗುತ್ತಲೇ ಇರುತ್ತಿದ್ದ. ಮಾತುಮಾತಿಗೂ ನಗು. ಅಮ್ಮ ಕೆಲವೊಮ್ಮೆ ಆ ನಗುವನ್ನು ಸಖತ್ ಎಂಜಾಯ್ ಮಾಡಿದರೆ, ಕೆಲವೊಮ್ಮೆ ಕಿರಿಕಿರಿಯಿಂದ ಸಿಟ್ಟಿಗೆದ್ದು ಕೂಗಾಡಿಬಿಡುತ್ತಿದ್ದಳು. ಅದು ಹೀಗಾಗುತ್ತಿತ್ತು. ಮುಂಬಾಗಿಲ ಬಳಿ ಹೊಸ್ತಿಲಿಗೆ ಹಾಕಲು ತಟ್ಟು ತಾರೋ ಎಂದು ಹೇಳಿದರೆ ಅವ ಸೀದಾ ತಟ್ಟೆಹಿಡಿದು ಬಂದು ಕೂತುಬಿಟ್ಟಾಗ. ಇನ್ನೊಮ್ಮೆ ಅಪ್ಪನ ಸ್ನೇಹಿತರ ಹೊಸದಾಗಿ ಮದುವೆಯಾದ ಮಗ, ಸೊಸೆಯನ್ನು ನಮ್ಮನೆಗೆ ಊಟಕ್ಕೆ ಕರೆದಿದ್ದರು. ಊಟವೆಲ್ಲ ಆದಮೇಲೆ ಅದೇನು

ರೂಢಿಯೋ ಆ ಹುಡುಗಿ ಬಾಯಲ್ಲಿ ಹಾಕಿಕೊಳ್ಳಲು ಎಲಕ್ಕಿ ಕೇಳಿದಳು. ಒಳಗೋ ಡಬ್ಬಿಯಲ್ಲಿ ಖಾಲಿ. ಸರಿ ಇವನ ಕೈಲಿ ದುಡ್ಡು ಕೊಟ್ಟು 'ನೋಡು ಬೇಗ್ಬಾ, ಆ ಹುಡ್ಗಿಗೆ ತಿನ್ನಕ್ಕೆ ಏಲಕ್ಕಿ ಬೇಕಂತೆ ಒಂತೂಲ-ತಗಂಡ್ಬಾ...' ಅಂತೇಳಿದಳು ಅಮ್ಮ. 'ಹೂ...' ಎಂದು ದುಡ್ಡು ಇಸಿದುಕೊಂಡವ ಸುಮ್ಮನೆ ತಲೆ ಕೆರೆಯುತ್ತ ಒಳಕ್ಕೆ ಹೊರಕ್ಕೆ ಓಡಾಡಿದ. ಆ ಹುಡುಗಿಯೊಡನೆ ಮಾತನಾಡುತ್ತ ಕೂತಿದ್ದ ನಾನು ಅವನನ್ನು ಗಮನಿಸಿ 'ಏಯ್ ಬಾರೋ ಇಲ್ಲಿ ಹೋಗ್ಲಿಲ್ವೇನೋ...?' ಎಂದು ಕೇಳಿದ್ದಕ್ಕೆ 'ಅಲ್ಲಮ್ಮೆ ಅದೆಲ್ಲಿ ಸಿಕ್ತೈತಿ...? ಅದ್ನೆಂಗೆ ತರಾದೂ...?' ತಲೆ ಕೆರೆಯುತ್ತ ಕೇಳಿದಾಗ ಅಲ್ಲೆ ಕೂತಿದ್ದ ಅಮ್ಮ ತಾಳ್ಮೆಗೆಟ್ಟು 'ಏನನ್ನಲ್ಲೇ...' ಎಂದು ಹಲ್ಲು ಕಡಿಯುತ್ತ, 'ಅದೇ ಕಣಮ್ಮೆ ಈಯಮ್ಮನಿಗೆ ತಿನ್ನಕೆ ಹ್ಯಲು ಅಕ್ಕಿ...' ಎಂದುಬಿಟ್ಟ, ಸ್ಸರಿ ಅದುವರೆಗೂ ತಿಂದಿದೆಲ್ಲಾ ಅಲ್ಲೇ ಕಕ್ಕಿಕೊಂಡ ಆ ಹುಡುಗಿ, ಮತ್ತೆ ಏಲಕ್ಕಿ ತರಿಸು ಹೊತ್ತಿಗೆ ಏನೂ ತಿನ್ನುವ ಸ್ಥಿತಿಯಲ್ಲಿರಲಿಲ್ಲ. ಅಂದು ಅವನನ್ನು ಹೊಡೆಯುವುದೊಂದು ಬಾಕಿ. ಅಮ್ಮ ಸಿಟ್ಟಿಗೆದ್ದು ಸಿಕ್ಕಾಪಟ್ಟೆ ಬೈದಾಡಿದರೂ ಅವ ಮುಸಿಮುಸಿ ನಗುತ್ತಿದ್ದ. ಆ ದಿನ ಮಾತ್ರ ಅವನ ಆ ನಗು ಅಮ್ಮನಿಗೆ ಹುಚ್ಚಿಡಿಸದಿದ್ದುದೇ ಆಶ್ಚರ್ಯ. ಇಂತಹ ಅನರ್ಥಗಳು ಆಗಾಗ ಸಂಭವಿಸುತ್ತಲೇ ಇರುತ್ತಿದ್ದವು... ಇವ ನಗುತ್ತಲೇ ಇರುತ್ತಿದ್ದ...

ಸಾಮಾನ್ಯವಾಗಿ ರಾತ್ರಿ ಊಟ ಮಾಡುತ್ತ ಎಲ್ಲರೂ ಟಿ.ವಿ.ಯ ಮುಂದೆ ಕೂರುತ್ತಿದ್ದೆವು. ಆದರೆ ಇವನು ಬಂದ ಮೇಲೆ ಟಿ.ವಿ.ಗಿಂತ ಇವನನ್ನು ನೋಡುವುದೇ ಹೆಚ್ಚಾಗಿತ್ತು. ಟಿವಿಯಲ್ಲಿ ಯಾರಾದರೂ ಅತ್ತರೇ ತಾನೂ ಅವರೊಡನೆ ಅಳುತ್ತಿದ್ದ. ಪ್ರಣಯದ ದೃಶ್ಯಯಗಳು ಬಂದರಂತೂ 'ಯಮ್ಮೇ... ನಾ ವಲ್ನೇಯವ್ವ... ನಾ ವಲ್ನೇ... ಎನ್ನುತ್ತ ಮುಖ ಮುಚ್ಚಿಕೊಂಡು ಹೊರಗೋಡುತ್ತಿದ್ದ. ಸಂವಾದ, ಚರ್ಚೆಗಳಿದ್ದಾಗ ಏನೋ ಎಲ್ಲಾ ಅರ್ಥ ಆದವನಂತೆ ಗಂಭೀರವಾಗಿ ನಿಂತು ಕೇಳಿಸಿಕೊಳ್ಳುತ್ತ, ಏನೋ ಗಹನವಾಗಿ ವಿಚಾರ ಮಾಡುವವನಂತೆ ಕಣ್ಣು ಕಿರಿದುಗೊಳಿಸಿ, ಮೂತಿ ಉದ್ದ ಮಾಡಿ ಮುಂದಕ್ಕೆ ಚಾಚಿ, ಒಂದು ಕೈ ಸೊಂಟದ ಮೇಲಿಟ್ಟು ನಿಲ್ಲುತ್ತಿದ್ದ ಅವನ ಭಂಗಿ ಎಲ್ಲವೂ ನಮಗೆ ಮನೋರಂಜನೆ ನೀಡುತ್ತಿದ್ದವು. ಟಿ.ವಿಯಲ್ಲಿ ಬರುವ ಪ್ರತಿ ವಿಷಯದಲ್ಲೂ ವಿಪರೀತ ಕುತೂಹಲ; ಎಲ್ಲವನ್ನೂ ತಿಳಿದುಕೊಳ್ಳುವ ಕೆಟ್ಟ ಕಾತರ. ಒಮ್ಮೆ ಯಾವುದೋ ಸಿನಿಮಾದಲ್ಲಿ ಯಾರೋ ಸತ್ತರೆಂದು ಗೋಳಾಡುತ್ತ 'ಪಾಪ, ಆಟ್ಸ್ನೊಯ್ಸು ಯಂಗೆ ತೀರ್ಕೆಂಡ್ನಲ್ಲಮ್ಮೆ...? ಏನಮ್ಮೆ ಅವ್ನಿಗೇನರ ಬ್ಯಾಂಡೀಜಾಗಿತ್ತೇನಮ್ಮೆ...?' ಎಂದು ಕೇಳಿದ. ನಾನು ಹಣೆ ಚಚ್ಚಿಕೊಳ್ಳುತ್ತ 'ಅದೇನಲೇ ಬ್ಯಾಂಡೀಜೂ...?' ಎಂದು ಕೇಳಿದರೆ ಅದುವರೆಗೂ ಅಳುತ್ತಿದ್ದವ ಜೋರಾಗಿ ನಗತೊಡಗಿದ. ಬ್ಯಾಂಡೀಜಂದ್ರೆ ಗೊತ್ತಿಲೇನಮ್ಮೆ...? ನಮ್ಮೂರ್ ಡಾಟ್ರು ಯೇಳಿದ್ರು, ಅದೊಂದ್ ದೊಡ್ಡ ರೋಗಂತೆ. ಮತ್ತೆ... ನಮ್ಮ ಸಣ್ಣಪ್ಪನ್ಮಗ ಇಂಗೆಯಾ ವೋದ್ವರ್ಸ ಬ್ಯಾಂಡೀಜಾಗಿ ತೀರ್ಕೆಂಡ. ಅಲ್ಲಮ್ಮೆ, ಪಾಡಗೇ ಇದ್ದ. ಒಮ್ಮೆ। ಮೈಯಲ್ಲ ಅರುಸ್ನ... ಕಣ್ಣೆಲ್ಲ ಅರುಸ್ನ... ಕ್ವನೀಗೆ ತಿರುವ್ಕೆಂಡು, ತಿರುವ್ಕೆಂಡು ತೀರ್ಕೆಂಡೇಬಿಟ್ನಮ್ಮೆ...' ದುರುಗ ಮತ್ತೆ ಅಳತೊಡಗಿದ. ಅವ 'ಅರುಸ್ನ' ಅಂದಾಕ್ಷಣ ನಂಗೆ ಫ್ಲಾಷ್ ಆಗಿದ್ದು ಅವರೂರ ಡಾಟ್ರು ಹೇಳಿದ ದೊಡ್ಡ ರೋಗ ಬ್ಯಾಂಡೀಜಲ್ಲ ಜಾಂಡೀಸ್ ಅಂತ. ಅವ ಅಳೂತ್ತಿದ್ದು ನೋಡಿ ಕಷ್ಟಪಟ್ಟು ನಗು ನುಂಗಿದೆ. 'ಹೋಗ್ಲಿ ಬಿಡೊ...' ಎಂದರೂ ಕೇಳಲಿಲ್ಲ ಅವ. 'ಅಯ್ಯೋ ಈಗಿನ್ಕಾಲದಾಗೆ ಮಿಟ್ಗಿದ್ರೆ ಮಿಸ್ಗಿದ್ರೆ ಸಾಯ್ತರ್ಕಣಮ್ಮೆ ಮನುಸ್ರು... ಬ್ಯಾಂಡೀಜಂಗಿರ್ಲಿ ನಮ್ಮಟ್ಟಿ ಮಲ್ಲಪ್ಪಣ್ಣನೇಣ್ತಿ ರತುನ ಸಾವ್ಕಾರ್ರು ಮನೆಯರ್ಕೂಡೆ ಹಾಲಿಂಡಸ್ಟೂರು ಮಾಡಿ ತೀರ್ಕೆಂಡ್‌ವೋದ್ಲು...' ನಾನವನನ್ನ ಅರ್ಥಕ್ಕೆ ತಡೆದು 'ಏನಂದೆ..." ಏನ್ಮಾಡಿದ್ಲು ಅಂದೆ...?' ಎಂದು ಒತ್ತಿಒತ್ತಿ ಕೇಳಿದೆ. 'ಅದೇ ಕಣಮ್ಮೆ ಹಾಲಿಂಡಸ್ಟೂರು ಮಾಡಿ, ದೆವ್ವ ಮೆಟ್ಕೆಂಡು ಮುರ್ಕಂಡದೇ ವೋತು ಆಕಿನ...' ಅಂದ, 'ಅಯ್ಯೋ ಮಾರಾಯ ಅದೇನ್ ಹಾಲಿಂಡಸ್ಟೂರು? ಅದೇನ್ ಮುರ್ಕಂತು..? ನನಗಂತು ಏನೇನು ತಿಳೀವಲ್ದು...' ಎಂದು 'ನೋಡೂ, ಬೇರೆ ಪುರಾಣ ಎಲ್ಲ ನಿಲ್ಸಿ ಮೊದ್ಲು ಹಾಲಿಂಡಸ್ಟೂರು ಅಂದ್ರೇನು ಹೇಳು...' ಅಂದೆ. ಅವ ನನ್ನ ಮೇಲಿಂದ ಕೆಳಗೆ ನೋಡತೊಡಗಿದ. ನನ್ನ ಮಹಾ ಪೆದ್ದಳೆಂದು ಭಾವಿಸಿದನೋ ಅಥ್ವ ಅವನಿಗೇನು ಹೇಳಬೇಕೆಂದು ತೋಚಲಿಲ್ಲವೊ ಕಣ್ಣಕಣ್ಣು ಬಿಡತೊಡಗಿದಾಗ 'ಅಲ್ವೊ ದುರುಗ, ಹಾಲಿಂಡಸ್ಟೂರು ಅಂದ್ರ ಏನು...? ಅಲ್ಲ ಕಣೋ ಹಾಲ್ನ ಸ್ಟೋರ್ ಮಾಡೋದಾ..? ಇಲ್ಲ ಹಾಲಿಗೆ ಸಂಬಂಧಪಟ್ಟ ಏನಾದ್ರು ಪದಾರ್ಥನ...? ಅಥ್ವಾ ಹಾಲಿನಿಂದ ಮಾಡೋ ತಿನಿಸಾ...? ಅಂದ್ರೆ ಪಾಯಸ, ಹುಗ್ಗಿ...?' ನನ್ನ ಮಾತು ಕೇಳಿದ್ದೆ ಅವ ಹೊಟ್ಟೆಯಿಡಿದು ಉರುಳಾಡಿ ನಗತೊಡಗಿದ. ನಾನೊಂದು ಕ್ಷಣ ಪೆಚ್ಚಾದೆ. ಇವ ನನ್ನ ಲೇವಡಿ ಮಾಡಿ ನಗುವವನಲ್ಲ ಎಂದು ಕೋಪವೂ ಬಂದು 'ನಗಬೇಡ...' ಅಂತ ಗದರಿದೆ. ಅವ ಎದ್ದು ಕುಳಿತು ನಗುತ್ತಲೇ ಹೇಳಿದ 'ಅಲ್ಲಮ್ಮೆ ಹಾಲಿಂಡಸ್ಟೂರಂದ್ರೆ ಉಗ್ಗಿ ಅಂತೀಯಲ್ಲ? ಅಂಗಂದ್ರೆ.. ನಮ್ ದೇಸನ ಆ ಮೂಲಿಂದ ಈ ಮೂಲಿತಂಕ ಬಿಡಂದಗೆ ಎಲ್ಲಾ ನೋಡ್ಕೆಂಡ್ಬರಾದೂ...' ಅಂದ. 'ನಮ್ ದೇಸಾ...?' ನಾನು ಯೋಚಿಸತೊಡಗಿದೆ. 'ನಮ್ ದೇಸ... ಹಾಲಿಂಡಸ್ಟೂರು, ಹಾಲಿಂಡಸ್ಟೂರು... ನಮ್ ದೇಸ, ಅಂದ್ರೆ ಇಂಡಿಯಾ... ಯೆಸ್ ಇಂಡಿಯಾನ ಆ ಮೂಲೆಯಿಂದ ಈ ಮೂಲೆತನ್ಕ ಅಂದ್ರೆ ಟೂರ್ ಮಾಡಿರ್ಬಹುದೇ...? ಅಂದ್ರ ಇಂಡಿಯಾ... ಓಹ್!' ನಾನೀಗ ಬಿದ್ದುಬಿದ್ದು ನಗತೊಡಗಿದೆ. ಆಲ್ ಇಂಡಿಯಾ ಟೂರ್ ಅವನ ಬಾಯಲ್ಲಿ ಹಾಲಿಂಡಸ್ಟೂರಾಗಿತ್ತು. ನಕ್ಕು, ನಕ್ಕು ಸಾಕಾಗಿ ಆಮೇಲೆ ಕೇಳಿದೆ 'ಅಲ್ವೊ, ಸ್ಸರಿಯಪ್ಪ ಹಾಲಿಂಡಸ್ಟೂರಿಗೂ, ದೆವ್ವಕ್ಕೂ ಏನೋ ಸಂಬಂಧ...?' 'ಅಯ್ಯ, ಅದೊಂದೊಡ್ಕತೆ ಕಣಮ್ಮೆ.' ಎಂದು ಹೇಳತೊಡಗಿದ. ನಾನು ಮತ್ತೆ ನಗಲು ರೆಡಿಯಾಗಿ ಕೂತೆ. 'ನಮ್ಮೂರ್ನ ಸಾವ್ಕಾರ್ಮನೈರೆಲ್ಲ ಸೇರ್ಕೆಂಡು ಹಾಲಿಂಡಸ್ಟೂರು ಮಾಡಕೊಂಟ್ರೇನಮ್ಮೆ. ಅಲ್ಲೋದ್ಬಳ್ಕೆ ಎನನ ಕೆಲ್ಸ ಪಲ್ಸಕ್ಕೆ ಬತ್ತಳಂತ ನಮ್ ಮಲ್ಲಪ್ಪಣ್ಣೇಣ್ತಿ ರತುನನ್ನು ಜತಿಗೆ ಕರ್ಕಂಡ್ರು, ಆಕೆ ಅಲ್ಲೇ ಅವರ್ಮನೈಗೆ ಕೆಲ್ಸಕಿದ್ಲು. ಪಾಪ ಕಣಮ್ಮೆ ಎಂಟ್ತಿಗ್ಳು ಕೂಸಿತ್ತು. ಆಕಿ ವೋಗಂಗೇ ಇರ್ಲಿಲ್ಲ. ಗಂಡುನ ಮನಿಗ ಕರಸ್ಕಂಡ್ರು, ಒಂದೈನೂರ ಕೊಟ್ಟು ಬೆಳಗ್ಯ, ಸಂಜೀಗೆ ಮಗೀಗೆ ವಯ್ಯಾಲು ತಂದಾಕು ಅಂದ್ರು ರತುನನ್ನು ಕರ್ಕಂಡದೇ ವೋದ್ರು, ಕೂಸ್ನ ಬಿಡಲಾರ್ದ ಬಿಟ್ಟೋದ್ಲು. ತಿರ್ಗಿ ಬಂದ್ಯಾಕೆ ನೋಡ್ತೀವಿ... ಮೈಯ್ಯಾಗೆ ಕುಸುವೇ ಇಲ್ದಂಗೆ, ಜರ ಸುಟ್ಗಂಡೂ ಸೋತು ಸುಣ್ಣಾಗಿದ್ದು ಕಣಮ್ಮೆ... ಎಟೊತ್ತಂದ್ರೆ ಆಟೊತ್ನಾಗೆದ್ದು ಜೋರಾಗಿ ಅರುಸ್ಸಳು.. ಬಿಡ್ರೊ ನನ್ಬಿಡ್ರಪ್ಪ ನಿಮ್ ದಮ್ಮಯ್ಯ ನಿಮ್ಕಾಲಿಗ್ಬಿಳ್ತಿ, ಬಿಡ್ರೋ... ಅಂತ ಅಂಸ್ಸುಳಂಗೆಯಾ...' 'ಡಾಕ್ಟರಿಗೆ ತೋರ್ಸದಲ್ವೇನೂ...' ಆಕಳಿಸುತ್ತ ಕೇಳ್ದೆ ನಾನು ಕಣ್ಣೆಳೆಯುತ್ತಿದ್ವು, 'ಅಯ್ಯೊ ಸಿವ್ನೆ ಎಲ್ಲಾರುಂಟೇನಮ್ಮೆ? ಅಲ್ಲಿ ವೋದ್ಕಡ್ಗೆ ಎಲ್ಲಂದ್ರಲ್ಲಿ, ಎಟೊತ್ನೆಗಂದ್ರೆ ಆಟೊತ್ನಾಗಿ ಸುತ್ಬಿಟ್ಟಾರೆ. ಮೊದ್ಲೆ ಬಾಣ್ತಿ, ಹಸಿ ಮೈಯಿ ಕೇಳ್ತಿಯೇನಮ್ಮೆ ಒಳ್ಳೆ ಗನವಾದ ದೆವ್ವ ಮೆಟ್ಕಂಡ್ಬಿಟ್ಟಿತ್ತು. ಒಂದ್ತಿಂಗ್ಳು ಗಂಟ ಅಂಗೆ ಅರುಸ್ತಿದ್ಲಾ...? ಅಮ್ಯಾಕೆ ತಿರುಸ್ಕೆಳಾಕತ್ತಿದ್ಲು. ಏನ್ತಿಂದ್ರೂ ತಿರುಸ್ಕೆಳಾದೆ... ಏನ್ಕುಡುದ್ರೂ ತಿರುಸ್ಕೆಳಾದೆಯಾ... ಕ್ವೊನಿಗೇ ಯಾತ್ರುದ್ದು ವಾಸ್ನೇನೂ ಆಗ್ಬರ್ದಂಗಾತೂ...' ಇದುವರೆಗು ಅವ ಹೇಳದ್ದನ್ನೆಲ್ಲ ಹಗುರವಾಗಿ ತಗೋಂಡು ನಗುತ್ತಿದ್ದ ನಾನು ಒಮ್ಮೆಗೆ ಗಂಭೀರಳಾಗಿ 'ಅಲ್ವೊ ಸಾವ್ಕಾರ್ರೂ...' ನಾನು ಕೇಳಿದ ಕುತೂಹಲದಿಂದ. 'ಬಂದ್ರಮ್ಮೆ ರತುನ ತಿರುಸ್ಕಂತಳೆ ಅಂತ ಗೊತ್ತಾಗಿ ತಕ್ಸಣುಕ್ಕೆ ಬಂದ್ರು, ನಿಂತ ನಿಲುವಿನ್ಯಾಗೆ ರತುನನ್ನ ಗಾಡಿಮ್ಯಾಕೆ ಆಕ್ಕೆಂಡು ತಗಂಡೋದ್ರು ಮಲ್ಲಪ್ಪ ಸಾವ್ಕಾರ್ರು ಮನಿತಾವ್ಕೇ. ಅಲ್ಲ್ಯಾರೋ ಪಂಡಿತ್ರು ಬಂದಿದ್ರಂತೆ. ಏನೇನ್ ಬಡುದಾಡಿದ್ರು ಉಹೂಂ ರತುನ ವುಳಿಲಿಲ್ಲ. ಕ್ವನಿಗೆ ಮೈಯಲ್ಲ ನೀಲ್ಯಾಗಿ, ಬಾಯ್ತುಂಬ ನೊರೆ ಕಕ್ಕಿ ಅಲ್ಲೇ ಸಾವ್ಕಾರ್ಮನಿತಾವೆ ಸತ್ತೋದ್ಲು. ದಿವುಸುಕ್ಕೆ, ಮಣ್ಣಿಗೆ ಪಾಪ ಎಲ್ಲಾ ಖರ್ಚು ಸಾವ್ಕಾರ್ರೆ, ಕೊಟ್ರು ಕಣಮ್ಮೆ. ರತುನ ಸತ್ತು ಒಂದ್ವಾರ್ಕೆ ಕೂಸು ಹಾಲಿಲ್ದಂಗೆ, ನೋಡಾರಿಲ್ದಂಗೆ ವಯ್ಕೆಂಡು, ವಯ್ಕೆಂಡು ಅದೂ ತೀರ್ಕೆಂತು...' ದುರುಗ ಅಳುತ್ತಿದ್ದ. ನನ್ನ ಹೊಟ್ಟೆಯಲ್ಲೂ ವಿಚಿತ್ರ ಸಂಕಟ, ತಳಮಳ ಆಗುತ್ತಿತ್ತು ದುರುಗನಿಗೆ ನಿಜಸ್ಥಿತಿ ಏನೆಂದೇ ತಿಳಿದಿರಲಿಲ್ಲ. ರತುನಳನ್ನು ಮೆಟ್ಟಿದ್ದು ದೆವ್ವಕ್ಕಿಂತಲೂ ಭಯಂಕರವಾದ, ಮೃಗಕ್ಕಿಂತಲೂ ಕಡೆಯಾದ ನೀಚ ಮನುಷ್ಯರ ವಿಕೃತ ಕಾಮುಕತೆ ಎಂಬ ಸತ್ಯ ತಿಳಿದರೆ ಇವ ಏನಾದಾನು...? ಯೋಚಿಸಿ ನಿಟ್ಟುಸಿರಿಟ್ಟೆ, ನನ್ನ ನಿದ್ದೆ ಹಾರಿಹೋಗಿತ್ತು. ದುರುಗ ಮತ್ತೆ ಹೇಳತೊಡಗಿದ 'ಅದಾಗಿ ಸ್ಸರ್ಯಾಗಿ ಒಂದ್ತಿಂಗ್ಳಿಗೆ, ಆಮಾಸೆ ದಿನ ಸಾವ್ಕಾರ್ನೇಣ್ತಿನೂ ದೆವ್ವ ಮೆಟ್ಕಂಡು ಸತ್ತೇವೋದ್ಲು. ರತುನ ನಾನ್ ತೈಪ್ಮಾಡ್ದೆ. ನಾವೆಲ್ಲ ತ್ಯಪ್ಮಾಡಿದ್ವಿ ನಮ್ಮುನ್ನ ಬಿಟ್ಬಿಡವ್ವ.. ಅಂತ ಅರುಸ್ಸಿ, ಅರುಸ್ಸಿ ಅವ್ಳೂ ಸತ್ಲಂತೆ. ರತುನ ಆಕೀನೂ ಮೆಟ್ಗೆಂಡು, ಮುರ್ಕಂಡದೇ ವೋದ್ಲಮ್ಮೆ. ಆಮ್ಯಾಕೆ ಇಡೀ ಹಟ್ಟಿಗೇ ಮಂತ್ರುವಾದಿನ್ ಕರ್ಸಿ ಕಟ್ಟು ಮಾಡ್ಸಿದ್ವಮ್ಮೆ...'

ಸಂವಾದ, ಚರ್ಚೆಗಳಿದ್ದಾಗ ಏನೋ ಎಲ್ಲಾ ಅರ್ಥ ಆದವನಂತೆ ಗಂಭೀರವಾಗಿ ನಿಂತು ಕೇಳಿಸಿಕೊಳ್ಳುತ್ತ, ಏನೋ ಗಹನವಾಗಿ ವಿಚಾರ ಮಾಡುವವನಂತೆ ಕಣ್ಣು ಕಿರಿದುಗೊಳಿಸಿ, ಮೂತಿ ಉದ್ದ ಮಾಡಿ ಮುಂದಕ್ಕೆ ಚಾಚಿ, ಒಂದು ಕೈ ಸೊಂಟದ ಮೇಲಿಟ್ಟು ನಿಲ್ಲುತ್ತಿದ್ದ ಅವನ ಭಂಗಿ ಎಲ್ಲವೂ ನಮಗೆ ಮನೋರಂಜನೆ ನೀಡುತ್ತಿದ್ದವು. ಟಿ.ವಿಯಲ್ಲಿ ಬರುವ ಪ್ರತಿ ವಿಷಯದಲ್ಲೂ ವಿಪರೀತ ಕುತೂಹಲ; ಎಲ್ಲವನ್ನೂ ತಿಳಿದುಕೊಳ್ಳುವ ಕೆಟ್ಟ ಕಾತರ. ಒಮ್ಮೆ ಯಾವುದೋ ಸಿನಿಮಾದಲ್ಲಿ ಯಾರೋ ಸತ್ತರೆಂದು ಗೋಳಾಡುತ್ತ 'ಪಾಪ, ಆಟ್ಸ್ನೊಯ್ಸು ಯಂಗೆ ತೀರ್ಕೆಂಡ್ನಲ್ಲಮ್ಮೆ...? ಏನಮ್ಮೆ ಅವ್ನಿಗೇನರ ಬ್ಯಾಂಡೀಜಾಗಿತ್ತೇನಮ್ಮೆ...?'

[illegible] ಯಕತೆ...! ಒಂದು ವೇಳೆ ನಿಜಸ್ಥಿತಿ [illegible] ಯಾರಾದರೂ ಮಾಡಲು ಸಾಧ್ಯವಿತ್ತೆ? ಇವರಿಗೆ ನ್ಯಾಯ ಸಿಗುತ್ತಿತ್ತೆ...? ರತುನಳ ಸಾವು, ಅವಳ ಕೂಸಿನನ ಸಾವು ಕೇವಲ ಸಾವೆ? ಇಲ್ಲ ಕೊಲೆಯ...? ಇದೇ ಮುಂತಾದ ವಿಚಾರಗಳು ಕಣ್ಣವೆಯಲ್ಲಿ ನುಸುಳಿ, ನುಸುಳಿ ಮತ್ತೆ, ಮತ್ತೆ ಕಾಡುವ ನೊರಜಗಳಂತ ಇಡೀ ರಾತ್ರಿ ಕಾಡಿದವು.

ಇನ್ನೆರಡು ತಿಂಗಳಲ್ಲಿ ಫೈನಲ್ ಇಯರ್ ಪರೀಕ್ಷೆಗಳು ಶುರವಾಗುವುದರಲ್ಲಿದ್ದವು. ಪಾರು, ಗೌರಿಯ ಜತೆಯ್ಲಲಿ ರೇಖಳೂ ಉಳಿದ ಸಬ್ಜೆಕ್ಟ್ ಕ್ಲಿಯರ್ ಮಾಡಿಕೊಳ್ಳಲು ಊರಿಂದ ಬಂದಿದ್ದಳು. ನಾವು ನಾಲ್ವರು ಒಟ್ಟಿಗೆ ಸೇರಿದೆವಂದರೆ ಮುಗೀತೆ ನಾವು ಮಾತನಾಡದ ವಿಷಯಗಳಿಲ್ಲ. ರಾಜಕೀಯ, ಭ್ರಷ್ಟಾಚಾರ, ಶೋಷಣೆ, ಕಲೆ, ಸಾಹಿತ್ಯ, ಅತ್ಯಾಚಾರ, ವ್ಯಭಿಚಾರ, ಸೆಕ್ಸು ಈ ಎಲ್ಲವೂ ನಮ್ಮ ಚರ್ಚೆಗೆ ಒದಗುತ್ತಿದ್ದ ವಿಷಯಗಳು. ಅದರಲ್ಲೂ ರೇಖಳಿಗೆ ಸೆಕ್ಸ್ ತುಂಬಾ ಆಕರ್ಷಕವಾದ ಮತ್ತು ಆಸಕ್ತಿಯುಳ್ಳ ವಿಷಯ. ಒಬ್ಬಳೇ ಮಗಳೆಂಬ ಅತಿಮುದ್ದಿನ ಫಲವಾಗಿ ತೀರ ಚೆಲ್ಲುಚೆಲ್ಲಾದ, ಎಗ್ಗುಸಿಗ್ಗಿಲ್ಲದ ಸ್ವಲ್ಪವೂ ಸೀರಿಯಸ್‌ನೆಸ್ ಇಲ್ಲದ ಖ್ಯಾತನಾಮಳು. ಆಕೆಯ ಸಿನಿಮಾದ ಹೀರೋಗಳಿರಲಿ, ಸ್ವಲ್ಪ ಸ್ಮಾರ್ಟಾದ ಬೀದಿ ಕಾಮಣ್ಣಗಳಿರಲಿ, ಕಸಗುಡಿಸುವವ ಆಗಲಿ, ತಿಪ್ಪೆ ಎತ್ತುವವನಾಗಲಿ ಎಲ್ಲರೂ ಆಕೆಗೆ ಸೆಕ್ಸಿಯೆ. ಅಷ್ಟೆ ಏಕೆ ಬೆಳಗ್ಗಿನ ಜಾಗಿಂಗ್ ಸಮಯದಲ್ಲಿ ಎದುರಿಗೆ ಸ್ವಲ್ಪ ಫಿಟ್ಟಾದ ಅಜ್ಜ ಬಂದರೂ ತೀರಿತು 'ಲುಕ್ ಯಾರ್... ವ್ಹಾಟ್ ಎ ಸೆಕ್ಸೀ ಗ್ರಾಂಡ್ ಪಾ...!' ಎಂದವರ ಹಿಂದೆಯೇ ಓಡಲು ತೊಡಗುತ್ತಿದ್ದಳು. ನಾವು ಆಕೇನ ಹಿಡಿದು ಮುಂದಕ್ಕೆ ಎಳೆದೊಯ್ಯುತ್ತಿದ್ದೆವು. ಮಾತು ಮಾತಿಗೂ ಸೆಕ್ಸೀ ಎನ್ನುವುದು ಆಕೆಗೆ ರೂಢಿಯಾಗಿ ಹೋಗಿತ್ತು. ಇಂತವಳ ಕೈಯಲ್ಲಿ ಸಿಕ್ಕಿಬಿದ್ದ ದುರುಗ. ನಾಲ್ವರು ಕಂಬೈನ್ಡ್‌ಸ್ಟಡಿ ಮಾಡಲು ನಮ್ಮನೆಯಲ್ಲೇ ಸೇರುತ್ತಿದ್ದೆವು.

ದುರುಗನನ್ನು ನೋಡಿದ ಘಳಿಗೆಯಿಂದಲೇ 'ಟೈಂಪಾಸ್ ಮಾಡಲು ಇದಕ್ಕಿಂತಲೂ ಒಳ್ಳೆಯ ಸಾಧನ ಇನ್ನೇನು ಬೇಕು...' ಎನ್ನುತ್ತ ಅವನ ಎದುರು ಬಂದಾಗಲೆಲ್ಲ ಸಿಳ್ಳೆ ಹೊಡೆದು, ಕಣ್ಣೊಡೆದು, ಯೂ ಆರ್ ರಿಯಲೀ ಸೆಕ್ಸಿ ಕಣೋ ದುರುಗ...' ಎಂದೋ; 'ನಿನ್ನ ಮೀಸೆ ಸೆಕ್ಸಿ...' ಎಂದು ಅವನ ಮೀಸೆಯಿಡಿದು ಜಗ್ಗುವುದು, 'ನಿನ್ನಂಗಿ ಸೆಕ್ಸಿ...' ಎಂದು ಅವನ ಅಂಗಿ ಎಳೆಯುವುದು, 'ನೀ ನಕ್ಕರೆ ಸೆಕ್ಸಿ...' ಎಂದು ಕೆನ್ನೆ ಹಿಂಡುವುದು ಇವೇ ಮುಂತಾದ ಚೇಷ್ಟೆಗಳಿಂದ ಅವನನ್ನು ಬಫೂನ್ ಮಾಡಿ, ತಾನು ಮಜ ತೆಗೆದುಕೊಳ್ಳುತ್ತಿದ್ದಳು. ಆಕೆಯೊಡನೆ ನಾವು ಸೇರಿ ನಗುತ್ತಿದೆವು. ಅವಳ ಚೇಷ್ಟೆ ಜಾಸ್ತಿಯಾದ ಹಾಗೆ ಒಂದು ದಿನ ದುರುಗ ಬಂದವನೆ 'ಅಲ್ಲಮ್ಮೆ ನಮ್ಮೂರ್ನಗೆ ವೊಲ್ಸು ತುಳುದ್ರೆ, ಯೇಸ್ಗೆ ಮಾಡಿದ್ರೆ ಇಸ್ಸಿ ಇಸ್ಸಿ ಅಂತಾರೆ. ಈಯಮ್ಮ ದಿನಾಲು ನನ್ ಮೈಯಲ್ಲ ಮುಟ್ಮುಟ್ಟಿ ಇಸ್ಸಿ ಇಸ್ಸಿ ಅಂತಾಳಲ್ಲ... ಏನಮ್ಮೆ ನನ್ ಮೈಯಿ ಆಟೊಂದು ವೊಲ್ಸಾಗೈತ್ಲೆ...?' ಎಂದು ಕೇಳಿದಾಗ ಒಂದು ಕ್ಷಣ ಎಲ್ಲರೂ ಪೆಚ್ಚಾದೆವು. ರೇಖಳಿಗೆ ಅವನ ಮೈಕೈ ಮುಟ್ಟಬೇಡ, ಅತಿ ಮಾಡಬೇಡ...' ಎಂದು ನಾನು ಆಗಾಗ ಹೇಳುತ್ತಿದ್ದೆ. ಆದರವಳು 'ಲೇ ನಾನ್ಮುಟ್ಟಿನಿ ಅನ್ನೊ ಫಿಲಿಂಗಾದ್ರೂ ಆ ಎಮ್ಮೆಗೆ ಆಗುತ್ತೊ ಇಲ್ವೊ ಸುಮ್ನಿರೆ ಬಿಟ್ಟೆ ಮನೋರಂಜನೆ ಯಾರಿಗುಂಟು ಯಾರಿಗಿಲ್ಲ...' ಎಂದು ನನ್ನ ಬಾಯಿ ಮುಚ್ಚಿಸುತ್ತಿದ್ದಳು. ಆದರಿಂದ ಅವನು ಆಡಿದ ಮಾತುಗಳಿಂದೆ ನಾವೆಂದುಕೊಂಡಷ್ಟು ಕೊರಡಲ್ಲ ಅವ ಎನಿಸಿತು. 'ನೋಡು ನಿನ್ನ ಹುಡುಗಾಟ ಪೇಚಾಟಕ್ಕಿಟ್ಟು ಕೊಂಡೀತೆ ಸಾಕು ಮಾರಾಯ್ತಿ ನೀನವ್ನ ಸುದ್ದಿಗಿನ್ನ ಹೋಗ್ಬೇಡ...' ಎಂದು ರೇಖಳನ್ನು ವಾರ್ನ್ ಮಾಡಿ ತಡೆಯುವ ಪ್ರಯತ್ನ ಮಾಡಿದೆ. ಆದರಾಕೆ ಎಲ್ಲಿ ಕೇಳಬೇಕು. ಬದಲಿಗೆ ದುರುಗನನ್ನೆ ಓಲೈಸತೊಡಗಿದಳು. 'ಅಯ್ಯೊ ದುರುಗಾ, ನಾನು ನಿನಗೆ ಇಸ್ಸಿ ಅಂತೀನೇನೊ...? ಅಲ್ವೊ ನಾನಂದದ್ದು ಸೆಕ್ಸೀ ಅಂತ. ಹಂಗಂದ್ರೆ



ಹುಡುಗೀರು ಯಾರ್ನ ಭಾಳ ಪ್ರೀತಿ ಮಾಡ್ತರಲ್ಲ ಅವರ್ನ ಸೆಕ್ಸೀ ಅಂತಾರೆ... ಗೊತ್ತಾಯ್ತೇನೋ ಸೆಕ್ಸಿ ದುರುಗಾ...' ಮತ್ತೆ ಅವನ ಕೆನ್ನೆ ಸವರಿದಳು. ಸ್ಸರಿ, ಅವ ನಾಚಿ ನೀರಾಗಿ, ಬೆವತು, ಗದಗದ ನಡುಗಿ, ಮೂರ್ಛೆ ಹೋಗುವುದೊಂದು ಬಾಕಿಯಷ್ಟೆ ಇದ್ದಕ್ಕಿದ್ದಂತೆ ಅವನಿಗೆ ತನ್ನ ಬಟ್ಟೆಬರೆ, ಕೂದಲು, ಮುಖ, ಚರ್ಮ ಎಲ್ಲದರಲ್ಲೂ ಹೊಸ ಆಸಕ್ತಿ ಮೂಡತೊಡಗಿತು. ಹಾಗೆಯೇ ಕೆಲಸ ಕಾರ್ಯ, ಊಟ, ತಿಂಡಿ, ಕೊನೆಗೆ ಲಕ್ಷ್ಮಿಯಲ್ಲೂ ಆಸಕ್ತಿ ಕಳೆದುಕೊಳ್ಳತೊಡಗಿದ. ರೇಖ ಹೇಳಿದ್ದೆಲ್ಲ ವೇದವಾಕ್ಯ ಆಗಿಹೋಯ್ತು ಅವನಿಗೆ. ಒಮ್ಮೆ ಆಕೆ 'ದುರುಗ ನೀನು ಮೀಸೆ ಬೋಳ್ಸು ನೋಡೂ... ಎಷ್ಟು ಸೆಕ್ಸಿಯಾಗಿ ಕಾಣ್ತೀಯಾಂದ್ರೆ ನಿನ್ನಂಗೇ ಯಾರೂ ಇರಲ್ಲ ಬಿಡೊ...' ಎಂದುಬಿಟ್ಟಳು ಮೈಯಲ್ಲ ಕುಣಿಸುತ್ತ. ಅವ ಆ ಕ್ಷಣವೇ ಮೀಸೆ ಬೋಳಿಸಲು ತಯಾರಾದ. ಮೈಯಲ್ಲ ಉರಿ ಎದ್ದ ನಾನು ಕೆಟ್ಟದಾಗಿ ಗದರಿಸಿ ನಿಲ್ಲಿಸಿದೆ ಅವನನ್ನ. 'ಲೇ ತೆಪ್ಪರ್ಮುಂಡೆದೇ ಮೀಸೆ ಬೋಳಿಸಿದ್ರೆ ಸೆಕ್ಸಿಯಾಗಿ ಕಾಣಲ್ಲ ನೀನು, ಬದ್ಲಿಗೆ ಖೋಜಾ ಖೋಜಾ ತರಹ ಕಾಣ್ತಿಯ. ಇಲ್ನೋಡು ಇರೋ ಮೀಸೆನ ಬೋಳಿಸಿದ್ರೆ ಎಲ್ರೂ ಕಾಣದು ಹಾಗೇನೆ ಖೋಜಾ ತರಹ ಗೊತ್ತಾಯ್ತಾ...? ಹೋಗ್ ಕೆಲ್ಸ ನೋಡು ನಡಿ...' ಎಂದವನನ್ನು ಅಲ್ಲಿ ನಿಲ್ಲದೆ ಓಡಿಸಿದ್ದೆ. ಇಷ್ಟಾದರೂ ರೇಖ ಬಿಡಲಿಲ್ಲ ಅವನಿಗೆ ಪ್ಯಾಂಟು ಟೀ ಶರ್ಟ್‌ನ ಹೊಸ ಜತೆ ಹಿಡಿಸಿ ಕೈಬಿಟ್ಟಳು. ಅವನು ಒಮ್ಮೆಗೆ ಅಮ್ಮನಿಗೆ ಗಂಟುಬಿದ್ದು, ಒಪ್ಪಿಸಿ ಊರಿಗೆ ಹೊರಟ. ಅವನತ್ತ ಹೋಗುತ್ತಲು ನಾವು ಸಂಪೂರ್ಣ ಪರೀಕ್ಷೆಯ ಟೆನ್ಷನ್ನಲ್ಲಿ ಗಂಭೀರವಾಗಿ ಓದತೊಡಗಿದೆವು. ಪರೀಕ್ಷೆ ಸ್ಸರಿಯಾಗಿ ಒಂದುವಾರ ಉಳಿದಿತ್ತು. ನಾವು ಸೀರಿಯಸ್ ಡಿಸ್ಕಷನ್ನಲ್ಲಿ ತೊಡಗಿದ್ದೆವು. ದಿಢೀರನೆ ಪ್ಯಾಂಟು, ಟೀ ಶರ್ಟ್‌ನಲ್ಲಿ ನಮ್ಮೆದುರಿಗೆ ಪ್ರತ್ಯಕ್ಷನಾದ ದುರುಗ. ಮೀಸೆಯನ್ನೂ ಬೋಳಿಸಿದ್ದ. ಕಣ್ಣು ಬಾಯಿ ಬಿಟ್ಟುಕೊಂಡು ನಾಲ್ವರೂ ದಂಗಾಗಿ ಕುಳಿತೆವು. ಅವ ಸೀದಾ ಹೋಗಿ ರೇಖಳ ಮುಂದೆ ನಿಂತು ಭುಜ ಕುಣಿಸಹತ್ತಿದ. ಶಿಳ್ಳಾಕುತ್ತ, ಆಕೆಯ ತರಹವೇ ಕಣ್ಣು ಮಿಟುಕಿಸುತ್ತ 'ಚೆಸ್ಸಿ ರೈಕಾ...' ಅಂದ. ರೇಖ ಮಾತಾಡುವುದಿರಲಿ ಉಸಿರಾಡಲೂ ಆಗದಂತೆ ಸ್ಟಿಲ್ಲಾಗಿ ಕೂತಿದ್ದಳು. ಅವನನ್ನು ಆ ವೇಷದಲ್ಲಿ ನೋಡಿದ ಘಳಿಗೆಯೇ ಆಕೆ ಪೂರ್ಣ ತಣ್ಣಗಾಗಿ ಹೋಗಿದ್ದಳು. ಅವಳಿಂದ ಯಾವ ಪ್ರತಿಕ್ರಿಯೆಯೂ ಬಾರದಾಗ ಅವನೇ ಮುಂದುವರಿದ. ರೇಖಳ ಕೆನ್ನೆಗಳನ್ನು ಸವರಿ, ಎಳೆದು ಹಿಂಡಿಬಿಟ್ಟ. ಕಿಟಾರನೆ ಕಿರುಚಿದಳಾಕೆ. ಅವ ನಗಹತ್ತಿದ. ನಾನು ಗಾಬರಿಗೊಂಡು ಧಾವಿಸಿದವಳೆ ಅವನ ಕೆನ್ನೆಗೆ ನಾಲ್ಕು ಬಿಗಿದು, ಕೋಣೆಯಿಂದ ಆಚೆ ದಬ್ಬಿದೆ. ಮೂವರು ಸೇರಿ ರೇಖಳನ್ನು ಎಷ್ಟು ಸಮಾಧಾನಗೊಳಿಸಿದರೂ ಕೇಳಲಿಲ್ಲಾಕೆ. 'ಥೂ ಅಸಹ್ಯ...!' ಎಂದು ಕೆನ್ನೆಗಳನ್ನು ಜೋರಾಗಿ ತಿಕ್ಕುತ್ತ ನಡುಗತೊಡಗಿದಳು. ಗಲಾಟೆ ಕೇಳಿ ಅಮ್ಮ ಓಡಿಬಂದೇ ಬಿಟ್ಟಳು. ವಿಷಯ ತಿಳಿದು ಸೀದ ಅವನನ್ನರಸಿ ಎಮ್ಮೆ ಮನೆಗೆ ಓಡಿದಳು. ಅಪ್ಪ ಅದುವರೆಗೂ ಗೋಡೆಯಲ್ಲಿ ಪೋಗೆ ನೇತಾಡುತ್ತಿದ್ದ ಬಾರಕೋಲಿಗೆ ಕೈಹಾಕಿದ್ದೆ ಏನಾಗುತ್ತಿದೆ ಎಂದು ಅರಿವಾಗುವುದರಲ್ಲಿ ದುರುಗನನ್ನು ಸೆಳೆತ ಸೆಳೆದಿದ್ದ. ಈ ಗಲಾಟೆಯಲ್ಲಿ ಅದ್ಯಾವ ಮಾಯೆಯಲ್ಲೊ ಓಡಿಹೋದ ರೇಖ ತನ್ನ ಕಸಿನ್‌ಗಳನ್ನು ಕರೆತಂದಳು. ಮೈಲಿಗೆ ಆದವಳಂತೆ, ಮಲೀನಗೊಂಡವಳಂತೆ ಚಡಪಡಿಸುತ್ತ ಅಳುತ್ತಲೇ ಇದ್ದಳು. ಅಪ್ಪ ಅಮ್ಮ ತಾವುಗಳಾಗಲೇ ಅವನನ್ನು ಸರಿಯಾಗಿ ಶಿಕ್ಷಿಸಿರುವುದಾಗಿ ಹೇಳಿದರೂ ಕೇಳದೆ ಎಲ್ಲರೂ ಸೀದ ಎಮ್ಮೆ ಮನೆಗೆ ನಡೆದರು.

ನಾನು ಅಸಹಾಯಕಳಾಗಿ ನಿಂತ ಅಮ್ಮನನ್ನು ಗಟ್ಟಿಯಾಗಿ ತಬ್ಬಿಕೊಂಡೆ. ದುರುಗನ ಚೀರಾಟ ಹೊಟ್ಟೆ ತೊಳೆಸತೊಡಗಿ, ಬಾಯ್ತುಂಬ ನೀರು ತುಂಬಿಕೊಳ್ಳುತ್ತಿತ್ತು. ಬಚ್ಚಲಿಗೆ ಓಡಿ ಕುಸಿದು ಬಿದ್ದೆ. ಎಷ್ಟೊ ಹೊತ್ತಿನ ಮೇಲೆ ಒಮ್ಮೆಗೆ ಮೌನ ಆವರಿಸಿ, ಅಪ್ಪ ಬಂದವರೇ ಅಮ್ಮನನ್ನು, ನನ್ನನ್ನು ಒಳಗಿನ ಕೋಣೆಗೆ ಹೋಗುವಂತೆ ಬಲತ್ಕರಿಸಿ, ಬಾಗಿಲಾಕಿಕೊಂಡು ಹೊರಟುಹೋದರು. ಮತ್ತೆ ಅಪ್ಪ ಬಂದು ಬಾಗಿಲು ತೆಗೆದಾಗ ಹೊರಗೆ ಕಾರು ಹೋದ ಶಬ್ದವಾಯ್ತು. ಮಂಕಾಗಿ ಹೆದರಿದಂತೆ ಕಾಣುತ್ತಿದ್ದ ಅಪ್ಪ 'ಊರಿಗೆ ಬಿಟ್ಟ ಬರ್ತೀವಿ ಅಂತ ಕರ್ಕಂಡೋದ್ರು...' ಎಂದೇಳಿ ಕುರ್ಚಿಯಲ್ಲಿ ಕುಸಿದ. 'ಸದ್ಯ, ಊರಿಗಾದ್ರೂ ಕರದೊಯ್ದರಲ್ಲ...' ಎಂದು ಸ್ವಲ್ಪ ಸಮಾಧಾನವಾಯ್ತು ನನ್ನ ಮನಸ್ಸಿಗೆ.

ಸಿಂಗ್ರಳ್ಳಿ ರಾಮಪ್ಪ ಬರಬಹುದು, ಅವನಿಂದ ದುರಗನ ವಿಷಯ ತಿಳಿಯಬಹುದು ಎಂದು ಕಾಯುತ್ತಲೇ ಇದ್ದೆ ನಾನು. ದುರುಗ ಹೋಗಿ ಆಗಲೇ ಹದಿನೈದು ದಿನಗಳಾಗಿದ್ದವು. ನಮ್ಮ ಮನೆಯಲ್ಲಿ ಸ್ಮಶಾನ ಮೌನ. ಸಣ್ಣಜ್ಜಿ ಮಾತ್ರ ಆಗಾಗ ಕದ್ದು ಕದ್ದು ಕಣ್ಣೀರು ಹಾಕುವುದನ್ನು ನೋಡಿ [illegible]ಚ್ಚರಿಗೊಳ್ಳುತ್ತಿದ್ದೆ. ಪರೀಕ್ಷೆಗೆ ಬರುತ್ತಿದ್ದ ರೇಖಳನ್ನು ಈ ಹಿಂದೆ ಮಾತನಾಡಿಸಿದಂತೆ ಮಾತನಾಡಿಸುವುದು ನನ್ನಿಂದ ಆಗಲೇ ಇಲ್ಲ.

ಇಷ್ಟರಲ್ಲೇ ಆಕೆಯ ಮದುವೆಯೂ ಸೆಟಲ್ ಆಗಿ, ನಿಶ್ಚಿತಾರ್ಥಕ್ಕೆ ಬರಬೇಕೆಂದು ಫೋನ್‌ನಲ್ಲಿ ನನ್ನ ಕರೆದಳು. 'ನನ್ ವುಡ್‌ಬೀ ಬಂದು ನೋಡೇ... ಬಂದು ನೋಡೇ... ಹಿ ಇಸ್ ಸೋ ಸೆಕ್ಸಿ ಕಣೇ... ಒಳ್ಳೆ ಸೆಕ್ಸ್ ಸಿಂಬಲ್ ತರಹ ಇದ್ದಾರೆ ಕಣೇ...' ನಾನು ರಿಸೀವರ್ ಪಟ್ಟಂತ ಕುಕ್ಕಿಬಿಟ್ಟೆ ಆ ಪದವೇಕೋ ನನ್ನಲ್ಲಿ ನಡುಕ ಹುಟ್ಟಿಸಿತ್ತು. ಅಂದೇ ಸಂಜೆ ಬಂದ ರಾಮಪ್ಪ. ಅವನನ್ನು ಸೀದ ಕೋಣೆಗೆ ಕರೆದೊಯ್ದು ಬಾಗಿಲಿಕ್ಕಿಕೊಂಡರು ಅಪ್ಪ, ಅಮ್ಮ, ನಾನು ಅನುಮಾನದಿಂದ ಬಾಗಿಲಿಗೆ ಕಿವಿಯಾನಿಸಿ ನಿಂತೆ. ಅಪ್ಪ, ಅಮ್ಮನ ದನಿಗಳೆಂದು, ಗೊತ್ತಾಗುತ್ತಿತ್ತಷ್ಟೆ ಮಾತುಗಳು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. 'ಅವಳತ್ರ ಮಾತಾಡ್ಬೇಡ...' 'ಅನುಮಾನ ಬಂತಾ...?' 'ದುಡ್ಡು ಕೊಟ್ಯಾ...?' 'ಏನಂದ್ರೂ...?' ಇದೇ ತುಣುಕುಗಳು ಕಿವಿಗೆ ಬಿದ್ದವು.

ಆದರೆ ರಾಮಪ್ಪನದು ತುಂಬ ದೊಡ್ಡದನಿ.. ಅವನ ಮಾತುಗಳು ಸ್ಪಷ್ಟವಾಗಿ ಕೇಳಿಸಿದವು. ನೀವು ಕೊಟ್ಟ ಮೂರು ಸಾವ್ರ ಕೊಟ್ಟೆ ಇಸ್ಗಂಡ್ರು. ಮೊನ್ನಿನಾಗಿ ಉರಿಗ್ಬಂದಾನು ಪ್ಯಾಟೆರಿಗೆ ತಕ್ಕಂಗೆ ನಾನು ಇರ್ಬೇಕು. ಹೊಸ ಬಟ್ಟೆಬರೆ ಬೇಕು ಅಂತ ಅವರಪ್ಪ ಅಮ್ಮನ್ಕೂಟೆ ಗುದ್ದಾಡಿ. ಪಾಪ ಅವ್ರು ವಸಪೂರ್ತಿ ಕಸ್ಟಪಟ್ಟು ಬೆಳೆಸಿದ್ದ ಒಂದು ಚೀಲ ಸೇಂಗ ಮಾರ್ಕೆಂಡು ದುಡ್ಡು ತಗಂಡದೇ ಬಂದಿದ್ನಂತೆ. ಅದುಕ್ಸರ್ಯಾಗಿ ನಾನು 'ಇಲ್ಲ ಕಣಪ್ಪ ನಿಮ್ ದುರ್‍ಗ ಹೇಳ್ದೆಕೇಳ್ದೆ ಕೆಲ್ಸ ಬಿಟ್ಟು, ಮನಿಬಿಟ್ಟು ಆಯಮ್ಮ ಬೈದಾಡಿದ್ಕೆ ಸಿಟ್ಮಾಕ್ಕೆಂಡು ಅದೇ ವೋಗ್ಯಾನಂತ ಸ್ವಾಮೇರು ಬೈದಾಡಿ ಅವ್ನ ಸಾವಸನೇ ಬ್ಯಾಡಂತ ಲೆಕ್ಕ ಚುಕ್ತಾ ಮಡು ಅಂದ್ರು ತಗ ದುಡ್ಡು...' ಅಂತ ಮೂರು ಸಾವ್ರ ಕೊಟ್ಟು ಬಂದ್ಬುಟ್ಟೆ. ಪಾಪ..., ಅವ್ನು ಮತ್ತೆ ತಿರುಗಿ ಬರಲ್ಲ ಅಂತ ಗೊತ್ತಲ್ಲ ಅವ್ರಿಗೆ. ಅವರವ್ವ ಭಾಳ ಗೋಳಾಡಿದ್ಲು ಕಣಮ್ಮ. 'ಎಲ್ಲೋಯ್ತು ಕಣಪ್ಪ ನನ್ನ ಕೂಸು...? ಪಾಪ, ಪುಣ್ಯೇವು, ಮೋಸವಂಚ್ನೆ ಒಂದೂ ತಿಳೀದದ್ಕೆ..., ಅಂತ ವಯ್ಯಾಡ್ತಿದ್ಲು ಕಣಮ್ಮ..." ಅಂದ ರಾಮಪ್ಪ ಅಳುತ್ತಿದ್ದ. ಅದುವರೆಗ ಒಳಗೇ ಸಿಕ್ಕು ಚಡಪಡಿಸುತ್ತಿದ್ದ ಕೋಪ, ಅಸಮಾಧಾನ, ದುಃಖ ಎಲ್ಲವೂ ಕಿತ್ತುಕೊಂಡು ಹೊರಬಂದವು. ರೇಖಳ ನಂಬರ್ ತಿರುಗಿಸಿದೆ. 'ಥೂ ಪಾಪಿ, ಕೊನೆಗೂ ಅವ್ನ ಪ್ರಾಣ ತಗೊಂಡೇಬಿಟ್ಯೆಲ್ಲೆ... ಅಯ್ಯೊ ರಾಕ್ಷಸಿ, ಅವ್ನ ಪರಿಸ್ಥಿತಿನ ಉಪ'ೕಗಿಸಿಕೊಂಡು ಅವ್ನ ಇನ್ನೊಸೆನ್ಸ್ ಜೊತೆ ಆಟ ಆಡಿ ಅವನ್ನ ಮುಗ್ಸೆ ಬಿಟ್ಯಲ್ಲೇ... ನಿನ್ನ ಮುಟ್ಟೋಷ್ಟು ಧೈರ್ಯ ಅವ್ನಗೆ ಹೆಂಗೆ ಬಂತೂ...? ಅವನ್ನ ಪ್ರೇರೇಪಿಸ್ದೋರ್‍ಯಾರು..? ಅವನ ಮೈಕೈ ಎಲ್ಲಾ ಮುಟ್ಟಿ ಸವರಿ ಅವ್ನ ಉದ್ರೇಕಿಸಿ, ನೀನು ಬಿಟ್ಟಿ ಸುಖ ಅನುಭವಿಸ್ತಿದ್ದಲ್ಲ ಕಂತ್ರಿ ಆಗ ನಿಂಗೆ ಅಸಹ್ಯ ಆಗ್ತಿರ್ಲಿಲ್ಲಾ...? ಅವ್ನು ನಿನ್ನ ಮುಟ್ಟಿದಾಕ್ಷಣ ಏನೇ ನಿಂದು ಕೊಳ್ಳೆ ಹೋಗಿದ್ದು...? ಅವ್ನ ಎಮ್ಮೆ ಅಂತಿದ್ಯಲ್ಲಾ ಯೂ ಫೂಲ್ ಎಮ್ಮೆನೂ ಒಂದ್ಸಾರಿ ಪ್ರೀತಿಯಿಂದ ಮೈ ನೇವರಿಸಿ ಇನ್ನೊಮ್ಮೆ ಎದುರಿಗೆ ಹೋದ್ರೆ 'ಅಂಬಾ...' ಅಂತ ನಮ್ಮನ್ನ ಹತ್ತಿರ ಕರೆಯುತ್ತೆ. ಅಂತಾದ್ರಲ್ಲಿ ಅವ ಮನುಷ್ಯ ಕಣೇ ನಿನ್ನ ಹಾಗೇ. ನೀನು ಮುಟ್ಟುತ್ತಿದ್ದಿಯಾ ಅಂತ ಅವ್ನಿಗೆ ಫೀಲ್ ಆಗ್ದೆ ಇದ್ದಿರ್ಬಹುದು ಆದ್ರೆ, ಅವನನ್ನು ಮುಟ್ಟುತ್ತಿದ್ದೀನಿ ಅನ್ನೋ ಭಾವನೆ ನಿಂಗೆ ಆಗ್ತಿರ್ಲಿಲ್ಲಾ...? ಬೊಗ್ಳೆ ನೀನು ಆ ಸ್ಪರ್ಶನ ಫೀಲ್ ಮಾಡ್ತಿರ್ಲಿಲ್ವಾ...? ಯೂ ಬಿಚ್...? ಅದನ್ನ ನೀನು ಎಂಜಾಯ್ ಮಾಡ್ತಿರ್ಲಿಲ್ವಾ...? ಆನ್ಸರ್ ಮೀ ಯೂ ಡರ್ಟಿ ಬಿಚ್...' ಅಪ್ಪ ಛಟೀರನೆ ನನ್ನ ಕೆನ್ನೆಗೆ ಬಾರಿಸಿದಾಗಲೇ ನನಗೆಚ್ಚರ ರಿಸೀವರ್ ಜಾರಿ ಕೆಳಗುರುಳಿತ್ತು.

ಸುಮ್ಮನೇ ಸೂರು ನೋಡುತ್ತ ಮಲಗಿದ್ದೆ. ರೇಖ ಪ್ರತ್ಯಕ್ಷವಾಗಿ ಕಾರಣಳಾದರೆ ನಾನು ಪರೋಕ್ಷವಾಗಿ ಕಾರಣಳಾಗಿದ್ದೆ ಎಲ್ಲ ಹಗರಣಕ್ಕೆ. ಆಕೆ ಮಾಡುತ್ತಿದ್ದ ಚೇಷ್ಟೆಗಳಿಗೆಲ್ಲ ನಕ್ಕು, ನಕ್ಕು ಕುಮ್ಮಕ್ಕು ಕೊಡುತ್ತಲಿದ್ದೆ. ಇಬ್ಬರೂ ಸಮಾನ ಹೊಣೆಗಾರರು. ಇದೆಂತಹ ವಿಚಿತ್ರ ವ್ಯವಸ್ಥೆ? ಇದೆಂತಹ ವಿಚಿತ್ರ ಶಿಕ್ಷೆ...? ಶಿಕ್ಷೆ ಅನುಭವಿಸಬೇಕಾದವರು ನಾವು... ಹೌದು ಶಿಕ್ಷೆ ನಮಗೆ... ಚೀರಿದೆನೇನೊ ಅಮ್ಮ ಓಡಿಬಂದಳು. 'ಸುಮ್ನೆ ಬಿದ್ಕೊಳೆ ಅತಿ ಆಡ್ಬೇಡ. ನೋಡು ಪಾಪ, ಆ ಹುಡ್ಗಿಗೆ ನಿನ್ನೆ ಏನೇನೋ ಅಂದ್ಯಲ್ಲ ಅವ್ಳಿಗೆ ರಾತ್ರಿ ಎಲ್ಲಾ ಜ್ವರ ಬಂದು, ಏನೇನೋ ಮಾತಾಡ್ತಿದ್ಲಂತೆ. ಪಾಪ ರಾತ್ರೋರಾತ್ರಿ ಆಸ್ಪತ್ರೆಗೆ ಸೇರ್ಸಿದ್ರಂತೆ...' ಇನ್ನು ಏನೇನೋ ಒದರಿಹೋದ್ಲು ಅಮ್ಮ. 'ಇವರೆಲ್ಲ ಮನುಷ್ಯರೇ...? ಹೌದೆ...? ಹಾಗಿದ್ದರೆ ಎಂತಹ ಮನುಷ್ಯರಿವರೂ...?' ಗಲಿಬಿಲಿಗೊಳ್ಳುತ್ತ ಚಡಪಡಿಸತೊಡಗಿದೆ. ನನ್ನ ಯಾರೋ ಹಿಡಿದು ಅಲ್ಲಾಡಿಸುತ್ತಿದ್ದರು. ಕಣ್ಣು ತಿರುಗಿಸಿದರೆ ದುರುಗ...! ಅರೆ, ಅದೇ ದೂಪ್ದಳ್ಳಿ ದುರುಗ...! ಅದೇ ಸೆಕ್ಸಿ ದುರುಗ...! 'ಅದೇ ಕಣಮ್ಮೆ ನಮ್ ಮಲ್ಲಪ್ಪಣ್ಣನೇಣ್ತಿ ರತುನ... ಹಸಿಮೈ ಬಾಣ್ತಿ... ದೆವ್ವ ಮೆಟ್ಕಂಡು, ಮೈಯೆಲ್ಲಾ ನೀಲ್ಗಟ್ಟಿ, ಬಾಯ್ತುಂಬ ನೊರೆ ಕಕ್ಕಿ ತೀರ್ಕೆಂಡೇ ಬಿಟ್ಲು. ಮತ್ತೊಂದ್ಸಾರ್ಕೆಯ ರತುನ ದೆವ್ವಾಗಿ ನನ್ನೂರ್ ಸಾವ್ಕಾರ್ನೇಣ್ತಿನ ಮೆಟ್ಕ'ಡು, ಮುರ್ಕಂಡ್‌ದೇ ವೋದ್ಲು...' ಹೇಳೇಳುತ್ತಲೇ ನಗತೊಡಗಿದ. ಹೊಟ್ಟೆ ಹಿಡಿದುಕೊಂಡು ಬಿದ್ದು, ಬಿದ್ದು ಉರುಳಾಡಿ ನಗತೊಡಗಿದ. ನನಗೂ ತಡೆಯದಾಯ್ತು. ನಗತೊಡಗಿದೆ ಜೋರಾಗಿ ನಾನು ಅವನಂತೆಯೇ, ಅವನೊಂದಿಗೆ ಬಿದ್ದು ಬಿದ್ದು ಉರುಳಾಡಿ... □

ಮೋದಿತ್ವ ಮತ್ತು ಕರಾಳ ಪ್ರಜಾಪ್ರಭುತ್ವ

(೨೧ನೇ ಪುಟದಿಂದ)

ಆಲೋಚಿಸುವುದಕ್ಕೆ ನಮ್ಮನ್ನು ಅಣಿಗೊಳಿಸುತ್ತಿದೆ.

ಗುಜರಾತಿನಲ್ಲಿ ನಡೆದ ಭೀಕರ ಭೂಕಂಪದ ನಂತರ ಕೇಶುಭಾಯ್ ಪಟೇಲ್ ಸರಕಾರದ ಕಾರ್ಯ ನಿರ್ವಹಣೆಯ ಬಗ್ಗೆ ಟೀಕೆಗಳು ವ್ಯಕ್ತವಾದಾಗ ಅಕ್ಟೋಬರ್ ೨೦೦೧ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೋದಿಗೆ ತಾನು ಇಷ್ಟೊಂದು ದೀರ್ಘ ಇನಿಂಗ್ಸ್‌ನಲ್ಲಿರುತ್ತೇ ನೆಂದು ನಂಬಿಕೆಯಿರಲಿಲ್ಲ. ತಾನು ಏಕ ದಿನ ಪಂದ್ಯ ಆಡಲು ಬಂದಿದ್ದೇನೆಂದು ಮೋದಿಯೇ ಹೇಳಿದ್ದರು. ಆದರೆ ಫೆಬ್ರವರಿ ೨೭ರ ಗೋಧ್ರಾ ಮತ್ತು ತದನಂತರದ ಕೋಮು ವೈಷಮ್ಯ ಹಿಂಸಾಚಾರಗಳು ಮೋದಿಯ ದೀರ್ಘಕಾಲದ ಅಧಿಕಾರದ ಕನಸನ್ನು ನನಸುಗೊಳಿಸಿತು. ಗುಜರಾತ್ ನರಮೇಧಕ್ಕೆ ಸಂಬಂಧಿಸಿದ ತೆಹಲ್ಕಾ ವರದಿಯನ್ನು ಜನರ ಮುಂದಿಟ್ಟರೆ ಮೋದಿ ಎಲ್ಲಾ ೧೮೨ ಸ್ಥಾನಗಳನ್ನು ಬಾಚಿಕೊಳ್ಳುವ ಸಾಧ್ಯತೆಗಳೇ ಹೆಚ್ಚಾ ಗಿದೆ. ಹೇಗಿದೆ. ನಮ್ಮ ಪ್ರಜಾಪ್ರಭುತ್ವ? ಮೋದಿ ಇಡೀ ಪ್ರಜಾಪ್ರಭುತ್ವವನ್ನೇ ಹೈಜಾಕ್ ಮಾಡುವಷ್ಟು ದೈತ್ಯ ಶಕ್ತಿಯಾಗಿ ಬೆಳೆಯುತ್ತಿದ್ದಾರೆ.

ನಾನು ಒಂದೇ ಒಂದು ಕೋಮು ಪ್ರಚೋದಕ ಭಾಷಣ ಮಾಡಿಲ್ಲವೆಂದು ಮೋದಿ ನಿರ್ಲಜ್ಜವಾಗಿ ಸಾರುತ್ತಿದ್ದಾರೆ. ಚುನಾವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡುತ್ತ. ನಾವು ಹಿಂದೂಗಳಲ್ಲವೇ? ನಾವು ಭಯೋತ್ಪಾದಕರೇ ಇತ್ಯಾದಿ ಪ್ರಶ್ನೆಗಳನ್ನು ಹಾಕಿ, ಹಿಂದೂ ಗಳನ್ನು, ಭಯೋತ್ಪಾದಕರೆಂದು ಕರೆದು ಗುಜರಾತನ್ನು ಅವಮಾನಿಸಲಾಗುತ್ತಿದೆ ಎಂದು ಹೇಳುತ್ತಾ ಮೋದಿ ಜನರನ್ನು ಧರ್ಮದ ಹೆಸರಿನಲ್ಲಿ ರೊಚ್ಚಿಗೆಬ್ಬಿಸುವ ಕೆಲಸ ಮಾಡು ತ್ತಿದ್ದರು.

ಮೋದಿ ಇಸ್ಲಾಮಿಕ್ ಮೂಲಭೂತವಾದಿಗಳು ಅಥವಾ ಭಯೋತ್ಪಾದಕರ ಗುಮ್ಮ ವನ್ನು ಚುನಾವಣಾ ತಂತ್ರವಾಗಿ ಮತದಾರರ ಮನಸ್ಸಿನಲ್ಲಿ ನಾಟುವಂತೆ ಮಾಡುವುದಕ್ಕಿಂತ 'ಹಿಂದೂ ನಾವು' ವಿರುದ್ಧ 'ಮುಸ್ಲಿಂ ಅವರು' ಬಳಸುವಲ್ಲಿ ಯಶಸ್ವಿಯಾದರು. ನೀವು ಅವರನ್ನು (ಮುಸ್ಲಿಂ) ಭಯಪಡಿಸಲೇಬೇಕು. ಆದರೆ ಚಿಂತಿಸಬೇಡಿ ನಾನು ಯಾವಾಗಲೂ ನಿಮ್ಮ ಜೊತೆಯಲ್ಲಿದ್ದು ಅವರಿಂದ (ಸೊಹ್ರಾಬುದ್ದೀನ್‌ಗಳಿಂದ) ನಿಮ್ಮನ್ನು ರಕ್ಷಿಸುತ್ತೇನೆ. ನಾನು ಅದಕ್ಕಾಗಿಯೇ ಸೊಹ್ರಾಬುದ್ದೀನ್‌ನನ್ನು ಕೊಲೆ ಮಾಡಿಸಿರುವುದು. ಇದಕ್ಕೇನು ಸೋನಿಯಾ ಗಾಂಧಿಯ ಅಪ್ಪಣೆ ಪಡೆಯಬೇಕಿತ್ತೇ? ಈ ಕಾರಣಕ್ಕಾಗಿ ನಾನು ನೇಣಿಗೆ ಹೋಗಲೂ ಸಿದ್ಧ ಇತ್ಯಾದಿ ಪ್ರಚೋದನಕಾರಿ ಮಾತುಗಳನ್ನು ಮೋದಿ ಸಾಕಷ್ಟು ಬಳಸಿ ದರು. ೨೦೦೨ ರೀದೀಚೆಗೆ ನಾನು ಮಾಡುತ್ತಾ ಬಂದಿರುವುದೆಲ್ಲವೂ ಗುಜರಾತಿನ ಅಸ್ಮಿತೆ ಗಾಗಿ ಮತ್ತು ಹಿಂದುತ್ವಕ್ಕಾಗಿ ಎಂದು ಹೇಳುವ ಮೋದಿಯ ಕರಾಳ ಮುಖವಾಡ ಚುನಾ ವಣೆಯಲ್ಲಿ ಎಂತಹ ಚಮಕ್ ಸೃಷ್ಟಿಸಿತೆಂದು ನಾವೆಲ್ಲಾ ತಿಳಿದಿದ್ದೇವೆ.

ಮೋದಿ ತನ್ನ ಮುಖವಾಡದ ಬಗ್ಗೆ ಹೇಳುತ್ತಾ ಅದು ನನ್ನ ಮತ್ತು ಜನರ ನಡುವೆ ನಿಕಟ ಭಾವನೆಯನ್ನು ಮೂಡಿಸುವಲ್ಲಿ ಯಶಸ್ವಿಯಾಯಿತು. ನನ್ನ ವಿರುದ್ಧ ವಿರೋಧಿಗಳು ಆರೋಪಗಳನ್ನು ಮಾಡಿದಾಗಲೆಲ್ಲ ಜನರಿಗೆ ಆ ನೋವಿನ ಅನುಭವವಾಯಿತು ಎನ್ನುತ್ತಾರೆ.

ಪ್ರಜಾಸತ್ತಾತ್ಮಕವಾಗಿ ಚುನಾಯಿತನಾದ ಮುಖ್ಯಮಂತ್ರಿಯ ಮೇಲಿನ ಆರೋಪ, ಟೀಕೆಗಳನ್ನು ೫.೫ ಕೋಟಿ ಗುಜರಾತಿಗಳು ನೋಡುತ್ತಿದ್ದು, ಅದನ್ನು ಅವರು ತಮ್ಮ ರಾಜ್ಯಕ್ಕೇ ಮಾಡಿದ ಅವಮಾನವೆಂದು ಪರಿಗಣಿಸಿದರೆಂದು ಮೋದಿ ತನ್ನ ಬಗ್ಗೆ ಬಹು ಪರಾಕ್ ಹೇಳುತ್ತಿದ್ದಾರೆ.

ಕಾಂಗ್ರೆಸ್ ಒಂದು ವಿರೋಧ ಪಕ್ಷವಾಗಿ ಅದು ಏನು ಮಾಡಬೇಕಿತ್ತೋ ಅದನ್ನು ಮಾಡಲು ಸಂಪೂರ್ಣ ವಿಫಲವಾಗಿದ್ದು ಕೇವಲ ಬಿ.ಜೆ.ಪಿ. ಬಂಡುಕೋರರನ್ನು ಮಾತ್ರ ಅವಲಂಬಿಸಿತ್ತೆಂದು ಮೋದಿಯೇ ಹೇಳತೊಡಗಿದರು.

ಇಂದಿರಾಗಾಂಧಿ ಭೂ ಸುಧಾರಣೆ, ಬ್ಯಾಂಕು ರಾಷ್ಟ್ರೀಕರಣ ಗರೀಬಿ ಹಟಾವೋ, ಪಾಕಿಸ್ತಾನದಿಂದ ಬಾಂಗ್ಲಾದೇಶವನ್ನು ವಿಮೋಚನೆಗೊಳಿಸಿ 'ಮಾದುರ್ಗಾ' ಎಂದು ಬಣ್ಣಿಸ ಲ್ಪಟ್ಟರೆ, ಸ್ವತಂತ್ರ ಭಾರತದಲ್ಲೇ ಅತ್ಯಂತ ಭೀಕರವೆನ್ನಬಹುದಾದ ಹತ್ಯಾಕಾಂಡದ ಮೂಲಕ ಮೋದಿ ಹೀರೋ ಆಗಿ ಗುಜರಾತ್ ಮಾದರಿ ಎಲ್ಲೆಡೆ ಚುನಾವಣಾ ಜಯಘೋಷವಾಗಿ ಮೊಳಗಲು ಕಾರಣವಾದರು. ಕಾಂಗ್ರೆಸ್ ಮತ್ತು ಜಾತ್ಯತೀತ ಪಕ್ಷಗಳ ವೈಫಲ್ಯಗಳೇನೇ ಇದ್ದರೂ ಗುಜರಾತಿಗಳ ಒಂದು ಮಾನಸಿಕ ಸ್ಥಿತಿಯನ್ನು ಮೋದಿ ಹೇಗೆ ಕಟ್ಟಿದರು ಮತ್ತು ತನ್ನ ರಕ್ತ ರಂಜಿತ ಕೈಗಳಿಂದಲೇ ಗುಜರಾತಿನ ಸ್ವಾಭಿಮಾನವನ್ನು ಪುನಃ ಸ್ಥಾಪಿಸುವ ದೌತ್ಯ ವನ್ನು ಚುನಾವಣೆಯ ಮೂಲಕ ಹೇಗೆ ಪಡೆದುಕೊಂಡರೆಂಬುದು ಒಂದು ಸೋಜಿಗವೂ ನಮ್ಮ ಪ್ರಜಾಪ್ರಭುತ್ವದ ಕರಾಳ ಮುಖವೂ ಹೌದು. □

ಕೊಟ್ಟೂರು ಅನೇಕ ಕಾರಣಗಳಿಂದ ಪ್ರಸಿದ್ಧ ವಾಗಿದೆ- ತನ್ನ ಹತ್ತಿ ಮಾರುಕಟ್ಟೆಗೆ, ರಂಗ ಚಟುವಟಿಕೆಗಳಿಗೆ, ಕೊಟ್ಟೂರುಸ್ವಾಮಿ ಎಂದು ಹೆಸರಾಗಿರುವ ಸಂತ ಬಸಪ್ಪಸ್ವಾಮಿಯ ತೇರಿಗೆ, ರುಚಿಕರವಾದ ಮಿರ್ಚಿಗೆ, ಪ್ರಸಿದ್ಧ ಕತೆಗಾರ ಕುಂವಿಗೆ. ಬ್ರಿಟಿಷರು ಕೊಟ್ಟೂರಿಗೆ ರೈಲುಹಳಿ ಹಾಕಲು ಏನೇನು ಕಾರಣಗಳಿದ್ದವೊ, ಅದರಲ್ಲಿ ಇಲ್ಲಿನ ಹತ್ತಿ ಮಾಗುಕಟ್ಟೆಯದೂ ಒಂದೆಂದು ಕಾಣುತ್ತದೆ. ವಸಾಹತುಶಾಹಿ ವಾಣಿಜ್ಯ ದಲ್ಲಿ ಜವುಳಿಯು ಮುಖ್ಯ ವಾದ ಮಾರುಕಟ್ಟೆ ಸರಕಾಗಿತ್ತಷ್ಟೆ. ಹತ್ತಿಗೆ ಮಾತ್ರವಲ್ಲ, ಸಂಪನ್ಮೂಲ ವಿರುವ ಜಾಗವಾದರೆ, ಪಾತಾಳಕ್ಕೂ ದಾರಿಮಾ ಡುವ ಜನ ಅವರು. ಸೊಂಡೂರು ಬೆಟ್ಟಗಳಲ್ಲಿ ಖನಿಜವಿರುವುದನ್ನು ೧೯ನೇ ಶತಮಾನದಲ್ಲೇ ಕಂಡುಹಿಡಿದು ವರದಿ ತಯಾರಿಸಿದ್ದ ಅವರು, ಅದನ್ನು ಅಗೆದು ಸಾಗಿಸಲು ಹೊಸಪೇಟೆ ಯಿಂದ ಮದರಾಸಿನ ಬಂದರಿನ ತನಕ ಗುಂತಕಲ್ಲಿನ ಮೂಲಕ ರೈಲುಹಾದಿ ನಿರ್ಮಿಸಿದ್ದರು.



ಮಾತಿನ ಹಂಗು

ರಹಮತ್ ತರೀಕೆರೆ

ಹರಿಹರ ಕೊಟ್ಟೂರು ರೈಲು

ನಾನು ಶಿವಮೊಗ್ಗ ಬಿಟ್ಟು ನೆಲೆಸಲೆಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಗೆ ಬಂದಾಗ (೧೯೯೨) ರೈಲ್ವೆಹಳಿಯ ಸಮೀಪವೇ ಮನೆ ಹಿಡಿದಿದ್ದೆ. ಆಗ ಹಳಿಗಳ ಮೇಲೆ ಹೊಸಪೇಟೆಯಿಂದ ಕೊಟ್ಟೂರಿಗೆ ಪುಟ್ಟದೊಂದು ರೈಲು ಹೋಗುತ್ತಿತ್ತು. ಅದರಲ್ಲಿ ಗುಂಡಾ, ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ ಮುಂತಾದ ಊರುಗಳಿಗೆ ಹೋಗುವ ಜನ, ಗಂಟುಮೂಟೆ ಇಟ್ಟುಕೊಂಡು, ಸರಳಿಲ್ಲದ ಕಿಟಕಿಯಲ್ಲಿ ತಲೆಹಾಕಿಕೊಂಡು ಹೋಗುತ್ತಿದ್ದರು. ಕೆಲವೊಮ್ಮೆ ಕಿಟಕಿಯ ಸರಳುಗಳಿಗೆ ಹೊರಗಿನಿಂದ ಉದ್ದನೆಯ ಕಟ್ಟಿಗೆಯ ಹೊರೆಗಳನ್ನು ನೇತುಹಾಕಿರುತ್ತಿದ್ದರು. ಈ ರೈಲಿನಿಂದ ನನಗೊಂದು ಸಣ್ಣಕಿರಿಕಿರಿಯಿತ್ತು. ಅದೇನೆಂದರೆ ಅದು ಬಹುದೀರ್ಘವಾಗಿ ಅನಗತ್ಯವಾಗಿ ಸಿಳ್ಳುಹಾಕುತ್ತಿತ್ತು. ಎಷ್ಟೋ ದಿನಗಳ ನಂತರ ಅದರ ಕಿರುಚಿನಲ್ಲಿ ಇರುವುದು ಗರ್ಜನೆಯಲ್ಲ. 'ನಾನು ಹೋಗ್ತೀನಿ, ದಯವಿಟ್ಟು ಸ್ವಲ್ಪ ದಾರಿಬಿಡ್ರಪ್ಪೊ' ಎಂಬ ಬೇಡುದನಿ ಎಂದು ಗೊತ್ತಾಯಿತು.

ಹಳಿಗಳ ಮೇಲೆ ತಪಸ್ವಿಗಳಂತೆ ಗಂಟೆಗಟ್ಟಲೆ ಚೆಂಬು ಹಿಡಿದು ಕುಳಿತ ಚಿತ್ತವಾಡಿಗಿಯ ಜನರನ್ನು ಎಬ್ಬಿಸಿ ದಾರಿಮಾಡಿಕೊಂಡು ಅದು ಚಲಿಸಬೇಕಿತ್ತು. ಈ ರೈಲು ಹೊಸಪೇಟೆ ಸ್ಟೇಶನ್ನಿಗೆ ಬಂದು ಹೋಗುವುದು ಕೂಡ, ಧನಿಕರ ಮದುವೆ ಮನೆಗೆ ಬಡವಿಯೊಬ್ಬಳು ತನ್ನ ಮಕ್ಕಳುಮರಿ ಕಟ್ಟಿಕೊಂಡು ಬಂದು ಸಂಕೋಚದಿಂದ ಮೂಲೆಯಲ್ಲಿ ಕುಳಿತು ಎದ್ದುಹೋದಂತೆ ಇರುತ್ತಿತ್ತು. ಅದರಲ್ಲಿ ಹೋಗುತ್ತಿದ್ದವರೆಲ್ಲ ಎರಡು ಮೂರು ರೂಪಾಯಿ ಟಿಕೇಟಿನ ಜನರು. ಆದರೆ ಈ ರೈಲು ಚಲಿಸುವ ಪಥ ಮಾತ್ರ ಮೋಹಕವಾಗಿತ್ತು. ಬತ್ತ ತೆಂಗು ಕಬ್ಬು ಬೆಳೆದ ಗದ್ದೆಗಳ ನಡುವಿಂದ ಹಾದು, ನೀರುಗಾಲುವೆಗಳನ್ನು ದಾಟಿ, ತುಂಗಭದ್ರಾ ಜಲಾಶಯದ ಸಮೀಪಕ್ಕೆ ಹೋಗಿ, ಅಲ್ಲಿ ವಂಕಿಯಾಕಾರದಲ್ಲಿ ಎಡಮುರಿದುಕೊಂಡು, ದೊಡ್ಡ ಬೆಟ್ಟವೊಂದರ ನಡುವನ್ನು ಕೊರೆದು ಮಾಡಿದ ಕಿಬ್ಬದಿಯ ದಾರಿಯಲ್ಲಿ ಸಹಸ್ರಪದಿಯಂತೆ ಮೆಲ್ಲಗೆ ಚಲಿಸುತ್ತ, ದೊಡ್ಡಕೊಳ್ಳವನ್ನು ದಾಟಿ ಕಣಿವೆ ವೀರಭದ್ರನ ಗುಡಿಯ ಬೆನ್ನ ಹಿಂದಿನ ಸಂದಿನಲ್ಲಿ ನುಸುಳಿ, ಡ್ಯಾಂ ನೀರಿನ ಪಕ್ಕವೇ ಹರಿದು, ವ್ಯಾಸನಕೆರೆಯ ಕಿರಿಕಾಡನ್ನು ಹಾದು ಅದು ಕೊಟ್ಟೂರಿನ ಕಪ್ಪನೆಹಾಳೆ ಹಾಸಿದಂತಿರುವ ಎರೆಹೊಲಗಳ ಬಯಲಿಗೆ ಹೋಗುತ್ತಿತ್ತು. ಕೊಟ್ಟೂರು ಅದರ ಕೊನೆಯ ನಿಲ್ದಾಣವಾಗಿತ್ತು. ಕೊನೆಯ ನಿಲ್ದಾಣಗಳು–ಜೀವನದ ಚಲನೆ ತಟ್ಟನೆ ನಿಂತಂತೆ–ಅವ್ಯಕ್ತವಾದ ಶೂನ್ಯಭಾವನೆ ಕವಿಸುತ್ತವೆ.

ತಾಳಗುಪ್ಪ, ಚಾಮರಾಜನಗರ ನಿಲ್ದಾಣಗಳಲ್ಲೂ ನನಗೀ ಅನುಭವವಾಗಿದೆ. ಪಯಣಿಸಲಿ ಬಿಡಲಿ, ದಾರಿ ಡೆಡೆಂಡ್ ಆಗಬಾರದು. ಅದು ಮತ್ತೊಂದು ದಾರಿಗೆ ಸೇರಿಕೊಂಡಾಗಲೇ ನೆಮ್ಮದಿ. ಆದರೆ ಕೊಟ್ಟೂರು ರೈಲು ಹಾದಿ ವಿಷಾದಕರವಾಗಿ ಕೊನೆಗೊಂಡಿತ್ತು. ಅದನ್ನು ವಿಸ್ತರಿಸಿ, ಹತ್ತಿರದ ಹರಿಹರಕ್ಕೆ ಸೇರಿಸಬೇಕೆಂಬುದು ಈ ಭಾಗದ ಜನರ ಆಸೆ. ಇದಕ್ಕಾಗಿ ಕೊನೆಯ ಪಕ್ಷ ಅರ್ಧಶತಮಾನದಿಂದ ಜನ ಮನವಿಪತ್ರ ಸಲ್ಲಿಕೆ, ಧರಣಿ, ರಾಸ್ತಾರೋಕೊ, ಸತ್ಯಾಗ್ರಹ, ಮೆರವಣಿಗೆ ಏನೆಲ್ಲ ಮಾಡಬಹುದೋ ಅದನ್ನೆಲ್ಲ ಮಾಡಿಕೊಂಡು ಬಂದರು. ಅದರ ಫಲವಾಗಿ ಕೊಟ್ಟೂರು ಹರಿಹರ ರೈಲುಮಾರ್ಗವನ್ನು ಹಾಕಬೇಕೆಂದು ೧೯೯೫ರಲ್ಲಿ ನಿರ್ಧರಿಸಲಾಯಿತು. ೧೩ ವರ್ಷವಾಗಿವೆ. ೬೦ಕೀಮಿ ದೂರದ ಈ ಹಾದಿಯಿನ್ನೂ ಪೂರ್ಣಗೊಂಡಿಲ್ಲ. ಈ ಕಾಯುವಿಕೆಯೇ ದೊಡ್ಡ ಆಕ್ರೋಶ ಮತ್ತು ನೋವನ್ನು ಸೃಷ್ಟಿಮಾಡಿದೆ.

ಕೊಟ್ಟೂರು ಅನೇಕ ಕಾರಣಗಳಿಂದ ಪ್ರಸಿದ್ಧವಾಗಿದೆ- ತನ್ನ ಹತ್ತಿ ಮಾರುಕಟ್ಟೆಗೆ, ರಂಗ ಚಟುವಟಿಕೆಗಳಿಗೆ, ಕೊಟ್ಟೂರುಸ್ವಾಮಿ ಎಂದು ಹೆಸರಾಗಿರುವ ಸಂತ ಬಸಪ್ಪಸ್ವಾಮಿಯ ತೇರಿಗೆ, ರುಚಿಕರವಾದ ಮಿರ್ಚಿಗೆ, ಪ್ರಸಿದ್ಧ ಕತೆಗಾರ ಕುಂವಿಗೆ; ಅಥವಾ ಕುಂವಿಯವರ ಮಾತಲ್ಲೇ ಹೇಳುವುದಾದರೆ, ಅಡ್ಡಪಲ್ಲಕ್ಕಿ ಹೊತ್ತುಹೊತ್ತು ತಮ್ಮ ದೇಹದ ಆಕಾರ ಕಳೆದುಕೊಂಡಿರುವ ಜನರಿಗೆ ಕೂಡ ಇದು ಪ್ರಸಿದ್ಧಿ. ಬ್ರಿಟಿಷರು ಕೊಟ್ಟೂರಿಗೆ ರೈಲುಹಳಿ ಹಾಕಲು ಏನೇನು ಕಾರಣಗಳಿದ್ದವೊ, ಅದರಲ್ಲಿ ಇಲ್ಲಿನ ಹತ್ತಿ ಮಾರುಕಟ್ಟೆಯದೂ ಒಂದೆಂದು ಕಾಣುತ್ತದೆ. ವಸಾಹತುಶಾಹಿ ವಾಣಿಜ್ಯದಲ್ಲಿ ಜವುಳಿಯು ಮುಖ್ಯವಾದ ಮಾರುಕಟ್ಟೆ ಸರಕಾಗಿತ್ತಷ್ಟೆ. ಹತ್ತಿಗೆ ಮಾತ್ರವಲ್ಲ, ಸಂಪನ್ಮೂಲವಿರುವ ಜಾಗವಾದರೆ, ಪಾತಾಳಕ್ಕೂ ದಾರಿಮಾಡುವ ಜನ ಅವರು.



ಸೊಂಡೂರು ಬೆಟ್ಟಗಳಲ್ಲಿ ಖನಿಜವಿರುವುದನ್ನು ೧೯ನೇ ಶತಮಾನದಲ್ಲೇ ಕಂಡುಹಿಡಿದು ವರದಿ ತಯಾರಿಸಿದ್ದ ಅವರು, ಅದನ್ನು ಅಗೆದು ಸಾಗಿಸಲು ಹೊಸಪೇಟೆಯಿಂದ ಮದರಾಸಿನ ಬಂದರಿನ ತನಕ ಗುಂತಕಲ್ಲಿನ ಮೂಲಕ ರೈಲುಹಾದಿ ನಿರ್ಮಿಸಿದ್ದರು. ಇದಕ್ಕೆ ಲಗತ್ತಾಗಿ ಹೊಸಪೇಟೆ–ಕೊಟ್ಟೂರು ನಡುವೆ ತೇರಿನ ಹಗ್ಗ ಉಚ್ಚಿಕೊಂಡು ಬಿದ್ದಂತೆ ೪೦ ಕಿಮಿ ಉದ್ದದ ಮೀಟರುಗೇಜು ಹಳಿಯಿತ್ತು. ಇದರ ಮೇಲೆ ಹೊಸಪೇಟೆ–ಕೊಟ್ಟೂರು ಪ್ಯಾಸೆಂಜರ್ ಗಾಡಿ ಓಡಾಡುತ್ತಿತ್ತು.

ಯಾವಾಗ ಮೀಟರು ಗೇಜುಗಳನ್ನೆಲ್ಲ ಬ್ರಾಡ್‌ಗೇಜುಗಳಾಗಿ ಪರಿವರ್ತಿಸುವ ಕ್ರಾಂತಿ ಶುರುವಾಯಿತೊ, ಆಗ ಎಷ್ಟೋ ವರ್ಷಗಳಿಂದ ಓಡಾಡಿಕೊಂಡಿದ್ದ ಈ ರೈಲು ನಿಂತಿತು. ರೈಲು ನಿಂತಿದ್ದಕ್ಕೆ ಜನರಿಗೆ ಸಹಜವಾಗಿ ಬೇಜಾರಾಯಿತು. ಆದರೆ ಸಣ್ಣರೈಲು ಹೋಗಿ ದೊಡ್ಡರೈಲು ಬರುತ್ತದೆಂದು ಸಮಾಧಾನ ಮಾಡಿಕೊಂಡರು. ಮಾತ್ರವಲ್ಲ, ಕೊಟ್ಟೂರಿಗೆ ನಿಂತುಹೋಗಿರುವ ಹಳಿಗಳು ಹರಿಹರದವರೆಗೆ ಚಾಚಿಕೊಂಡು, ಅಲ್ಲಿಂದ ಮುಂದೆ ಬೆಂಗಳೂರು ಮೈಸೂರು ಮಂಗಳೂರಿಗೂ, ಹಿಂದಕ್ಕೆ ಹುಬ್ಬಳ್ಳಿ ಬಿಜಾಪುರ ಸೊಲ್ಲಾಪುರ ಪುಣೆ ಮುಂಬಯಿಗಳಿಗೂ ನೇರ ಓಡಾಟ ಲಭಿಸುತ್ತದೆಯೆಂದು ವಣಕರು ಸಂತೋಷಗೊಂಡರು. ಈ ಭಾಗದಲ್ಲಿ ಬೆಳೆಯುವ ಸೂರ್ಯಕಾಂತಿ, ದಾಳಿಂಬೆ, ಅಂಜೂರ, ಹತ್ತಿ, ತರಕಾರಿಗಳಿಗೆ ಹೊಸಹೊಸ ಮಾರುಕಟ್ಟೆಗಳಿಗೆ ಹೋಗುವುದೆಂದು ರೈತರು ಕನಸು ಕಟ್ಟಿದರು. ಮೊದಲಿಗೆ ಗುಂಡಾ ಬೆಟ್ಟಗಳ ಅದಿರನ್ನು ಒಯ್ಯುವ ಗೂಡ್ಸುಗಳು ಓಡಾಟಕ್ಕೆ ಎಷ್ಟು ಬೇಕೊ ಅಷ್ಟನ್ನು ಮಾಡಲಾಯಿತು. ಜನ ಗುರ್ರೆಂದು ಎದ್ದರು. ನಂತರ ಗುಂಡಾದಿಂದ ಕೊಟ್ಟೂರಿನ ತನಕ ಹಳಿಬದಲಾವಣೆ ಮಾಡಲಾಯಿತು. ಆದರೆ ಅವುಗಳ ಮೇಲೆ ರೈಲುಗಳು ಏರಲಿಲ್ಲ. ಇತ್ತ ಹಳಿಗಳು ಹರಿಹರದವರೆಗೆ ವಿಸ್ತರಿಸುವ ಕೆಲಸವೂ ಮುಗಿಯಲಿಲ್ಲ. ಯಾರೋ ಗಂಡ ಜರೀಸೀರೆ ತರ್ತಾನೆ ಅಂತ ಇರೋ ಸೀರೆ ಹರಕೊಂಡಿದ್ದಳಂತೆ–ಹಾಗಾಯಿತು.

ಅಭಿವೃದ್ಧಿ ಎಂದರೆ ದಾರಿಗಳು ಮಾತ್ರವಲ್ಲ. ರೈಲು ಮಾರ್ಗ ಮುಗಿದು ರೈಲುಗಳು ಓಡಾಟ ಶುರುಮಾಡಿದರೆ, ಒಂದು ಪ್ರದೇಶದ ಸಮಸ್ತ ಸಮಸ್ಯೆಗಳು ಮುಗಿದು, ಸುವರ್ಣಯುಗ ಶುರುವಾಗುತ್ತದೆ ಎಂದೂ ತಿಳಿಯಬೇಕಿಲ್ಲ. ಆದರೆ ಇವು ಒದಗಿಸುವ ಕನಿಷ್ಠಮಟ್ಟದ ಚಲನಶೀಲತೆಯನ್ನು ಒದಗಿಸುತ್ತವೆ. ದಾರಿಗಳು ಬಸ್ಸಿನದಿರಲಿ ರೈಲಿನದಿರಲಿ, ಅವಕ್ಕೂ ಅವುಗಳಿಗೆ ಲಗತ್ತಾಗುವ ಊರುಗಳ ಚಲನಶೀಲತೆಗೂ ಏಂತಹುದೋ ಸಂಬಂಧವಿದೆ. ಹೆದ್ದಾರಿ ಮತ್ತು ರೈಲುಹಾದಿಗಳು ಹಾಯದ ಊರುಗಳು ವಿಚಿತ್ರ ರೀತಿಯಲ್ಲಿ ಹಿಂದುಳಿಯುತ್ತವೆ. ಕೊಳ್ಳೇಗಾಲವನ್ನು ಇಟ್ಟುಕೊಂಡು ಈ ಸಿದ್ಧಾಂತವನ್ನು ಸುಲಭವಾಗಿ ಅಲ್ಲಗಳೆಯಬಹುದು. ಆದರೆ ದೇವದುರ್ಗ, ಯಲಬುರ್ಗ, ರೋಣ, ಮುದ್ದೇಬಿಹಾಳಗಳನ್ನು ನೋಡುವಾಗ ನನಗೆ ಹಾಗೆನಿಸಿದೆ. ಹೊಸಪೇಟೆಯಿಂದ ಬೆಂಗಳೂರಿಗೂ ಶಿವಮೊಗ್ಗೆಗೂ ಹೋಗುವ ಹೆದ್ದಾರಿಗಳು ಕಾಲುಚಾಚಿದಂತೆ ಒಡೆದಿರುವ ಎರಡು ಕವಲುಗಳ ನಡುವೆ ಸಿಕ್ಕಿಕೊಂಡಂತೆ ತಲಾ ೨೦ಕಿಮಿ ಒಳಗೆ ಕೊಟ್ಟೂರಿದೆ. ಆದರೂ ಅದು ತನ್ನ ವಾಣಿಜ್ಯ ಚಟುವಟಿಕೆಯಿಂದಲೂ ರೈತಾಪಿ ಉತ್ಪನ್ನಗಳಿಂದಲೂ ನೆಲೆನಿಂತ ಹಳೆಯ ಪಟ್ಟಣ. ಇದರ ಹಳೆಯ ಪೇಟೆಬೀದಿಗಳನ್ನು ನೋಡಿದರೆ ಸುತ್ತಮುತ್ತಲಿನ ನೂರು ಹಳ್ಳಿಗಳ ವ್ಯಾಪಾರಕ್ಕೆ ಅದು ಕೇಂದ್ರವಾಗಿದೆ ಎನಿಸುತ್ತದೆ.

ಮೀಟರು ಗೇಜುಗಳನ್ನೆಲ್ಲ ಬ್ರಾಡ್‌ಗೇಜುಗಳಾಗಿ ಪರಿವರ್ತಿಸುವ ಕ್ರಾಂತಿ ಶುರುವಾಯಿತೊ, ಆಗ ಎಷ್ಟೋ ವರ್ಷಗಳಿಂದ ಓಡಾಡಿಕೊಂಡಿದ್ದ ಈ ರೈಲು ನಿಂತಿತು. ರೈಲು ನಿಂತಿದ್ದಕ್ಕೆ ಜನರಿಗೆ ಸಹಜವಾಗಿ ಬೇಜಾರಾಯಿತು. ಆದರೆ ಸಣ್ಣರೈಲು ಹೋಗಿ ದೊಡ್ಡರೈಲು ಬರು ತ್ತದೆಂದು ಸಮಾಧಾನ ಮಾಡಿಕೊಂಡರು. ಮಾತ್ರ ವಲ್ಲ, ಕೊಟ್ಟೂರಿಗೆ ನಿಂತುಹೋಗಿರುವ ಹಳಿಗಳು ಹರಿಹರದವರೆಗೆ ಚಾಚಿಕೊಂಡು, ಅಲ್ಲಿಂದ ಮುಂದೆ ಬೆಂಗಳೂರು ಮೈಸೂರು ಮಂಗಳೂರಿಗೂ, ಹಿಂದಕ್ಕೆ ಹುಬ್ಬಳ್ಳಿ ಬಿಜಾ ಪುರ ಸೊಲ್ಲಾಪುರ ಪುಣೆ ಮುಂಬಯಿಗಳಿಗೂ ನೇರ ಓಡಾಟ ಲಭಿಸುತ್ತದೆಯೆಂದು ವಣಿಕರು ಸಂತೋಷಗೊಂಡರು. ಈ ಭಾಗದಲ್ಲಿ ಬೆಳೆಯುವ ಸೂರ್ಯಕಾಂತಿ, ದಾಳಿಂಬೆ, ಅಂಜೂರ, ಹತ್ತಿ, ತರಕಾರಿಗಳಿಗೆ ಹೊಸಹೊಸ ಮಾರುಕಟ್ಟೆಗಳಿಗೆ ಹೋಗುವುದೆಂದು ರೈತರು ಕನಸು ಕಟ್ಟಿ ದರು. ಮೊದಲಿಗೆ ಗುಂಡಾ ಬೆಟ್ಟಗಳ ಅದಿರನ್ನು ಒಯ್ಯುವ ಗೂಡ್ಸುಗಳು ಓಡಾಟಕ್ಕೆ ಎಷ್ಟು ಬೇಕೊ ಅಷ್ಟನ್ನು ಮಾಡಲಾ ಯಿತು. ಜನ ಗುರ್ರೆಂದು ಎದ್ದರು. ನಂತರ ಗುಂಡಾದಿಂದ ಕೊಟ್ಟೂರಿನ ತನಕ ಹಳಿಬದಲಾವಣೆ ಮಾಡಲಾಯಿತು. ಆದರೆ ಅವುಗಳ ಮೇಲೆ ರೈಲುಗಳು ಏರಲಿಲ್ಲ.

ಇದಕ್ಕೆ ಅದಕ್ಕಿದ್ದ ತುಂಡುರೈಲಿನ ಸಂಪರ್ಕವೂ ಒಂದು ಕಾರಣ ಇದ್ದಿರಬಹುದು. ಈಗದೂ ಇಲ್ಲವಾಯಿತು.

ಜನ ಲಾರಿ ಬಸ್ಸು ಟೆಂಪೊಗಳನ್ನು ಅವಲಂಬಿಸಿ ರೈಲಿನ ಕೊರತೆಯನ್ನು ತುಂಬಿಕೊಂಡರು. ಆದರೂ ರೈಲು ಬರುವುದು, ಅದರ ಮೂಲಕ ದೂರದ ಊರುಗಳಿಗೆ ಚಲಿಸುವುದು, ಜನರ ಅದಮ್ಯ ಬಯಕೆಯಾಗಿತ್ತು. ಇದಕ್ಕೆ ಕೊಟ್ಟೂರಿನ ಜನ ಮಾಡಿದ ಅಸಂಖ್ಯ ಹೋರಾಟಗಳೇ ಸಾಕ್ಷಿ. ಪರಿಸ್ಥಿತಿ ಯಾವ ಮಟ್ಟ ಮುಟ್ಟಿತ್ತೆಂದರೆ, ಚುನಾವಣೆಗೆ ಸ್ಪರ್ಧಿಸುವವರು ಹರಿಹರ ಕೊಟ್ಟೂರು ರೈಲು ಮಾರ್ಗ ಪೂರ್ಣಗೊಳಿಸುತ್ತೇವೆ ಎಂದು ಜನರಿಗೆ ಆಶ್ವಾಸನೆ ಕೊಡುತ್ತಿದ್ದರು; ಗೆದ್ದ ಶಾಸಕರು ತಮ್ಮ ಕಾಲದಲ್ಲಿ ರೈಲ್ವೆಮಾರ್ಗ ಇಷ್ಟು ಉದ್ದ ಹಾಕಲಾಯಿತು ಎಂದು ಸಾಧನೆ ಸಾಬೀತು ಪಡಿಸುತ್ತಿದ್ದರು. ರೈಲಿಗಾಗಿ ಏನು ಮಾಡಿದರು ಮಾಡಲಿಲ್ಲ ಎಂಬುದು ಶಾಸಕರನ್ನು ಅಳೆಯುವ ಒಂದು ಮಾನದಂಡವಾಗಿ ಹೋಯಿತು.

ಪ್ರಶ್ನೆಯೆಂದರೆ, ಭಾರತದಲ್ಲಿ ಯಾಕೆ ಇಂತಹ ಸಣ್ಣಪುಟ್ಟ ಊರುಗಳನ್ನು ಬೆಸೆಯುವ ರೈಲು ಮಾರ್ಗಗಳು ಪೂರ್ಣಗೊಳ್ಳಲು ಎರಡು ಮೂರು ದಶಕಗಳ ತನಕ ಕಾಯಿಸಲಾಗುತ್ತದೆ? ಪ್ಯಾಸೆಂಜರ್ ಟ್ರೈನುಗಳ ಬಗ್ಗೆ ರೈಲ್ವೆ ಇಲಾಖೆಗೆ ಯಾಕೆ ತಾತ್ಸಾರ? ಹಳೆಯ ಬಣ್ಣಮಾಸಿದ ನಾಲ್ಕೈದು ಡಬ್ಬಿಗಳನ್ನು ಇಟ್ಟುಕೊಂಡು ಬಾಲತುಂಡಾದ ಹಲ್ಲಿಯಂತೆ ಹಾಸ್ಯಾಸ್ಪದವಾಗಿ ಓಡಾಡುವ ಈ ಪ್ಯಾಸೆಂಜರ್ ರೈಲುಗಳು ಗ್ರಾಮೀಣ ಭಾಗದಲ್ಲಿ ಜೀವನಾಡಿಯ ಹಾಗೆ ರೂಪುಗೊಳ್ಳಲು ಕಾರಣವೇನು? ಅವುಗಳ ಜನಪ್ರಿಯತೆಗೆ ಹಾಸಲು ಕಮ್ಮಿ ಎನ್ನುವುದು ಕಾರಣ ಇರಲಿಕ್ಕಿಲ್ಲ. ಇವು ಹಳ್ಳಿಮೂಲೆಗಳನ್ನು ಸಮೀಪದ ತಾಲೂಕು ಪಟ್ಟಣ ಮತ್ತು ಜಿಲ್ಲಾಕೇಂದ್ರಗಳಿಗೆ ಸಂಪರ್ಕಿಸುವ ಕೆಲಸ ಮಾಡುತ್ತವೆ; ರಸ್ತೆಗಳು ಸೇರಿಸಲಾಗದ ಊರುಗಳನ್ನು ತಮ್ಮ ಜಾಲದಲ್ಲಿ ಸೇರಿಸುತ್ತವೆ; ತಾವು ನೋಡದ ದೂರದ ಊರುಗಳಿಗೆ ಹೋಗುವ ಕನಸನ್ನು ಹುಟ್ಟಿಸುತ್ತವೆ ಎನ್ನುವುದು ಇರಬಹುದು. ಸಣ್ಣಪುಟ್ಟ ಊರುಗಳ ಮುಂದೆ ನಿಮಗೂ ನನಗೂ ಸಂಬಂಧವಿಲ್ಲ ಎಂಬಂತೆ ಓಡುವ ಎಕ್ಸ್‌ಪ್ರೆಸ್ಸುಗಳಂತಲ್ಲದೆ ಇವು ಸಣ್ಣಪುಟ್ಟ ಊರಲ್ಲಿ ನಿಂತು ಜನರನ್ನು ಹತ್ತಿಸಿಕೊಂಡು ಹೋಗುತ್ತವೆ–ಇವೇ ನಿಜವಾದ ಕಾರಣಗಳಿರಬೇಕು.

ಇವತ್ತಿಗೂ ಸಂತೆಗಳಿಗೆ ಓಡಾಡುವ ಚಿಲ್ಲರೆ ವ್ಯಾಪಾರಿಗಳು, ಬೆಳೆದ ತರಕಾರಿಯನ್ನೊ ಕರೆದ ಹಯನನ್ನೊ ಒಯ್ಯುವವರು, ಶಾಲೆ ಕಾಲೇಜಿಗೆ ಹೋಗುವ ಮಕ್ಕಳು, ಹಳ್ಳಿಗೆ ಬಂದು ಹೋಗುವ ನರ್ಸುಗಳು ಶಿಕ್ಷಕರು ಅಧಿಕಾರಿಗಳು, ದೇವರು–ದಿಂಡರಿಗೆ ಓಡಾಡುವ ಭಕ್ತರು ಹಾಗೂ ಕೂಲಿಕಾರ್ಮಿಕರು ಪ್ಯಾಸೆಂಜರುಗಳಲ್ಲಿ ಓಡಾಡುತ್ತಾರೆ. ರಾಯಚೂರು ಯಾದಗಿರಿ ಬೀದರ್ ಸೇಡಂ ಚಿತಾಪುರ, ಗುಲಬರ್ಗ ಜಿಲ್ಲೆಯ ಕಟ್ಟಡದ ಕೆಲಸಗಾರರನ್ನು ಬೆಂಗಳೂರಿಗೆ ಸಾಗಿಸುವ ರೈಲುಗಳನ್ನು 'ಕೂಲಿ ಎಕ್ಸ್‌ಪ್ರೆಸ್' ಎಂದು ಕರೆಯುವ ವಾಡಿಕೆಯಿದೆ. ಅವುಗಳ ಜನರಲ್ ಬೋಗಿಗಳು ತುಂಬಿ ಜಾಗ ಸಾಲದೆ ಲಗೇಜು ವ್ಯಾನಿನಲ್ಲೂ ಜನ ನುಸುಳಿಕೊಂಡಿರುತ್ತಾರೆ.

ಅರಸೀಕೆರೆ–ಹುಬ್ಬಳ್ಳಿ, ಗುಂತಕಲ್–ಚಿಕ್ಕಜಾಜೂರು, ಗದಗ–ಬಾಗಲಕೋಟ, ಹುಬ್ಬಳ್ಳಿ–ಹೊಸಪೇಟೆ, ಮೈಸೂರು–ಚಾಮರಾಜನಗರ, ಬೀರೂರು–ಶಿವಮೊಗ್ಗ, ಗುಲಬರ್ಗ–ಹೈದರಾಬಾದು ಮುಂತಾದ ಅನೇಕ ಪ್ಯಾಸೆಂಜರುಗಳಲ್ಲಿ ನಾನು ಪಯಣಿಸಿದ್ದೇನೆ. ಅವು ಹಳಿಪಕ್ಕದ ಊರುಗಳಲ್ಲಿ ವಿಚಿತ್ರವಾದ ಜೀವಂತಿಕೆ ತಂದಿವೆ. ಬಹುಶಃ ಬೀರೂರು–ಶಿವಮೊಗ್ಗ ಪ್ಯಾಸೆಂಜರು ಇರದಿದ್ದರೆ, ನಾನು ಮತ್ತು ತರೀಕೆರೆ ಕಡೂರು ಭದ್ರಾವತಿ ಪರಿಸರದ ಸಾವಿರಾರು ತರುಣರು ಪದವೀಧರರಾಗುವುದೇ ಕಷ್ಟವಿತ್ತು. ವಿದ್ಯಾರ್ಥಿಗಳಾದ ನಾವು ತಿಂಗಳಿಗೆ ಏಳೂವರೆ ರೂಪಾಯಿಯ ಪಾಸುಮಾಡಿಕೊಂಡು ಹಳ್ಳಿಯ ಜನ ತರುತ್ತಿದ್ದ ತರಕಾರಿ ಪುಟ್ಟಿಗಳನ್ನು, ಹಾಲಿನ ಕ್ಯಾನುಗಳನ್ನು ಒಳಗೆ ಎಳೆದುಕೊಳ್ಳಲು ನೆರವಾಗುತ್ತ, ನಮ್ಮ ಸೀಟನ್ನು ಬಿಟ್ಟುಕೊಟ್ಟು ಸಮಾಜಸೇವೆ ಮಾಡಿದ ಹೆಮ್ಮೆಯಲ್ಲಿ ಬಾಗಿಲಲ್ಲಿ ನೇತುಕೊಂಡು ಹೋಗುತ್ತಿದ್ದೆವು. ಕೆಲವೊಮ್ಮೆ ಹೊಲದೊಳಗಿನ ಕಾಲುಹಾದಿಯಲ್ಲಿ ಮಗುವನ್ನು ಎತ್ತಿಕೊಂಡು ಹೆಂಗಸರು ಓಡೋಡಿ ಬರುತ್ತಿದ್ದರೆ, ನಮ್ಮ ಪ್ಯಾಸೆಂಜರು ಕಾದು ನಿಲ್ಲುತ್ತಿತ್ತು.

ಚಿಕ್ಕಜಾಜೂರು ಬಳ್ಳಾರಿಯ ೧೫೦ ಕಿಮಿ ಉದ್ದದ ಈ ಹಾದಿಯು ಮೊಣಕಾಲ್ಮೂರು, ರಾಯದುರ್ಗ, ಚಳ್ಳ

[illegible] ಬಳ್ಳಾರಿ, [illegible] ಬೆಂಗಳೂರಿನಲ್ಲಿ [illegible] [illegible] ಹೋಟೆಲ್‌ಗಳಲ್ಲಿ [illegible]. ಇದು ಮೈಸೂರು– ಬೆಂಗಳೂರು ಇಲ್ಲವೇ ಭದ್ರಾವತಿ– ಶಿವಮೊಗ್ಗ [illegible] ದಾರಿಯಲ್ಲಿ ಪಯಣಿಸಿದವರಿಗೆ 'ಇದೇನು ಇಥಿಯೋಪಿಯಾ!' ಅನಿಸಬಹುದು. ಆದರೆ ಈ ಹಾದಿಯ ಮೇಲೆ ಚಲಿಸುವ ಪ್ಯಾಸೆಂಜರುಗಳು [illegible], [illegible], ತಿಳುಕು, ಅಮೃತಾಪುರ ಹಳೆಯೂರು ಹೀಗೆ ಎಂತೆಂಥದೋ ಹೆಸರೇ ಕೇಳಿರದ ಹಳ್ಳಿಗಳಿಂದ ಜನರನ್ನು ಬೆಂಗಳೂರು, ಮೈಸೂರು, ಬಳ್ಳಾರಿ ಚಿತ್ರದುರ್ಗಗಳಿಗೆ ಕರೆದೊಯ್ಯುತ್ತವೆ. ಕೈಲಾಗದ ಮುದುಕರು, ದೊಡ್ಡಾಸ್ಪತ್ರೆಗೆ ಹೋಗುವ ರೋಗಿಗಳು, ಮಕ್ಕಳು ಮರಿ ಕಟ್ಟಿಕೊಂಡು ಜಾತ್ರೆಗೆ ಲಗ್ನಕ್ಕೆ ಹೋಗುವವರು, ಪ್ಯಾಸೆಂಜರುಗಳಲ್ಲಿ ಕುಳಿತು, ಮನೆಯಿಂದ ಅವಸರದಲ್ಲಿ ಕಟ್ಟಿತಂದ ತಿಂಡಿಯನ್ನು ತಿನ್ನುತ್ತ ನೆಮ್ಮದಿಯಿಂದ ಹೋಗುತ್ತಾರೆ. ಗುಲಬರ್ಗ –ಹೈದರಾಬಾದು ಪ್ಯಾಸೆಂಜರುಗಳಲ್ಲಿ ಈ ಭಾಗದ ನೂರಾರು ಕಾರ್ಮಿಕರು ಹೈದರಾಬಾದಿಗೆ ಹೋಗುತ್ತಾರೆ. ನಾನು ಈಚೆಗೆ ಸೇಡಂ ನಿಲ್ದಾಣದಲ್ಲಿ ಒಬ್ಬ ಹಳ್ಳಿಯ ವಯಸ್ಸಾದ ದಂಪತಿಗಳನ್ನು ಕಂಡೆ. ಅವರ ಮಗ ಹೈದರಾಬಾದಿನಲ್ಲಿ ಯಾವುದೋ ಕಂಪನಿಯಲ್ಲಿ ವಾಚ್‌ಮನ್ ದಂಪತಿಗಳು ಜೋಳದ ಹಿಟ್ಟಿನ ಚೀಲ, ತೊಗರಿ ಕಾಯಿಯ ಕೈಚೀಲ ಮತ್ತು ರೊಟ್ಟಿಯ ಗಂಟು ಕಟ್ಟಿಕೊಂಡು, ವಾಡಿ–ಹೈದರಾಬಾದು ಪ್ಯಾಸೆಂಜರಿಗೆ ಕಾದು ಕೂಂಡಿದ್ದರು. ಬಸ್ಸಿನಲ್ಲಿ ಇವನ್ನೆಲ್ಲ ಇಟ್ಟುಕೊಂಡು ಹೋಗಲು ನಿಜಕ್ಕೂ ಆಗುವುದಿಲ್ಲ. ರೈಲಿಗೆ ಇಪ್ಪತ್ತೈದು ರೂಪಾಯಿಯಾದರೆ ಬಸ್ಸಿಗೆ ಎಪ್ಪತ್ತೈದು.

ಆದರೆ ಈ ಪ್ಯಾಸೆಂಜರುಗಳ ಬಗ್ಗೆ ಇವು ಓಡಾಡುವ ರೈಲುದಾರಿಗಳ ಬಗ್ಗೆ ರೈಲ್ವೆ ಇಲಾಖೆಗೆ ಆಸಕ್ತಿ ಕಡಿಮೆ. ಈ ಪ್ಯಾಸೆಂಜರುಗಳು ಅದಕ್ಕೆ ಮುದ್ದಿನ ಮಕ್ಕಳಲ್ಲ. ಒಂದು ಗೂಡ್ಸುಗಾಡಿ ತರುವ ಲಾಭವನ್ನು ಈ ರೈಲುಗಳು ಒಂದು ವರ್ಷ ಓಡಿದರೂ ತರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ವಾಸ್ತವವಾಗಿ ಕೊಟ್ಟೂರು–ಹರಿಹರದ ಮಾರ್ಗ ಶುರುವಾಗಿದ್ದು ೧೯೯೫ರಲ್ಲಿ. ಆಗಿನ ರೈಲ್ವೆ ಮಂತ್ರಿ ಜಾಫರ್ ಶರೀಫರು ಅದಕ್ಕೆ ಅಡಿಗಲ್ಲು ಹಾಕಿದ್ದರು. ಆಗ, ಬಳ್ಳಾರಿಯಿಂದ ಮಂಗಳೂರು ಬಂದರಿಗೆ ಅದಿರನ್ನು ಸಾಗಿಸುವುದು ಸುಲಭವಾಗುತ್ತದೆ ಎಂಬುದು ಇದಕ್ಕೆ ಕೊಡಲಾಗಿದ್ದ ಮುಖ್ಯ ತರ್ಕವಾಗಿತ್ತು. ಆದರೆ ರೈಲ್ವೆ ಇಲಾಖೆ ಬಜೆಟ್ಟಿನಲ್ಲಿ ಇದಕ್ಕೆ ಎರಡು ಕೋಟಿ ಮೂರುಕೋಟಿ ಹಣ ಕೊಡುತ್ತ ತಡಮಾಡತೊಡಗಿತು. ಈ ಮಾರ್ಗ ಆರಂಭವಾದರೆ ಮದ್ರಾಸು ಮತ್ತು ಹೈದರಾಬಾದು ರೈಲ್ವೆ ವಲಯಗಳಿಗೆ ಅದಿರುಸಾಗಣೆಯಿಂದ ಬರುವ ರೆವಿನ್ಯೂ ತಪ್ಪಿ ನಷ್ಟವಾಗುತ್ತದೆ ಎಂದು ಇದನ್ನು ತಡಮಾಡಲಾಗುತ್ತಿದೆ, ಇದು ತಮಿಳು ತೆಲುಗರ ಆಟ ಎಂದು ಹೇಳಲಾಯಿತು. ಜಿಲ್ಲಾ ಮಂತ್ರಿಯಾಗಿದ್ದ ಎಂ.ಪಿ. ಪ್ರಕಾಶ್ ಅವರು ಮನಸ್ಸು ಮಾಡಿದ್ದರೆ ಇದು ಮುಗಿಯುತ್ತಿತ್ತೆಂದೂ, ಗದಗದಿಂದ ಮುಂಡರಗಿ ಹಡಗಲಿ ಮೂಲಕ ಹರಿಹರವನ್ನು ಮುಟ್ಟುವಂತೆ ರೈಲುಮಾರ್ಗ ಮಾಡಿಸುವ ಉದ್ದೇಶದಿಂದ ಅವರು ಕೊಟ್ಟೂರು ಹರಿಹರ ರೈಲಿನ ಬಗ್ಗೆ ಅನಾಸಕ್ತಿ ತೋರಿದರೆಂದೂ ಅವರ ವಿರೋಧಿಗಳು ವ್ಯಾಖ್ಯಾನಿಸುವುದುಂಟು.

ಎಷ್ಟು ನಿಜವೊ ಸುಳ್ಳೊ ತಿಳಿಯದು. ಆದರೆ ಅದಿರು ಸಾಗಣೆಯಿಂದ ರೈಲ್ವೆ ಇಲಾಖೆಗೆ ಪ್ರತಿವರ್ಷ ೪೦೦ ಕೋಟಿ ಆದಾಯ ಬಳ್ಳಾರಿ ಜಿಲ್ಲೆಯಿಂದ ಇದ್ದರೂ ಇಂತಹ ಕಿರುಮಾರ್ಗ ಮುಗಿಸುವುದಕ್ಕೆ ಹಿಂದೇಟು ಹಾಕುತ್ತಿರುವುದೇಕೆ ಎಂದು ಬಳ್ಳಾರಿ ಜಿಲ್ಲಾ ರೈಲ್ವೆ ಹೋರಾಟ ಸಮಿತಿ ಚಳುವಳಿ ಮಾಡಿತು. ಈ ಭಾಗದ ಸಂಸತ್ ಸದಸ್ಯರು ಈ ಮಾರ್ಗ ಪೂರ್ಣಗೊಳಿಸಲು ಪಾರ್ಲಿಮೆಂಟಿನಲ್ಲಿ ಒತ್ತಾಯ ಮಾಡಿದರು. ೧೯೯೫ರಲ್ಲಿ ೬೫ ಕೋಟಿಯಿದ್ದ ಅಂದಾಜು ವೆಚ್ಚ ೨೦೦೧ರಲ್ಲಿ ೧೨೪ ಕೋಟಿಗೆ ಏರಿತು. ವೆಚ್ಚವೀಗ ೨೦೦ ಕೋಟಿಗೇರಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತಂತಮ್ಮ ಪಾಲನ್ನು ಹಾಕಿ ಇದನ್ನು ಪೂರೈಸಬೇಕೆಂದು ನಿರ್ಧರಿಸಲಾಯಿತು. ಕರ್ನಾಟಕ ಸರ್ಕಾರ ತನ್ನ ಪಾಲಿನ ಹಣ ಕೊಟ್ಟಿತು. ಆದರೂ ಇದು ಮುಗಿಯುವ ಲಕ್ಷಣಗಳಿಲ್ಲ. ಬಾಗಲಕೋಟೆ ಹಳಿಪರಿವರ್ತನೆ ಕೂಡ ಹೀಗೇ ಅನಗತ್ಯವಾಗಿ ತಡವಾಗಿದೆ. ಇನ್ನು ಕಡೂರು–ಸಕಲೇಶಪುರ, ಮುನಿರಾಬಾದ–ಗದ್ವಾಲ, ಚೆನ್ನರಾಯಪಟ್ಟಣ–ಮಡಿಕೇರಿ, ಅಂಕೋಲ ಹುಬ್ಬಳ್ಳಿ, ಕುಡಚಿ–ಬಾಗಲಕೋಟ, ಬೀದರ–ಗುಲಬರ್ಗ, ಮಾರ್ಗಗಳು ಸಾಕಾರಗೊಳ್ಳಬೇಕಾದರೆ, ಅರ್ಧ ಶತಮಾನವಾದರೆ ಆಶ್ಚರ್ಯವಿಲ್ಲ.

೨೫ ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ಜನ 'ವಿಜಯನಗರ ಉಕ್ಕು ನಮ್ಮಹಕ್ಕು' ಎಂದು ಕಬ್ಬಿಣದ ಕಾರ್ಖಾನೆಗಳಿಗೆ ಹೋರಾಟ ನಡೆಸುತ್ತಿದ್ದರು. ಈಗ ರೈಲ್ವೇ ಸೌಲಭ್ಯಕ್ಕಾಗಿ ಮತ್ತು ಜಿಲ್ಲಾಕೇಂದ್ರಕ್ಕಾಗಿ ಚಳುವಳಿಗಳು ನಡೆಯುತ್ತಿವೆ. ಅದಿರು ಸಾಗಾಟದಿಂದ ಏಳುವ ಧೂಳಿನಿಂದ ಬೆಳೆ ರಕ್ಷಿಸಿಕೊಳ್ಳುವುದಕ್ಕಾಗಿ, ಡ್ಯಾಮಿನ ನೀರನ್ನು ಉಳಿಸಿಕೊಳ್ಳುವುದಕ್ಕಾಗಿ ಚಳವಳಿಗಳು ನಡೆಯುತ್ತಿವೆ. ಹಿಂದೆ ಕಾರ್ಖಾನೆ ಬರುವುದು ಎಂದರೆ ಸ್ಥಳೀಯ ಸಂಪನ್ಮೂಲ ಬಳಕೆಯಾಗುತ್ತದೆ. ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಎಂಬ ಆಶಯವಿತ್ತು. ಈಗ ಜಿಲ್ಲೆಯ ಜನರೇ ಊರು ಬಿಟ್ಟು ಹೋಗುವಷ್ಟು, ತಮ್ಮ ಹೊಲ ಮತ್ತು ಡ್ಯಾಮಿನ ನೀರು ಉಳಿಸಿಕೊಂಡರೆ ಸಾಕು ಎಂಬಷ್ಟು ಖಾಸಗಿ ಉದ್ಯಮಗಳು ಬೀಡುಬಿಟ್ಟಿವೆ. ಬಳ್ಳಾರಿಯ ರೈಲ್ವೇ ಹೋರಾಟ ಸಮಿತಿ ಚೆನ್ನಾಗಿ ಕೆಲಸ ಮಾಡಿ ಅನೇಕ ಸೌಲಭ್ಯಗಳನ್ನು ದೊರಕುವಂತೆ ಮಾಡಿತು. ಆದರೂ ಮಧ್ಯಮ ವರ್ಗ ಹಾಗೂ ದೊಡ್ಡ ವ್ಯಾಪಾರಿ ವರ್ಗಗಳ ಹಿತಾಸಕ್ತಿಗಳಿಗೆ ಇಲ್ಲಿ ಒತ್ತು ಹೆಚ್ಚು. ಹೀಗಾಗಿ ಮಹಾನಗರಗಳಿಗೆ ಸಂಪರ್ಕ ಮಾಡುವ ರೈಲುಗಳಿಗಿರುವ ಒತ್ತಾಯ, ಕಿರುದೂರದ ರೈಲು ಹಾದಿಗಳ ಬಗ್ಗೆ ಬೀಳುವುದಿಲ್ಲ.

ಭಾರತದ ಸದ್ಯದ ಬೃಹತ್ ಕೈಗಾರಿಕವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಹಳ್ಳಿಪಟ್ಟಣಗಳನ್ನು ಸೇರಿಸುವ ಪ್ಯಾಸೆಂಜರು ರೈಲು ಮಾರ್ಗದ ಆಸೆಗಳು ಈಡೇರಲು ದಶಮಾನಗಳು ಬೇಕಾಗುತ್ತವೆ. ಆದರೆ ಮಹಾನಗರಗಳ ನಡುವಣ ಕಾರಿಡಾರ್ ರಸ್ತೆಗಳು, ಫ್ಲೈಓವರುಗಳು, ಮೆಟ್ರೋರೈಲು ಯೋಜನೆಗಳು ಕೆಲವೇ ವರ್ಷಗಳಲ್ಲಿ ಮುಗಿಯುತ್ತವೆ. ಹಾಗೆ ಮುಗಿಸದಿದ್ದರೆ ರಾಜ್ಯ ಬಿಟ್ಟು ಬೇರೆಡೆಗೆ ಹೋಗುತ್ತೇವೆ ಎಂದು ಉದ್ಯಮಿಗಳೂ ಹೆದರಿಸುತ್ತಾರೆ. ಇದನ್ನು ತಡಮಾಡಬೇಡಿ ಎಂದು ನ್ಯಾಯಾಲಯಗಳು ಸರ್ಕಾರಕ್ಕೆ ಛೀಮಾರಿ ಹಾಕುತ್ತವೆ. ವಿಶ್ವಬ್ಯಾಂಕ್ ಎಚ್ಚರಿಸುತ್ತವೆ. ಯೋಜನೆಗಳು ಜನರಿಗೆ ಎಷ್ಟೇ ಉಪಯುಕ್ತವಿರಲಿ, ಅವುಗಳ ಜತೆ ದೊಡ್ಡ ಉದ್ಯಮಗಳ ಹಿತಾಸಕ್ತಿ ಸೇರಿಕೊಳ್ಳದಿದ್ದರೆ, ಅವು ನಮ್ಮ ಸಾರ್ವಜನಿಕ ವ್ಯವಸ್ಥೆಯಲ್ಲಿ ಆದ್ಯತೆ ಪಡೆಯುವುದಿಲ್ಲ ಎಂಬಂತಾಗಿದೆ. ಸಣ್ಣಪುಟ್ಟವರನ್ನು ಬಿಟ್ಟು ನಡೆಯುವ ಆರ್ಥಿಕ ರಾಜಕೀಯ ವ್ಯವಸ್ಥೆಯ ಮನೋಭಾವದ ಪರಿಣಾಮವಿದು.

ವಿಚಿತ್ರವೆಂದರೆ ಸಮಾಜವಾದಿ ಹಿನ್ನೆಲೆಯ ಮಂತ್ರಿಗಳೇ ಹೆಚ್ಚು ರೈಲ್ವೆ ಮಂತ್ರಿಗಳಾಗುತ್ತ ಬಂದಿರುವುದು. ಹಿಂದೆ ಜಾರ್ಜ್ ಫರ್ನಾಂಡಿಸ್, ನಿತೀಶ್ ಕುಮಾರ್ ರೈಲು ಮಂತ್ರಿ ಆಗುತ್ತ ಬಂದಿದ್ದಾರೆ. ಈಗಿನ ಲಾಲೂಪ್ರಸಾದ್ ಕೂಡ ಲೋಹಿಯಾರ ನೇರ ಶಿಷ್ಯ. ಇವರ ಕಾಲದಲ್ಲೂ ಗ್ರಾಮೀಣ ಒಳಮಾರ್ಗಗಳು ಪೂರ್ಣಗೊಳ್ಳುತ್ತಿಲ್ಲ ಎಂದರೆ ಏನರ್ಥ? ಕರ್ನಾಟಕದ ಬಸವರಾಜ ಪಾಟೀಲ ಯತ್ನಾಳರು ರೈಲ್ವೆ ಮಂತ್ರಿಯಾದಾಗ, ಕೊಟ್ಟೂರು ಹರಿಹರ ಮಾರ್ಗ ಪೂರ್ಣಗೊಳ್ಳಬಹುದು ಎಂದು ಜನ ಭಾವಿಸಿದರು. ಅದು ಸಾಧ್ಯವಾಗಲಿಲ್ಲ. ಒಮ್ಮೆ ವೀರಪ್ಪ ಮೊಯಿಲಿಯವರು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಾಗ, ಅವರಿಗೆ ಇದರ ಬಗ್ಗೆ ಮನವರಿಕೆ ಮಾಡಿಕೊಟ್ಟೆವು. ಕೂಡಲೇ ಅವರು ಸ್ಪಂದಿಸಿ, ಲಾಲೂಪ್ರಸಾದರ ಜತೆ ಮಾತಾಡಿ, ಇದರ ಬಗ್ಗೆ ಗಮನ ಹರಿಸಲಾಗುವುದು ಎಂಬ ಆಶ್ವಾಸನೆ ಪಡೆದುಕೊಟ್ಟರು. ಆದರೂ ಈ ಕೆಲಸ ಬೇಗ ಮುಗಿಯುವಂತೆ ಕಾಣುತ್ತಿಲ್ಲ.

ತಮಾಷೆ ಎಂದರೆ ಕೊಟ್ಟೂರು ಹೊಸಪೇಟೆಯ ನಡುವೆ ಹಾಕಲಾದ ಹಳಿ ಮತ್ತು ಕಟ್ಟಲಾದ ನಿಲ್ದಾಣಗಳನ್ನು, ಇನ್ನು ರೈಲು ಬರುವುದಿಲ್ಲ ಎಂದು ಗೊತ್ತಾದ ಬಳಿಕ ಉಪಯೋಗ ಮಾಡಿಕೊಳ್ಳಲು ಜನ ತಮ್ಮ ಸ್ಥಳೀಯ ಪ್ರತಿಭೆಯನ್ನು ಬಳಸತೊಡಗಿದರು; ಅವರು ಹಳಿಗಳ ಮೇಲೆ ಕಸಸುರಿಯಲಾರಂಭಿಸಿದರು. ಹಳಿಗಳನ್ನು ತಮ್ಮ ಶೌಚಕ್ರಿಯೆಯ ಖಾಯಂ 'ದೊಡ್ಡಿ'ಯನ್ನಾಗಿ ಮಾಡಿಕೊಂಡರು. ಹಳಿಗೆ ಎಮ್ಮೆ ಕಟ್ಟುವುದು, ಹುಲ್ಲಿನ ಬಣವೆ ಒಟ್ಟುವುದು, ಮಾಡಿಕೊಂಡರು. ಪ್ಲಾಟ್‌ಫಾರಮ್ಮಿನ ಬಯಲನ್ನು ಒಕ್ಕಲು ಮಾಡುವ, ಮೆಕ್ಕೆಜೋಳ ಮೆಣಸಿನ ಕಾಯಿ ನೀರುಳ್ಳಿ ಒಣಗಿಸುವ ಕಣವನ್ನಾಗಿ ಬದಲಿಸಿದರು. ಸ್ಟೇಷನನ್ನು ಇಸ್ಪೀಟು ಆಟಗಾರರು ಕ್ಲಬ್ಬನ್ನಾಗಿಸಿದರು. ಪೋಲಿದನಗಳು ಹಕ್ಕೆ ಮಾಡಿಕೊಂಡವು. ಊರಾಡುವ ಭಿಕ್ಷುಕರು, ಜೋಗಮ್ಮಗಳು, ದುರುಗ ಮುರಗಿಯವರು, ತಮ್ಮ ರಾತ್ರಿ ಉಳಿಕೆ ಧರ್ಮಶಾಲೆಯನ್ನಾಗಿ ರೂಪಿಸಿಕೊಂಡರು. ಕೆಲವರು ಇನ್ನೂ ಮುಂದೆಹೋಗಿ, ಹಳಿಗಳಿಗೆ ಬಳಸುವ ಕಬ್ಬಿಣ, ಫಿಶ್‌ಪ್ಲೇಟಿಗೆ ಬಡಿಯುವ ಬೆಣೆ ಮತ್ತು ಚಕ್ಕುಲಿಯಂತಹ ರಿಂಗುಗಳನ್ನು ಕಿತ್ತು ಕುಡುಕೋಲು ಕೊಡಲಿ ಮಾಡಿಸಿಕೊಂಡರು. ರೈಲ್ವೆ ಕಬ್ಬಿಣದಿಂದ ಮಾಡಿದ ಕುಡುಗೋಲು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ

ಯೆಂದು ಯಾರೋ ಸುದ್ದಿಹಬ್ಬಿಸಿ, ಜನರನ್ನು ಹುರಿದುಂಬಿಸಿದನು. ಪೋಲಿಸರು ಕಬ್ಬಿಣದ ಕಳ್ಳರನ್ನು ಹಿಡಿದು ಕೇಸು ಜಡಿಯತೊಡಗಿದರು. ಕೊಟ್ಟೂರು ಪೋಲಿಸು ಠಾಣೆಯಲ್ಲಿ ಹಳಿಗಳ್ಳರ ಕೇಸುಗಳಿವೆಯಂತೆ. ಇಂತಹ ವಿಚಿತ್ರವಾದ ಸುದ್ದಿಗಳನ್ನು ಕಳೆದ ೧೩ ವರ್ಷಗಳಿಂದ ಇಲ್ಲಿನ ಸ್ಥಳೀಯ ಪತ್ರಿಕೆಗಳು ಪ್ರಕಟಿಸಿವೆ; ಇದರದ್ದೇ ಒಂದು ಸಾಂಸ್ಕೃತಿಕ ಅಧ್ಯಯನ ಮಾಡಬಹುದು.

೨೫ ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ಜನ 'ವಿಜಯನಗರ ಉಕ್ಕು ನಮ್ಮಹಕ್ಕು' ಎಂದು ಕಬ್ಬಿಣದ ಕಾರ್ಖಾನೆಗಳಿಗೆ ಹೋರಾಟ ನಡೆಸುತ್ತಿದ್ದರು. ಈಗ ರೈಲ್ವೇ ಸೌಲಭ್ಯಕ್ಕಾಗಿ ಮತ್ತು ಜಿಲ್ಲಾಕೇಂದ್ರಕ್ಕಾಗಿ ಚಳುವಳಿಗಳು ನಡೆಯುತ್ತಿವೆ. ಅದಿರು ಸಾಗಾಟದಿಂದ ಏಳುವ ಧೂಳಿನಿಂದ ಬೆಳೆ ರಕ್ಷಿಸಿಕೊಳ್ಳುವುದಕ್ಕಾಗಿ, ಡ್ಯಾಮಿನ ನೀರನ್ನು ಉಳಿಸಿಕೊಳ್ಳುವುದಕ್ಕಾಗಿ ಚಳುವಳಿಗಳು ನಡೆಯುತ್ತಿವೆ. ಹಿಂದೆ ಕಾರ್ಖಾನೆ ಬರುವುದು ಎಂದರೆ ಸ್ಥಳೀಯ ಸಂಪನ್ಮೂಲ ಬಳಕೆಯಾಗುತ್ತದೆ. ಸ್ಥಳೀಯರಿಗೆ ಉದ್ಯೋಗ ಸಿಗುತ್ತದೆ ಎಂಬ ಆಶಯವಿತ್ತು. ಈಗ ಜಿಲ್ಲೆಯ ಜನರೇ ಊರುಬಿಟ್ಟು ಹೋಗುವಷ್ಟು, ತಮ್ಮ ಹೊಲ ಮತ್ತು ಡ್ಯಾಮಿನ ನೀರು ಉಳಿಸಿಕೊಂಡರೆ ಸಾಕು ಎಂಬಷ್ಟು ಖಾಸಗಿ ಉದ್ಯಮಗಳು ಬೀಡುಬಿಟ್ಟಿವೆ. ಬಳ್ಳಾರಿಯ ರೈಲ್ವೇ ಹೋರಾಟ ಸಮಿತಿ ಚೆನ್ನಾಗಿ ಕೆಲಸ ಮಾಡಿ ಅನೇಕ ಸೌಲಭ್ಯಗಳನ್ನು ದೊರಕುವಂತೆ ಮಾಡಿತು. ಆದರೂ ಮಧ್ಯಮ ವರ್ಗ ಹಾಗೂ ದೊಡ್ಡ ವ್ಯಾಪಾರಿ ವರ್ಗಗಳ ಹಿತಾಸಕ್ತಿಗಳಿಗೆ ಇಲ್ಲಿ ಒತ್ತು ಹೆಚ್ಚು. ಹೀಗಾಗಿ ಮಹಾನಗರಗಳಿಗೆ ಸಂಪರ್ಕ ಮಾಡುವ ರೈಲುಗಳಿಗಿರುವ ಒತ್ತಾಯ, ಕಿರುದೂರದ ರೈಲುಹಾದಿಗಳ ಬಗ್ಗೆ ಬೀಳುವುದಿಲ್ಲ.

ಹರಿಹರ-ಕೊಟ್ಟೂರು ರೈಲುಮಾರ್ಗದ ವಿಷಯವಾಗಿ ನಡೆದ ಹಕ್ಕೊತ್ತಾಯಕ್ಕೆ ಅರ್ಧಶತಮಾನದ ಚರಿತ್ರೆಯಿದೆ. ಸ್ಥಳೀಯ ಪತ್ರಕರ್ತರಲ್ಲಿ ಕೆಲವರು ಈ ರೈಲುಮಾರ್ಗದ ಬಗ್ಗೆ ತಮ್ಮ ಯೌವನದಲ್ಲಿ ಈ ಬಗ್ಗೆ ಬರೆಯಲು ಚಳವಳಿ ಮಾಡಲು ಆರಂಭಿಸಿ, ಈಗ ಮಧ್ಯವಯಸ್ಸಿಗೆ ಬಂದಿದ್ದಾರೆ. ಮಧ್ಯವಯಸ್ಕರು ಮುಪ್ಪಿಗೂ ಬಂದಿದ್ದಾರೆ. ಮುಪ್ಪಿನಲ್ಲಿದ್ದವರು ಒಮ್ಮೆ ರೈಲು ನೋಡಬೇಕೆಂದು ಆಸೆಪಟ್ಟು ಸತ್ತೇ ಹೋಗಿರಬಹುದು. ಮುಪ್ಪಿನಿಂದ ಬಸವಳಿದಿದ್ದ ನನ್ನಪ್ಪನಿಗೆ ಬೀರೂರಿನಿಂದ ಹೊರಟು ಹರಿಹರದ ಮೂಲಕ ಹೊಸಪೇಟೆಗೆ ರೈಲಿನಲ್ಲಿ ಬರುವ ಆಸೆಯಿತ್ತು. ಅವನು ಬದುಕಿರುವರೆಗೆ ಇದು ಸಾಧ್ಯವಾಗಲಿಲ್ಲ. ಪ್ರತಿವರ್ಷ ರೈಲು ಬಜೆಟ್ಟು ಬಂದಾಗ, ಹರಿಹರ ಕೊಟ್ಟೂರು ಮಾರ್ಗಕ್ಕೆ ಎಷ್ಟು ಹಣ ಒದಗಿಸಿದೆ ಎಂದು ನೋಡುವುದು, ಬೇಜಾರು ಪಟ್ಟುಕೊಳ್ಳುವುದು ಇದೇ ನಡೆದುಕೊಂಡು ಬಂದಿದೆ. ಈ ಸಲವೂ ಲಾಲೂಪ್ರಸಾದರು ಈ ಮಾರ್ಗಕ್ಕೆ ಎಷ್ಟು ಹಣ ಒದಗಿಸುತ್ತಾರೆ ಎಂದು ನೋಡುವ ಶಾಸ್ತ್ರವೊಂದು ಈ ಭಾಗದ ಜನರಿಗೆ ಉಳಿದಿದೆ ಎಂದು ಕಾಣುತ್ತದೆ. ಮುಂದಿನ ವರ್ಷ ಹರಿಹರ ಕೊಟ್ಟೂರು ರೈಲು ಮುಂದಿನ ವರ್ಷದಿಂದ ಶುರುವಾಗುತ್ತದೆ ಎಂದು ನಂಬುವುದಾದರೆ, ೬೦ಕಿಮಿ ಹಾದಿಹಾಕಲು ೧೪ ವರ್ಷ ತೆಗೆದುಕೊಂಡಂತಾಗುತ್ತದೆ. ಇದರ ನಡುವೆ ಒಂದು ಹೊಸಸುದ್ದಿ ಹುಟ್ಟಿದೆ. ಅದೇನೆಂದರೆ ಈ ಹಿಂದೆ ಹಾಕಿದ ಮಾರ್ಗವು ರೈಲು ಓಡಾಡದೆ ಹಾಳಾಗಿದೆ. ಅದನ್ನು ಮತ್ತೆ ಹೊಸದಾಗಿ ಹಾಕಬೇಕು ಎಂದು. ಬಹುಶಃ ಕೊಟ್ಟೂರು ರೈಲಿಗೆ ಇನ್ನೊಂದು ತಲೆಮಾರು ಪ್ರತೀಕ್ಷೆಗೆ ಸಿದ್ಧವಾಗಬೇಕು. □

ನೋವು



ಕರುಳ ಬಳ್ಳಿಯೊಡನೆಯೇ
ಬೆನ್ನಟ್ಟಿದ ಸಂಗಾತಿ
ಕಳಚಲೇಕೆ ದುರ್ಗತಿಯಲಿ; ನಡೆ
ನನ್ನೊಡನೆ ಕಾಡು
ಮೇಡುಗಳಲ್ಲಿ ಸ್ವಚ್ಛಂದ
ಗಾಳಿಯಲಿ!

ಯಾರನ್ನು ಬಿಟ್ಟೀಯೆ?
ಗರ್ಭದ ಕೂಸಲ್ಲವೇ ಹೆತ್ತವಳ
ಕೊನರಲ್ಲವೇ?
ಅಂತರಂಗದಲಡಗಿ
ನರನಾಡಿಗಳಲಿ ಹರಿದು
ಬೆತ್ತಲಾಗಿಸಿರುವೆ
ಆತ್ಮ ಸಾಕ್ಷಿಯನು
ನಡೆ ನನ್ನೊಡನೆ!

ಎಂದೋ ಕಾಲಗರ್ಭದಲಿ
ದೊರೆವ ಅನನ್ಯ
ಕ್ಷಣಗಳ ಹಿಂದೆ ಸುಪ್ತವಾದ
ನಿನ್ನುಸಿರು ನನ್ನ
ನಿಟ್ಟುಸಿರು; ಎದೆ ಬಡಿತದ
ಹಿಂದೆ ನಿನ್ನ ಕಲರವ
ಉಸಿರಿರುವವರೆಗೂ!

ಒಡಹುಟ್ಟಿದವರು ತೊರೆದರೂ
ತೊರೆಯಲಾರೆ ನೀ
ಸಂಗ; ಪೂರ್ವ ಜನ್ಮದ
ನಂಟೇ ಭವಿಷ್ಯತ್ತಿನ
ಗಂಟೇ? ಅರ್ಥವಾಗದು
ನಿನ್ನಂತರಂಗ!

ಸವೆದಿಹುದು ಅರೆ ಜೀವ
ನಿನ್ನೊಡನಾಟದಲಿ
ನುಂಗಿ ನಿನ್ನನು ಮುನ್ನಡೆವೆ
ನೀ ನನ್ನ
ನುಂಗುವವರೆಗೂ!
ಕಾದಿರುವೆಯಾ ನನಗಾಗಿ?

○ ನಾ ದಿವಾಕರ

ಕನ್ನಡ ಗುರುತಿನ ನೈಜ ನೆಲೆಗಳು

ಮೇಟಿ ಮಲ್ಲಿಕಾರ್ಜುನ

ಈ ಪುಸ್ತಕದ ಚರ್ಚೆಗಳು (ಇವತ್ತಿನ) ಕನ್ನಡ ಪ್ರಜ್ಞೆ ಮತ್ತು ಸಮಕಾಲೀನ ಸವಾಲುಗಳನ್ನು ಮುಖಾಮುಖಿಯಾಗಿಸುವ ಹಾಗೂ ಅನುಸಂಧಾನಗೊಳಿಸುವ ಕ್ರಮವನ್ನು ಕುರಿತಾದವುಗಳಾಗಿವೆ. ಲೇಖಕರು ಎತ್ತುವ ಪ್ರಶ್ನೆಗಳು/ತಕರಾರುಗಳು ಸರ್ವಸಮ್ಮತವಲ್ಲದಿರಬಹುದು, ಇರುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ, ಹೌದು ಎನ್ನುವುದಕ್ಕೆ ಇರಬಹುದಾದ ಸಮರ್ಥನೆಗಳು ಇಲ್ಲಾ ಎನ್ನುವುದಕ್ಕೂ ಸಾಧ್ಯ. ಹಾಗಾಗಿ, ಈ ಸಮರ್ಥನೆಗಳು ಎಷ್ಟರ ಮಟ್ಟಿಗೆ ಜನಪರವಾಗಿವೆ ಮತ್ತು ಸಮಾಜಮುಖಿಯಾಗಿವೆ ಎನ್ನುವುದರ ಆಧಾರದ ಮೇಲೆ ಈ ವಿಶ್ಲೇಷಣೆಗಳ ಮಹತ್ವ ನಿರೂಪಿತವಾಗುವುದು. ಭಾಷಾ ಸಂಕರ ಅಥವಾ ಕಲಬೆರಿಕೆಯನ್ನು ಪಾಪವೆನ್ನುವಂತೆ ನೋಡುವ ಈ ಸಂದರ್ಭದಲ್ಲಿ, ಅದೊಂದು ಸಹಜ ಭಾಷಿಕ ಕ್ರಿಯೆ ಮತ್ತು ಬೆಳವಣಿಗೆ ಎನ್ನುವುದು ಲೇಖಕರ ಅಭಿಮತ.

ಡಾ|| ಕೆ.ವಿ ನಾರಾಯಣವರು ಆಧುನಿಕ ಕನ್ನಡ ಜಗತ್ತು ಕಂಡ ವಿಶಿಷ್ಟ ಮತ್ತು ಸೂಕ್ಷ್ಮ ಚಿಂತಕ ಹಾಗೂ ಭಾಷಾಶಾಸ್ತ್ರಜ್ಞ. ಇವರು ಇತ್ತೀಚೆಗೆ ಬರೆದ 'ಕನ್ನಡ ಜಗತ್ತು: ಅರ್ಧ ಶತಮಾನ' ವನ್ನು ಓದಿದ ಮೇಲೆ ನನ್ನಲ್ಲಿ ಹುಟ್ಟಿದ ಚರ್ಚೆ, ವಾಗ್ವಾದ ಮತ್ತು ಸಮರ್ಥನೆಗಳನ್ನು ಕ್ರೋಢೀಕರಿಸಿಕೊಂಡು ಈ ಪುಸ್ತಕವನ್ನು ಕುರಿತು ಕೆಲವು ವಿಷಯಗಳನ್ನು ಚರ್ಚಿಸಲು ಪ್ರಯತ್ನಿಸಿದ್ದೇನೆ. ಕನ್ನಡ ಭಾಷೆಯನ್ನು ಕುರಿತು ಹಲವಾರು ವಾಗ್ವಾದಗಳು ನಿರಂತರವಾಗಿ ನಡೆದಿವೆ. ಈ ಸದ್ಯದ ಪರಿಸ್ಥಿತಿಯಲ್ಲಿ ಕನ್ನಡದ ಪ್ರಾಚೀನತೆ, ಪರಂಪರೆಯನ್ನು ಕೆಲವು ಛಿದ್ರ ಛಿದ್ರ ದಾಖಲೆಗಳ ಮುಖಾಂತರ ಕನ್ನಡ ಪ್ರಜ್ಞೆಯನ್ನು ಕಟ್ಟುವ ಭಾವನಾತ್ಮಕ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳು ಹುಟ್ಟು ಹಾಕುವ ಚರ್ಚೆಗಳು ಎಷ್ಟರಮಟ್ಟಿಗೆ ಕನ್ನಡದ ನಿಜದ ನೆಲೆಗಳನ್ನು ಸಮರ್ಥಿಸುತ್ತವೆ ಎನ್ನುವುದು ಪ್ರಶ್ನಾರ್ಹವಾದಂತಹ ವಾದ. ಆದರೆ, ನಾನು ಇಲ್ಲಿ ಚರ್ಚಿಸಲಿಚ್ಛಿಸುವ ವಿಷಯಗಳು ಡಾ ಕೆ ವಿ ನಾರಾಯಣವರು ಇಂತಹ ಭಾವನಾತ್ಮಕ ಪ್ರಯತ್ನಗಳನ್ನು ಹೇಗೆ ವಸ್ತುನಿಷ್ಠವಾಗಿ ವಿಶ್ಲೇಷಿಸಿದ್ದಾರೆ ಎನ್ನುವುದನ್ನು ಈ ಪುಸ್ತಕವು ಪ್ರಮುಖವಾಗಿ ನಾಲ್ಕು ಭಾಗಗಳಲ್ಲಿ ಕನ್ನಡ ಭಾಷೆಯು ಸ್ವಾತಂತ್ರ್ಯೋತ್ತರ ಐವತ್ತು ವರ್ಷಗಳಲ್ಲಿ ರೂಪುಗೊಂಡ ಬಗೆಯನ್ನು ಕುರಿತ ವಿಶ್ಲೇಷಣೆಗಳಿವೆ.

ಈ ಎಲ್ಲ ವಿಶ್ಲೇಷಣೆಗಳು ಹೆಚ್ಚಾಗಿ ಸಮಾಜ ಭಾಷಾತತ್ವಶಾಸ್ತ್ರೀಯ ನೆಲೆಯಲ್ಲಿ ಚರ್ಚಿಸಲಾಗಿದೆ. ಕನ್ನಡ ಭಾಷಾ ರಚನೆ, ಬಳಕೆ, ಪದಕೋಶ, ಭಾಷಾ ನೀತಿ, ಹೋರಾಟ, ಏಕೀಕರಣ ಮತ್ತು ಕಾಳಜಿಗಳನ್ನು ಕುರಿತ ವಿಶ್ಲೇಷಣೆಗಳಿವೆ. ಈ ವಿಶ್ಲೇಷಣೆಗಳು ಒಂದು ಭಾಷಾ ನೀತಿ, ಹೋರಾಟ, ಏಕೀಕರಣ ಮತ್ತು ಬಳಕೆಗಳ ಹಿಂದಿರುವ ಪ್ರಭಾವ, ಪ್ರೇರಣೆ, ಒತ್ತಡ ಹಾಗೂ ತಾತ್ತ್ವಿಕ ನಿಲುವುಗಳನ್ನು ಬಹಿರಂಗಪಡಿಸುವವು. ಈ ಎಲ್ಲ ಆಲೋಚನೆಗಳು / ಗ್ರಹಿಕೆಗಳು ಜನ ಸಮುದಾಯದ ಹಿತಾಶಕ್ತಿಯನ್ನು ಕಾಪಾಡುವ ಮತ್ತು ಸಾಮಾನ್ಯ ಜನಪರವಾಗಿ ರೂಪಗೊಂಡ ನಿಲುವುಗಳಾಗಿವೆ. ಉದಾ: ಒಂದು ಭಾಷಾ ನೀತಿ ಅಥವಾ ಯೋಜನೆಯಿಂದ ಜನರಿಗೆ ಆಗುವ ಲಾಭ-ನಷ್ಟಗಳನ್ನು ಪ್ರತಿಶತದಲ್ಲಿ ಅರ್ಥೈಸುವ ಇವತ್ತಿನ ಸಂಶೋಧನೆಗಳಿಗಿಂತ ತೀರಾ ಭಿನ್ನವಾದಂತಹ ತಾತ್ತ್ವಿಕ ನಿಲುವುಗಳಿಂದ ಕೂಡಿರುವವು.

ಆದ್ದರಿಂದ, ಇವರ ಈ ವಿಶ್ಲೇಷಣೆಗಳು ಒಂದು ಭಾಷಾ ಯೋಜನೆ / ನೀತಿ ಹಿಂದಿರುವ ಸಾಂಸ್ಕೃತಿಕ-ರಾಜಕೀಯ ಬಿಕ್ಕಟ್ಟುಗಳನ್ನು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವವು. ಹಾಗೇನೆ ಅವುಗಳ ಹಿಂದಿರುವ ಯಜಮಾನ್ಯಿಕೆ ಮತ್ತು ಸಾಂಸ್ಕೃತಿಕ ಹುನ್ನಾರವನ್ನು ಸ್ಪಷ್ಟವಾಗಿ ಪ್ರಕಟಿಸುವವು.

ಈ ಪುಸ್ತಕದ ಚರ್ಚೆಗಳು (ಇವತ್ತಿನ) ಕನ್ನಡ ಪ್ರಜ್ಞೆ ಮತ್ತು ಸಮಕಾಲೀನ ಸವಾಲುಗಳನ್ನು ಮುಖಾಮುಖಿಯಾಗಿಸುವ ಹಾಗೂ ಅನುಸಂಧಾನಗೊಳಿಸುವ ಕ್ರಮವನ್ನು ಕುರಿತಾದವುಗಳಾಗಿವೆ. ಇವರು ಎತ್ತುವ ಪ್ರಶ್ನೆಗಳು/ತಕರಾರುಗಳು ಸರ್ವಸಮ್ಮತವಲ್ಲದಿರಬಹುದು, ಇರುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ, ಹೌದು ಎನ್ನುವುದಕ್ಕೆ ಇರಬಹುದಾದ ಸಮರ್ಥನೆಗಳು ಇಲ್ಲಾ ಎನ್ನುವುದಕ್ಕೂ ಸಾಧ್ಯ. ಹಾಗಾಗಿ, ಈ ಸಮರ್ಥನೆಗಳು ಎಷ್ಟರ ಮಟ್ಟಿಗೆ ಜನಪರವಾಗಿವೆ ಮತ್ತು ಸಮಾಜಮುಖಿಯಾಗಿವೆ ಎನ್ನುವುದರ ಆಧಾರದ ಮೇಲೆ ಈ ವಿಶ್ಲೇಷಣೆಗಳ ಮಹತ್ವ ನಿರೂಪಿತವಾಗುವುದು. ಉದಾ: ಭಾಷಾ ಸಂಕರ ಅಥವಾ ಕಲಬೆರಿಕೆಯನ್ನು ಪಾಪವೆನ್ನುವಂತೆ ನೋಡುವ ಈ ಸಂದರ್ಭದಲ್ಲಿ, ಅದೊಂದು ಸಹಜ ಅಥವಾ ಸ್ವಾಭಾವಿಕ ಭಾಷಿಕ ಕ್ರಿಯೆ ಮತ್ತು ಬೆಳವಣಿಗೆ ಎನ್ನುವುದು ಇವರ ಅಭಿಮತ.

ಆಧುನಿಕತೆಯ ಪ್ರಭಾವದಿಂದ ನಡೆಯುವ ಭಾಷಿಕ ವಾಗ್ವಾದಗಳು ಹಾಗೂ ಅವುಗಳಿಂದ ದೇಶಿ ಭಾಷೆಯಲ್ಲಿ ಸಂಭವಿಸುವ ಸ್ಥಿತ್ಯಂತರ ಅಥವಾ ಪಲ್ಲಟಗಳು ಪರಿಣಾಮಕಾರಿಯಾಗಿವೆ. ಯಾಕೆಂದರೆ, ಗ್ರಹಿಕೆಯ ಪದಕೋಶವು ಬೆಳೆಯುವುದು ಕನ್ನಡ ಪದಗಳಿಂದಲ್ಲ, ಅದು ಬೇರೆ ಭಾಷೆಯ ಪದಗಳಿಂದ (೧೮೩) ಎನ್ನುವದು ಮುಖ್ಯವಾಗಿ ಗಮನಿಸಬೇಕು. ಗ್ರಹಿಕೆಯ ಮತ್ತು ಬಳಕೆಯ ಪದಕೋಶಗಳ ನಡುವೆ ನಡೆಯುವ ಮುಖಾಮುಖಿ ಮತ್ತು ತಾಕಲಾಟಕ್ಕೆ ಬದಲಾಗುತ್ತಿರುವ ಸಮಾಜವೇ ಕಾರಣ ಎನ್ನುವುದು ಮಹತ್ವದ ವಾದವಾಗುವುದು. ಕನ್ನಡ ಪದಕೋಶದಲ್ಲಿರುವ ಮತ್ತೊಂದು ಸಮಸ್ಯೆ ಕಡೆಗೆ ನಮ್ಮ ಗಮನವನ್ನು ಸೆಳೆಯುವರು. ಅದೆಂದರೆ, ಒಂದು ಭಾಷೆಯಲ್ಲಿರಬಹುದಾದ ರೂಪ ವೈವಿಧ್ಯತೆ ಮತ್ತು ಕಾಗುಣಿತದ ಪರ್ಯಾಯಗಳು (ಉದಾ: ನಿನ್ನೆ-ನೆನ್ನೆ ಮತ್ತು ಕತೆ-ಕಥೆ) ಸಂವಹನಕ್ಕೆ ಅಡ್ಡಿಯಾಗುತ್ತವೆ. ಅಂತಹ ಎರಡು ವಲಯಗಳು ತಂತ್ರಜ್ಞಾನ ಮತ್ತು ಭಾಷಾ ಕಲಿಕೆ. ಇಲ್ಲಿ ಸ್ಪಷ್ಟವಾಗಿ ಗುರುತಿಸಬೇಕಾದ ಅಂಶವೆನಂದರೆ, ಒಂದು ಭಾಷೆ ಹೇಗೆ ತನ್ನಲ್ಲಿಯೇ ಹಲವಾರು ವೈರುಧ್ಯಗಳನ್ನು ಅಂತರ್ಗತ ಮಾಡಿಕೊಂಡಿರುತ್ತದೆ ಎನ್ನುವುದನ್ನು. ಯಾಕೆಂದರೆ, ಭಾಷೆ-ಉಪಭಾಷೆಯ ವೈವಿಧ್ಯತೆ/ಭಿನ್ನತೆಯನ್ನು ಕುರಿತು ಮಾತನಾಡುವಾಗ ಅವುಗಳ ಮಹತ್ವವನ್ನು ಹೆಚ್ಚಿಸುವ ಆಲೋಚನೆಗಳು ಇಲ್ಲಿ ಭಾಷಾ ತೊಡಕು/ಗೊಂದಲಗಳಾಗಿ ಪರಿಣಮಿಸುತ್ತವೆ.

ಈ ತೊಡಕು/ಗೊಂದಲಗಳ ನಿರ್ವಹಣೆಗೆ ಇವರು ಸೂಚಿಸುವ ಉಪಾಯಗಳೆನೆಂದರೆ, ಈ ರೂಪ ವೈವಿಧ್ಯತೆ ಮತ್ತು ಕಾಗುಣಿತದ ಪರ್ಯಾಯಗಳಲ್ಲಿ ಒಂದನ್ನು ಸಾಧುರೂಪವೆಂದು ಒಪ್ಪಿಕೊಂಡು ಮಿಕ್ಕೆಲ್ಲವನ್ನು ವಿಕಲ್ಪಗಳೆಂದು ಪರಿಗಣಿಸಬೇಕು. ಈ ವಾದ ಸರಿ ಎಂದು ತೋರಿದರೂ ಇಲ್ಲಿ ಮತ್ತೆ ಸಾಮಾಜಿಕ ಅಸಮಾನತೆಗೆ ಅವಕಾಶ ಕಲ್ಪಿಸಿಕೊಡುವ ಸಾಧ್ಯತೆ ಇರುವುದು. ಹಾಗೂ ಒಂದು ವರ್ಗದ ಭಾಷಾ ರೂಪಗಳು ಸಾಧುರೂಪಗಳೆಂದು ಪರಿಗಣಿಸಿ ತಮ್ಮತನವನ್ನು ಮೆರೆಯುವ ಸಾಧ್ಯತೆ ಇರುವುದು. ವ್ಯತಿರಿಕ್ತವಾಗಿ ಕನ್ನಡ ಭಾಷೆಯ ಮಾತು ಮತ್ತು ಬರಹಗಳ ಮಧ್ಯ ಒಂದು ಸಂಘರ್ಷವನ್ನು ಅನುಭವಿಸುತ್ತದೆ. ಅಂದರೆ, ಕನ್ನಡದ ಹಲವಾರು

ಪುಸ್ತಕ ಅವಲೋಕನ



ಕನ್ನಡ ಜಗತ್ತು ಅರ್ಧಶತಮಾನ
ಲೇ: ಕೆ.ವಿ. ನಾರಾಯಣ
ಬೆಲೆ: ರೂ. ೧೨೦/-
ಪ್ರಕಾಶಕರು: ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ ಕನ್ನಡ ವಿ.ವಿ. ಹಂಪಿ.

ಪ್ರಭೇದಗಳು ಬಳಕೆಯಲ್ಲಿವೆ. ಆದರೆ ಅವುಗಳು ಕೇವಲ ಕೇಳವ ನೆಲೆಯಲ್ಲಿ ಮಾತ್ರ ಬಳಕೆಯಲ್ಲಿವೆ ಎನ್ನುವುದು ನಿಜವಾದರೂ ಕಣ್ಣೋದಿನ ಹಾಗೂ ಕಿವಿ ಓದಿನ ಬಳಕೆಯಲ್ಲಿ ಎದುರಿಸಬೇಕಾಗಿಲ್ಲ. ಈ ಸಂಘರ್ಷದಂತೆ ಮಾತು ವೈವಿಧ್ಯಗಳಿಂದ ಕೂಡಿರುವುದು, ವೈವಿಧ್ಯ ಅದರ ಜೀವಾಳವಾಗಿರುವಂತೆ ಅದರ ಮಿತಿಯೂ ಹೌದು. ಏಕೆಂದರೆ ವೈವಿಧ್ಯವು ತನಗೆ ತಾನೆ ಆಕರ್ಷಕವಾದ ವಿಷಯ (೨೦೭). ಸಿನಿಮಾ ಮತ್ತು ನಾಟಕ ಮಾಧ್ಯಮಗಳಲ್ಲಿ ಪ್ರಭೇದಗಳ ಬಳಕೆ ಯಾವುದೆ ಅಧಿಕೃತತೆಯನ್ನು ಒದಗಿಸಿಕೊಡಲಾರದು ಯಾಕೆಂದರೆ ಅದು ಕೇವಲ ಮಧ್ಯವರ್ತಿಯಾಗಿ ಬಳಕೆಯಾಗುವುದೆ ಹೊರತು ಅಂತಿಮ ಗುರಿಯಾಗಲಾರದು. ಕಾರಣ ಚಲನಚಿತ್ರವನ್ನು ಯಾರು ಒಂದು ಗ್ರಂಥವನ್ನಾಗಿ ಓದಲಾರರು (ಅದೇ ೨೦೭). ಆದರೆ ರೇಡಿಯೋದಂತಹ ಮಾಧ್ಯಮಗಳು ಲಿಖಿತ ರೂಪಗಳನ್ನು ಮೌಖಿಕವಾಗಿ ಪರಿವರ್ತಿಸಿಕೊಂಡು ಸಾಮಾಜಿಕ ಸ್ಥಾನವನ್ನು ಗಳಿಸಿಕೊಂಡು, ಕಳಕೊಂಡು ಈಗ ಮತ್ತೆ ಪಡೆದುಕೊಳ್ಳುವ ನೆಲೆಯಲ್ಲಿದೆ.

ನುಡಿ ಬೆರಕೆಯಂತಹ ಪ್ರಕ್ರಿಯೆಯನ್ನು ಕುರಿತು ಯೋಚಿಸುವಾಗ ಹಲವಾರು ವೈರುಧ್ಯಗಳನ್ನು ಕಾಣಬಹುದು. ನುಡಿ ಬೆರಕೆ ಮತ್ತು ಮಿಶ್ರಣಕ್ಕೆ ಮುಖ್ಯ ಪ್ರೇರಣೆ ಮತ್ತು ಕಾರಣಗಳು ಯಾವುದೆ ಒಂದು ಭಾಷೆಯಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ಬಳಸುವ ಜನ ಮತ್ತು ಸಾಮಾಜಿಕ-ಸಾಂಸ್ಕೃತಿಕ ನೆಲೆಗಳೇ ಕಾರಣ ಎನ್ನುವುದು ಗಂಭೀರವಾಗಿ ಪರಿಗಣಿಸಬೇಕಾದ ವಾದ. ಕನ್ನಡ ಭಾಷೆ ತನ್ನ ಬರವಣಿಗೆಯ ಚಹರೆಯನ್ನು ಕಾಯ್ದುಕೊಳ್ಳಲು ಮಾಡಿದ ಯತ್ನ ಈಗ ಪರೋಕ್ಷವಾಗಿ ಒಂದು ತೊಡಕಾಗಿದೆ ಅಂದರೆ ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಪಡೆದುಕೊಂಡಾಗ ಅವುಗಳನ್ನು ಉಚ್ಚರಿಸುವ ರೀತಿಯಲ್ಲಿ ಸಹಜವಾಗಿಯೇ ಹಲವಾರು ಬದಲಾಣೆಗಳಾದವು ಉದಾ: 'ಅ'ಕಾರಂತವು 'ಎ'ಕಾರಂತವು, 'ಲ' ಧ್ವನಿ'ಳ' ಧ್ವನಿಯಾಗಿ ಪರಿವರ್ತಿಸಿದ್ದು, ವಿಜಾತಿ ದ್ವಿತ್ವಗಳ ನಡುವೆ 'ಉ'ಕಾರವನ್ನು ಸ್ವರಭಕ್ತಿ ಮಾಡಿದ್ದು ಮುಂತಾದವು. ಹಾಗೂ ಪ್ರಾಕೃತದ ಮಾದರಿಯಲ್ಲಿ ತದ್ಭವಗಳನ್ನು ಮಾಡಿಕೊಂಡಿದ್ದು ಹೀಗೆ, ಮಾಡಿಕೊಂಡ ಬದಲಾಣೆಗಳನ್ನು ಬರಹದ ಭಾಷೆಗೆ ರವಾನಿಸಲು ಕನ್ನಡಿಗರು ಹಿಂಜರಿದಂತೆ ತೋರುತ್ತದೆ (೨೧೦). ಅದಕ್ಕಾಗಿ ಕನ್ನಡ ಲಿಪಿ ವ್ಯವಸ್ಥೆಯಲ್ಲಿಯೇ ಬದಲಾಣೆ ಮಾಡಿಕೊಂಡರು. ಪರಿಣಾಮವಾಗಿ ಸಂಸ್ಕೃತ ಪದಗಳ ಮೂಲ ಉಚ್ಚಾರನೆಯನ್ನು ಕನ್ನಡ ಬರವಣಿಗೆಯಲ್ಲಿ ದಾಖಲಿಸಲು ಸಾಧ್ಯವಾಯಿತು. ಕನ್ನಡ ಭಾಷೆ ಸಂಸ್ಕೃತದ ದೂರತ್ವವನ್ನು ಕಡಿಮೆ ಮಾಡಲು ಬಳಸಿದ ತಂತ್ರ ಕನ್ನಡಕ್ಕೆ ಅಡ್ಡಿಯಾಯಿತು (ಅದೇ ೨೧೦). ಈ ಕಾರಣಗಳಿಂದ ಕನ್ನಡ ಭಾಷೆಯಲ್ಲಿ ಮಾತು ಮತ್ತು ಬರಹದ ಮಧ್ಯ ಅಗಾಧ ವ್ಯತ್ಯಾಸ ಉಂಟಾಗಿದ್ದ ಕಾರಣ ಓದುವ ವರ್ಗ ಕಡಿಮೆಯಾಗಿರಬಹುದು ಎನ್ನುವುದು ಇವರ ವಾದ. ತದ್ಭವಗಳು ಹೇಗೆ ಒಂದು ಭಾಷೆಗೆ ಅಂತರ್ಮುಖಿಯಾಗುವ ಶಕ್ತಿಯನ್ನು ಒದಗಿಸಿ ಕೊಡುತ್ತದೆ ಎನ್ನುವುದು ಮುಖ್ಯವೆನಿಸುವುದು. ಯಾಕೆಂದರೆ, ಭಾಷಾ ಸ್ವೀಕರಣ ಸೃಷ್ಟಿಸುವ ಮಡಿವಂತಿಕೆ ಮಾತು-ಬರಹಗಳ ಮಧ್ಯ ಒಂದು ಅಗಾಧವಾದ ಕಂದರವನ್ನು ಸೃಷ್ಟಿಸುವುದು (೧೯೫). ಈ ತದ್ಭವ ಪ್ರಕ್ರಿಯೆ ಪಾರಂಪರಿಕವಾಗಿ ನಮ್ಮ ಭಾಷೆಯಲ್ಲಿ ಅಂತರ್ಗತವಾಗಿದೆ.

ಕನ್ನಡ ಭಾಷೆ ಸಂಸ್ಕೃತದ ದೂರತ್ವವನ್ನು ಕಡಿಮೆ ಮಾಡಲು ಬಳಸಿದ ತಂತ್ರ ಕನ್ನಡಕ್ಕೆ ಅಡ್ಡಿಯಾಯಿತು (ಅದೇ ೨೧೦). ಈ ಕಾರಣಗಳಿಂದ ಕನ್ನಡ ಭಾಷೆಯಲ್ಲಿ ಮಾತು ಮತ್ತು ಬರಹದ ಮಧ್ಯ ಅಗಾಧ ವ್ಯತ್ಯಾಸ ಉಂಟಾಗಿದ್ದ ಕಾರಣ ಓದುವ ವರ್ಗ ಕಡಿಮೆಯಾಗಿರಬಹುದು ಎನ್ನುವುದು ಇವರ ವಾದ. ತದ್ಭವಗಳು ಹೇಗೆ ಒಂದು ಭಾಷೆಗೆ ಅಂತರ್ಮುಖಿಯಾಗುವ ಶಕ್ತಿಯನ್ನು ಒದಗಿಸಿ ಕೊಡುತ್ತದೆ ಎನ್ನುವುದು ಮುಖ್ಯವೆನಿಸುವುದು. ಯಾಕೆಂದರೆ, ಭಾಷಾ ಸ್ವೀಕರಣ ಸೃಷ್ಟಿಸುವ ಮಡಿವಂತಿಕೆ ಮಾತು-ಬರಹಗಳ ಮಧ್ಯ ಒಂದು ಅಗಾಧವಾದ ಕಂದರವನ್ನು ಸೃಷ್ಟಿಸುವುದು (೧೯೫).

ಇದಕ್ಕೆ ಉದಾಹರಣೆಯಾಗಿ ನಮ್ಮ ಸಾಹಿತ್ಯ ಚರಿತ್ರೆಯನ್ನು ಪರಿಶೀಲಿಸಬಹುದು. ಇದು ಅತ್ಯಂತ ಸಹಜವಾಗಿ ನಡೆಯುವ ಭಾಷಿಕ ಕ್ರಿಯೆ. ಆದರೆ ಮಾತು ಮತ್ತು ಬರಹದ ಮಧ್ಯ ಇರುವ ಈ ಅಂತರ ತಾರತಮ್ಯವನ್ನು ಸೃಷ್ಟಿಸುವುದು. ಅಂದರೆ ಬರಹ ಉತ್ತಮ ಮಾತು ಅಧಮವೆಂದು ಪರಿಗಣಿಸುವುದು. ಈ ಉತ್ತಮಿಕೆಯ ವ್ಯಸನ ಒಟ್ಟು ಭಾಷಾ ಬೆಳವಣಿಗೆಯ ದೃಷ್ಟಿಯಿಂದ ಅಪಾಯಕಾರಿ ಎನ್ನುವುದು ಸ್ಪಷ್ಟ. ಇಂದು ಬರಹ ಮಾತಿಗಿಂತ ಶ್ರೇಷ್ಠ ಎನ್ನುವ ಸಾಂಸ್ಕೃತಿಕ ಸಿಂಧುತ್ವವನ್ನು ಪಡೆದುಕೊಂಡಿದೆ ಎನ್ನುವ ಈ ಸಾಂಸ್ಕೃತಿಕ ಪಲ್ಲಟ ಇವತ್ತಿನ ರಾಜಕೀಯ ಬಿಕ್ಕಟ್ಟಿಗೆ ಹಿಡಿದ ಕನ್ನಡಿಯಾಗಿದೆ. ಈ ಎಲ್ಲ ಭಾಷಿಕ-ಸಾಂಸ್ಕೃತಿಕ ಸ್ಥಿತ್ಯಂತರ ಮಧ್ಯೆಯೂ ಭಾಷಾ ಪ್ರಭೇದಗಳನ್ನು ಮರುಸ್ಥಾಪಿಸುವ ಹಂಬಲ ಒಂದು ಸಮುದಾಯದ ಚಹರೆಯನ್ನಾಗಿಸುವ ಸಾಂಸ್ಕೃತಿಕ ಕುರುಹುವಾಗಿ ಬಿಂಬಿತವಾಯಿತು. ಇಂತಹ ಸಾಂಸ್ಕೃತಿಕ ಸ್ಮೃತಿ ಹಾಗೂ ಆಶಯಗಳನ್ನು ಎತ್ತಿಹಿಡಿಯುವ ಹಂಬಲದಿಂದಲೇ ಭಾಷಾ ಪ್ರಭೇದಗಳು ಸಾಹಿತ್ಯ ನಿರೂಪಣೆಯ ಮಾಧ್ಯಮಗಳಾಗಿ ಬಳಕೆಯಾಗಿವೆ. ಇದಕ್ಕೆ ಕಾರಣ ಉಪಭಾಷೆಗಳ ನಿರಾಕರಣೆ ಭಾಷಾ ನೀತಿಯ ಒಂದು ಮುಖ್ಯ ನೆಲೆಯಾದದ್ದು, ಆದ್ದರಿಂದ ಎಂಟನೆಯ ದಶಕದಿಂದೀಚೆಗೆ ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. (೩೧೪) ಪರಿಣಾಮವಾಗಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಈ ಪ್ರಯತ್ನ ಪ್ರಕಟವಾಗಿರುವುದು. ಆದರೆ ಯಾವುದೆ ಒಂದು ಕನ್ನಡದ ಉಪಭಾಷೆಯ ನಿರೂಪಣೆ ಇದೇ ಭಾಷೆಯ ಇತರ ಭಾಷಿಕರಿಗೆ ಸಂವಹನ ಆಗುವುದಿಲ್ಲ ಎಂಬ ಪರಿಸ್ಥಿತಿಯೇ ಒಂದು ವಿಪರ್ಯಾಸ (೩೧೪).

ಶಿಕ್ಷಣ ಮಾಧ್ಯಮ ಮತ್ತು ತ್ರಿಭಾಷಾ ಸೂತ್ರಗಳಂತಹ ನಿಲುವುಗಳು ಉಂಟುಮಾಡುವ ಗೊಂದಲಗಳು ಮತ್ತು ಬಹುಭಾಷಿಕ ಸಂದರ್ಭದಲ್ಲಿ ಯಾವುದೆ ಒಂದು ಭಾಷೆ ಮಹತ್ವ ಪಡೆದುಕೊಳ್ಳುವ ಬಗೆ ಎಂತಹ ಭಾಷಿಕ-ಸಾಮಾಜಿಕ ಅಪಾಯವನ್ನುಂಟುಮಾಡುವುದು ಎನ್ನುವ ವಿಶ್ಲೇಷಣೆಗಳು ಬಹಳ ಸೂಕ್ಷ್ಮ ಹೊಳವುಗಳನ್ನು ಒದಗಿಸುವವು. ಅಂದರೆ, ಭಾಷಾ ನೀತಿಯ ಹಿಂದೆ ಒಂದು ತರ್ಕ ಕೆಲಸ ಮಾಡುವಂತಿದೆ. (೬೪) ನಮ್ಮ ಸಾಮಾಜಿಕ ವಿನ್ಯಾಸಗಳು ಹುಟ್ಟು ಹಾಕುವ ಭಾಷಿಕ ಸವಾಲುಗಳು ಅವಕಾಶಗಳ ಸಮಾನತೆಯ ಪ್ರಾಯೋಗಿಕ ನೆಲೆಯಲ್ಲಿ ಸೋಲುವಂತೆ ಮಾಡಲು ತಾರತಮ್ಯದ ನೆಲೆಗಳನ್ನು ರೂಢಿಸಲಾಗುತ್ತದೆ. ಇವುಗಳು ಯಶಸ್ವಿಯಾಗದಂತೆ ಒಳಗಿನ ಒಂದು ತಾರತಮ್ಯವನ್ನು ಸೃಷ್ಟಿಸಬೇಕಾಗುತ್ತದೆ. ಇಲ್ಲಿಯೇ ಇಂಗ್ಲಿಶ್ ಭಾಷಾ ಮಾಧ್ಯಮದ ಪ್ರವೇಶವಾಗುತ್ತದೆ (೭೧). ಕನ್ನಡ ಮತ್ತು ಇಂಗ್ಲಿಶ್ ಎಂಬ ಎರಡು ಆಯ್ಕೆಗಳನ್ನು ಸೃಷ್ಟಿಸಿ ಕನ್ನಡದ ಆಯ್ಕೆಯ ಯತಾಸ್ಥಿತಿಯ ಮುಂದುವರಿಕೆಗೂ ಇಂಗ್ಲಿಶ್ ಆಯ್ಕೆಯ ಸಾಮಾಜಿಕ ಚಲನಶೀಲತೆಗೆ ನೀಡಿದ ಅವಕಾಶ ಎಂದು ತೋರತೊಡಗಿದ ಕೂಡಲೆ ಒಂದು ಅಂತಸ್ಥ ತಾರತಮ್ಯ ರೂಢಿಸಿಕೊಳ್ಳುವಂತಾಯಿತು. ಸಹಜವಾಗಿಯೇ ಇಂತಹ ಪರಿಸ್ಥಿತಿಯಲ್ಲಿ ಜನರು ಚಲನಶೀಲತೆ ಮತ್ತು ಬದಲಾಣೆಗಳ ಪರವಾಗಿರುತ್ತಾರೆ (೭೧-೭೨). ಇಂತಹ ಬದಲಾವಣೆಗಳು ಬಯಕೆಯ ನೆಲೆಗಳನ್ನು ಉದ್ಧಿಪಿಸುವುದಲ್ಲದೆ, ಕನ್ನಡದಂತಹ ಭಾಷಾ ಮಾಧ್ಯಮಗಳು ಅಲಕ್ಷ್ಯಕ್ಕೆ ಒಳಗಾಗುತ್ತವೆ.

ಇನ್ನೂ ಕುತೂಹಲದ ವಿಷಯವೆನೆಂದರೆ, ಕರ್ನಾಟಕದಂತಹ ಬಹುಭಾಷಿಕ ಸಂದರ್ಭದಲ್ಲಿ ಕನ್ನಡ-ಇಂಗ್ಲಿಶ್ ಭಾಷೆಗಳ ಆಯ್ಕೆಯ ಸಂದರ್ಭದಲ್ಲಿ ಮತ್ತು ಅವುಗಳು ಪಡೆದುಕೊಳ್ಳುವ ಶೈಕ್ಷಣಿಕ-ಸಾಮಾಜಿಕ ಮಹತ್ವವು ಉರ್ದು, ಕೊಂಕಣಿ, ಕೊಡಗು, ತುಳು ಮುಂತಾದ ಭಾಷೆಗಳು ಸಮಸ್ಯೆಯಲ್ಲಿ ಸಿಲುಕಿಕೊಳ್ಳುವವು. ಆದ್ದರಿಂದ, ಭಾಷಾ ನೀತಿ ಎನ್ನುವದು ಕೇವಲ ಸಾಂಸ್ಥಿಕ ಪರಿಕಲ್ಪನೆಯಾಗಿರದೆ ಸಾಮಾಜಿಕರಣಗೊಂಡರೆ ಬಹುಭಾಷಿಕತೆಯನ್ನು ನಿರ್ವಹಿಸುವುದು ಸಾಧ್ಯವಾಗಬಹುದು ಎನ್ನುವುದು ಸ್ಪಷ್ಟ. ಈ ವಿಶ್ಲೇಷಣೆಗಳ ಪ್ರಕಾರ ಕಳೆದ ಐದು ದಶಕಗಳಿಂದ ಕನ್ನಡ ತನ್ನ ಅಧಿಕೃತತೆಯನ್ನು ಸ್ಥಾಪಿಸಲು ಯತ್ನಿಸಿದೆ ಹಾಗೂ ದ್ವಿಭಾಷಿಕತೆಯಲ್ಲಿ ಸಮಾನಸ್ಕಂದತೆಯನ್ನು ರೂಢಿಸಲು ಪ್ರಯತ್ನಗಳು ನಡದಿವೆ (೯೯) ಎನ್ನುವುದು ಗ್ರಹಿತವಾಗುವುದು. ವ್ಯತಿರಿಕ್ತವಾಗಿ ದ್ವಿಭಾಷಿಕ ಸಮುದಾಯಗಳು ತಂತಮ್ಮ ಸಾಮಾಜಿಕ ಉನ್ನತಿಗಾಗಿ ರಾಜ್ಯಾಂಗದ ಸವಲತ್ತುಗಳ ಹಿನ್ನಲೆಯಲ್ಲಿ ಕನ್ನಡವನ್ನು ಔಪಚಾರಿಕ ನೆಲೆಯಲ್ಲಿ ಬಳಸಿ ದಾಟುವ ತಂತ್ರವನ್ನು ಅನುಸರಿಸುತ್ತಿದ್ದಾರೆ. ಅಂದರೆ ಕನ್ನಡವನ್ನು ಕ್ರಿಯಾತ್ಮಕ ನೆಲೆಯಲ್ಲಿ ಬಳಸುತ್ತಿಲ್ಲ, ಬದಲಾಗಿ ಅವರು ಇಂಗ್ಲಿಶ್ ಭಾಷೆಯ ಕಡೆಗೆ ಒಲುಮೆಯನ್ನು. ತೋರಿಸುತಿದ್ದಾರೆ. ಇದು ಬಹುಮಟ್ಟಿಗೆ ಕನ್ನಡಿಗರ ವಿನ್ಯಾಸವೂ ಆಗಿದೆ. ಹಾಗಾಗಿ ಈ ಮಟ್ಟಿಗೆ ಅನ್ಯ ಭಾಷಿಕರನ್ನು ಟೀಕಿಸಲು ಅವಕಾಶಗಳಿಲ್ಲ (೧೦೦). ಬಹುಭಾಷಿಕ ಸಂದರ್ಭದ ಭಾಷಾ ನೀತಿಯು ಸೃಷ್ಟಿಸುವ ಗೊಂದಲಗಳ ಪರಿಣಾಮ ದೇಶಿ ಭಾಷೆಗಳಿಕ್ಕಿಂತ ಇಂಗ್ಲಿಷ್ ಭಾಷೆಯನ್ನು ಎಲ್ಲಾ ನೆಲೆಗಳಲ್ಲಿ ಅವಲಂಬಿಸುವ ಕ್ರಮದ ಫಲವಾಗಿ ಇಂಗ್ಲಿಷ್ ಮನ್ನಣೆ ಪಡೆಯುತ್ತದೆ. ಈ ಪ್ರಕ್ರಿಯೆಯು ಕನ್ನಡದ ಆತಂಕಗಳಾಗಿ ತೋರುವದು.

ಡಾ. ಕೆ. ವಿ. ನಾರಾಯಣವರು ಇಂತಹ ಹಲವಾರು ವೈರುಧ್ಯಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅಂದರೆ ಇತರ ಭಾಷೆಗಳ ಜೊತೆಗಿನ ಸಂಬಂಧವನ್ನು ಅರ್ಥೈಸಿಕೊಳ್ಳುವ ಸಂದರ್ಭದಲ್ಲಿ ಭಾಷಾ ಆಯ್ಕೆಯ ವಿನ್ಯಾಸ ಹೇಗಿರುತ್ತದೆ ಎನ್ನುವುದು ಬಹಳ ಪ್ರಮುಖವಾದ

ವೈಚಾರಿಕ ಶೂನ್ಯ
ತುಂಬುತ್ತಿರುವ ಸಂವಾದ ಕ್ಕೆ

ತುಂಬು ಹೃದಯದ
ಶುಭ ಹಾರೈಕೆಗಳು

ಶ್ರೀ ವೈ.ಜಿ. ಪಟ್ಟಸ್ವಾಮಿ, ಗುತ್ತಿಗೆದಾರರು
ಕೆ.ಆರ್.ಎಸ್.

ಆರಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ವೆಂಕಟೇಶ್‌ಗೌಡ,
ಗುತ್ತಿಗೆದಾರರು, ಕೆ.ಆರ್.ಎಸ್

ಒಳನೋಟಗಳನ್ನು ಬಹಿರಂಗಪಡಿಸುವುದು ಹಾಗೂ ಹೇಗೆ ಕನ್ನಡ ಭಾಷೆ ಒಂದು ದ್ವೀಪವಾಗುವ ಅಪಾಯವನ್ನು ತಂದುಕೊಳ್ಳುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ಇಂತಹ ವೈರುಧ್ಯಗಳನ್ನು ಬಗೆಹರಿಸುವ ಮಾನದಂಡಗಳನ್ನು ರೂಪಿಸುವ ಕ್ರಮ ಮತ್ತೆ ಭಾಷಿಕ ಯಜಮಾನ್ಯಿಕೆಯನ್ನು ಹುಟ್ಟು ಹಾಕುವುದು ಎನ್ನುವುದು ಪ್ರಮುಖ ವಿಷಯ.

ಒಂದು ಭಾಷೆಯನ್ನು ಪರಿಣಾಮಕಾರಿಯಾಗಿ ಬೋಧಿಸುವ/ಕಲಿಯುವ ಪ್ರಕ್ರಿಯೆಯಲ್ಲಿ ಉಂಟಾಗುವ ಏರುಪೇರುಗಳಿಗೆ ಪಠ್ಯಕ್ರಮ ಮತ್ತು ಶಿಕ್ಷಣಕ್ರಮಗಳೆ ಜವಾಬ್ದಾರಿ ಎನ್ನುವುದು ಸ್ಪಷ್ಟ. ಉದಾ: ಬರೆಯುವ ಮತ್ತು ಓದುವ ಕೌಶಲಗಳು ಕ್ರಿಯಾಶೀಲವಾಗಿ ಮಾತನಾಡುವ ಮತ್ತು ಆಲಿಸುವ ಕ್ರಿಯೆಗಳು ಪರಿಣಾಮಕಾರಿಯಾಗುವುದಿಲ್ಲ. ಇವುಗಳಿಗೆ ಮುಖ್ಯ ಕಾರಣ ಭಾಷಾ ನೀತಿ, ಶಿಕ್ಷಣ ಕ್ರಮ ಮತ್ತು ಪಠ್ಯಕ್ರಮಗಳಾಗಿವೆ. ಮಕ್ಕಳು ತಮ್ಮದಲ್ಲದ ಭಾಷಾ ಮಾಧ್ಯಮದಿಂದ ಶಿಕ್ಷಣ ಪಡೆದರೆ ಅವರು ಅನುಭವಿಸುವ ಶೈಕ್ಷಣಿಕ ತೊಂದರೆ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳು ಏನು ಎಂಬುದನ್ನು ಬಹಳ ಸೂಕ್ಷ್ಮವಾಗಿ ಅನಾವರಣಗೊಳಿಸುವರು.

ಹಾಗಾಗಿ ಶೈಕ್ಷಣಿಕ ತತ್ವ-ಜೀವನ ಮಾರ್ಗಗಳಿಗಿರುವ ಪರಸ್ಪರ ಸಂಬಂಧಕ್ಕೆ ಅನುಸರಿಸಿ ಭಾಷಾ ಮಾಧ್ಯಮದ ಆಯ್ಕೆಯನ್ನು ಮಾಡಿಕೊಳ್ಳಬೇಕು ಎನ್ನುವುದು ಗಮನಾರ್ಹವಾದ ವಾದ. ಆದರೆ ಶಿಕ್ಷಣ ಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆ ಮುಂದುವರಿಕೆಗೂ ನೇರವಾದ ಸಂಬಂಧ ಇದ್ದಿರಲಾರದು (೫೪). ಎನ್ನುವ ಅಂಶ ಮೇಲಿನ ವಾದವನ್ನು ಪುಷ್ಟೀರಿಸದೆ ಸರಳಗೊಳಿಸುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಪರಿಣಾಮವಾಗಿ, ಒಂದು ಮಗು ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಒಟ್ಟು ಅನುಭವಿಸಬೇಕಾದ ತೊಂದರೆ, ಮಾನಸಿಕ ಗೊಂದಲಗಳ ವಿಶ್ಲೇಷಣೆಗಳು ಇವತ್ತಿನ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಮಾನದಂಡಗಳಾಗಬಹುದು ಎನ್ನುವುದು ಮುಖ್ಯ. ಇದು ಒಂದು ಮಗುವಿನ ಸಹಜ ಸಂವಹನ ಪ್ರಕ್ರಿಯೆ ಸಾಧ್ಯವಾಗುವುದಕ್ಕೆ ಮನೋ-ಶೈಕ್ಷಣಿಕ-ಭಾಷಾಶಾಸ್ತ್ರದ ನೆಲೆಯಲ್ಲಿ ವಿಶ್ಲೇಷಿಸುವ ವಿಧಾನಗಳು ಅಗತ್ಯವಾಗುವ ಸೂಕ್ಷ್ಮ ಒಳನೋಟಗಳನ್ನು ಕೊಡುತ್ತವೆ.

ಉದಾ: ಭಾಷಾ ರಚನೆಯನ್ನು ಕಲಿಸುವ ವಿಧಾನದಲ್ಲೆ ಕೆಲವು ದೋಷಗಳಿವೆ (೫೯). ಈ ದೋಷಯುಕ್ತ ಕ್ರಮದ ಪರಿಣಾಮವಾಗಿ ಕಲಿತ ಮಕ್ಕಳು ತಮ್ಮ ಭಾಷಾ ಕೌಶಲಗಳಲ್ಲಿ ಕೊರತೆಯನ್ನು ಅನುಭವಿಸುತ್ತಿದ್ದಾರೆ (ಅದೇ ೫೯). ಆದ್ದರಿಂದ ಭಾಷಾ ಕಲಿಕೆ ವಿಶ್ಲೇಷಣಾತ್ಮಕ ವಿಧಾನಕ್ಕಿಂತ ಸಂಶ್ಲೇಷಣಾತ್ಮಕ ವಿಧಾನದಿಂದ ಪರಿಣಾಮಕಾರಿಯಾಗುವುದು. ಉದಾ: 'ಮನೆಯಲ್ಲಿ' ಎಂಬ ಪದವನ್ನು ಒಡೆದು ಹೇಳುವುದಕ್ಕಿಂತ ಹಲವು ಪದಗಳನ್ನು ನೀಡಿ ಅವುಗಳನ್ನು ಅದೇ ಮಾದರಿಯಲ್ಲಿ ಸಂಯೋಜಿಸುವ ಕ್ರಮವನ್ನು ರೂಢಿಸುವುದು. ಮತ್ತು ವಿರುದ್ಧ ಪದ ಹಾಗೂ ನಿಷೇಧ ಪದಗಳನ್ನು ಕಲಿಸುವುದರಿಂದ ಎಂತಹ ಗ್ರಹಿಕಾ ನಿಲುವುಗಳನ್ನುಂಟು ಮಾಡುತ್ತವೆಂದರೆ ಸಾಂಸ್ಕೃತಿಕ ಅಪಾಯಗಳನ್ನುಂಟು ಮಾಡುವವು. ಈ ಅಪಾಯಗಳನ್ನು ಕನ್ನಡದ ವಿಶಿಷ್ಟ ರಾಚನಿಕ ನಿಲುವುಗಳನ್ನು ಗುರುತಿಸುವ ಕ್ರಮದಿಂದ ನಿಭಾಯಿಸಿಕೊಳ್ಳಬಹುದು.

ಇವತ್ತಿನ ಸಂದರ್ಭದಲ್ಲಿ ಕನ್ನಡ ಭಾಷೆ ತನ್ನ ಅಭಿವ್ಯಕ್ತಿಯ ಎಲ್ಲ ಸಾಧ್ಯತೆಗಳನ್ನು ಹಾಗೂ ಬಳಕೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುವ ಅಗತ್ಯ

ಶೈಕ್ಷಣಿಕ ತತ್ವ-ಜೀವನ ಮಾರ್ಗಗಳಿಗಿರುವ ಪರಸ್ಪರ ಸಂಬಂಧಕ್ಕೆ ಅನುಸರಿಸಿ ಭಾಷಾ ಮಾಧ್ಯಮದ ಆಯ್ಕೆಯನ್ನು ಮಾಡಿಕೊಳ್ಳಬೇಕು ಎನ್ನುವುದು ಗಮನಾರ್ಹವಾದ ವಾದ. ಆದರೆ ಶಿಕ್ಷಣ ಮಾಧ್ಯಮಕ್ಕೂ ಸಾಂಸ್ಕೃತಿಕ ಪರಂಪರೆ ಮುಂದುವರಿಕೆಗೂ ನೇರವಾದ ಸಂಬಂಧ ಇದ್ದಿರಲಾರದು (೫೪). ಎನ್ನುವ ಅಂಶ ಮೇಲಿನ ವಾದವನ್ನು ಪುಷ್ಟೀರಿಸದೆ ಸರಳಗೊಳಿಸುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಪರಿಣಾಮವಾಗಿ, ಒಂದು ಮಗು ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಒಟ್ಟು ಅನುಭವಿಸ ಬೇಕಾದ ತೊಂದರೆ, ಮಾನಸಿಕ ಗೊಂದಲಗಳ ವಿಶ್ಲೇಷಣೆಗಳು ಇವತ್ತಿನ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಮಾನ ದಂಡಗಳಾಗಬಹುದು ಎನ್ನುವುದು ಮುಖ್ಯ.

ಗಳ ಕುರಿತ ಒಳನೋಟಗಳು ಸೂಚಿಸುವ ನಿಲುವುಗಳು ಅನ್ವಯಿಕ-ಭಾಷಾಶಾಸ್ತ್ರೀಯ ತಾತ್ವಿಕತೆಯನ್ನು ಆದರಿಸಿಕೊಂಡಿರುವವು. ಉದಾ: ತಂತ್ರಜ್ಞಾನ ಭಾಷಾ ಬಳಕೆಯ ವಿಶಿಷ್ಟ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ಆದರೆ ತಂತ್ರಜ್ಞಾನ ಮತ್ತು ಆಧುನಿಕತೆಯ ಎಲ್ಲ ಸವಾಲು ಮತ್ತು ನಿರೀಕ್ಷೆಗಳನ್ನು ಈಡೇರಿಸುವ ಮಟ್ಟಿಗೆ ಕನ್ನಡದಂತಹ ಭಾಷೆಗಳು ಸಜ್ಜಾಗಿಲ್ಲ ಅನ್ನುವದನ್ನು ಯಾರು ಅಲ್ಲಗಳೆಯುವಂತಿಲ್ಲ. ತಂತ್ರಜ್ಞಾನ ಸಂವಹನ ಸಾಧ್ಯತೆಯನ್ನು ಹೆಚ್ಚು ಮಾಡಿದೆ. ಇದಕ್ಕೆ ಪೂರಕವಾಗುವ ನಿಟ್ಟಿನಲ್ಲಿ ಮತ್ತು ಅದರ ಅಗತ್ಯ ಹಾಗೂ ಅವಕಾಶಗಳನ್ನು ಸಮನಾಗಿ ನಮ್ಮ ಭಾಷೆಗೆ ದಕ್ಕಿಸಿಕೊಳ್ಳುವ ಕ್ರಮದ ಚರ್ಚೆಗಳು ಇಂದಿನ ಭಾಷಿಕ ಅಗತ್ಯಗಳನ್ನು ಪೂರೈಸುವವು. ಅಂದರೆ ತಂತ್ರಜ್ಞಾನದ ಬೇರೆ ಬೇರೆ ಸಾಧ್ಯತೆಗಳು ಭಾಷೆಯನ್ನು ವಿಭಿನ್ನ ಸ್ವರೂಪದಲ್ಲಿ ರೂಪಿಸುವವು. ಹೀಗೆ ಭಾಷಾ ಬಳಕೆಯ ವಲಯಗಳು ಹೆಚ್ಚುತ್ತ ಹೋಗಿರುವುದು ಒಂದು ಪ್ರಕ್ರಿಯೆಯಾದರೆ, ಆ ವಲಯಗಳಲ್ಲಿ ಕನ್ನಡವನ್ನು ನಿರೂಪಿಸುವ ಬಗೆಗಳು ಬದಲಾಗುತ್ತ ಹೋಗುವುದು ಇನ್ನೊಂದು ಪ್ರಕ್ರಿಯೆ ಉದಾ: ಮಷಿನ್ ಟ್ರಾನ್ಸಲೇಷನ್ ಮುಂತಾದವು.

ಆದರೆ ಕೆಲವು ಸಾಧ್ಯತೆಗಳು ಭಾಷೆಯನ್ನು ಹ್ರಸ್ವೀಕರಿಸುವ ಮತ್ತು ಸಂಕ್ಷೇಪಗೊಳಿಸುವ ನಿರೂಪಣೆಗಳು ಸಾಧ್ಯ. ಉದಾ: ಚಾಟಿಂಗ್, ಎಸ್ ಎಮ್ ಎಸ್ (ಸಂಕ್ಷೇಪ ಸುದ್ದಿ) ಮುಂತಾದವು. ಇಂತಹ ಹಲವಾರು ಸಾಧ್ಯತೆಗಳಿಗೆ ಕನ್ನಡ ಎಷ್ಟರ ಮಟ್ಟಿಗೆ ಸಜ್ಜಾಗಿದೆ ಎನ್ನುವುದು ಮುಖ್ಯ. ಕನ್ನಡ ಭಾಷಾಧ್ಯನಯಕಾರರು ಅನುಸರಿಸಬೇಕಾದ ತಾತ್ವಿಕ ನೆಲೆಗಳು ಮತ್ತು ಭಾಷಿಕ ಆಯಾಮಗಳನ್ನು ಕುರಿತ ಸೂಕ್ಷ್ಮ ಒಳನೋಟಗಳು ಇವತ್ತಿನ ಭಾಷಾಧ್ಯಯನಕಾರರಿಗೆ ಪ್ರೇರಣೆ ನೀಡುವವು. ಒಟ್ಟು ಕನ್ನಡ ಭಾಷಾಧ್ಯಯನಕಾರರು ಅಳವಡಿಸಿಕೊಳ್ಳಬೇಕಾದ ಅಧ್ಯಯನ ಮಾದರಿ ಮತ್ತು ವಿಧಾನಗಳನ್ನು ರೂಪಿಸಿಕೊಳ್ಳುವ ಬಗೆಯಲ್ಲಿ ಸಾಕಷ್ಟು ಅಧ್ಯಯನಗಳ ನಿಲುವುಗಳನ್ನು ವಿಶ್ಲೇಷಿಸುತ್ತ ಇವತ್ತು ಬೇಕಾದ ಮಾದರಿಗಳು ಏನು? ಹೇಗೆ? ಮತ್ತು ಒಂದು ಭಾಷೆ ಮೈಗೂಡಿಸಿಕೊಳ್ಳಬೇಕಾದ ಆಧುನಿಕ ತಾತ್ವಿಕ ನಿಲುವುಗಳನ್ನು ಗಮನಿಸಿರುವುದು ಗಮನಾರ್ಹ.

ಒಂದು ಭಾಷೆ ಒಂದು ಸಮುದಾಯದ ಗುರುತಾಗಿ, ಲಾಂಛನವಾಗಿ, ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಅಸ್ತ್ರವಾಗಿ ಪ್ರತಿಪಾದಿಸಲ್ಪಡುತ್ತದೆ ಎನ್ನುವುದು ಗಮನಾರ್ಹವಾದ ವಿಚಾರ. ನೀರು, ಮಣ್ಣು, ಗಾಳಿಯಂತಹ ಸಂಪನ್ಮೂಲಗಳು ಈ ಭಾಷೆಯನ್ನು ಮಾತನಾಡುವವರಿಗೆ ಮಾತ್ರ ಸೀಮಿತ ಎನ್ನುವ ನಿಲುವುಗಳು ಹಾಗೂ ಸ್ವ- ಅನ್ಯ ಕಲ್ಪನೆಗಳ ಭ್ರಮಾತ್ಮಕ ಸೃಷ್ಠಿಯೇ ಸಾಂಸ್ಕೃತಿಕ-ರಾಜಕೀಯ ಹುನ್ನಾರಕ್ಕೆ ಪೂರಕವಾಗಿ ಕೆಲಸಮಾಡುವುದು. ಕನ್ನಡಪರ ಚಳವಳಿ ಎನ್ನುವಂತಹವು ಕನ್ನಡ ವಿರೋಧಿ ಧೋರಣೆಗಳನ್ನು ಅಂತರ್ಗತ ಮಾಡಿಕೊಂಡಿರುವುದು ಸ್ಪಷ್ಟವಾಗುವುದು. ಅಂದರೆ ಕನ್ನಡ ಪರವಾಗಿ ಮಾತನಾಡುವ ಸಂದರ್ಭಗಳು 'ಭಾರತ ಬಹುಭಾಷಿಕ' ಸಂದರ್ಭ ಅನ್ನುವುದನ್ನು ಮರೆತು ಮಾತಾಡುವಂತೆ ಗೋಚರಿಸುವವು.

ಈ ಚಳವಳಿಗಳ ತಾತ್ವಿಕತೆ, ಕನ್ನಡಪರ ಕಾಳಜಿಗಳು ಮೇಲ್ನೋಟಕ್ಕೆ ಕನ್ನಡದ ಅಸ್ತಿತ್ವವನ್ನು ಗಟ್ಟಿಗೊಳಿಸುವಂತೆ ಕಂಡರೂ ಇನ್ನೊಂದರ ಅಸ್ತಿತ್ವವನ್ನು ನಿರ್ನಾಮ ಮಾಡುವ ಹುನ್ನಾರವನ್ನು ರೂಪಿಸಿಕೊಂಡಿರುವವು. ಆದ್ದರಿಂದ ಸಮ್ಮೇಳನ ಮತ್ತು ಚಳವಳಿಗಳ ಕಾಳಜಿಯು ಭಾವನಾತ್ಮಕ ಲೇಪನವನ್ನು ಗಟ್ಟಿಗೊಳಿಸುವ ಮಾನದಂಡವಾಗಿ ಮೂಡಿಬಂದಿರುವುದು ಗಮನಾರ್ಹ. ಈ ಎಲ್ಲ ಕಾರಣಗಳಿಂದ ಕ್ಲಾಸಿಕಲ್ ಪಟ್ಟದ ಭ್ರಮೆ ಹೆಚ್ಚಾಗಿರುವುದು. ನಿಜ, ಶಾಸ್ತ್ರೀಯ ಸ್ಥಾನಮಾನದ ಹಂಬಲ ಹೆಚ್ಚಾಗುವದಕ್ಕೆ ಕೇಂದ್ರ ಸರಕಾರದ ತಾರತಮ್ಯ ಭಾಷಾ ನೀತಿಯೂ ಇರಬಹುದು. ಅಂದರೆ ಕೇಂದ್ರ ಸರಕಾರ ತನ್ನ ವ್ಯಾಪ್ತಿಯಲ್ಲಿ ಇಂಗ್ಲಿಷ್ ಮತ್ತು ಹಿಂದಿಯನ್ನು ಪೋಷಿಸುವ ಹೊಣೆಯನ್ನು ಹೊತ್ತಿರುವುದು ಮತ್ತು ರಾಜ್ಯ ಸರಕಾರಗಳು ತಂತಮ್ಮ ಭಾಷೆಗಳ ಸಾರ್ವಭೌಮತ್ವವನ್ನು ಸಾರಸಗಟಾಗಿ ಒಪ್ಪಿಲ್ಲ. ಆದ್ದರಿಂದ ಕಳೆದ ಐವತ್ತು ವರ್ಷಗಳಲ್ಲಿ ಈ ಪರಿಸ್ಥಿತಿಯಿಂದ ದೇಶಿಯ ಭಾಷೆಗಳಲ್ಲಿ ತಾವು ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ ಎಂಬ ಕುದಿತ ಮೂಡಿದರೆ ಅಚ್ಚರಿಯೇನಿಲ್ಲ (೨೮೭). ಇವುಗಳ ಹಿಂದಿನ ತಾತ್ವಿಕ ಒತ್ತಡವನ್ನು ಜರೂರಾಗಿ ಪರಿಗಣಿಸಬೇಕು ಎನ್ನುವ ಹಂಬಲ ಸಾಮುದಾಯಿಕವಾಗಿ ಗಟ್ಟಿಗೊಳ್ಳುವುದು.

ಇತಿಹಾಸವು ನಿರಂತರ ಬದಲಾಣೆ ಅಥವಾ ಸ್ಥಿತ್ಯಂತರದ ಪ್ರಕ್ರಿಯೆ. ಹಾಗಾಗಿ ಐವತ್ತು ವರ್ಷಗಳ ಈ ಪಲ್ಲಟದಲ್ಲಿ ಕನ್ನಡ ಭಾಷೆ ರೂಪಗೊಂಡ ಬಗೆಯನ್ನು ವಿಶ್ಲೇಷಿಸುವ ಮಾದರಿಗಳು ಭಾಷಿಕ-ಸಾಂಸ್ಕೃತಿಕ ವಿವಿಧ ನೆಲೆಗಳನ್ನು ಗುರುತಿಸುವ ಮತ್ತು ಕನ್ನಡ ಭಾಷೆಗೆ ಬೇಕಾದ ಪ್ರಜ್ಞೆ ಮತ್ತು ಪರಿಸರವನ್ನು ದಕ್ಕಿಸಿಕೊಳ್ಳುವುದಕ್ಕೆ ಪೂರಕವಾಗಿವೆ. ಆದ್ದರಿಂದ, ಡಾ.ಕೆ. ವಿ.ನಾರಾಯಣವರು ಹೇಳಿಕೊಂಡಂತೆ ಮೊದಲ ಓದಿಗೇ ಈ ಬರವಣಿಗೆ ಕನ್ನಡಪರ ಇಲ್ಲವೇ ಕನ್ನಡ ವಿರೋಧಿ ಎಂಬ ತುದಿಯ ಆಯ್ಕೆಗಳನ್ನು ಮಾಡಿಕೊಂಡಿಲ್ಲವೆಂಬುದು ತಿಳಿಯುವಂತಿದೆ. (ಮೂದಲಿಗೆ) ಈ ಹೊತ್ತಿಗೆಯು ಯಾವುದೇ ಸರಳ ತೀರ್ಮಾನಕ್ಕೆ ಎಡೆಮಾಡಿಕೊಡದೆ ಇಂದಿನ ಕನ್ನಡದ ವಾಸ್ತವ ಮತ್ತು ಅಗತ್ಯಗಳನ್ನು ಕುರಿತಾದ್ದಾಗಿದೆ. □

ಗೋಧಿ ಬಣ್ಣದವನ ಮೋಸ

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಭಾರತೀಯ ಸಮಾಜಕ್ಕೆ ಅಗತ್ಯವಾಗಿರಬೇಕಾದ ನೈತಿಕತೆ ಇಲ್ಲದೆ ಜಾತಿ ಭ್ರಷ್ಟರಾಗಿರುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಒಬ್ಬ ದಲಿತೇತರ ವ್ಯಕ್ತಿ ಭಾರತದಲ್ಲಿ ಇಲ್ಲವೇ? ಭಾರತ ವರ್ತಮಾನದಲ್ಲಿ ತನ್ನ ಬಗ್ಗೆಯೇ ಸಂದೇಹದಲ್ಲಿ ಸಿಲುಕಿ ಕೊಂಡಂತೆ ಕಾಣುತ್ತಿದೆ. ಅದು ಆಧುನಿಕ ಎನ್ನುವ ಎಲ್ಲವನ್ನು ಬಯಸುತ್ತದೆ, ಆದರೆ ಆಧುನಿಕತೆಯನ್ನು ದೂಷಿಸುತ್ತಿದೆ. ಅದು ಅಂತಾರಾಷ್ಟ್ರೀಯವಾಗಿ ಸಮಾನ ನಿಯಮಾಳಿಗಳ ಆಟವನ್ನು ಬಯಸುತ್ತದೆ. ಆದರೆ ಆಂತರಿಕವಾಗಿ ತನ್ನನ್ನು ತಾನೇ ನಾಶ ಪಡಿಸಿಕೊಳ್ಳುತ್ತಿದೆ. ಹೀಗಿರುವಾಗ ಪ್ರಶ್ನೆಯೊಂದಿದೆ - ದಲಿತರೊಡನೆ ಭಾರತ ಏನನ್ನೂ ಹಂಚಿಕೊಳ್ಳದಿರುವಾಗ ಜಾಗತಿಕವಾಗಿ ಅದು ನಾಗರಿಕ ಘನತೆಯನ್ನು ಪಡೆಯಲು ಸಾಧ್ಯವೇ?

ಇತ್ತೀಚಿನ ಸಿಡ್ನಿ ಕ್ರಿಕೆಟ್‌ನ ಅಂಪಾಯರಿಂಗ್ ತುಂಬಾ ಕೆಟ್ಟದಾಗಿತ್ತು. ಈ ಕಾರಣದಿಂದ ಭಾರತಕ್ಕೆ ದುಷ್ಪರಿಣಾಮ ಉಂಟಾಯಿತು. ಆಸ್ಟ್ರೇಲಿಯಾ ಕ್ರಿಕೆಟಿಗರ ವರ್ತನೆಯಂತೂ ಅನಪೇಕ್ಷಣೀಯವಾಗಿತ್ತು. ಅಲ್ಲಿನ ಕ್ಯಾಪ್ಟನ್ ರಿಕಿ ಪಾಂಟಿಂಗ್ ಅದ್ಭುತ ಅಪ್ರಮಾಣಿಕತೆಯನ್ನು ಮೆರೆದುಬಿಟ್ಟ. ನಾಗರಿಕ ಮತ್ತು ಪ್ರಾಮಾಣಿಕ ಸಮಾಜವಾಗಿದ್ದ ಆಸ್ಟ್ರೇಲಿಯಾ ತನ್ನ ನೆಲದಲ್ಲೇ ಘಟಿಸಿದ ಈ ನಾಚಿಕೆಗೇಡಿನ ಸಂಗತಿಯ ಜವಾಬ್ದಾರಿಯನ್ನು ಹೊರಬೇಕಾಯಿತು. ಈ ಸಂದರ್ಭದಲ್ಲಿ ಆಸ್ಟ್ರೇಲಿಯಾವು ಕಠಿಣವಾದ ಸವಾಲನ್ನು ಎದುರಿಸಬೇಕಾಯಿತು. ಅಲ್ಲಿನ ಮಾಧ್ಯಮಗಳೂ ಸಹ ಅಂಪಾಯರಿಂಗ್‌ನ್ನು ತಿರಸ್ಕರಿಸಿದವು. ಬಹುವಾಗಿ ಮಾನ್ಯಗೊಂಡ ಕ್ರಿಕೆಟ್ ಕಮೆಂಟೇಟರ್ ಪೀಟರ್ ರಿಬಕ್‌ನ ಪ್ರಕಾರ, "ಪಾಂಟಿಂಗ್ ವೃತ್ತಿಪರ ಕ್ರಿಕೆಟಿಗರನ್ನು ನಾಯಿಗಳನ್ನಾಗಿ ಮಾರ್ಪಾಟು ಮಾಡಿದ". ಆಸ್ಟ್ರೇಲಿಯಾ ಕ್ರಿಕೆಟ್‌ನ ದಂತಕತೆಯಾಗಿರುವ ಜೆಫ್ ಥಾಮ್ಸನ್ ವಿವರಣೆಯ ಪ್ರಕಾರ, 'ಪಾಂಟಿಂಗ್ ಮತ್ತು ಸಂಗಡಿಗರು ಗೂಳಿಯಂತೆ ಹೂಂಕರಿಸಿದರು'. ಒಂದು ಸಮೀಕ್ಷೆಯ ಪ್ರಕಾರ ಶೇ.೬೦ರಷ್ಟು ಮಂದಿ ಆಸ್ಟ್ರೇಲಿಯನ್ನರು ಕುಂಬ್ಳೆ ಪರವಾಗಿ ನಿಂತಿದ್ದರು. ಪಾಂಟಿಂಗ್‌ನ ಪೋಷಕರಿಗೆ ಕೆಲವು ಬೆದರಿಕೆ ಫೋನ್ ಕರೆಗಳೂ ಸಹ ಬಂದಿದ್ದವಂತೆ.

ಭಾರತೀಯ ಮಾಧ್ಯಮಗಳು, ಕ್ರಿಕೆಟ್ ಖದೀಮರು ಮತ್ತು ವೀಕ್ಷಕವಿವರಣೆಗಾರರೆಲ್ಲಾ ಆಸ್ಟ್ರೇಲಿಯಾದವರು ತಮ್ಮ ತಂಡದವರ ಬಗ್ಗೆ ಏನು ಹೇಳುತ್ತಾರೆನ್ನುವುದನ್ನು ಚಾಚೂ ತಪ್ಪದೆ ಉಲ್ಲೇಖಿಸುತ್ತಿದ್ದರು. ಹೀಗಿರುವಲ್ಲಿ 'ಎ ಕ್ಲಾಸ್ ಆ್ಯಕ್ಟ್' ಎನ್ನೋ ಲೇಖನವನ್ನು ಆಸ್ಟ್ರೇಲಿಯಾದ ಅಂಕಣಕಾರ ಆ್ಯಂಡ್ರು ಸ್ಟೀವನ್ಸನ್ ಜನವರಿ ೫, ೨೦೦೮ ರಂದು ಪ್ರಕಟಿಸಿದ. ಅದರಲ್ಲಿ ಆತ ಭಾರತೀಯ ತಂಡದ ಜಾತಿ ಬಂಧುತ್ವದ ಬಗ್ಗೆ ಬರೆದಿದ್ದ. ವರದಿಗಳ ಪ್ರಕಾರ ಆಸ್ಟ್ರೇಲಿಯಾ ತಂಡದವರು ೨೦೦೭ರಲ್ಲಿ ಭಾರತಕ್ಕೆ ಬಂದಿದ್ದಾಗ ಹರ್ಭಜನ್‌ಸಿಂಗ್ ಆ್ಯಂಡ್ರು ಸೈಮಂಡ್ಸ್‌ನನ್ನು, 'ಕೋತಿ' ಎಂದು ಬೈಯ್ದಿದ್ದ. ಅದೇ ವರದಿಯ ಪ್ರಕಾರ ಸೈಮಂಡ್ಸ್ 'ತಾನೇನು ಕೋತಿ ಮನುಷ್ಯನಲ್ಲ' ಎಂದು ಹರ್ಭಜನ್‌ಗೆ ತಿಳಿಸಿದ್ದ. ಹಾಗಯೇ ಹರ್ಭಜನ್ ಅದಕ್ಕಾಗಿ ಕ್ಷಮೆಯಾಚಿಸಿ, ಇನ್ನು ಮುಂದೆ ಹಾಗೆ ಮಾತನಾಡುವುದಿಲ್ಲವೆಂದು ಹೇಳಿದ್ದ. ಕೆಲವು ಶತಮಾನಗಳಷ್ಟೆ ಹಿಂದೆ ಯೂರೋಪಿಯನ್ನರು ಕಪ್ಪುಜನರನ್ನು ಮನುಷ್ಯರೆಂದೂ ಪರಿಗಣೀಸಲು ತಯಾರಿಲ್ಲದೆ ಅವರನ್ನು ಕೋತಿಗಳೆಂದು ಕರೆದಿದ್ದರು. ಆದ್ದರಿಂದ ಯಾರಾದರೂ ಕಪ್ಪುಜನರನ್ನು 'ಕೋತಿ' ಎಂದು ಸಂಭೋದಿಸಿದಲ್ಲಿ ಅದು ಜನಾಂಗೀಯ ನಿಂದೆಯಾಗುತ್ತಿತ್ತು.

ಭಾರತ ತಾನು ನಾಗರಿಕ ಮತ್ತು ಪ್ರಾಮಾಣಿಕ ಸಮಾಜ ಎಂದು ತನ್ನನ್ನು ಪರಿಗಣಿಸುವುದಾದರೆ ಆ್ಯಂಡ್ರು ಸ್ಟೀವನ್ಸನ್‌ನ ಅಂಕಣಕ್ಕೆ ಹೇಗೆ ಪ್ರಕ್ರಿಯಿಸಬೇಕಾಗಿತ್ತು? ಭಾರತದಲ್ಲಿ ೧೬೧ಮಿಲಿಯನ್ ದಲಿತರು ಭಾರತದಲ್ಲಿದ್ದಾರೆಂಬುದು ಸತ್ಯವಲ್ಲವೇ? ಅಂದರೆ ಆಸ್ಟ್ರೇಲಿಯಾಕ್ಕಿಂತ ಎಂಟರಷ್ಟು ಅಧಿಕ ಮಂದಿ ದಲಿತರು ಭಾರತದಲ್ಲಿದ್ದಾರೆ. ಹೀಗಿರುವಾಗ ಭಾರತೀಯ ತಂಡದಲ್ಲಿ ಒಬ್ಬ ದಲಿತನೂ ಸಹ ಇಲ್ಲದಿರುವುದು ಏಕೆ?

ಭಾರತಲ್ಲಿರುವ ದಲಿತೇತರರು ಆಸ್ಟ್ರೇಲಿಯಾಕ್ಕಿಂತ ೪೧ ಪಟ್ಟು ಅಧಿಕ ಮಂದಿ ಇದ್ದಾರೆ. ಅಂದರೆ ೮೫೦ಮಿಲಿಯನ್‌ರಷ್ಟಿದ್ದಾರೆ. ಹೀಗಿರುವಲ್ಲಿ ಅವರಲ್ಲಿ ಒಬ್ಬನಾದರೂ ಪ್ರಾಮಾಣಿಕ ವ್ಯಕ್ತಿ ಇಲ್ಲವೇ? ಏಕೆಂದರೆ:

* ನಿಜವಾಗಿಯೂ ಭಾರತ ಒಂದು ಜಾತಿ ನಿಷ್ಠ ಸಮಾಜ. ನಾವೆಲ್ಲಾ ಎಷ್ಟೇ ಜಾತ್ಯತೀತರೆನಿಸಿದರೂ ಸಹ ಜಾತೀಯ ತಾರತಮ್ಯವನ್ನು ಮೈಗೂಡಿಸಿಕೊಂಡಿದ್ದೇವೆ. ಆ್ಯಂಡ್ರು ಸ್ಟೀವನ್ಸನ್ ಹೇಳುವುದು ವಾಸ್ತವ ಸಂಗತಿಯಲ್ಲವೇ?

* ಭಾರತೀಯ ಕ್ರಿಕೆಟ್ ತಂಡವು ಜಾತೀತೆಯಿಂದ ಕೂಡಿದ್ದು, ಅದು ಎಲ್ಲಾ ಭಾರತೀಯರನ್ನು ಪ್ರತಿನಿಧಿಸುವುದಿಲ್ಲ.

* ನಾವು ಈ ಆಂತರಿಕವಾದ ಜನಾಂಗೀಯತೆಯಿಂದ ನರಳುತ್ತಿದ್ದೇವೆ.

ಹೀಗಿರುವಲ್ಲಿ ಒಬ್ಬನೇ ಒಬ್ಬ ದಲಿತೇತರ ಈ ಕೆಳಗಿನಂತೆ ಹೇಳಲು ಸಾಧ್ಯವಿಲ್ಲವೇ?:

* ನಾವು ಜಾತಿ ವ್ಯವಸ್ಥೆಯ ಶ್ರೇಣಿಯಲ್ಲಿ ಸಹಜವಾಗಿಯೇ ಸಾಮಾಜೀಕರಣಗೊಂಡಿರುವುದರಿಂದ ನಾವು ಪೂರ್ವಗ್ರಹಪೀಡಿತರಾಗಿರದೆ ಇರಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ ನಾವು ಒಬ್ಬ ಕಪ್ಪು ವ್ಯಕ್ತಿಯನ್ನು ಎದುರುಗೊಂಡಾಕ್ಷಣ ನಾವು ಜನಾಂಗೀಯತೆಯ ಆರ್ಚಕರಾಗಿಬಿಡುತ್ತೇವೆ.

* ಆದ್ದರಿಂದ ಹರ್ಭಜನ್ ಸೈಮಂಡ್ಸ್‌ಗೆ 'ಕೋತಿ' ಎಂದು ಕರೆದಿದ್ದಾನೆ. ಅದಕ್ಕಾಗಿ ಆತ ಬೆಲೆ ತೆರಲೇಬೇಕಾಗಿದೆ.

* ಭಾರತೀಯ ಕ್ರಿಕೆಟ್ ತಂಡ ಜನಾಂಗೀಯವಾಗಿರುವುದರಿಂದ ನಾವೆಲ್ಲಾ ಆ ತಂಡವನ್ನು ಮಾನ್ಯ ಮಾಡದೆ ತಿರಸ್ಕರಿಸಬೇಕು.

* ಭಾರತೀಯ ಕ್ರಿಕೆಟ್ ತಂಡದಿಂದ ದಲಿತರನ್ನು ದೂರವಿಟ್ಟಿದ್ದಕ್ಕಾಗಿ ಕ್ರಿಕೆಟ್ ತಾರೆಗಳಾಗಿರುವ ಸುನಿಲ್ ಗವಾಸ್ಕರ್‌ನಿಂದ ತೆಂಡೂಲ್ಕರ್‌ವರೆಗೆ ಯಾರೂ ಸಹ ಅದರ ಬಗ್ಗೆ ಚಕಾರವೆತ್ತಲಿಲ್ಲ ಏಕೆ?

* ಭಾರತೀಯ ತಂಡ ದಲಿತರನ್ನು ಒಳಗೊಳ್ಳುವವರೆಗೆ ಯಾವುದೇ ರಾಷ್ಟ್ರವೂ ಸಹ ಇವರೊಡನೆ ಕ್ರಿಕೆಟ್ ಆಡಬಾರದು.

* ದಲಿತರು/ಆದಿವಾಸಿಗಳು ಭಾರತೀಯ ತಂಡದಲ್ಲಿ ಸ್ಥಾನ ಪಡೆಯುವ ಐಡಿಯಾವನ್ನು ಒಪ್ಪಿಕೊಳ್ಳುವತನಕ ಇತರ ರಾಷ್ಟ್ರಗಳು ಭಾರತೀಯ ವೀಕ್ಷಕವಿವರಣೆಗಾರರಿಗೆ ವೀಸವನ್ನು ಕೊಡಬಾರದು.

ಇಂಥದ್ದೇ ಕಾರಣಗಳಿಗಾಗಿ ಭಾರತವೂ ಸೇರಿದಂತೆ ಇತರ ರಾಷ್ಟ್ರಗಳು ಸೌತ್ ಆಫ್ರಿಕಾ ತಂಡವನ್ನು ಬಹಿಷ್ಕರಿಸಲಿಲ್ಲವೇ? ಪಾಂಟಿಂಗ್ ಮತ್ತು ಇತರ ೧೨ ಮಂದಿಯಿಂದಾಗಿ ಇಡೀ ಆಸ್ಟ್ರೇಲಿಯಾ ನಾಚಿ ತಲೆತಗ್ಗಿಸಿತಲ್ಲವೇ?

ಆಸ್ಟ್ರೇಲಿಯಾದ ಪ್ರಸಿದ್ಧಿಗೆ ಚೇರ್ಮನ್ ಆಗಿರುವ ಜಾನ್ ಬಟ್ರಾಂಡ್ ಹೇಗೆ ಪಾಂಟಿಂಗ್ ಬಳಗ ದೇಶಕ್ಕೆ ಅವಮಾನವನ್ನು ತಂದಿತು ಎನ್ನುವುದರ ಬಗ್ಗೆ ಮಾತನಾಡಿದ್ದಾರೆ. ಹೀಗಿರುವಾಗ ದಲಿತರನ್ನು ಹೊರಗಿಟ್ಟ ಭಾರತೀಯ ತಂಡದ ಜನಾಂಗೀಯ ತಾರತಮ್ಯವನ್ನು ನಾವೆಲ್ಲಾ ಮಾತನಾಡಬಾರದೇ?

ಹೀಗಿರುವಾಗ ಭಾರತೀಯ ಸಮಾಜಕ್ಕೆ ಅಗತ್ಯವಾಗಿರಬೇಕಾದ ನೈತಿಕತೆ ಇಲ್ಲದೆ ಜಾತಿ ಭ್ರಷ್ಟರಾಗಿರುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಒಬ್ಬ ದಲಿತೇತರ ವ್ಯಕ್ತಿ ಭಾರತದಲ್ಲಿ ಇಲ್ಲವೇ?

ಭಾರತ ವರ್ತಮಾನದಲ್ಲಿ ತನ್ನ ಬಗ್ಗೆಯೇ ಸಂದೇಹದಲ್ಲಿ ಸಿಲುಕಿಕೊಂಡಂತೆ ಕಾಣುತ್ತಿದೆ. ಅದು ಆಧುನಿಕ ಎನ್ನುವ ಎಲ್ಲವನ್ನು ಭಯಸುತದೆ, ಆದರೆ ಆದುನಿಕತೆಯನು ದೂಷಿಸುತಿದೆ. ಅದು ಅಂತಾರಾಷ್ಟ್ರೀ

ಅನು : ಡೊಮಿನಿಕ್. ಡಿ

ಯವಾಗಿ ಸಮಾನ ನಿಯಮಾಳಿಗಳ ಆಟವನ್ನು ಬಯಸುತ್ತದೆ. ಆದರೆ ಆಂತರಿಕವಾಗಿ ತನ್ನನ್ನು ತಾನೇ ನಾಶಪಡಿಸಿಕೊಳ್ಳುತ್ತಿದೆ.

ಹೀಗಿರುವಾಗ ಪ್ರಶ್ನೆಯೊಂದಿದೆ – ದಲಿತರೊಡನೆ ಭಾರತ ಏನನ್ನೂ ಹಂಚಿಕೊಳ್ಳದಿರುವಾಗ ಜಾಗತಿಕವಾಗಿ ಅದು ನಾಗರಿಕ ಘನತೆಯನ್ನು ಪಡೆಯಲು ಸಾಧ್ಯವೇ?

ಎಚ್ಚರಗೊಳ್ಳಿ ಗೋಧಿ ಬಣ್ಣದವನೇ – ನಿನ್ನ ಆಂತರಿಕವಾಗಿರುವ ತಾರತಮ್ಯವನ್ನು ಮತ್ತು ನಿನ್ನ ಬೂಟಾಟಿಕೆಯನ್ನು ಗಮನಿಸುತ್ತಿದ್ದಾರೆ. ಆದ್ದರಿಂದ ಸ್ಟೀವನ್ಸನ್ ಏಕಾಂಗಿಯಾಗಿಲ್ಲ!

ವರ್ಷದ ಭಾರತೀಯ ವ್ಯಕ್ತಿ

ದೇಶೀ ಅಭಿರುಚಿಯ ನನ್ನ ಸಹ ಬಾಂಧವರೇ, ಒಂದು ಪ್ರಸಿದ್ಧ ಸುದ್ದಿ ಚಾನೆಲ್ ಸಂಸ್ಥೆಯ ಮುಖ್ಯಾಧಿಕಾರಿಯೊಬ್ಬ 'ವರ್ಷದ ಭಾರತೀಯ ವ್ಯಕ್ತಿಯನ್ನು ಆಯ್ಕೆ ಮಾಡಲು ನಾವು ನಿರ್ಧರಿಸಿದ್ದೇವೆ ಎಂದು ಅರಚಿಕೊಂಡ. ಎದುರಿಗಿದ್ದ ಪ್ರೇಕ್ಷಕರು ಚಪ್ಪಾಳೆ ಹೊಡೆಯತೊಡಗಿದರು. "ಆದರೆ ನಮಗೀಗ ಒಂದು ಪೀಕಲಾಟ ಎದುರಾಗಿದೆ" ಎಂದು ಭಾರವಾದ ಧ್ವನಿಯಲ್ಲಿ ಉಸುರಿದ. ಅಲ್ಲಿದ್ದ ಜನ ಮೌನಕ್ಕೆ ಶರಣಾದರು. 'ಯಾರೋ ದಲಿತವ್ಯಕ್ತಿಯನ್ನು ಆ ಪ್ರಶಸ್ತಿಗಾಗಿ ನೇಮಕಮಾಡಲಾಗಿದೆ' ಎಂದು ಆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಳಿದ. ಇಡೀ ಸಭೆ ಅಪನಂಬಿಕೆಯಲ್ಲಿ ಜೋಲಾಡುತ್ತಿದ್ದಂತೆ ೪೦ರ ವಯಸ್ಕನೊಬ್ಬ ಅರಚಿಕೊಂಡ, 'ನಮಗವನನ್ನು ಒಪ್ಪಿಸಿಬಿಡು...

ದೇಶೀ ಅಭಿರುಚಿಯ ನನ್ನ ಸಹ ಬಾಂಧವರೇ, ಒಂದು ಪ್ರಸಿದ್ಧ ಸುದ್ದಿ ಚಾನೆಲ್ ಸಂಸ್ಥೆಯ ಮುಖ್ಯಾಧಿಕಾರಿಯೊಬ್ಬ 'ವರ್ಷದ ಭಾರತೀಯ ವ್ಯಕ್ತಿಯನ್ನು ಆಯ್ಕೆ ಮಾಡಲು ನಾವು ನಿರ್ಧರಿಸಿದ್ದೇವೆ ಎಂದು ಅರಚಿಕೊಂಡ. ಎದುರಿಗಿದ್ದ ಪ್ರೇಕ್ಷಕರು ಚಪ್ಪಾಳೆ ಹೊಡೆಯತೊಡಗಿದರು. "ಆದರೆ ನಮಗೀಗ ಒಂದು ಪೀಕಲಾಟ ಎದುರಾಗಿದೆ" ಎಂದು ಭಾರವಾದ ಧ್ವನಿಯಲ್ಲಿ ಉಸುರಿದ. ಅಲ್ಲಿದ್ದ ಜನ ಮೌನಕ್ಕೆ ಶರಣಾದರು. 'ಯಾರೋ ದಲಿತವ್ಯಕ್ತಿಯನ್ನು ಆ ಪ್ರಶಸ್ತಿಗಾಗಿ ನೇಮಕಮಾಡಲಾಗಿದೆ' ಎಂದು ಆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಳಿದ. ಇಡೀ ಸಭೆ ಅಪನಂಬಿಕೆಯಲ್ಲಿ ಜೋಲಾಡುತ್ತಿದ್ದಂತೆ ೪೦ ವಯಸ್ಕನೊಬ್ಬ ಅರಚಿಕೊಂಡ, 'ನಮಗವನನ್ನು ಒಪ್ಪಿಸಿಬಿಡು... ನಾವು ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಇಲ್ಲಿದ್ದೇವೆ.'

'ಸಮಾಧಾನ. ಈ ಶೋ ಟೀವಿಯಲ್ಲಿ ನೇರ ಪ್ರಸಾರವಾಗುತ್ತಿದೆ' ಎಂದು ಎಚ್ಚರಿಸಿದ ಆ ಕಾರ್ಯನಿರ್ವಹಣಾಧಿಕಾರಿ ಆ ನೇಮಕಕ್ಕೆ ಕಾರಣಗಳನ್ನು ಓದಿ ಹೇಳಲಾರಂಭಿಸಿದ.

'ಆಕೆ ದಲಿತರನ್ನು ಮತ್ತು ಬ್ರಾಹ್ಮಣರನ್ನು ಒಟ್ಟುಸೇರಿಸುವ ಮೂಲಕ ಸಾಮಾಜಿಕ ಐಕ್ಯತೆಗೆ ಕಾರಣವಾಗಿದ್ದಾಳೆ. ಈಗ ಆಕೆ ಮುಂದಾಳುತ್ವ ವಹಿಸಿಕೊಂಡು ಬ್ರಾಹ್ಮಣರನ್ನೂ ಸಹ ಆಳುತ್ತಿದ್ದಾಳೆ. ದಲಿತ ವ್ಯಕ್ತಿ ಇಂಥ ವೈಭವಕ್ಕೆ ಏರಿದ್ದು ಭಾರತೀಯ ಚರಿತ್ರೆಯಲ್ಲಿ ಮಹತ್ವದ ಘಟನೆ. ಆದ್ದರಿಂದ ಆಕೆ ವರ್ಷದ ಭಾರತೀಯಳಾಗಿ ಆಯ್ಕೆಗೊಂಡಿದ್ದಾಳೆ.'

ಪ್ರೇಕ್ಷಕವೃಂದ ಇನ್ನೂ ಜೋಕಾಲಿಯಲ್ಲಿರುವಾಗಲೇ ಒಂದು ಪ್ರಜ್ಞಾವಂತ ಧ್ವನಿಯೊಂದು ತೇಲಿಬಂತು, 'ರಾಷ್ಟ್ರೀಯ ಮಾನವ ಹಕ್ಕು ಸಮಿತಿಯನ್ನು ನಾವು ಭೇಟಿಯಾಗೋಣ.' ಆ ಧ್ವನಿ ೬೦ರ ಹತ್ತಿರದಲ್ಲಿದ್ದ ಬುದ್ಧಿಜೀವಿಯದ್ದಾಗಿತ್ತು.

ಆ ನಿರ್ವಹಣಾಧಿಕಾರಿ ಸಭಿಕರಲ್ಲಿ ಶಿಸ್ತನ್ನು ನಿರೀಕ್ಷಿಸುತ್ತಾ ಹೆಮ್ಮೆಯಿಂದ ಘೋಷಿಸಿದ, 'ಪ್ರಜ್ಞಾವಂತ ಮಾಧ್ಯಮ ಕಛೇರಿಯು ದಲಿತ ಅಭ್ಯರ್ಥಿಯ ಆಯ್ಕೆಗಾಗಿ ಘನವೆತ್ತ ವ್ಯಕ್ತಿಗಳನ್ನು ತೀರ್ಪುಗಾರರನ್ನಾಗಿ ನೇಮಿಸಿತ್ತು.

'ನಾವು ವೈವಿಧ್ಯತೆಯನ್ನು ಜೀವಿಸುವವರಾಗಿದ್ದರಿಂದ ತೀರ್ಪು ಸಮಿತಿಯ ಸದಸ್ಯರು ಎಲ್ಲಾ ಧರ್ಮಗಳಿಂದ ಅಂದರೆ ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಧರ್ಮಗಳಿಗೆ ಸೇರಿದವರಾಗಿದ್ದರು. ಹಾಗೆಯೇ ಸೈದ್ಧಾಂತಿಕವಾಗಿಯೂ ಲಿಬರಲ್, ಬಲ ಪಂಥೀಯ, ಕಮ್ಯುನಿಸ್ಟರು, ಸಮಾಜವಾದಿಗಳು, ಪರಿಸರವಾದಿಗಳು, ಹಾಗೂ ಎನ್‌ಜಿಓಗಳಿಗೂ ಪ್ರಾತಿನಿಧ್ಯವನ್ನು ಆ ಸಮಿತಿಯಲ್ಲಿ ನೀಡಲಾಗಿತ್ತು.

ಇಡೀ ಸಭೆ ದುಃಖಿಸುತ್ತಿರುವಾಗ ಯುವ ಗುಂಪೊಂದು ಹೊರ ನಡೆದುಬಿಟ್ಟಿತು. 'ಆ ತೀರ್ಪು ಸಮಿತಿಯನ್ನು ತಿಪ್ಪೆಗೆ ಬಿಸಾಡಿ. ನಾವು ನಿಜವಾದ ಭಾರತೀಯನನ್ನು ವರ್ಷದ ವ್ಯಕ್ತಿಯನ್ನಾಗಿ ಆರಿಸಲು ಇಲ್ಲಿ ಬಂದಿದ್ದೇವೆ' ಎಂದವರು ಕೂಗಿಕೊಂಡರು. ಮತ್ತೊಬ್ಬ ಹೇಳಿದ, 'ನಾವು ನರ್ಮದಾ ಕಣಿವೆಗೆ ವಾಪಸ್ಸಾಗೋಣ'. ನಾಗಪುರದ ಶಾಲೆಯೂ ಸಹ ಅವರೊಡನೆ ಸೇರಿಕೊಂಡಿತು. 'ನಾವು ಇಲ್ಲಿ ಬಂದದ್ದು ನಮ್ಮ ರಾಷ್ಟ್ರೀಯ ತಾರೆಯನ್ನು ವರ್ಷದ ವ್ಯಕ್ತಿಯಾಗಿ ಆರಿಸಲು ಬಂದಿದ್ದೇವೆಯೇ ವಿನಃ ದಲಿತ ವ್ಯಕ್ತಿಯನ್ನು ಅಲ್ಲ' ಎಂದು ಕೂಗುತ್ತಿದ್ದರವರು. ಮತ್ತೊಬ್ಬ ಉಸುರಿದ, 'ನಾವೆಲ್ಲಾ ಹಿಮಾಲಯಕ್ಕೆ ಹೋಗೋಣ'.

ಈ ಎಲ್ಲಾ ಗೊಂದಲದ ನಡುವೆ ಸಮಿತಿಯ ಅಧ್ಯಕ್ಷ ತನ್ನ ಅಧಿಕಾರವನ್ನು ಬಳಸಿ ಕ್ಯಾಮರಗಳೆಲ್ಲಾ ಮುಚ್ಚಬೇಕೆಂದು ಆದೇಶಿಸಿ, 'ದಯವಿಟ್ಟು ಅರ್ಥ ಮಾಡಿಕೊಳ್ಳಿ, ನಮ್ಮನ್ನು ಜಾತಿವಾದಿಗಳೆಂದು ಗುರುತಿಸಿಬಿಡುತ್ತಾರೆ. ಅಂತಾರಾಷ್ಟ್ರೀಯವಾಗಿ ಏನಾಗುತ್ತಿದೆ ಎಂಬುದನ್ನು ಕಣ್ಣರಳಿಸಿ ನೋಡಿ. ನಮಗೆಲ್ಲಾ ತಿಳಿದಿರುವಂತೆ ಕಪ್ಪುಜನ ಕಪ್ಪುಜನರೇ. ಆದರೆ ನಾವು ಅವರನ್ನು ಕಪ್ಪುಜನರೆಂದು ಕರೆಯಲಾದೀತೆ? ಅದು ಅನುಕೂಲಸ್ಥರಾಗಿರುವ ಕಪ್ಪುಜನರು ಅಂತಾರಾಷ್ಟ್ರೀಯವಾಗಿ ಖುಷಿ ಪಡುತ್ತಿರುವ ಸಂಗತಿ.'

'ಹಾಗೆಯೇ ಭಾರತದಲ್ಲಿ ದಲಿತರನ್ನು ಆಕೆ/ಆತನ ಜಾತಿ ಹೆಸರಿನಿಂದ ಕರೆಯಲಾದೀತೆ? ನಮ್ಮನ್ನು ಬಂಧಿಸಿಯಾರು... ನಮ್ಮ ಜಾತಿ ಹೆಸರಿನಿಂದ ನಮ್ಮನ್ನು ಕರೆಯುತ್ತಾರೆಯೇ? ಅಥವಾ ದಲಿತನೋರ್ವ ನಮ್ಮನ್ನು ಜಾತಿ ಹೆಸರಿನಿಂದ ಕರೆದ ಎಂದು ಆತನನ್ನು ನ್ಯಾಯಾಲಯಕ್ಕೆ ಕರೆದೊಯ್ಯಬಹುದೇ?' ಎಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ ತರ್ಕಿಸಿದ, 'ನೆನಪಿರಲಿ, ನಮ್ಮ ದೇಶದಲ್ಲಿ ನಾವೆಲ್ಲಾ ಅನುಕೂಲಗಳಿಂದ ವಂಚಿತರಾಗಿದ್ದೇವಲ್ಲದೆ, ಅನುಕೂಲಸ್ಥರಾಗಿರುವ ದಲಿತರೊಡನೆ ವ್ಯವಹರಿಸುವುದೆಂದರೆ ಜೋಕೆಂದು ಭಾವಿಸಬೇಡಿ'.

ಒಂದಷ್ಟು ಸಾವಧಾನದಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತೂ ಮುಂದುವರೆದ, 'ದಲಿತ ವ್ಯಕ್ತಿ ಮೂರು ಸಂಗತಿಗಳಲ್ಲಿ ನಾಪಾಸಾದರೂ ಸಹ ಆಯ್ಕೆ ಮಾಡಲಾಗಿದೆ:

೧. ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಕಲಿತಿರುವುದು

೨. ಮೊದಲ ಹುಟ್ಟು ಹಬ್ಬದಲ್ಲೇ ಕೇಕ್ ಕತ್ತರಿಸುವುದು

೩. ಸಾವಯವ ಆಹಾರವನ್ನು ತಿನ್ನುತ್ತಿರುವುದು

ಆದರೂ ಸಹ ನಾವು ಆಕೆಗೆ ಅವಕಾಶ ಕಲ್ಪಿಸಿದೆವು. ಕಾರಣ ನಮ್ಮ ಉದಾರವಾದ ಮತ್ತು ಸಾಮಾಜಿಕ ನ್ಯಾಯದ ಕಾರಣದಿಂದಷ್ಟೆ. ದಲಿತ ಸಮುದಾಯಕ್ಕಾಗಿ ಮಾಡಿರುವ ಸೇವೆಗಾಗಿ ಆಕೆಯನ್ನು ತೀರ್ಪುಗಾರರು ಆಯ್ಕೆ ಮಾಡಬೇಕೆಂದು ಕೇಳಿಕೊಂಡೆವು.

ತೀರ್ಪುಗಾರರು ಈ ಕೆಳಗಿನ ಕಾರಣಗಳಿಗಾಗಿ ಆಕೆಯ ಆಯ್ಕೆಯನ್ನು ಪರಿಗಣಿಸಲಿಲ್ಲ:

- ಆಕೆ ದಲಿತಳಾಗಿರುವುದರಿಂದ ಬ್ರಾಹ್ಮಣರನ್ನು ಮುನ್ನಡೆಸುವಂತಿಲ್ಲ. ಇದಕ್ಕೆ ಯಾವುದೇ ಶಾಸ್ತ್ರದ ಸಮ್ಮತಿ ಇಲ್ಲ. ಅಲ್ಲದೆ ಅಂಥ ಯಾವುದೇ ದಲಿತ ಪರಂಪರೆ ಇಲ್ಲ. ದಲಿತ ದಲಿತನನ್ನಷ್ಟೆ ಮುನ್ನಡೆಸಬಲ್ಲ.
- ಆಕೆ ದಲಿತಳಾಗಿರುವುದರಿಂದ ಅಧಿಕಾರ ನಡೆಸುವಂತಿಲ್ಲ. ಶಾಸ್ತ್ರಗಳಾಗಲೀ, ಪರಂಪರೆಯಾಗಲೀ ಅದಕ್ಕೆ ಅವಕಾಶ ನೀಡುವುದಿಲ್ಲ.
- ಆಕೆ ವಜ್ರ ಧರಿಸುತ್ತಾಳೆ. ಶಾಸ್ತ್ರಗಳಾಗಲೀ, ಪರಂಪರೆಯಾಗಲೀ ಅದಕ್ಕೆ ಅವಕಾಶ ನೀಡುವುದಿಲ್ಲ.
- ಆಕೆ ತಲೆಯೆತ್ತಿ ಮಾತನಾಡುತ್ತಾಳೆ. ಶಾಸ್ತ್ರಗಳಾಗಲೀ, ಪರಂಪರೆಯಾಗಲೀ ಅದಕ್ಕೆ ಅವಕಾಶ ನೀಡುವುದಿಲ್ಲ. ದಲಿತ ಪರಂಪರೆಯೂ ಸಹ ಹೆಂಗಸಿಗೆ ಅದನ್ನು ಮಾನ್ಯಮಾಡುವುದಿಲ್ಲ.

ಆಕೆ ಕೋಟ್ಯಾಧಿಪತಿಯಾಗಿದ್ದಾಳೆ. ದಲಿತನೋರ್ವ ಸಂಪತ್ತನ್ನು ಗಳಿಸುವುದಕ್ಕೆ ಶಾಸ್ತ್ರಗಳಾಗಲೀ, ಪರಂಪರೆಯಾಗಲೀ ಅವಕಾಶ ನೀಡುವುದಿಲ್ಲ ಅಥವಾ ದಲಿತರಲ್ಲಿ ಅಂಥ ಸಿರಿವಂತ ಪರಂಪರೆ ಇಲ್ಲವಲ್ಲ.

ಇಡೀ ಸಭೆ ಖುಷಿಯಿಂದ ಕರತಾಡನ ಮಾಡಿತು. 'ಆದರೆ ನಿಜವಾಗಿ ಗೆದ್ದದ್ದು ಯಾರು?' ಎಂದು ಆ ಸಮಾಜ ಸ್ತ್ರೀಯೋರ್ವಳು ಕೇಳಿದಳು.

ಒಬ್ಬ ವ್ಯಕ್ತಿ ಅಂತಿಮವಾಗಿ ಫಲಿತಾಂಶ ಘೋಷಿಸಲು ಬಂದ. 'ಆಸ್ಟ್ರೇಲಿಯಾದಲ್ಲಿ ಆ್ಯಂಡ್ರ್ಯು ಸೈಮಂಡ್ಸ್‌ನನ್ನು ಜನಾಂಗೀಯತೆಗೊಳಪಡಿಸಿದ ಆರೋಪದಿಂದ ಹೊರಬರಲು ಒಗಟಾಗಿ ಶ್ರಮಿಸಿ, ಅಂತಾರಾಷ್ಟ್ರೀಯವಾಗಿ ಭಾರತದ ಘನತೆಯನ್ನು ಎತ್ತಿಹಿಡಿದ ಭಾರತೀಯ ಕ್ರಿಕೆಟ್ ತಂಡಕ್ಕೆ ವರ್ಷದ ವ್ಯಕ್ತಿ ಪ್ರಶಸ್ತಿ ಸಂದಿದೆ.'

"ಆತ್ಮೀಯ ಕುಲಬಾಂಧವರೇ, ಈ ನೇರ ಟೀವಿ ಶೋಗೆ ನಿಮಗೆಲ್ಲಾ ಸ್ವಾಗತ" ಎಂದು ಪ್ರಸಿದ್ಧ ಸುದ್ದಿ ಚಾನೆಲೊಂದರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಳುತ್ತಾ, "ಸಮಾಧಾನ, ಈ ಸಲ ನಾವೇನೂ ಆಹಾರವನ್ನಿಟ್ಟುಕೊಂಡು ಜಗಳ ಮಾಡುವುದು ಬೇಡ. ಈ ಹಿಂದೆ ಸಾಕಷ್ಟು ಆಹಾರ ಇದ್ದಾಗ್ಯೂ ನಾವೆಲ್ಲಾ ಬಾಳೆ ತೋಟದಲ್ಲಿ ಜಗಿಯುತ್ತಿದ್ದ ಕೋತಿಗಳಂತಾಗಿದ್ದೆವು" ಎಂದು ಸಂತೈಸಿದ.

'ನೀವು ಕಾಣುತ್ತಿರುವಂತೆ ಈ ಸಲದ ತೀರ್ಪು ಸಮಿತಿ ನುರಿತ ವೃತ್ತಿಪರತೆಯಿಂದ ಕೂಡಿದ್ದು ಪ್ರಾಧ್ಯಾಪಕರು, ಅಂಕಣಕಾರರು, ಸಿನಿಮಾ ನಿರ್ಮಾಪಕರು, ಕಲಾಗಾರರು, ನ್ಯಾಯವಾದಿಗಳು, ಸಭ್ಯಸ್ಥರು, ಮತ್ತು ಮಹಿಳೆಯರಿಂದ ಕೂಡಿದೆ' ಎಂದು ಹೆಮ್ಮೆಯಿಂದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಘೋಷಿಸಿದ.

'ನಾವೆಲ್ಲಾ ೫೦ರ ಆಜುಬಾಜಿನಲ್ಲಿರುವವರು. ಈ ಸಲ ನಮ್ಮೆದುರು ಬಹಳ ಮುಖ್ಯವಾದ ಸಮಸ್ಯೆಯೊಂದಿದೆ. ಅಂದರೆ ಭಾರತ ರತ್ನ ಪ್ರಶಸ್ತಿಯನ್ನು ನೀಡುವುದು ಯಾರಿಗೆ ಎನ್ನೋ ಸಂಗತಿಯ ಬಗ್ಗೆ ನಿರ್ಧಾರ ಮಾಡಬೇಕಿದೆ' ಎಂದನಾತ.

'ರಾಜಕಾರಣಿಗಳು ಸಾರ್ವಜನಿಕ ಸಂಘ-ಸಂಸ್ಥೆಗಳನ್ನು ಹಾಳುಗೆಡವಿದ್ದಾರೆ. ನಾವೆಲ್ಲಾ ಅಸಹಾಯಕರಾಗಿ ನೋಡುತ್ತಿದ್ದೆವು. ನಿಜವಾಗಿಯೂ ಈ ವ್ಯವಸ್ಥೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಿಂದಲೇ ಆದುದು. ದುರಂತವೆಂದರೆ ವಯಸ್ಕ ಮತದಾನದ ಹಕ್ಕು ಎಂಥ ಅನಕ್ಷರಸ್ತನಿಗೂ ಸಹ ಮತ ಚಲಾಯಿಸುವ ಹಕ್ಕು ನೀಡಿಬಿಟ್ಟಿದೆ. ಇವರ್ಯಾರಿಗೂ ಪ್ರಜಾಪಭುತ್ವದ ಜನಕರಾದ ಥಾಮಸ್ ಹಾಬ್ಸ್, ಜಾನ್ ಲಾಕ್, ರೂಸ್ಸೋ - ಇವರ ಬಗ್ಗೆ ಅರಿವಿಲ್ಲವಾದರೂ ಅವರೆಲ್ಲಾ ನಮಗೆ ಸಮಾನರು.'

ಸಭಿಕರು ಒಂದೇ ಧ್ವನಿಯಲ್ಲಿ, 'ವಯಸ್ಕ ಮತದಾನ ಪದ್ಧತಿ ರದ್ದಾಗಲಿ' ಎಂದು ಅರಚಿಕೊಂಡರು.

'ನಾವೆಲ್ಲಾ ಕೇವಲ ವೀಕ್ಷಕ ವಿವರಣಾಗಾರರೆಂದು ಕೂರಲಾಗದು. ನಾವು ರಾಜಕಾರಣವನ್ನು ನಿಯಂತ್ರಿಸಲಾಗದು. ಎಲ್ಲಾ ಸುದ್ದಿ ಜಾಲಗಳು ಈ ಬಗ್ಗೆ ಒಮ್ಮತಕ್ಕೆ ಬಂದಿದ್ದೇವೆ' ಎಂದು ಬೀಗಿದನು ಆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ.

'ಟೀವಿ ಮಾಧ್ಯಮವು ಚಿರಾಯುವಾಗಲಿ' ಎಂದು ಕಿರುಚಿಕೊಂಡ ಒಬ್ಬ ಆಹಾರ ಮಾನವಶಾಸ್ತ್ರಜ್ಞ. 'ನಾವೀಗ ಭಾರತರತ್ನ ಯಾರು ಎಂದು ನಿರ್ಧರಿಸಲಿದ್ದೇವೆ' ಎಂದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ. ಆತನೇ ಮುಂದುವರೆದು ಮತ್ತನೆಯ ಧ್ವನಿಯಲ್ಲಿ ಹೇಳಿದ, 'ಮ[illegible] ನಾವಿಗ ಸಂದಿಗ್ಧ ಪ್ರಶ್ನೆಯೊಂದರಲ್ಲಿ ಸಿಲುಕಿದ್ದೇವೆ.'

> **'ಭಾರತೀಯ ರಾಜಕಾರಣದಲ್ಲಿ ಕಾನ್ಶಿರಾಮ್ ಪ್ರಾಮಾಣಿಕತೆ ಮತ್ತು ಸಮಗ್ರತೆಯ ಪ್ರತೀಕವಾಗಿದ್ದಾರೆ. ಅಲ್ಲದೆ ಅವರು ಯಾವುದೇ ರೀತಿಯ ವೈಯಕ್ತಿಕ ಸಂಪತ್ತನ್ನು ಗಳಿಸಲಿಲ್ಲ. ಪೋಷಕರಿಗಾಗಲೀ, ಸಂಬಂಧಿಕರಿಗಾಗಲೀ ಪಕ್ಷದ ಹಣದಿಂದ ಏನನ್ನೂ ನೀಡಲಿಲ್ಲ. ಇದೆಲ್ಲಾ ನಮ್ಮ ನಾಗರೀಕತೆಯ ಬುಡವನ್ನೇ ಭೇದಿಸುತ್ತದೆ. ಪ್ರಜ್ಞಾವಂತ ನಾಗರಿಕರಾದ ನಾವು ನಮ್ಮ ಕುಟುಂಬ, ಮತ್ತು ಸಂಬಂಧಿಕರಿಗಷ್ಟೇ ಬೆಂಬಲ ವ್ಯಕ್ತಪಡಿಸುತ್ತೇವೆ. ನಾವು ಬಡವ ರಾಗಿರುವುದೆಂದರೆ ನಮಗೆ ಪ್ರಾಮಾಣಿಕತೆ ಮತ್ತು ಸಮಗ್ರತೆಯಿಂದ ಏನು ಪ್ರಯೋಜನ? ನಮಗೆ ನಾವು ಸೇವೆ ಮಾಡಿಕೊಳ್ಳುವುದು ಎಂದರೆ ದೇಶ ಸೇವೆ ಮಾಡಿದಂತೆಯೇ ಆಗಿರುವುದರಿಂದ ಕಾನ್ಶಿರಾಮ್ ದೇಶ ಸೇವೆ ಮಾಡಲೂ ಇಲ್ಲ, ಇತ್ತ ವೈಯಕ್ತಿಕವಾಗಿ ತನ್ನ ಕುಟುಂಬಕ್ಕಾಗಿ ಸಿರಿತನವನ್ನೂ ಸಹ ಗಳಿಸಲಿಲ್ಲ'**



ಭಾರತ ರತ್ನ ಯಾರಿಗೆ?

ಯಾರೋ ಒಬ್ಬರು ಕಾನ್ಶಿರಾಮ್‌ರವರ ಹೆಸರನ್ನು ಭಾರತರತ್ನಕ್ಕೆ ಸೂಚಿಸಿದ್ದಾರೆ' ಎಂದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಖಿನ್ನ ಮನಸ್ಕನಾಗಿ ನುಡಿದ. 'ಅಂದರೆ ನಾವು ಒಬ್ಬ ದಲಿತ ರತ್ನನನ್ನು ಆರಿಸಲಿದ್ದೇವೆಯೇ' ಎಂದು ಅಚ್ಚರಿಯಿಂದ ಹೇಳಿದನೋರ್ವ ಸಾವಯವ ಆಹಾರ ತಜ್ಞ. 'ನಾವಿದನ್ನಿನ್ನು ಬಹಿಷ್ಕರಿಸದೆ ವಿಧಿಯಿಲ್ಲ' ಎಂದನೋರ್ವ ಸಿದ್ಧಾಂತಿ.

ಏನೋ ಅವಘಡ ಸಂಭವಿಸಲಿದೆಯೆಂದು ಅರಿತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಘೋಷಿಸಿದ, 'ಚಿಂತೆಯಿಲ್ಲ. ಯಾವುದೇ ಹಿತಾಸಕ್ತಿಯಿಲ್ಲದ ತೀರ್ಪುಗಾರ ಆ ಹೆಸರನ್ನು ಸಾಮಾಜಿಕ ನೈತಿಕತೆ, ಸಾರ್ವಜನಿಕ ನೀತಿ, ಮತ್ತು ಸಾರ್ವತ್ರಿಕ ನ್ಯಾಯ ಅನ್ನೂ ಸಂಗತಿಗಳ ಆಧಾರದ ಮೇಲೆ ತಿರಸ್ಕರಿಸಿದ್ದಾರೆ. (ಸಭಿಕರಲ್ಲಿ ಕೇಕೆಯ ವಾತಾವರಣ ತುಂಬಿ ಪರಸ್ಪರ ಅಭಿನಂದನೆಗಳಲ್ಲಿ ತೊಡಗುತ್ತಾರೆ).

'ಭಾರತ ಸೇರಿರುವುದು ... ನಮಗೇನೆ' ಒಬ್ಬ ಸೆಕ್ಯುಲರ್ ವಿಚಾರವಾದಿ ಖುಷಿಯಿಂದ ಘೋಷಿಸಿದ, 'ಹಾಗಾಗಿ ರತ್ನವೂ ಸಹ ನಮಗೇ ಸೇರುತ್ತದೆ ಎಂದು ಕೋಮುವಾದಿಯೊಬ್ಬ ಧ್ವನಿಗೂಡಿಸಿದ.

ಕಾನ್ಶಿರಾಮ್‌ರವರ ಅಭ್ಯರ್ಥಿತನವನ್ನು ತೀರ್ಪು ಸಮಿತಿಯು ತಿರಸ್ಕರಿಸಲು ಈ ಕೆಳಗಿನ ಕಾರಣಗಳನ್ನು ನೀಡಿತು ಎಂದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಳಿದ:

– ಭಾರತೀಯ ರಾಜಕಾರಣದಲ್ಲಿ ಕಾನ್ಶಿರಾಮ್ ಪ್ರಾಮಾಣಿಕತೆ ಮತ್ತು ಸಮಗ್ರತೆಯ ಪ್ರತೀಕವಾಗಿದ್ದಾರೆ. ಅಲ್ಲದೆ ಅವರು ಯಾವುದೇ ರೀತಿಯ ವೈಯಕ್ತಿಕ ಸಂಪತ್ತನ್ನು ಗಳಿಸಲಿಲ್ಲ. ಪೋಷಕರಿಗಾಗಲೀ, ಸಂಬಂಧಿಕರಿಗಾಗಲೀ ಪಕ್ಷದ ಹಣದಿಂದ ಏನನ್ನೂ ನೀಡಲಿಲ್ಲ. ಇದೆಲ್ಲಾ ನಮ್ಮ ನಾಗರೀಕತೆಯ ಬುಡವನ್ನೇ ಭೇದಿಸುತ್ತದೆ. ಪ್ರಜ್ಞಾವಂತ ನಾಗರಿಕರಾದ ನಾವು ನಮ್ಮ ಕುಟುಂಬ, ಮತ್ತು ಸಂಬಂಧಿಕರಿಗಷ್ಟೇ ಬೆಂಬಲ ವ್ಯಕ್ತಪಡಿಸುತ್ತೇವೆ. ನಾವು ಬಡವರಾಗಿರುವುದೆಂದರೆ ನಮಗೆ ಪ್ರಾಮಾಣಿಕತೆ ಮತ್ತು ಸಮಗ್ರತೆಯಿಂದ ಏನು ಪ್ರಯೋಜನ? ನಮಗೆ ನಾವು ಸೇವೆ ಮಾಡಿಕೊಳ್ಳುವುದು ಎಂದರೆ ದೇಶ ಸೇವೆ ಮಾಡಿದಂತೆಯೇ ಆಗಿರುವುದರಿಂದ ಕಾನ್ಶಿರಾಮ್ ದೇಶ ಸೇವೆ ಮಾಡಲೂ ಇಲ್ಲ, ಇತ್ತ ವೈಯಕ್ತಿಕವಾಗಿ ತನ್ನ ಕುಟುಂಬಕ್ಕಾಗಿ ಸಿರಿತನವನ್ನೂ ಸಹ ಗಳಿಸಲಿಲ್ಲ.

– ಸಾವಿರಾರು ಹಳ್ಳಿಗಳನ್ನು ಕಾನ್ಶಿರಾಮ್ ಭೇಟಿ ಮಾಡಿ, ನೂರಾರು ಕಿಲೋಮೀಟರ್‌ಗಳನ್ನು ಬರೀ ಸೈಕಲ್‌ನಲ್ಲೇ ಸುತ್ತಾಡಿದ್ದು ಕೆಟ್ಟ ಸಂಪ್ರದಾಯವೊಂದಕ್ಕೆ ನಾಂದಿ ಹಾಡಿದೆ. ಜನರ ಬಗ್ಗೆ ತಿಳಿದುಕೊಳ್ಳಲು ಗ್ರಾಮಗಳಿಗೇಕೆ ಅವರು ಭೇಟಿ ನೀಡಬೇಕು? ಇಂಟರ್‌ನೆಟ್ ಬಳಸಲಿಲ್ಲವೇಕೆ? ನಾವು ಗ್ರಾಮಗಳಿಗೆ ಭೇಟಿ ನೀಡಲಿಲ್ಲವೆಂದು ನಾವು ದಡ್ಡರೇ? ಆತನೇಕೆ ಖಾಸಗಿ ವಿಮಾನ ಅಥವಾ ಕಾರನ್ನು ಬಳಸಲಿಲ್ಲ... ಈ ರೀತಿಯ ಮಾನದಂಡಗಳನ್ನು ಪರಿಗಣಿಸಿದರೆ ನಾವು ಯಾರೂ ಸಹ ಭಾರತ ರತ್ನ ಪ್ರಶಸ್ತಿಗೆ ಪಾತ್ರರಾಗಬಹುದೇ? ಎಂದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ.

– ಮಿಲಿಯಗಟ್ಟಳೆ ದಲಿತರನ್ನು ಆತ ಜಾಗೃತಗೊಳಿಸಿ ಅವರ ಆಶೋತ್ತರಗಳನ್ನು ಪ್ರೇರೇಪಿಸಿದ್ದಲ್ಲದೆ ಅವರಿ

ನನಗೆ ಮುಕ್ತಿ ಬೇಕಾಗಿದೆ

ಗೊಂದು ಘನತೆಯನ್ನು ತಂದುಕೊಟ್ಟ ಎನ್ನೋದು ದಲಿತರಿಗೆ ಹಿಂಸೆಯ ಸಂಗತಿ ಎಂದು ದಾರ್ಶನಿಕನಂತೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೇಳಿದ.

'ನಮ್ಮ ದಲಿತರು ಮಾನವ ಜನಾಂಗಕ್ಕೆ ಸೇವೆ ಸಲ್ಲಿಸುವವರಾಗಿದ್ದಾರೆ... ಅವರು ನಿಜವಾದ ಮಿಶಿನರಿಗಳಂತೆ... ಅವರು ಬದುಕಿದ್ದೇ ಯಾವುದೇ ಫಲಾಪೇಕ್ಷೆಯಿಲ್ಲದೆ... ನಾವು ಎಷ್ಟು ಸುಖಿಗಳು... ಎಷ್ಟು ಸುಖಿಗಳು...' ಎಂದು ಭೂತದ ಬಗ್ಗೆ ಭಾವುಕನಾಗಿ ಹೇಳಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ. ಸಭಿಕರೆಲ್ಲಾ ಅರಚಿದರು, "ಹಿರಿಯ ದಲಿತರು ಚಿರಾಯುವಾಗಲಿ".

'ಸಚಿನ್ ತೆಂಡೂಲ್ಕರ್‌ಗೆ ಭಾರತ ರತ್ನ ಪ್ರಶಸ್ತಿ ಸಂದಿದೆ' ಎಂದು ಘೋಷಿಸಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ. ತೀರ್ಪುಗಾರರ ವರದಿಯನ್ನು ಓದಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, 'ಸಚಿನ್ ತನಗಾಗಿ ಮತ್ತು ತನ್ನ ಕುಟುಂಬದವರಿಗಾಗಿ ಶತಕಗಳನ್ನು ಹೊಡೆಯುತ್ತಾನೆ. ಹಸಿವಿನಿಂದ ಬಳಲುವವರಿಗಾಗಿ ಒಂದು ರೆಸ್ಟೋರೆಂಟ್ ತೆರೆದಿದ್ದಾನೆ. ಈಗ ಒಬ್ಬ ನಿರ್ಮಾಪಕನಾಗಿ ವಸತಿಹೀನರಿಗೆ ಮನೆಗಳನ್ನು ನಿರ್ಮಿಸುತ್ತಿದ್ದಾನೆ' ಎಂದ.

ಅಲ್ಲಿದ್ದ ಸದಸ್ಯರೆಲ್ಲಾ ಅವಘಡ ಸಂಭವಿಸುವುದನ್ನು ತಪ್ಪಿಸಿಕೊಳ್ಳಲು ಔತಣಕೂಟದತ್ತ ಧಾವಿಸುತ್ತಿದ್ದರು. ಹೋಟೆಲ್ ಕೆಲಸಗಾಗರರು ಟಿವಿ ಸ್ಟೇಷನ್‌ನಿಂದ ಓಡಿ ಹೋಗತೊಡಗಿದರು.

ದಲಿತರ ಪೂರ್ಣ ವಿಮೋಚನೆಯನ್ನು ಸಾಧಿಸುವುದು ಹೇಗೆ? ಅದರ ಆದರ್ಶ ಎಂದರೆ ಅಸ್ಪೃಶ್ಯತೆ ತೊಲಗಿ ಜಾತಿ ನಿರ್ಮೂಲನೆ ಆಗಬೇಕು. ಹಾಗೆಯೇ ಹಿಂದೂ ಧರ್ಮ ಎನ್ನೋದು ತನ್ನಷ್ಟಕ್ಕೇ ಕ್ಷೀಣಗೊಳ್ಳಬೇಕು ಮತ್ತು ಬ್ರಾಹ್ಮಣ್ಯ ಎನ್ನೋ ಐಡಿಯಾಲಜಿ ನಾಶವಾಗಬೇಕು. ಮನುಧರ್ಮ ಎನ್ನೋದು ಅಪ್ರಸ್ತುತವಾಗಿ ದಲಿತರು ರಾಜಕೀಯ ಅಧಿಕಾರವನ್ನು ಹಿಡಿದುಕೊಳ್ಳಬೇಕು.

ಎಲ್ಲಾ ದಲಿತ ಚಳುವಳಿಗಳೂ ಸಹ ಮೇಲಿನ ಉದ್ದೇಶಗಳಲ್ಲಿ ತೊಡಗಿಕೊಂಡಿವೆ. ಹೀಗಿದ್ದರೂ ಅವುಗಳಲ್ಲಿ ಬಹಳಷ್ಟು ಸಂಘಟನೆಗಳು ಅಮೂರ್ತವಾಗಿರುವುದರಿಂದ ಹಿಂದೂ ಧರ್ಮದ ಮತ್ತು ಬ್ರಾಹ್ಮಣ್ಯದ ಜೀವವಾಗಿರುವ ವೃತ್ತಿಯ ಪರಿಶುದ್ಧತೆಯನ್ನು ವಿಶ್ಲೇಷಿಸುವಲ್ಲಿ ಈ ಸಂಘಟನೆಗಳು ಅಷ್ಟೇನೂ ತೊಡಗಿಸಿಕೊಂಡಿಲ್ಲ.

ಇದಕ್ಕೆ ಒಂದು ಸ್ಪಷ್ಟ ನಿದರ್ಶನ ಎಂದರೆ ಪಂಜಾಬ್. ಅಲ್ಲಿ ಹಿಂದೂ ಧರ್ಮವನ್ನು ಕಿತ್ತೊಗೆದರು. ಆದರೆ ಚಮ್ಮಾರರು ಮತ್ತು ಭೂರಹಿತ ಕೃಷಿ ಕಾರ್ಮಿಕರು ಇನ್ನೂ ಸಹ ದಲಿತರಾಗೇ ಉಳಿದಿದ್ದಾರೆ. ಅಲ್ಲದೆ ಪಂಜಾಬ್‌ನಲ್ಲಿ ದಲಿತರು ರಾಜಕೀಯ ಅಧಿಕಾರ ಹಿಡಿಯುವುದೂ ಸಾಧ್ಯವಾಗಲಿಲ್ಲವಾದರೂ ಒಬ್ಬ ದಲಿತ ಬೂರ್ಸ್ವಾ ಅಲ್ಲಿ ಉದಯಿಸಲು ಸಾಧ್ಯವಾಗಲಿಲ್ಲ.

ಹಾಗೆಯೇ ತಮಿಳು ನಾಡು ಮತ್ತೊಂದು ನಿದರ್ಶನ. ಅಲ್ಲಿ ಬ್ರಾಹ್ಮಣರನ್ನು ಅಧಿಕಾರದಿಂದ ಓಡಿಸಿದರು. ಆದರೆ ಅಲ್ಲಿ ಪೌರ ಕಾರ್ಮಿಕರು, ಚಮ್ಮಾರರು, ಭೂರಹಿತ ಕೃಷಿ ಕಾರ್ಮಿಕರೆಲ್ಲಾ ದಲಿತರಾಗೇ ಮುಂದುವರೆದಿದ್ದಾರೆ. ತಮಿಳುನಾಡು ಸಹ ದಲಿತರಿಗೆ ಅಧಿಕಾರ ತಿರಸ್ಕರಿಸಿದರೂ ಅಲ್ಲೊಬ್ಬ ದಲಿತ ಬೂರ್ಸ್ವಾನನ್ನು ಹುಟ್ಟುಹಾಕಲಿಲ್ಲ.

ಹೀಗಿರುವಾಗ ಉತ್ತರ ಪ್ರದೇಶದಲ್ಲಿ ದಲಿತರು ರಾಜಕೀಯ ಅಧಿಕಾರವನ್ನು ಸೆರೆಹಿಡಿದರು. ಹಾಗಾದರೆ

ದಲಿತರು ಸಿಖ್ ಧರ್ಮ, ಬೌದ್ಧ ಧರ್ಮ, ಕ್ರೈಸ್ತ ಧರ್ಮ ಅಥವಾ ಇಸ್ಲಾಂ ಧರ್ಮಗಳಿಗೆ ಪರಿವರ್ತನೆಗೊಂಡಾಗ್ಯೂ ಸಹ ಅವರೇಕೆ ಇನ್ನೂ ಸಕಾರಾತ್ಮ ಕ್ರಿಯೆಗಾಗಿ ಹಾತೊರೆಯುತ್ತಿದ್ದಾರೆ. ಹಾಗೆಂದೂ ಹಿಂದೂ ಆಗಿಯೇ ಉಳಿಯಬೇಕೆಂದು ಅರ್ಥವಲ್ಲ. ಆದರೆಜಾತಿ ಆಧಾರಿತ ಕಸುಬುಗಳಿಂದ ಹೊರಬರದ ಹೊರತು ದಲಿತರೆಲ್ಲಾ ಹಿಂದೂ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯಿಂದ ಮುಕ್ತಿ ಪಡೆಯಲಾಗುವುದಿಲ್ಲ. ಈ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯು ಜಾತಿ ವ್ಯವಸ್ಥೆಯ ಜೀವಾಳವಾಗಿದೆ. ಈ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯೇ ಜಾತಿ ವ್ಯವಸ್ಥೆ ಶ್ರೇಣೀಕೃತ ವೃತ್ತಿಯ ಪ್ರತಿರೂಪವಾಗಿ ಜಾತಿ ಪದ್ಧತಿಯ ತಳಪಾಯವಾಗಿರುವುದು. ಹಾಗಾದರೆ ದಲಿತರನ್ನು ಈ ಜಾತಿ ಆಧಾರಿತ ವೃತ್ತಿಗಳಿಂದ ಹೊರತರಲಾಗುವುದಿಲ್ಲವೇ? ಅದು ಸಾಧ್ಯವೇ?

ಅಲ್ಲಿ ಕೇವಲ ರಾಜಕೀಯ ಅಧಿಕಾರದಿಂದ ದಲಿತರು ಪೂರ್ಣವಾಗಿ ವಿಮೋಚನೆಗೊಂಡರೆಂದು ಹೇಳಬಹುದೇ? ಅಂದರೆ ಅಲ್ಲಿನ ಜಾತಿ ಆಧಾರಿತ ಕಸುಬುಗಳು, ಚಮ್ಮಾರರು ಮತ್ತು ಕೃಷಿಯಾಳುಗಳು ಇನ್ನೊಂದು ಎರಡು ದಶಕಗಳಲ್ಲಿ ಮುಕ್ತರಾಗುತ್ತಾರೆಂದು ಆಶಿಸಬಹುದೇ?

ದಲಿತರು ಸಿಖ್ ಧರ್ಮ, ಬೌದ್ಧ ಧರ್ಮ, ಕ್ರೈಸ್ತ ಧರ್ಮ ಅಥವಾ ಇಸ್ಲಾಂ ಧರ್ಮಗಳಿಗೆ ಪರಿವರ್ತನೆಗೊಂಡಾಗ್ಯೂ ಸಹ ಅವರೇಕೆ ಇನ್ನೂ ಸಕಾರಾತ್ಮ ಕ್ರಿಯೆಗಾಗಿ ಹಾತೊರೆಯುತ್ತಿದ್ದಾರೆ. ಹಾಗೆಂದೂ ಹಿಂದೂ ಆಗಿಯೇ ಉಳಿಯಬೇಕೆಂದು ಅರ್ಥವಲ್ಲ.ಆದರೆಜಾತಿ ಆಧಾರಿತ ಕಸುಬುಗಳಿಂದ ಹೊರಬರದ ಹೊರತು ದಲಿತರೆಲ್ಲಾ ಹಿಂದೂ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯಿಂದ ಮುಕ್ತಿ ಪಡೆಯಲಾಗುವುದಿಲ್ಲ. ಈ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯು ಜಾತಿ ವ್ಯವಸ್ಥೆಯ ಜೀವಾಳವಾಗಿದೆ. ಈ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಯೇ ಜಾತಿ ವ್ಯವಸ್ಥೆ ಶ್ರೇಣೀಕೃತ ವೃತ್ತಿಯ ಪ್ರತಿರೂಪವಾಗಿ ಜಾತಿ ಪದ್ಧತಿಯ ತಳಪಾಯವಾಗಿರುವುದು. ಹಾಗಾದರೆ ದಲಿತರನ್ನು ಈ ಜಾತಿ ಆಧಾರಿತ ವೃತ್ತಿಗಳಿಂದ ಹೊರತರಲಾಗುವುದಿಲ್ಲವೇ? ಅದು ಸಾಧ್ಯವೇ?

ಅನೇಕ ದಲಿತರು ಅಂಥ ಜಾತಿ ಆಧಾರಿತ ವೃತ್ತಿಗಳಿಂದ ಹೊರ ಬಂದುಬಿಟ್ಟಿದ್ದಾರೆ. ಅನೇಕ ದಲಿತ ನಾಯಕರು, ಬರಹಗಾರರು, ಕಾರ್ಯಕರ್ತರು ತಮ್ಮ ಸೈದ್ಧಾಂತಿಕ ನೆಲೆಗಳು ಭಿನ್ನವಾಗಿದ್ದರೂ ಸಹ ಅವರೆಲ್ಲಾ ಈ ಜಾತಿ ಆಧಾರಿತ ಕೆಲಸಗಳಿಂದ ಮುಕ್ತಿ ಪಡೆದು ಅನಂತರದಲ್ಲಿ ದಲಿತ ಸಮುದಾಯಗಳ ಮುಕ್ತಿಯತ್ತ ಗಮನಹರಿಸಿದರು.

ಅಂದರೆ ಬಹು ಮಂದಿ ದಲಿತರು ತಮ್ಮ ಜಾತಿ ಆಧಾರಿತ ವೃತ್ತಿಗಳಿಂದ ಹೊರ ಬಂದಿದ್ದಾರೆಂದರೆ ದಲಿತರೆಲ್ಲರಿಗೂ ಈ ಜಾತಿ ಆಧಾರಿತ ವೃತ್ತಿಗಳಿಂದ ಹೊರ ಬರಬಹುದು. ಹೀಗೆ ಅಂತಿಮವಾಗಿ ಜಾತಿಯ ಬುಡಕ್ಕೆ ಪೆಟ್ಟು ಹಾಕುವ ಮುಂಚೆ ಈ ಜಾತಿ ಆಧಾರಿತ ವೃತ್ತಿಯಿಂದ ಬಿಡುಗಡೆ ಹೊಂದುವುದೆಂದರೆ ಅರ್ಧ ಮುಕ್ತಿಯನ್ನು ಪಡೆದಂತೆಯೇ ಸರಿ.

ನಮ್ಮಲ್ಲಿ ಅನೇಕರು ನಾಯಕರಾಗಿ ಏನು ಮಾಡುತ್ತೇವೋ ಅದನ್ನು ನಮ್ಮ ಖಾಸಗಿ ಬದುಕಿನಲ್ಲಿ ಮಾಡುತ್ತೇವೆಯೇ? ಜಾತಿ ಆಧಾರಿತ ವೃತ್ತಿಯ ಹೊರಗೆ ನಾವೆಲ್ಲಾ ಭದ್ರತೆಯ ಉದ್ಯೋಗವೊಂದರ ಬಗ್ಗೆ ಚಿಂತಿಸುತ್ತಿರುತ್ತೇವೆ. ದಲಿತ ಕೇರಿಗಳಿಂದ ಹೊರಗೆ ನಮ್ಮ ವಾಸ ಸ್ಥಳವನ್ನು ಹುಡುಕಿಕೊಳ್ಳುತ್ತೇವೆ. ಹಾಗೆಯೇ ಮಕ್ಕಳಿಗೆ ಉತ್ತಮ ಶಿಕ್ಷಣ, ಉತ್ತಮ ಬಟ್ಟೆ, ಜೀವ ವಿಮೆ ಮತ್ತು ವೈದ್ಯಕೀಯ ಸೌಕರ್ಯ ಮುಂತಾದುವುಗಳ ಬಗ್ಗೆ ಯೋಚಿಸುತ್ತಿರುತ್ತೇವೆ. ಹೀಗಿರುವಾಗ ಬಹುದೊಡ್ಡ ಸಮುದಾಯದ ವಿಮೋಚನೆಯನ್ನು ಅನಂತರದಲ್ಲಿ ಯೋಚಿಸುತ್ತಿರುತ್ತೇವೆ.

ಆದ್ದರಿಂದ ಯಾವುದು ನಮ್ಮ ನಾಯಕ ದಿಗ್ಗಜರಿಗೆ ಒಳಿತೆನಿಸುತ್ತದೋ: ಅದೇ ದಲಿತ ಸಮುದಾಯಕ್ಕೂ ಒಳ್ಳೆಯದೇ ಆಗಿರುತ್ತದೆ. ಇದರ ಬಗ್ಗೆ ನಮ್ಮ ಸಹಮತ ಏರ್ಪಟ್ಟಲ್ಲಿ ನಮ್ಮನ್ನು ಅನುಸರಿಸುತ್ತಿರುವ ದಲಿತ ಸಮುದಾಯಕ್ಕೆ ದಲಿತ ವಿಮೋಚನೆ ಹೇಗೆ ಎಂಬುದರ ಬಗ್ಗೆ ತಿಳಿಸಬೇಕಲ್ಲವೇ?

ಆದರೆ ಬಹು ದೊಡ್ಡ ಪ್ರಶ್ನೆ ಹಾಗೆಯೇ ಉಳಿದುಕೊಂಡುಬಿಡುತ್ತದೆ – ಎಲ್ಲ ದಲಿತರನ್ನೂ ವಿಮೋಚನೆಗೊಳಿಸಲು ಸಾಧ್ಯವೇ? ಎಲ್ಲಾ ದಲಿತರನ್ನು ಸಾಮಾನ್ಯವಾದ ಕೆಲಸಗಳಲ್ಲಿ ತೊಡಗಿಸಲು ಸಾಧ್ಯವೇ? ಎಲ್ಲಾ ದಲಿತ ಸಮುದಾಯವನ್ನು ಉತ್ತಮ ಬದುಕಿನತ್ತ ಕೊಂಡೊಯ್ಯಲು ಸಾಧ್ಯವೇ? ಭಾರತದಲ್ಲಿ ಮುಂದುವರೆಯುತ್ತಿರುವ ಆರ್ಥಿಕ ವಿಸ್ತಾರ ದಲಿತರಿಗೆಲ್ಲಾ ಅವಕಾಶಗಳನ್ನು ಕಲ್ಪಿಸುತ್ತದೆಯೇ?

ತಾರ್ಕಿಕವಾಗಿ, ಹಿಂದೂ ಧರ್ಮದಿಂದ ಬಿಡುಗಡೆ ಹೊಂದುವುದನ್ನೂ ಸೇರಿಸಿ ಮೇಲಿನವೆಲ್ಲವೂ ಸಾಧ್ಯವಿದೆ. ಆದರೆ ಅದಕ್ಕೊಂದು ನೀಲ ನಕಾಶೆಯ ಅಗತ್ಯವಿದೆ. ೩೦ ವರ್ಷಗಳ ಹಿಂದೆ ಅತ್ಯುತ್ತಮ ಇಂಜಿನಿಯರ್‌ಗಳೂ ಸಹ ೮೦೦ ಮಂದಿಯನ್ನು ಹೊತ್ತೊಯ್ಯುವ ವಿಮಾನ ಕುರಿತು ಯೋಚಿಸಿರಲಿಲ್ಲ. ಆದರೆ ಹೊಸ ನಕಾಶೆಯು ತಯಾರಾದಾಕ್ಷಣ ಅಂಥ ಕನಸಿನ ಯಂತ್ರ ತಯಾರಿಕೆಯಲ್ಲಿ ತೊಡಗಿದರು. ಮುಂದಿನ ವಾರಗಳಲ್ಲಿ ದಲಿತ್ ಡೈರಿ ಎಲ್ಲಾ ದಲಿತರನ್ನು ಜಾತಿ ಆಧಾರಿತ ವೃತ್ತಿಯಿಂದ ಹೊರ ತರುವ ನೀಲ ನಕಾಶೆಯ ಬಗ್ಗೆ ಸೂಚಿಸಲಿದೆ. □

ಬುದ್ಧಾಯಣ

೩೧

ದೀಕ್ಷೆ ಕರುಣಿಸಿ ಪ್ರಭುವೆ' ಎಂದಾಗ ಉಪಾಲಿಯನ್ನು ಉದ್ದೇಶಿಸಿದ ಬುದ್ಧ; 'ಸಹೋದರ ಉಪಾ ಲಿಯೇ, ಮತ್ತೊಮ್ಮೆ ಯೋಚಿಸಿ ನೋಡು, ನಿನ್ನ ದಿಢೀರ್ ನಿರ್ಧಾ ರದ ಹಿಂದೆ ಆತುರವಿ ದೆಯೇ ಹೊರತು ವಿವೇಕ ವಿಲ್ಲ. ಶಾಂತಚಿತ್ತತೆ ಇಲ್ಲ. ತಾಳ್ಮೆಯಿಂದ ಯೋಚಿಸಿ ನೋಡು, ಒಮ್ಮೆಲೆ ನಿನ್ನ ನಿರ್ಧಾರ ಬದಲಿಸುವುದು ಸರಿಯಲ್ಲ. ಬಹುದಿನಗ ಳಿಂದ ಜೈನಮುನಿ ಮತ್ತು ಭಿಕ್ಷುಗಳಿಗೆ ನೀನು ಸಲ್ಲಿ ಸುತ್ತಾ ಬಂದಿರುವ ಗೌರವ, ಆತಿಥ್ಯ ಭಕ್ತಿ ಮತ್ತು ಪ್ರೀತಿಯನ್ನು ಒಮ್ಮೆಲೆ ಸಡಲಿಸುವುದು ಒಳಿತಲ್ಲ. ತಾಳ್ಮೆ ಮತ್ತು ಸಹಿಷ್ಣುತೆಯನ್ನು ಉಳಿಸಿ ಕೊಂಡು ಯೋಚಿಸಿ ನೋಡು, ನಿನ್ನ ಯೋಚ ನೆಯ ಹಿಂದೆ ಯಾವುದೇ ಪೂರ್ವಾಗ್ರಹ ಬೇಡ.

ಸಿ. ಎಚ್. ರಾಜಶೇಖರ್

ಒಮ್ಮೆಲೆ ಒಪ್ಪದಿರು ತಾಳ್ಮೆಯೇ ತರ

ಯಾವ ಸಿದ್ಧಾರ್ಥ ಗೌತಮ ಈ ಜಗತ್ತೆಲ್ಲ ಆಸೆ, ದುಃಖ, ಸ್ವಾರ್ಥ ಮತ್ತು ಮೌಢ್ಯದಿಂದ ಕೂಡಿದೆ ಎಂದು ಅರಿತು, ರಾಜ್ಯ, ಅರಮನೆ, ಮಡದಿ, ಮಗ, ತಂದೆ ತಾಯಿ, ಬಂಧು ಬಾಂಧವರು, ಸ್ನೇಹಿತರು ಹಾಗೂ ಅಪಾರ ಪ್ರಜೆಯನ್ನು ತೊರೆದು ಸಂಸಾರ ತ್ಯಾಗ ಮಾಡಿ ಭಿಕ್ಷು ದೀಕ್ಷೆಯನ್ನು ಪಡೆದು ಕಪಿಲವಸ್ತುವಿನಿಂದ ತೊರೆದು ಏಕಾಂಗಿಯಾಗಿ ಹೊರಟಾಗ ಆತನಿಗೆ ಕೇವಲ ಇಪ್ಪತ್ತೆಂಟರ ಹದಿಹರೆಯ.

ಈ ಹದಿ ಹರೆಯದ ತನ್ನ ಸ್ನೇಹಿತನ ಮಗನಾದ ಸಿದ್ಧಾರ್ಥ ಗೌತಮ ತನ್ನ ರಾಜಧಾನಿಯ ಬೀದಿಯಲ್ಲಿ ಭಿಕ್ಷೆ ಬೇಡುವ ದೃಶ್ಯ ಕಂಡು ಮಮ್ಮಲ ಮರುಗಿದ ಬಿಂಬಸಾರ.

'ಸಿದ್ಧಾರ್ಥ ನಿನಗಿದು ತರವಲ್ಲ ಕತ್ತಿ ಹಿಡಿದ ಕೈಯಲ್ಲಿ ಭಿಕ್ಷಾ ಪಾತ್ರೆಯೇ...? ಬೇಡ... ಬೇಡ... ನೋಡಲಾರೆ...! ನೀನು ಹಿಂದಿರುಗಿ ನಿನ್ನ ರಾಜ್ಯಕ್ಕೆ ಹೋಗುವುದು ಅವಮಾನಕರವಾದರೆ ನನ್ನ ರಾಜ್ಯದ ಅರ್ಧ ಭಾಗ ವನ್ನು ನಿನಗೆ ಧಾರೆ ಎರೆದು ಕೊಡುತ್ತೇನೆ. ಸ್ವೀಕರಸಿ, ಈ ಕಾವಿಬಟ್ಟೆ ಸಂನ್ಯಾಸತ್ವ ಮತ್ತು ಭಿಕ್ಷಾಪಾತ್ರೆಯನ್ನು ತೊರೆ' ಎಂದಾಗ

'ಕ್ಷಮಿಸು ದೊರೆಯೆ, ನೀನು ನನ್ನ ಕುಟುಂಬದ ಹಿತೈಷಿ ಎಂಬ ಕಾರಣಕ್ಕಾಗಿ ನನ್ನ ಭಿಕ್ಷಾಪಾತ್ರೆಯನ್ನು ಕಂಡು ತಲ್ಲಣಿಸಬೇಡ. ಅಪಮಾನಕರವೆಂದು ಬಗೆಯ ಬೇಡ. ವಾಸ್ತವವೆಂದರೆ ಈ ಭಿಕ್ಷಾಪಾತ್ರೆಯೇ ನನ್ನ ಅಹಂಕಾರವನ್ನು ನೀಗಿದ್ದು. ನನ್ನ ಸ್ವಾರ್ಥವನ್ನು ತೊಲಗಿಸಿದ್ದು. ನಾನು ಯಾರ ಮೇಲಿನ ದ್ವೇಷಕ್ಕಾಗಿ, ಅಸಡ್ಡೆಗಾಗಿ ಸಂಸಾರ ತ್ಯಾಗ ಮಾಡಲಿಲ್ಲ. ಇಡೀ ಬದುಕನ್ನೇ ಆವರಿಸಿಕೊಂಡಿರುವ ಕಗ್ಗತ್ತಲೆಗೆ ಬೆಳಕು ತರುವ ಸಲುವಾಗಿ ನಾನು ಪರಿವ್ರಾಜಕ ದೀಕ್ಷೆತೊಟ್ಟಿದ್ದು, ದೊರೆಯೇ, ನನ್ನನ್ನು ಹರಸು ಎಂದಾಗ ಬುದ್ಧನ ಕಣ್ ಮುಂದೆ ಇದ್ದದ್ದು ಮಹಾತ್ವಾಕಾಂಕ್ಷೆ.



ಇದೇ ಸಿದ್ಧಾರ್ಥ ಗೌತಮ ಮುಂದಿನ ಏಳು ವರ್ಷಗಳು ಕಠಿಣ ಅಧ್ಯಯನ, ಯೋಗ ಮತ್ತು ತಪಸ್ಸಿನ ಫಲವಾಗಿ ಜ್ಞಾನೋದಯಗೊಂಡು ಗೌತಮ ಬುದ್ಧನಾದಾಗ ಕೇವಲ ಮುವತ್ತೈದರ ಹರೆಯ.

ದೊರೆ ಬಿಂಬಸಾರ ಜ್ಞಾನೋದಯಗೊಂಡ ಬುದ್ಧನನ್ನು ತನ್ನ ಮಗಧ ರಾಜ್ಯಕ್ಕೆ ಸ್ವಾಗತಿಸಿ ಸತ್ಕರಿಸಿದ. ಬುದ್ಧನ ಅನುಪಮ ಬೋಧನೆಯಿಂದ ತನ್ನಲ್ಲಿದ್ದ ಅಜ್ಞಾನ ಮತ್ತು ಅಲ್ಪತನವನ್ನು ನೀಗಿಸಿಕೊಂಡು ಹೀಗೆಂದ:

'ಕ್ಷಮಿಸು ಗುರುದೇವಾ, ನನ್ನದು ಮಹಾದಪರಾಧವಾಗಿದೆ. ನಾನಂದು ತಮ್ಮನ್ನು ಕಂಡು ಒಳಗೊಳಗೆ ದುಃಖ ಪಟ್ಟೆ ಚುಚ್ಚು ಮಾತಾಡಿ ದಿಕ್ಕನ್ನು ತಪ್ಪಿಸಲು ಪ್ರಯತ್ನಿಸಿದೆ. ಆದರೆ ಶಾವಿಂದು ಯಾರೂ ಏರಲಾಗದ ಜ್ಞಾನ ಪರ್ವತವನ್ನೇ ತಮ್ಮದನ್ನಾಗಿಸಿಕೊಂಡು ನನ್ನೆದುರು ಆಕಾಶವಾಗಿ ನಿಂತಿದ್ದೀರಿ' ಎಂದಾಗ ಬುದ್ಧನು ದೊರೆ ಬಿಂಬಸಾರನನ್ನುದ್ದೇಶಿಸಿ;

'ದೊರೆಯೆ, ಬಹುದೊಡ್ಡ ಮಾತನಾಡುತ್ತಾ ನನ್ನನ್ನು ಚಿಕ್ಕವನನ್ನಾಗಿಸಬೇಡಿ. ಕ್ಷಮಿಸಬೇಕಾ ದವರು ನೀವೇ ಹೊರತು ನಾನಲ್ಲ. ಏಕೆಂದರೆ ನೀವೆ ನನ್ನ ಮಾರ್ಗಸೂ ಚಕರು' ಎನ್ನು ತ್ತಾನೆ.

ಈ ಹೃದಯ ವೈಶಾಲ್ಯತೆ ಮತ್ತು ನಮ್ರತೆಗೆ ಶರಣಾದ ದೊರೆ ಬಿಂಬಸಾರ ತಲೆಬಾಗಿ ತನ್ನೆರಡು ಕೈಗಳನ್ನು ಜೋಡಿಸಿ ಬುದ್ಧನಿಗೆ ನಮಿಸುತ್ತಾನೆ.

ಈ ಹೃದಯಸ್ಪರ್ಶಿ ಘಟನೆ ಸಂಭವಿಸಿದ್ದು ಇಂದು ನೆನ್ನೆಯಲ್ಲ, ಸುಮಾರು ಎರಡು ಸಾವಿರದ ಐದು ನೂರು ವರ್ಷಗಳ ಹಿಂದಿನ ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಬುದ್ಧನ ಬದುಕು ಮತ್ತು ಅವನ ಧರ್ಮದ ಇತಿಹಾಸದ ಪುಟಗಳಲ್ಲಿ ಇದಕ್ಕೊಂದು ಪ್ರತ್ಯೇಕವಾದ ಸುವ ರ್ಣಾಕ್ಷರವುಳ್ಳ ಅಧ್ಯಾ ಯವೇ ಮೀಸಲಿದೆ.

ಅಂದು ಬುದ್ಧನ ಎದುರು ಜಗತ್ತಿತ್ತೋ, ಜಗ ತ್ತಿನ ಎದುರು ಬುದ್ಧನಿದ್ದನೋ? ಅಥವಾ ಬುದ್ಧ ನಿಗೆ ಎದುರಾದ ಸಮಸ್ಯೆಗಳೇನು? ಸಮಕಾಲೀನ ವ್ಯಕ್ತಿಗಳ್ಯಾರ್ಯಾರು? ಧರ್ಮದ ಧ್ರುವೀಕರಣ ಒಂದೆಡೆ ಆದರೆ ಮತ್ತೊಂದೆಡೆ ಧರ್ಮದ ವಿಕೇಂದ್ರಿಕರಣಕ್ಕೆ ವೇದಿಕೆ ನಿರ್ಮಾಣವಾಗುತ್ತಿತ್ತು. ಒಂದು ಕಡೆ ಎರಡು ಸಾವಿರದ ಐನೂರು ವರ್ಷಗಳಿಂದ ಬೇರು ಬಿಟ್ಟು ಬೃಹದಾಕಾರಾವಾಗಿ ಬೆಳೆದು ನಿಂತ ವೈದಿಕ ಧರ್ಮ ಅದಕ್ಕೆ ಎದುರಾಗಿ ಸೆಡ್ಡು ಹೊಡೆದ ಮಹಾವೀರ ಜೈನ ಧರ್ಮವನ್ನು ಹರಡಿ ಉತ್ತುಂಗ ಸ್ಥಿತಿಯಲ್ಲಿದ್ದ, ಇನ್ನೂ ದೇಶದ ಗಡಿಯ ಹೊರಗೆ ಬುದ್ಧನಷ್ಟೇ ಪ್ರಬಲರಾದ ಝುರಾಷ್ಟರ, ಕನ್ ಫ್ಯೂಸಿಯಸ್, ಲಾವೊತ್ಸೆ ಮುಂತಾದ ಅಪ್ರತಿಮ ಮತ ಸಂಸ್ಥಾಪಕರಿದ್ದರು. ತತ್ತ್ವಜ್ಞಾನಿಗಳು, ಋಷಿಮುನಿಗಳು, ಬೋಧಕರ ನಡುವೆ

ಬುದ್ಧ ಈಜಿ ದಡ ಸೇರಬೇಕಾಗಿತ್ತು. ಆ ಕಾರಣಕ್ಕಾಗಿಯೇ ಅಂದು ಈ ಪ್ರಶ್ನೆ ಎದುರಾದದ್ದು. ಅದೇನೆಂದರೆ; 'ಬುದ್ಧನೆದುರು ಜಗತ್ತಿತ್ತೋ? ಜಗತ್ತಿನ ಎದುರು ಬುದ್ಧನಿದ್ದನೋ? ಎಂಬುದೇ ಆಗಿತ್ತು. ಇದೇ ಬುದ್ಧ, ಇದೇ ಪ್ರಶ್ನೆಯನ್ನು ಮುಂದಿನ ನಲವತ್ತೈದು ವರ್ಷಗಳ ಪೂರ ಈ ಸಂಘರ್ಷದ ವಿರುದ್ಧವೇ ಈಜಿದ. ಕೊನೆಗೂ ದಡ ಸೇರಿದ. ಹಿಮಾಲಯದ ಎತ್ತರಕ್ಕೆ ಸಮುದ್ರದ ಆಳಕ್ಕೆ ಆಕಾಶದ ವಿಸ್ತಾರಕ್ಕೆ ಸವಾಲಾಗಿ ನಿಂತ. ಮೇರೆ ಇಲ್ಲದ ಈ ಎತ್ತರಕ್ಕೆ ಬೆಳೆದು ನಿಂತ ಬುದ್ಧ ಎಂದಿಗೂ ಅಹಂಕಾರಕ್ಕೆ ಮರುಳಿಲ್ಲ. ಸ್ವಾರ್ಥಕ್ಕೆ ಸ್ಥಳ ಕೊಡಲಿಲ್ಲ. ಅಷ್ಟೇ ಏಕೆ ತಾನೇ ಸ್ಥಾಪಿಸಿದ ತನ್ನ ಧರ್ಮದಲ್ಲಿ ವಿಶಿಷ್ಟ ಸ್ಥಾನ ಬಯಸಲಿಲ್ಲ. ಪ್ರತ್ಯೇಕ ಸ್ಥಾನ ಮಾನಗಳನ್ನು ಸ್ವೀಕರಿಸಲಿಲ್ಲ. ಸಾಮಾನ್ಯ ಭಿಕ್ಷುಗಳಲ್ಲಿ ಸಾಮಾನ್ಯವಾಗಿದ್ದ. ಇಂತಹ ಅಸಾಮಾನ್ಯ ಹಿರಿಮೆವುಳ್ಳ ಬುದ್ಧ ತನ್ನ ಸಮಕಾಲೀನವಾಗಿ ಬೆಳೆದ ಧರ್ಮದ ಬಗ್ಗೆ ಧರ್ಮ ಸಂಸ್ಥಾಪಕರ ಬಗ್ಗೆ ಮತಾಂತರದ ಬಗ್ಗೆ ಅದೆಷ್ಟು ಸ್ಪಷ್ಟತೆ, ವಿವೇಕ, ತಾಳ್ಮೆ ಧರ್ಮಸಹಿಷ್ಣುತೆ ಹಾಗೂ ಪರಧರ್ಮಕ್ಕೆ ಉತ್ತೇಜನ ಕೊಟ್ಟು ಗೌರವಿಸುತ್ತಿದ್ದ ಎಂಬುದಕ್ಕೆ ಈ ಐತಿಹಾಸಿಕ ಘಟನೆ ಹೀಗಿದೆ ನೋಡಿ;

ಉಪಾಲಿ ಎಂಬ ಜೈನ ಧರ್ಮದ ಅನುಯಾಯಿ ಒಮ್ಮೆ ಬುದ್ಧನ ಬೋಧನೆಯನ್ನು ಕೇಳಿ ಆಕರ್ಷತನಾದ. ನನ್ನ ಇಲ್ಲಿಯ ತನಕದ ಶ್ರಮ ಮತ್ತು ಸಮಯ ವ್ಯರ್ಥವಾಯಿತೆಂದು ಮರುಗಿದ ಅವನು ಬೌದ್ಧಧರ್ಮವೇ ನಿಜಧರ್ಮವೆಂದು ಅರಿತ. ಅದೇ ಸಮಯದಲ್ಲಿ ತನ್ನ ಹಿಂದಿನ ಧರ್ಮವಾದ ಜೈನ ಧರ್ಮವನ್ನು ತೊರೆಯುವುದಾಗಿ ದೃಢವಾಗಿ ನಿರ್ಧರಿಸಿದ. ಜೈನ ಮುನಿಗಳು ಮತ್ತು ಭಿಕ್ಷುಗಳಿಗೆ ತಾನು ತೋರಿಸುತ್ತಿದ್ದ ಇದುವರೆಗಿನ ಅದೇ ಭಕ್ತಿ ಮತ್ತು ಶ್ರದ್ಧೆಯನ್ನು ಬುದ್ಧ ಮತ್ತು ಅವನ ಭಿಕ್ಷುಗಳಿಗೆ ಸಲ್ಲಿಸುವುದೆಂದು ತೀರ್ಮಾನಿಸಿ ಬುದ್ಧನ ಬಳಿ ಬಂದು ತನ್ನ ಅಭಿಪ್ರಾಯವನ್ನು ತಿಳಿಸಿ ಹೀಗೆ ಬೇಡಿಕೊಳ್ಳುತ್ತಾನೆ;

'ಗುರುದೇವಾ, ನಾನು ನಿಮ್ಮಲ್ಲಿ ಶರಣಾಗಿದ್ದೇನೆ. ನಿಮ್ಮ ಧರ್ಮಕ್ಕೆ ಶರಣಾಗಿದ್ದೇನೆ, ನಿಮ್ಮ ಸಂಘಕ್ಕೆ ಶರಣಾಗಿದ್ದೇನೆ. ನನ್ನನ್ನು ಸ್ವೀಕರಸಿ ದೀಕ್ಷೆ ಕರುಣಿಸಿ ಪ್ರಭುವೆ' ಎಂದಾಗ ಉಪಾಲಿಯನ್ನು ಉದ್ದೇಶಿಸಿದ ಬುದ್ಧ;

'ಸಹೋದರ ಉಪಾಲಿಯೇ, ಮತ್ತೊಮ್ಮೆ ಯೋಚಿಸಿ ನೋಡು, ನಿನ್ನ ದಿಢೀರ್ ನಿರ್ಧಾರದ ಹಿಂದೆ ಆತುರವಿದೆಯೇ ಹೊರತು ವಿವೇಕವಿಲ್ಲ. ಶಾಂತಚಿತ್ತತೆ ಇಲ್ಲ. ತಾಳ್ಮೆಯಿಂದ ಯೋಚಿಸಿ ನೋಡು, ಒಮ್ಮೆಲೆ ನಿನ್ನ ನಿರ್ಧಾರ ಬದಲಿಸುವುದು ಸರಿಯಲ್ಲ. ಬಹು ದಿನಗಳಿಂದ ಜೈನ ಮುನಿ ಮತ್ತು ಭಿಕ್ಷುಗಳಿಗೆ ನೀನು ಸಲ್ಲಿಸುತ್ತಾ ಬಂದಿರುವ ಗೌರವ, ಆತಿಥ್ಯ ಭಕ್ತಿ ಮತ್ತು ಪ್ರೀತಿಯನ್ನು ಒಮ್ಮೆಲೆ ಸಡಲಿಸುವುದು ಒಳಿತಲ್ಲ. ತಾಳ್ಮೆ ಮತ್ತು ಸಹಿಷ್ಣುತೆಯನ್ನು ಉಳಿಸಿಕೊಂಡು ಯೋಚಿಸಿ ನೋಡು, ನಿನ್ನ ಯೋಚನೆಯ ಹಿಂದೆ ಯಾವುದೇ ಪೂರ್ವಾಗ್ರಹ ಬೇಡ. ನಿನ್ನ ವಿವೇಕ, ನಿನ್ನ ನಿರ್ಧಾರವನ್ನು ಪ್ರಜ್ಞಾಪೂರ್ವಕವಾಗಿ ಸರಿ ಎಂದು ಒಪ್ಪಿದ್ದೇ ಆದರೆ, ಬಳಿಕ ನನ್ನ ಬಳಿಗೆ ಬಾ' ಎನ್ನುತ್ತಾನೆ. ಹಲವು ತಿಂಗಳ ನಂತರ ಮತ್ತೆ ಬುದ್ಧನನ್ನು ಸಂಧಿಸಿದ ಉಪಾಲಿ;

'ಗುರುದೇವಾ. ನಿನ್ನ ಹಿರಿಮೆಗೆ ಸರಿಸಾಟಿ ಇಲ್ಲ! ನಿನ್ನ ತಾಳ್ಮೆ ಮತ್ತು ಸಹಿಷ್ಣುತೆಗೆ ತಲೆ ಬಾಗದವರಿಲ್ಲ!! ನಿನ್ನ ವಿಚಾರ ಸ್ವಾತಂತ್ರ್ಯಕ್ಕೆ ಅನ್ಯಧರ್ಮ ಸಂಸ್ಥಾಪಕರು ಸರಿಸಾಟಿ ಅಲ್ಲವೇ ಅಲ್ಲ!!!' ಎಂದ. □

ಸಾಲವೆ ಗೆದ್ದರೆ ದಾರಿದ್ರ್ಯ ಬಯಲು

ಭರತ ಖಂಡದ ಐದು ಸಾವಿರ ವರ್ಷಗಳ ಇತಿಹಾಸವನ್ನು ಅಧ್ಯಯನ ಮಾಡಿದ್ದೆ ಆದರೆ ನಮ್ಮ ಕಣ್ಣಿಗೆ ರಾಚುವುದು ಇಲ್ಲಿನ ಕ್ರೌರ್ಯ ಮತ್ತು ಶೋಷಣೆಯೇ ಹೊರತು ಗತ ವೈಭವವಲ್ಲ! ಇದನ್ನೇ ವೈದಿಕರು ಗತವೈಭವ ಎಂದು ಉದಾತ್ತೀಕರಿಸುತ್ತಾರೆ. ಬಹುಶ: ಅದಕ್ಕೆ ಕಾರಣ ಹೀಗೂ ಇರಬಹುದು; ಇಳೆಯ ಬದುಕು ನಿಕೃಷ್ಟವೆಂದು ಪಾರಮಾರ್ಥಿಕ ಬದುಕೇ ಶ್ರೇಷ್ಠವೆಂದು ನಂಬಿಸಿದ್ದೆ ಆಗಿತ್ತು!

ಈ ನಂಬಿಕೆಗೆ ವಿರುದ್ಧವಾಗಿ ತಲೆ ಎತ್ತಿದ. ಸತ್ಯವನ್ನು ಸಾರಿದ ಯಾವ ಮತ ಪಂಥವಾಗಲಿ. ಸಂಸ್ಕೃತಿ ಅಥವಾ ಮತಾಚಾರಗಳಲ್ಲೇ ಆಗಲಿ ಇಲ್ಲಿ ನೆಲೆನಿಲ್ಲಲೇ ಇಲ್ಲ! ಅದು ಚಾರ್ವಕರಿರಬಹುದು. ಮಹಾವೀರ ಇರಬಹುದು, ಇಲ್ಲವೇ ಬುದ್ಧನೇ ಇರಬಹುದು ಈ ಎಲ್ಲರನ್ನು ನುಂಗಿ ನೀರು ಕುಡಿಯುವ. ಜೀರ್ಣಿಸಿಕೊಳ್ಳುವ ಅಥವಾ ಅವಕ್ಕೂ ಜನಿವಾರವನ್ನು ಹಾಕುವ ಬೃಹತ್ ಶಕ್ತಿ ಇದ್ದದ್ದು ಈ ವೈದಿಕ ಧರ್ಮಕ್ಕೆ ಮಾತ್ರ! ಹಾಗಾಗಿ ಇಲ್ಲಿ ಧರ್ಮವೆಂದರೆ ಪಾರಮಾರ್ಥಿಕ ವಿಷಯವಾಗಿ ಅಜ್ಞಾನ, ಮೌಢ್ಯಗಳೆ ಪರಮ ಸತ್ಯವಾದುವೆ ಹೊರೆತು. ಧರ್ಮದೊಂದಿಗೆ ವೈಚಾರಿಕತೆಯಾಗಲಿ. ವೈಜ್ಞಾನಿಕತೆಯಾಗಲಿ ಮೇಳೈಸಲೇ ಇಲ್ಲ!

ವೈದಿಕರ ಹುಚ್ಚು ಹೊಳೆಯ ವಿರುದ್ಧ ಸೆಣಸಾಡಿ ಗೆದ್ದವರೆಂದರೆ. ಕಪಿಲಮುನಿ ಮತ್ತು ಸಿದ್ಧಾರ್ಥ ಗೌತಮ ಮಾತ್ರ ಕಪಿಲಮುನಿಯೇ ಬುದ್ಧನ ಮಹಾ ಗುರು. ಆತ ಬುದ್ಧನಷ್ಟೇ ವಿಚಾರವಂತ. ದುಃಖವೆಂಬ ಪದಕ್ಕೆ ಮೊದಲು ಅರ್ಥ ಹಚ್ಚಿದವನೆ ಕಪಿಲಮುನಿ. ಅವನ ಪ್ರಕಾರ ದುಃಖವೆಂದರೆ 'ಅತೃಪ್ತಿ' ಮತ್ತು 'ಕೋಲಾಹಲ' ಮೊದಲಲ್ಲಿ ಇದಕ್ಕೆ ಪಾರಮಾರ್ಥಿಕ ಅರ್ಥವಿತ್ತು. ನಂತರ ಅದಕ್ಕೆ 'ನೋವು' ಮತ್ತು 'ವ್ಯಸನ'ವೆಂಬ ಅರ್ಥ ಬಂತು. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಉಂಟಾಗುವ ವ್ಯಸನ ಮತ್ತು ನೋವುಗಳಿಗೆ ಅತೃಪ್ತಿಯೆ ಮೂಲಬೆಂಬ ತೀರ್ಮಾನಕ್ಕೆ ಕಪಿಲಮುನಿ ಬಂದ.

ಮುಂದೆ ಬುದ್ಧನು ಆಸೆಯೇ ದುಃಖದ ಮೂಲವೆಂದ. ಸ್ವಾರ್ಥದೊಂದಿಗೆ ದುಃಖಕ್ಕೆ ಬಡತನವೂ ಒಂದು ಪ್ರಮುಖ ಕಾರಣವೆಂದ. ಆ ಕಾರಣಕ್ಕೆ ಬುದ್ಧ ಬಡತನವನ್ನು ದ್ವೇಷಿಸಿದ. ಬಡವರನ್ನು ಜಾಗೃತಗೊಳಿಸಿ ಕ್ರಿಯಾಶೀಲರನ್ನಾಗಿ ಮಾಡಿದ. ಕಾಯಕದಿಂದಲೇ ಬಡತನವನ್ನು ನೀಗಿಕೊಳ್ಳಬೇಕು. ಬಡತನದ ಮತ್ತೊಂದು ಸ್ವರೂಪವಾದ ಸಾಲದಿಂದ ಮೊದಲು ಬಿಡುಗಡೆಗೊಳ್ಳಿ, ಸಾಲದಿಂದ ಯಾವಾತ ಬಿಡುಗಡೆಗೊಳ್ಳುತ್ತಾನೋ ಅವನು ಬಡತನದಿಂದ ಬಿಡುಗಡೆಗೊಳ್ಳುತ್ತಾನೆ ಎಂದು ವಾದಿಸುತ್ತಿದ್ದ.

ಬುದ್ಧ ಎಂದಿನಂತೆ ತನ್ನ ಭಿಕ್ಷುಗಳನ್ನು ಉದ್ದೇಶಿಸಿ ಉಪನ್ಯಾಸ ಕೊಡುವಾಗ ಹೀಗೆ ಪ್ರಶ್ನಿಸಿದ:

'ಭಿಕ್ಷುಗಳೇ. ಲೌಕಿಕನೊಬ್ಬನಿಗೆ ದಾರಿದ್ರ್ಯವು ತೀರಾ ಯಾತನಾಮಯವಾದ ವಿಚಾರವೆಂದು ನಿಮಗನ್ನಿಸುವುದಿಲ್ಲವೇ?'

'ಹೌದು ಪ್ರಭು. ಖಂಡಿತಾ ಹಾಗೆನ್ನಿಸುತ್ತದೆ'

'ಭಿಕ್ಷುಗಳೆ. ಅವನು ಒಮ್ಮೆ ಸಾಲಗಾರನಾದ ಮೇಲೆ. ಅವನು ಮತ್ತೆ ಸಾಲ ಮಾಡುತ್ತಾನೆ. ಅದು ಕೂಡ ದುಃಖಕರವಲ್ಲವೆ?'

'ಹೌದು ಪ್ರಭು. ಖಂಡಿತ ಹಾಗೆನ್ನಿಸುತ್ತದೆ'

'ಭಿಕ್ಷುಗಳೇ. ಸಾಲವನ್ನು ಮರುಪಾವತಿ ಮಾಡಬೇಕಾಗಿ ಬಂದಾಗ ಅವನು ಮಾಡುವುದಿಲ್ಲ. ಅವರು ಪೀಡಿಸುತ್ತಾರೆ. ಅದೂ ಕೂಡ ದುಃಖಕರವಲ್ಲವೇ?'

'ಹೌದು ಪ್ರಭು. ಖಂಡಿತ ದುಃಖಕರ'

'ಭಿಕ್ಷುಗಳೇ ಸಲಾಕೊಟ್ಟವರು ಸುತ್ತುವರಿದಾಗಲೂ ಅವನು ಪಾವತಿ ಮಾಡುವುದಿಲ್ಲ. ಅವರು ಅವನನ್ನು ಬಂಧಿಸುತ್ತಾರೆ. ಅದು ಕೂಡ ದುಃಖಕರವಲ್ಲವೆ!

'ಹೌದು ಪ್ರಭುವೆ, ಖಂಡಿತಾ ದುಃಖಕರ'

'ಭಿಕ್ಷುಗಳೇ ಅವರು ಪೀಡಿಸಿದಾಗಲೂ ಅವನು ಮರುಪಾವತಿ ಮಾಡುವುದಿಲ್ಲ. ಆಗ ಅವರು ಮೇಲೆ ಬೀಳುತ್ತಾರೆ. ಅದು ಕೂಡ ದುಃಖಕರ?'

'ಭಿಕ್ಷುಗಳೇ. ಸಾಲಕೊಟ್ಟವರು ಸುತ್ತುವರಿದಾಗಲೂ ಅವನು ಪಾವತಿ ಮಾಡುವುದಿಲ್ಲ. ಅವರು ಅವನನ್ನು ಬಂಧಿಸುತ್ತಾರೆ. ಅದು ಕೂಡ ದುಃಖಕರವಲ್ಲವೆ!'

'ಹೌದು ಪ್ರಭುವೆ. ಖಂಡಿತಾ ದುಃಖಕರ'

'ಭಿಕ್ಷುಗಳೇ, ಹಾಗಾಗಿ ದಾರಿದ್ರ್ಯ, ಸಾಲ, ಕಡ ತೆಗೆದುಕೊಳ್ಳುವುದು, ಪೀಡಿಸಿಕೊಳ್ಳುವುದು. ಆಕ್ರಮಣ ಹಾಗೂ ಬಂಧನಕ್ಕೆ ಒಳಗಾಗುವುದು, ಇವೆಲ್ಲಾ ಐಹಿಕ ಅವಶ್ಯಕತೆಯಿಂದ ಬರುವ ಸಂಕಟಗಳಲ್ಲವೆ?'

'ಹೌದು ಪ್ರಭುವೆ, ಇವೆಲ್ಲಾ ಖಂಡಿತಾ ಸಂಕಟಗಳೆ'

'ಭಿಕ್ಷು, ಸಹೋದರರೇ, ಹಾಗಾದರೆ ಜಗತ್ತಿನಲ್ಲಿ ತೀರಾ ದುಃಖಕರವಾದದ್ದು ದಾರಿದ್ರ್ಯ ಮತ್ತು ಸಾಲವೇ ಅಲ್ಲವೆ?'

'ಹೌದು ಗುರುದೇವಾ, ಖಂಡಿತಾ ಸತ್ಯ'

'ಭಿಕ್ಷು ಸಹೋದರರೇ, ಹಾಗಾದರೆ ಬಡವರನ್ನು ಈ ದುಃಖದಿಂದ ಪಾರು ಮಾಡುವುದು ನಮ್ಮ ಕರ್ತವ್ಯವಲ್ಲವೆ?'

'ಹೌದು ಗುರುದೇವಾ, ಖಂಡಿತಾ ಹೌದು...! ಹಾಗಾದರೆ ನಾವುಗಳು ಏನನ್ನು ಮಾಡಬೇಕು?'

'ಭಿಕ್ಷು ಸಹೋದರರೇ, ತಾವುಗಳು ಹೋದಲ್ಲಿ, ಬಂದಲ್ಲಿ, ಕುಳಿತಲ್ಲಿ, ನಿಂತಲ್ಲಿ, ಪ್ರವಚನ ನೀಡುವಲ್ಲಿ ಈ ಬಗ್ಗೆ ಬಡವರನ್ನು ಜಾಗೃತಗೊಳಿಸಿ ನಿಮ್ಮಗಳು ಬಡತನದಿಂದ ಮುಕ್ತರಾಗಬೇಕಾದರೆ ಮೊದಲು ಸಾಲದಿಂದ ಮುಕ್ತರಾಗಿ ಎಂದು ತಿಳಿ ಹೇಳಿ. ಆ ಕಾರಣಕ್ಕಾಗಿ ಮೊದಲು ಜ್ಞಾನವನ್ನು ಪಡೆಯಿರೆಂದು ತಿಳಿ ಹೇಳಿ ಆ ಮೂಲಕವೇ ನಿಮ್ಮ ಆರ್ಥಿಕ ಮತ್ತು ಸಾಮಾಜಿಕ ಮುಕ್ತಿ ಎಂದು ತಿಳಿ ಹೇಳಿ' ಎಂದ ಆಗ ಭಿಕ್ಷು ಸಮೂಹ ಒಕ್ಕೊರಳಿನಿಂದ ಬುದ್ಧನನ್ನು ಉದ್ದೇಶಿಸಿ;

'ಹೌದು ಗುರುದೇವಾ, ದುಃಖದ ಬಗೆಗಿನ ನಿನ್ನ ಪರಿಕಲ್ಪನೆ ಭೌತಿಕವಾದದ್ದು...' ಬಾಳಿನ ಬಗ್ಗೆ ನಿನ್ನ ಶ್ರದ್ಧೆ ಶ್ರೇಷ್ಠವಾದದ್ದು...!!' ನೀನು ದುಃಖ ನಿವಾರಕನೇ ಸರಿ...!!' ಎಂದು ಬುದ್ಧನಿಗೆ ವಂದಿಸಿದರು. □

'SAMVADA' Kannada Monthly, Mar 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಅಂಗವಿಕಲರಿಗೆ ಅವಕಾಶ ನೀಡಿ
ಅದ್ಭುತ ಸಾಧನೆ ನೋಡಿ.

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು. ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ 3 ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು:

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು:-

* ಶ್ರವಣ ಮತ್ತು ದೃಷ್ಟಿ ದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನೆ.
* ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
* ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ
* ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
* "ಆಧಾರ" ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
* ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ
* ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ
* ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
* ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
* ಅಂಗವಿಕಲರಿಗೆ ಶೇ. 5 ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
* ಸಾಧನೆ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ
* ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್

ಕರ್ನಾಟಕ ವಾರ್ತೆ
Karnataka Information